ಪ್ರಣಯದ ಬಣ್ಣ



ಬಿ. ಟಿ. ಮಾಲತಿ

ಪುಣ್ಯದ ಎಣ್ಣೆ

ಸಾಮಾಜಿಕ ಕಾದಂಬರಿ

ಎ. ಪಿ. ಮಾಲತಿ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

PUṆYADA EṆṆE (A Novel) (Mrs.) A. P. MALATHI, Aryapu Village and P. O. 574 210 (Puttur Taluk, D. K.). Published by GEETHA BOOK HOUSE, K. R. Circle, Mysore 570 001. First Published 1995.

ಪ್ರಥಮ ಮುದ್ರಣ ೧೯೯೫

ಮುಖಚಿತ್ರ : ಕೆ. ಮುರಳೀಧರರಾವ್

ಮುದ್ರಣ : ಶ್ರೀ ಮೀರಾ ಪ್ರಿಂಟರ್ಸ್, ಶ್ರೀರಾಮಪೇಟೆ, ಮೈಸೂರು ೫೭೦ ೦೦೧

ಮೊದಲ ಮಾತು

ಅಭಿಮಾನಿ ಓದುಗರ ಮುಂದೆ ನನ್ನ ಹೊಸ ಕಾದಂಬರಿ 'ಪುಣ್ಯದ ಎಣ್ಣೆ' ಇರಿಸಿದ್ದೇನೆ. ಮೊದಲಿಗೆ ಈ ಕಾದಂಬರಿಯನ್ನು ಧಾರಾವಾಹಿಯಾಗಿ ಪ್ರಕಟಿಸಿದ 'ಮಂಜುವಾಣಿ' ಮಾಸಪತ್ರಿಕೆಯ ಸಂಪಾದಕರಿಗೆ ನನ್ನ ವಂದನೆಗಳು ಸಲ್ಲುತ್ತವೆ. ಧಾರಾವಾಹಿಯಾಗಿ ಈ ಕಾದಂಬರಿ ಪ್ರಕಟವಾದಂತೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಪತ್ರಗಳನ್ನು ಬರೆದ ಅಸಂಖ್ಯ ಓದುಗರಿಗೆ ಹಾಗೂ ಇದೀಗ ಪುಸ್ತಕರೂಪದಲ್ಲಿ ಪ್ರಕಾಶನ ಮಾಡುತ್ತಿರುವ 'ಗೀತಾ ಬುಕ್ ಹೌಸ್' ಸೋದರರಿಗೆ ನನ್ನ ಅನಂತ ಕೃತಜ್ಞತೆಗಳು.

ಎ. ಪಿ. ಮಾಲತಿ

ಆರ್ಯಾಪು ಅಂಚೆ
ಪುತ್ತೂರು (ದ. ಕನ್ನಡ)
ಏಪ್ರಿಲ್ ೯, ೧೯೯೫

(M

ಎ. ಪಿ. ಮಾಲತಿ ಅವರ ಇತರ ಕೃತಿಗಳು

ಕಾದಂಬರಿಗಳು

ಅರ್ಧಾಂಗಿ
ಆಘಾತ
ಅತೃಪ್ತೆ
ಅನಿಶ್ಚಯ
ಸರಿದ ತೆರೆ
ಮಿನುಗದ ಚುಕ್ಕಿ
ಪುನರ್ಮಿಲನ
ಅಂಜನ
ಆಲೋಕ
ತಿರುಗಿದ ಚಕ್ರ
ದೇವ
ಬದಲಾಗದವರು
ನೂಪುರಗಾನ
ಕಾಡು ಕರೆಯಿತು
ಮಂದಾರ
ವಕ್ರರೇಖೆ
ಹೊಸ ಹೆಜ್ಜೆ

ಇತರ ಕೃತಿಗಳು

ಸುಖದ ಹಾದಿ (ಕೆಲವು ಚಿಂತನಗಳು)
(ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ)
ಗ್ರಾಮೀಣ ಮಹಿಳೆಯರು
ಹಳ್ಳಿಗೆ ಬಂದ ಎಳೆಯರು (ಮಕ್ಕಳ ಕಥೆ)
ಮಹಿಳೆ – ಸಮಾಜಕಲ್ಯಾಣ
ದಿವ್ಯಪಥ (ಸ್ತ್ರೀಯರಿಗಾಗಿ)
ಮಕ್ಕಳ ಪಾಲನೆ (ಸಚಿತ್ರ)
ಸಮಯದ ಸದುಪಯೋಗ

ಪುಣ್ಯದ ಎಣ್ಣೆ

ಮೈಮುರಿದು ಆಕಳಿಸಿ ಕುಳಿತಲ್ಲಿಂದ ಎದ್ದು ನರಹರಿ ಒಳಗಿನ ಉಡುಪು ಬದಲಿಸುತ್ತಿದ್ದಂತೆ ಒಳಗಿನಿಂದ ತಾಯಿ ರೇಣುಕೆಯ ಸ್ವರ ಕೇಳಿಸಿತು.

"ಹೊರಟೆಯಾ ಹೊರಗೆ ? ಪೋಸ್ಟ್‌ಮ್ಯಾನ್ ಬರುವುದೇ ಹನ್ನೊಂದು ಗಂಟೆಯ ನಂತರ. ಅಷ್ಟು ಹೊತ್ತು ಶಾಲೆ ಹತ್ರ ನಿಂತಿರ್ತೀಯೇನು ?"

"ಕೆಲವೊಮ್ಮೆ ಹತ್ತು ಗಂಟೆಗೇ ಬಂದುಬಿಡ್ತಾನೆ."

"ನಿನಗೊಂದು ಕಾಗದ ಕಾಯುವ ಹುಚ್ಚು ! ಕಾಗದ ಇದ್ದರೆ ಸಂಜೆ ಶಾಲೆ ಮಕ್ಕಳು ತಂದುಕೊಡ್ತಾವೆ. ಯಾಕೆ ಅವಸರ ? ಇವತ್ತು ನಿನ್ನ ಅಪ್ಪನಿಗೂ ಪೂರಾ ಪೂಜೆ ಮುಗಿಸಲು ಸಮಯವಿರಲಿಲ್ಲ. ಎಲ್ಲೋ ಸತ್ಯನಾರಾಯಣ ಪೂಜೆ ಇದೆ ಅಂತ ಹೋಗಿದ್ದಾರೆ. ನೀನೇ ಮಡಿ ಉಟ್ಟು ಪೂಜೆ ಮುಗಿಸಬೇಕು."

ನರಹರಿ ಕಣ್ಣುಗಳನ್ನು ಕಿರಿದುಗೊಳಿಸಿ ಒಳಬಾಗಿಲಾಚೆ ನೋಡಿದ. ಬೇರೆಯವರ ಮನೆಯಲ್ಲಿ ಸತ್ಯನಾರಾಯಣ ವ್ರತವಿರಲಿ, ರುದ್ರಾಭಿಷೇಕವಿರಲಿ ಶಂಕರಯ್ಯ ಬೆಳಿಗ್ಗೆಯೇ ಮನೆದೇವಿ ಪೂಜೆ ಮುಗಿಸಿ ಹೋಗುವವರು. ಇವತ್ತು ಅವರ ಮೈಯಲ್ಲಿ ಜ್ವರವಿತ್ತು. "ಹರೀ, ನೀನು ಪೂಜೆ ಮಾಡ್ತೀಯಾ ?" ಕೇಳಿದ್ದರು. ಸ್ವಲ್ಪ ಹಿಂಜರಿಕೆ ಧ್ವನಿಯಲ್ಲಿ. 'ಹೂಂ' ಎನ್ನುವ ಮೊದಲೇ, "ನಿನಗ್ಯಾಕೆ ಒತ್ತಾಯ ? ನಾನೇ ಪೂಜೆ ಮುಗಿಸಿ ಹೋಗ್ತೇನೆ. ನೈವೇದ್ಯದ ಹೊತ್ತಿಗೆ ಮಡಿಯುಟ್ಟು ಎಡೆ ತೋರಿಸಿ ಮಂಗಳಾರತಿ ಮಾಡಿಬಿಡು" ಎಂದಿದ್ದರು.

ಮನೆದೇವಿ ಪೂಜೆ! ತಲೆತಲಾಂತರದಿಂದ ನಡೆದುಬಂದದ್ದು. ಒಂದು ದಿನವೂ ಕ್ರಮ ತಪ್ಪಿಸುವಂತಿಲ್ಲ. ಕೈಗಡಿಯಾರ ನೋಡಿದರೆ ಇನ್ನೂ ಬೆಳಗಿನ ಒಂಬತ್ತೂವರೆ. ಈಗ ಮನೆ ಬಿಟ್ಟು ಹೊರಟರೆ ಅಲ್ಲಿ ಇಲ್ಲಿ ಅಲೆಯುತ್ತ ಮಧ್ಯಾಹ್ನವೇ ಕಳೆದೀತು. ಮರಳಿ ಮನೆ ಸೇರುವಾಗ, ಅಷ್ಟು ಹೊತ್ತು ಅಮ್ಮ ನೈವೇದ್ಯ ಇಟ್ಟು ಪೂಜೆ ಮುಗೀಲಿಲ್ಲ ಎಂದು ಗೊಣಗುತ್ತ ತನಗಾಗಿ ಕಾಯುವುದು ಸರಿಯಲ್ಲ. ತಾನಿದ್ದೇನೆ ಎಂದೇ ಅಪ್ಪ ಹೊರಟುಹೋದದ್ದು.

"ಅಮ್ಮ. ಬೇಗ ಅನ್ನಕ್ಕೆ ಇಡು, ಸ್ನಾನ ಮುಗಿಸಿ ಬರ್ತೇನೆ. ನೈವೇದ್ಯ

ತೋರಿಸಿ ಮಂಗಳಾರತಿ ಮಾಡಿಯೇ ಹೊರಗೆ ಹೋಗ್ತೇನೆ" ಎಂದ.

ಸ್ನಾನಕ್ಕಿಳಿದರೆ ಮನಸ್ಸು ಇನ್ನೆಲ್ಲೋ. ನಿಧಾನವಾಗಿ ನೀರು ಸುರಿದುಕೊಂಡ. ತಾನು ಇಷ್ಟು ಸೋಮಾರಿ, ಜಡಭರತ ಹೇಗಾದೆ ? ಎಂದು ಅವನಿಗೇ ಅಚ್ಚರಿ. ಸಮಯ ಅತ್ಯಮೂಲ್ಯ ಎನ್ನುವ ಅವನಿಗೆ ಈ ಹಳ್ಳಿಕೊಂಪೆಯಲ್ಲಿ ಸಮಯ ಕಳೆಯುವುದೇ ಪ್ರಯಾಸದ ಕೆಲಸ. ಮಾಡಲು ಹಲವು ಕೆಲಸಗಳಿದ್ದರೂ ಅವನಿಗೆ ಉತ್ಸಾಹವಿಲ್ಲ. ಪ್ರತಿದಿನವೂ ಅಂಚೆಯವನ ನಿರೀಕ್ಷೆ. ಅಂಚೆಯವನು ಮನೆ ತನಕ ಬರುವುದಿಲ್ಲ. ಗುಡ್ಡದಾಚೆ ಇರುವ ಪ್ರಾಥಮಿಕ ಶಾಲೆತನಕ ಬರುವ ಅಂಚೆಯವ ಗುಡ್ಡ ಇಳಿದು ಇತ್ತ ಬರುವ ಹಲವು ಮನೆಗಳ ಮಕ್ಕಳ ಕೈಯಲ್ಲಿ ಅಂಚೆ ಕೊಟ್ಟು ಕಳುಹಿಸುತ್ತಾನೆ. ಆ ಮಕ್ಕಳ ದಾರಿ ಕಾಯಬೇಕು, ಇಲ್ಲವೆ ಅಂಚೆಯವ ಬರುವ ಸಮಯಕ್ಕೆ ಸರಿಯಾಗಿ ಗುಡ್ಡ ಏರಿ ಹೋಗಬೇಕು, ಶಾಲೆಯತ್ತ. ಅವನು ಹೋಗುತ್ತಾನೆ, ಅಂಚೆಯವನಿಗಾಗಿ ಕಾಯುತ್ತಾನೆ. ತಾಳ್ಮೆಯಿಂದ. ಇಂದಲ್ಲ ನಾಳೆ ಔರಂಗಾಬಾದಿನಿಂದ ಗೆಳೆಯ ನಿಖಿಲ್‌ನ ಕಾಗದ ಬರುತ್ತದೆ, 'ಬಟ್ಟೆ ಕಂಪನಿ ಮತ್ತೆ ಪ್ರಾರಂಭವಾಗಿದೆ. ನೀನು ಕೂಡಲೆ ಹೊರಟು ಬಾ !'

ದಿನಗಳು ಕಳೆದು, ವಾರಗಳು ಸಂದು, ತಿಂಗಳುಗಳು ದಾಟಿದರೂ ನಿಖಿಲನು 'ಬಾ' ಎಂದು ಬರೆಯಲಿಲ್ಲ, ನಿಖಿಲನ ಕಾಗದಗಳೇನೋ ನಾಲ್ಕಾರು ಬಂದಿವೆ. ಆದರೆ ಅದರಲ್ಲಿ ಬಟ್ಟೆ ಕಂಪನಿ ಆರಂಭವಾಗುವ ಸೂಚನೆಯಿಲ್ಲ. ಈ ಹಳ್ಳಿ ಕೊಂಪೆಯಲ್ಲಿ ಕುಳಿತು ಏನು ಮಾಡುವುದು ? ನಿಖಿಲ ಬರೆದಿದ್ದ : "ಸದ್ಯ ನಿನಗೆ ಪಿತ್ರಾರ್ಜಿತ ಭೂಮಿ ಒಂದು ತುಂಡು ಇದೆ, ನನಗೆ ಅದೂ ಇಲ್ಲ. ಬೇರೆ ಕಡೆ ಉದ್ಯೋಗ ನೋಡೋಣವೆಂದರೆ ಸಿಕ್ಕುವುದು ಸುಲಭವಲ್ಲ. ಕೆಲವು ಮಕ್ಕಳಿಗೆ ಟ್ಯೂಶನ್ ಕೊಡುತ್ತಿದ್ದೇನೆ. ಅವೆಲ್ಲ ಎಲ್ಲಿಗೆ ಸಾಕು ? ಭವಿಷ್ಯ ತೀರ ಅಂಧಕಾರ ವಾಗಿದೆ."

ಹೆಚ್ಚುಕಡಿಮೆ ನರಹರಿ ಸ್ಥಿತಿಯೂ ಇದೇ. ಹಳ್ಳಿಯಲ್ಲಿ ತುಂಡುಭೂಮಿ ಇದೆಯೇನೋ ನಿಜ. ಆದರೆ ಅಲ್ಲಿ ಗೈಯ್ಯುವುದೆಂದರೆ ಬೇಸರ. ತನ್ನ ಮನೋ ಸ್ಥಿತಿಗೆ ಕೃಷಿ ಹೊಂದುವುದಿಲ್ಲ ಎಂದವನ ಎಣಿಕೆ. ಇಲ್ಲಿಗೆ ಬಂದ ಪ್ರಾರಂಭದಲ್ಲಿ ಬಟ್ಟೆ ಕಂಪನಿ ಬಹು ಬೇಗ ತೆರೆದುಕೊಳ್ಳುತ್ತದೆ ಎಂಬ ನಿರೀಕ್ಷೆಯಲ್ಲಿ ಹೆಚ್ಚು ಉತ್ಸಾಹಿಯಾಗಿದ್ದ. ಆದರೆ ಈ ಭರವಸೆ ಕುಸಿಯುತ್ತ ಬಂದಂತೆ ನಿರುತ್ಸಾಹ ದಟ್ಟೈಸಿಕೊಳ್ಳುತ್ತ ಚಿಂತೆ ಪ್ರಾರಂಭವಾಗಿದೆ. ಬೇರೆಲ್ಲಿಯಾದರೂ ಕೆಲಸ ನೋಡಿದರೆ ಹೇಗೆ ? ಹೆಂಡತಿ ಅಲಕಾಳದೂ ಒತ್ತಾಯ : "ಇಲ್ಲಿ ಕುಳಿತು ನಾವು ಕಲ್ಲು ಮಣ್ಣು ನೋಡುವ ಬದಲು ಔರಂಗಾಬಾದಿಗೆ ಹೊರಟುಹೋಗೋಣ."

ಅಲ್ಲಿ ಕಲ್ಲು-ಸಿಮೆಂಟಿನ ಕಟ್ಟಡ ನೋಡಿದಂತ್ತ, ಬಾಯಿಗೆ ಬೆರಳಿರಿಸಿ ಕುಳಿತು ಕೊಳ್ಳಬೇಕು. ಕಂಪನಿಯು ನೂರಾರು ಮಂದಿ ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾಗ ಅವನಿಗೆ ಸುಲಭದಲ್ಲಿ ಕೆಲಸ ಸಿಗುವುದುಂಟೆ? ಆದಾಯವಿಲ್ಲದೆ ಪಟ್ಟಣದಲ್ಲಿ ಸಂಸಾರ ನಡೆಸುವುದು ಯೋಚನೆಗೆ ಮೀರಿದ ವಿಷಯ. ಕಂಪನಿ ತೆರೆಯುವ ತನಕ ಹಳ್ಳಿಯಲ್ಲಿರುವುದು ಅನಿವಾರ್ಯ ಎನಿಸಿ ಎಂಟನೇ ಕ್ಲಾಸಿನಲ್ಲಿ ಓದುವ ಸುಹಾಸನನ್ನು, ಆರನೇ ಕ್ಲಾಸಿನಲ್ಲಿದ್ದ ವಿಜಯಳನ್ನು ಅಲ್ಲೇ ಹಾಸ್ಟೆಲ್‌ಗೆ ಸೇರಿಸಿಯಾಗಿತ್ತು.

ಅನಿವಾರ್ಯ ಎಂದು ಅವನು, ಅಲಕಾ ತಿಳಿದದ್ದು ನಿಜ. ಆದರೆ ಶಂಕರಯ್ಯ-ರೇಣುಕೆಗೆ ಮಗ ಸೊಸೆ ಇಲ್ಲಿ ಬಂದು ತಮ್ಮೊಡನೆ ಉಳಿದಿರುವುದು ನೆಮ್ಮದಿ ತಂದಿದೆ. ಶಂಕರಯ್ಯ ಕಳೆದ ನವರಾತ್ರಿಯಲ್ಲಿ ಒಂದು ಪ್ರಮುಖ ವಿಷಯವನ್ನು ತಮ್ಮ ಇಬ್ಬರು ಗಂಡುಮಕ್ಕಳ ಮುಂದಿಟ್ಟಿದ್ದರು. ಮುಂದಾಲೋಚನೆಯ ದೃಷ್ಟಿ. ಕುಟುಂಬದ ಪೂಜೆ, ತೋಟ, ವ್ಯವಹಾರದ ಬಗ್ಗೆ ಒಂದು ನಿಶ್ಚಿತ ತೀರ್ಮಾನ ಮಾಡಬೇಕಿತ್ತು. ಆದರೆ ನರಹರಿಯಾಗಲಿ, ದಿಲ್ಲಿ ಬ್ಯಾಂಕಿನ ಉದ್ಯೋಗಿಯಾದ ಅವನಣ್ಣ ಮಾಧವನಾಗಲಿ, ಯಾವ ಪ್ರತಿಕ್ರಿಯೆ ವ್ಯಕ್ತಪಡಿಸದೆ, "ಈಗೇನು ಅವಸರ? ಆಮೇಲೆ ನೋಡೋಣ" ಎಂದಿದ್ದರು. ಇಬ್ಬರಿಗೂ ತಂದೆಯ ಮಾತನ್ನು ತಳ್ಳಿಹಾಕುವ ಧೈರ್ಯವಿಲ್ಲ. ಹಾಗೆಂದು ಈಗಲೇ ಏನನ್ನು ತೀರ್ಮಾನಿಸುವುದು? ಆದರೆ ಈಗ ದೇವರೇ ಕರೆಯಿಸಿದಂತೆ ಬಂದಿದ್ದಾನೆ ನರಹರಿ. ಕಂಪನಿ ಶಾಶ್ವತ ಮುಚ್ಚಿದರೆ ಒಳಿತೇ ಆಯಿತು!

"ಕಂಪನಿ ಶಾಶ್ವತವಾಗಿ ಮುಚ್ಚಿದರೆ ನಾನು ಬೇರೆ ಉದ್ಯೋಗದ ಬೇಟೆಗೆ ಹೋಗದೆ ಇರುತ್ತೇನೆಯೇ?"—ಕನಲಿ ಕೇಳಿದ್ದ ನರಹರಿ. ಅವನ ಮನದಾಳದ ನೋವು ತಿಳಿದಿಲ್ಲ ಹಿರಿಯರಿಗೆ. ಪಟ್ಟಣದ ಆಕರ್ಷಣೆಗೆ ಒಗ್ಗಿದ ನರಹರಿಗೆ ಈ ಕುಗ್ರಾಮದಲ್ಲಿ ಆಸಕ್ತಿ ಹುಟ್ಟೀತು ಹೇಗೆ?

'ದೊಡ್ಡಕಾಡು' ಹೆಸರೇ ಹೇಳುವಂತೆ ಬರೀ ಕುಗ್ರಾಮ. ಜನಸಂಖ್ಯೆ ಸಾಕಷ್ಟಿದ್ದರೂ ಬೇಕಾದ ಸೌಕರ್ಯಗಳಿಲ್ಲದ ಕೊರತೆ. ಐದು ಮೈಲು ದೂರದಲ್ಲಿರುವ ಪೇಟೆಗೆ ಹೋಗಲು ಸರಿಯಾದ ದಾರಿ ವ್ಯವಸ್ಥೆಯಿಲ್ಲ. ಎತ್ತಿನ ಗಾಡಿ ಅಥವಾ ರಿಕ್ಷಾ ಹೋಗಬಲ್ಲ ಏರುತಗ್ಗಿನ ರಸ್ತೆ ಒಂದಿದೆ. ಬೇಸಿಗೆ ಕಾಲಕ್ಕಷ್ಟೇ ಅದರ ಉಪಯೋಗ. ಮಳೆಗಾಲದಲ್ಲಿ ಜೀಪಿನ ಹೊರತಾಗಿ ರಿಕ್ಷಾ ಹೋಗುವುದಿಲ್ಲ. ಎತ್ತಿನಗಾಡಿಗೂ ಕಷ್ಟಕರ. ಆಗೆಲ್ಲ ಕಾಲ್ನಡಿಗೆಯೇ ಗತಿ. ಕಳೆದ ವರ್ಷ ಊರಿನ ಗಣ್ಯವ್ಯಕ್ತಿ ಮಹಂತಯ್ಯನವರು ರಸ್ತೆ ಸರಿಪಡಿಸಿ ಡಾಂಬರು ಹಾಕಿಸಲು

ಪಟ್ಟಣದವರೆಗೂ ಹೋಗಿದ್ದರು, ಸಂಬಂಧಿತ ಅಧಿಕಾರಿಗಳನ್ನು ಕಾಣಲೆಂದು. ಅದಿನ್ನೂ ಕಾರ್ಯರೂಪಕ್ಕೆ ಬರಬೇಕಷ್ಟೆ. ಏಕೋಪಾಧ್ಯಾಯರ ಒಂದು ಪ್ರಾಥಮಿಕ ಶಾಲೆಯಿದೆ. ಒಂದರಿಂದ ಐದನೇ ಕ್ಲಾಸಿನ ಸುಮಾರು ಅರವತ್ತೆಂಟು ಮಕ್ಕಳಿಗೆ ಒಬ್ಬರೇ ಉಪಾಧ್ಯಾಯರು. ಅವರು ಬಂದಾಗ ಶಾಲೆ ಉಂಟು, ಇಲ್ಲವಾದರೆ ಮುಚ್ಚಿದ ಬಾಗಿಲು. ಶಾಲೆಯ ಒಂದು ಭಾಗದ ಗೋಡೆಗೆ ತೂಗು ಹಾಕಿದೆ ಅಂಚೆ ಡಬ್ಬ. ಪ್ರತಿದಿನ ಅಂಚೆಯವನು ಬರುವುದು ಇಲ್ಲಿಗೇ. ಒಂದು ಸಣ್ಣ ಅಂಗಡಿಯಿದೆ. ಕಳೆದೆರಡು ವರ್ಷಗಳಿಂದ ಮೋನಪ್ಪನಾಯ್ಕ ತೆರೆದು ಕುಳಿತ ಅಂಗಡಿ. ಅಲ್ಲಿ ದಿನನಿತ್ಯದ ಸಾಂಬಾರು ಜಿನಿಸು. ಅಕ್ಕಿ, ತೆಂಗಿನಕಾಯಿ, ಸೋಪು, ಊದಿನಕಡ್ಡಿ, ಜನಿವಾರ, ಹೆಂಗಸರಿಗೆ ಬೇಕಾದ ಹೇರ್‌ಪಿನ್, ಹಣಿಗೆ, ರಿಬ್ಬನ್ನು, ಸೂಜಿ, ಶಾಲಾ ಮಕ್ಕಳ ಸ್ಲೇಟು, ಕಡ್ಡಿ, ನೋಟುಪುಸ್ತಕ, ಕೃಷಿಕರಿಗೆ ಬೇಕಾದ ಹಗ್ಗ, ಕತ್ತಿ, ಹೀಗೆ ಎಲ್ಲ ವಸ್ತುಗಳೂ ಲಭ್ಯ. ಅಗತ್ಯವಿರುವ ಮಂದಿ ಹೋಗುತ್ತಾರೆ ಕೊಳ್ಳಲು. ಸಾಮಾನ್ಯವಾಗಿ ಹೆಚ್ಚಿನ ಕೃಷಿಮಂದಿ ಹದಿನೈದು ದಿನಗಳಿಗೊಮ್ಮೆ ಬಾಡಿಗೆ ಜೀಪಿನಲ್ಲಿ ಪೇಟೆಯಿಂದ ಸಾಮಾನು ತರಿಸಿಕೊಳ್ಳುವುದು ವಾಡಿಕೆ. ಇಲ್ಲಿ ದೈನಂದಿನ ಪತ್ರಿಕೆ ಬರುವುದೂ ಮಧ್ಯಾಹ್ನದ ನಂತರವೇ. ಒಂದು ಶಿವ ದೇವಾಲಯವಿದೆ, ಪುರಾತನ ಕಾಲದ್ದು. ಅದೊಂದೇ ಇಲ್ಲಿಯ ಆಕರ್ಷಣೆ. ಪ್ರತಿ ಅಮಾವಾಸ್ಯೆಯಂದು ತಕ್ಕಮಟ್ಟಿಗೆ ಜನ ಸೇರುತ್ತಾರೆ ಅಲ್ಲಿ. ಪ್ರತಿವರ್ಷ ಶಿವರಾತ್ರಿಯಂದು ಜನರ ನೂಕುನುಗ್ಗಲು. ಸ್ಥಳೀಯ ಜನರಲ್ಲದೆ ಸುತ್ತಲ ಹಲವು ಗ್ರಾಮಗಳಿಂದ ಬಂದು ಹರಕೆ, ಕಾಣಿಕೆ ಒಪ್ಪಿಸಿ ಈಶ್ವರನ ದರ್ಶನ ಪಡೆದು ಹೋಗುವುದು ವಾಡಿಕೆ.

ನರಹರಿಗೆ ಇಲ್ಲಿ ಸ್ನೇಹಿತರಿಲ್ಲ, ಪತ್ರಿಕೆಯಿಲ್ಲ, ತಿರುಗಾಟವಿಲ್ಲ, ಚರ್ಚೆಯಿಲ್ಲ. ಶಿವ ದೇವಾಲಯಕ್ಕೆ ಹೋಗಲು ಭಕ್ತಿಭಾವವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇಲ್ಲೇ ಖಾಯಂ ನೆಲೆಸಲು ಮನಸ್ಸು ಬಂದೀತಾದರೂ ಹೇಗೆ ? ಬಾಲ್ಯದಿಂದಲೂ ವಿದ್ಯೆಗಾಗಿ ದೂರದ ಪಟ್ಟಣದ ಹಾಸ್ಟೆಲ್‌ನಲ್ಲಿ ಇದ್ದು ದಿನ ಕಳೆದವನು. ನೌಕರಿ ದೊರೆತದ್ದು ದೂರದ ಊರಿನಲ್ಲಿ. ನವರಾತ್ರಿ ಹಬ್ಬದ ರಜೆಗೆ, ಕೆಲವೊಮ್ಮೆ ಶಿವರಾತ್ರಿಗೆ ಹಳ್ಳಿಗೆ ಬರುವ ಕ್ರಮ. ಆಗೆಲ್ಲ ಬರುವುದೂ ಒಂದು ಸಂತೋಷವೇ. ಮಾಧವನಿಗೆ ಕಾಗದ ಬರೆದು ಮುಂದಾಗಿ ತಿಳಿಸಿ ಅವನು, ಇವನು ಒಟ್ಟಾಗಿ ಹಳ್ಳಿಗೆ ಬರುವ ಯೋಜನೆ ಹಾಕಲಾಗುತ್ತಿತ್ತು. ನಾಲ್ಕು ದಿನಗಳ ಬದಲಾವಣೆಯಲ್ಲಿ ಅದೆಂತಹ ಆನಂದ, ಸಂಭ್ರಮ ! ಮಕ್ಕಳಿಗೆ ಹಳ್ಳಿ ಬಿಟ್ಟು ಹೋಗಲು ಮನಸ್ಸಿರುವುದಿಲ್ಲ. ಅವರಿಗೂ ಅಷ್ಟೇ !

ಆದರೆ ಖಾಯಂ ಇಲ್ಲೇ ನೆಲೆಯಾದರೆ ಆ ಪ್ರಶ್ನೆಯೇ ಬೇರೆ, ಪರಿಸ್ಥಿತಿಯೇ ಬೇರೆ. ಯೋಚಿಸಿದರೆ ನರಹರಿಯ ಮೈಯಲ್ಲಿ ನಡುಕ. ಅವನ ಪೂರ್ವಿಕರೆಲ್ಲ ಬಾಳಿ ಬದುಕಿದ್ದು ಇದೇ ಹಳ್ಳಿಯಲ್ಲಿ. ನರಹರಿ ಮತ್ತು ಮಾಧವನ ಹೊರತಾಗಿ ಬೇರೆ ಯಾರೊಬ್ಬರೂ ಹೆಚ್ಚಿನ ವ್ಯಾಸಂಗಕ್ಕೆ ದೂರದ ಪಟ್ಟಣ ಸೇರಿದವರಲ್ಲ. ಎಲ್ಲಿ ಹುಟ್ಟಿದರೋ ಅಲ್ಲೇ ಬಾಳು ಸವೆಸಿದವರು.ವಾಸದ ಆ ಹಳೆ ಮನೆ, ಅದು ಮನೆಯಲ್ಲ. ಹತ್ತಾರು ಕೋಣೆಗಳಿರುವ, ಅನುಕೂಲಕ್ಕೆ ತಕ್ಕಂತೆ ಹೇಗೋ ಇಳಿಸಿ, ಸೇರಿಸಿ, ಏರಿಸಿ ಕಟ್ಟಿಕೊಂಡ ತಗ್ಗಾದ ಕಿಟಕಿಬಾಗಿಲುಗಳ, ಸುಣ್ಣ ಬಣ್ಣ ಕಾಣದ ಒಂದು ಮನೆ ಆಕಾರದಲ್ಲಿರುವ ಮನೆ! ಇಲ್ಲಿರುವ ಒಂದೊಂದು ಕೋಣೆಯೂ ಪೂರ್ವಿಕರ ಕಥೆಯನ್ನು ಬಿತ್ತರಿಸುತ್ತದೆ. ಒಂದೊಂದು ಕಿಟಕಿ ಬಾಗಿಲೂ, ತೊಲೆ ಕಂಭಗಳೂ ನರಹರಿಯ ಅಜ್ಜ, ಅವನ ತಂದೆಯ, ತಂದೆಯ ತಂದೆಯ, ಹೀಗೆ ಕಾಲವನ್ನು ಹಿಂದಕ್ಕೆ ಸರಿಸುತ್ತ ಕಥೆ ಹೇಳುತ್ತವೆ. ಎಷ್ಟೊಂದು ಕಥೆಗಳು! ಎಷ್ಟೊಂದು ವಿಷಯಗಳು! ಕೇಳುತ್ತ ಹೋದರೆ ಮುಗಿಯುವುದೇ ಇಲ್ಲ. ಭ್ರಮಾಲೋಕ ಹೊಕ್ಕಂತೆ ವಿಸ್ಮಯ, ನಿಗೂಢತೆಯಲ್ಲಿ ನಿಟ್ಟುಸಿರು, ಉದ್ಗಾರಗಳು! ಸುಖವೃತ್ತಾಂತದಲ್ಲಿ ನೋವಿನ ಎಳೆಗಳು, ಆಕ್ರಂದನ, ವ್ಯಥೆಯ ಕಣ್ಣೀರು! ಧರ್ಮಕ್ಕೆ ಸವಾಲಾಗಿ, ಮಾನವೀಯ ಮುಖಕ್ಕೆ ಇದಿರಾಗಿ ಏಟಿಗೆ ಏಟು ಹೊಡೆಯುವ ಜೀವಂತ ನಿದರ್ಶನಗಳು! ಉಪ್ಪರಿಗೆ ಅಟ್ಟದ ಒಂದು ಮೂಲೆಕೋಣೆಯಲ್ಲಿ ಪುರಾಣ ಗ್ರಂಥಗಳು, ತಾಳೆಗರಿ ಓಲೆಗಳು, ಜಾತಕಗಳ ಕಟ್ಟು, ಪಂಚಾಂಗಗಳು, ಇನ್ನೂ ಏನೇನೋ ಇವೆ. ಧೂಳು–ಕಸ ತುಂಬಿ ಹೋದ ಆ ಕೋಣೆಯ ಬಾಗಿಲು ತೆರೆದು ಹಳೇ ಪುಸ್ತಕಗಳ ಹೊದಿಕೆಸರಿಸುವವರು ಯಾರೂ ಇಲ್ಲ ಈಗ. ಅವೆಲ್ಲ ಹಾಗೇ ಬಿದ್ದುಕೊಂಡಿವೆ.ಅದರಾಚೆ ಅಡಿಗೆ ಕೋಣೆಯ ಕತ್ತಲೆಯ ಮುಸಿಹಿಡಿದ ಅಟ್ಟದಲ್ಲಿ ಕೊಳತಪ್ಪಲೆಗಳು, ಹಂಡೆಗಳು, ಚರಿಗೆಗಳು. ಒಂದು ಕಾಲಕ್ಕೆ ದೊಡ್ಡ ಕುಟುಂಬವೊಂದರ ಹೊರೆ ಹೊತ್ತ ಈ ಅಡಿಗೆ ಪಾತ್ರೆಗಳು ಈಗ ತಣ್ಣಗೆ ಕುಳಿತಿವೆ. ಅವು ಯಾರ ಹಾದಿ ಕಾಯುತ್ತಿವೆಯೋ ? ಮಾರಿದರೆ ಹಲವಾರು ಸಾವಿರ ರೂಪಾಯಿಗಳಿಗೆ ಮೋಸವಿಲ್ಲ. ಕೆಳಗೆ ಹೊರಚಾವಡಿಯ ಬದಿಯಲ್ಲಿ ಒಂದು ಮುಚ್ಚಿದ ಕೋಣೆ. ಅದರ ಬಾಗಿಲು ತೆರೆಯುವುದೇ ಅಪರೂಪ ಬಾಗಿಲ ಮೇಲೆ 'ನಾಗರಾಜನ ಸಮಾಧಿ' ಎಂದು ಬರೆದದ್ದು ಈಗಲೂ ನೋಡಬಹುದು. ಅದು ನರಹರಿಯ ಅಜ್ಜನ ಕೋಣೆ. ನಲವತ್ತು ವರ್ಷಕ್ಕೆ ಪಾರ್ಶ್ವವಾಯುವಿಗೆ ತುತ್ತಾದ ನಾಗರಾಜ ಮುಂದೆ ನಲ್ವತ್ತು ವರ್ಷ ಕಳೆದದ್ದು ಅದೇ ಕೋಣೆಯಲ್ಲಿ. ಹಿರಿಯರ ಪಾಪ–ಪುಣ್ಯಗಳ ಪಟ್ಟಿಯನ್ನು ತನ್ನ ಮನದ ತಕ್ಕಡಿ

ಯಲ್ಲಿ ತೂಗಿಕೊಳ್ಳುತ್ತ ನೋವು. ವ್ಯಥೆ. ಒಳನೇಗುದಿಯಲ್ಲಿ ಬೆಂದ ನೊಂದ ನಾಗರಾಜನ ಬದುಕು ಶಂಕರಯ್ಯನವರಿಗೆ ಒಂದು ಸವಾಲು. ನಾಗರಾಜನ ಕಾಲದಲ್ಲಿ ಆದ ಮಹತ್ವಪೂರ್ಣ ಬದಲಾವಣೆಯಿಂದಲೇ ಶಂಕರಯ್ಯ ಆರ್ಥಿಕ ಕಷ್ಟ ಎದುರಿಸಿದ್ದು. ತುಂಡುಭೂಮಿ ಉಳಿದದ್ದು, ಶಿವದೇವಾಲಯದ ಮೊಕ್ತೇಸರ ಸ್ಥಾನ ಕೈಬಿಟ್ಟದ್ದು, ಅಷ್ಟೇಕೆ ಈ ಮನೆ ಭಣಗುಡುವಂತೆ ಆದದ್ದು. ಒಂದೇ ಎರಡೇ, ಹೇಳಿ ಮುಗಿಯದಷ್ಟು ವಿಷಯಗಳು! ನಾಗರಾಜ ಯಾವಾಗಲೂ ಹೇಳುವುದಿತ್ತು:

"ಮನೆದೇವಿಯ ಪೂಜೆ ಮಾಡಿಕೊಂಡು ನ್ಯಾಯಧರ್ಮದಲ್ಲಿ ಹೆಜ್ಜೆಯಿಟ್ಟರೆ ಸಾಕು. ಇಲ್ಲದ ಆಸೆ ಬೇಡ. ಬಡತನವೋ ಇನ್ನೇನೋ ಪುಣ್ಯದ ಎಣ್ಣೆಯಲ್ಲಿ ನಮ್ಮ ಜೀವನ ಬೆಳಗಬೇಕು!"

ಶಂಕರಯ್ಯ ತಮ್ಮ ಪರಿಸ್ಥಿತಿ ನೋಡಿದರು. ಮನೆದೇವಿಯ ಅನುಗ್ರಹ ಸಾಕಷ್ಟಿದ್ದರೂ ಇಬ್ಬರು ಗಂಡುಮಕ್ಕಳಿಗೆ ತಿನ್ನುಣ್ಣಲು ಇಲ್ಲಿ ಏನೇನೂ ಸಾಲದು. ಒಬ್ಬನಾದರೂ ನೌಕರಿ ಹಿಡಿದು ಬಾಳಲಿ ಎಂಬ ಮುಂದಾಲೋಚನೆ ಅವರದು. ಆದರೆ ಇಬ್ಬರೂ ಕಲಿತು ನೌಕರಿಗಿಳಿದಾಗ ಬೇಡ ಎನ್ನಲಿಲ್ಲ. ಮಾಧವ ಬ್ಯಾಂಕ್ ಕೆಲಸಕ್ಕೆ ಸೇರಿದ ಮೇಲೆ ಪ್ರೈವೇಟ್ ಎಂ. ಎ. ಮುಗಿಸಿ, ಬ್ಯಾಂಕ್ ಪರೀಕ್ಷೆಗಳನ್ನೂ ಪಾಸು ಮಾಡಿ ಈಗ ಆಫೀಸರಾಗಿದ್ದಾನೆ. ಸದ್ಯದಲ್ಲಿ ಮ್ಯಾನೇಜರ್ ಆಗುತ್ತಾನೆಂಬ ಸುದ್ದಿ. ಎರಡು ಗಂಡುಮಕ್ಕಳ ತಂದೆ ನರಹರಿಯದು ಖಾಸಗಿ ಬಟ್ಟೆ ಕಂಪನಿ. ಸಂಬಳ ಚೆನ್ನಾಗಿತ್ತು. ಪ್ರತಿ ವರ್ಷ ದೀಪಾವಳಿ ಮತ್ತು ಯುಗಾದಿಗೆ ಬೋನಸ್ ಕೊಡುವ ಪದ್ಧತಿಯಿತ್ತು. ಈ ವರ್ಷ ನರಹರಿ ಪ್ರಮೋಶನ್ ನಿರೀಕ್ಷಿಸುತ್ತಿದ್ದ. ಪ್ರಮೋಶನ್ ಸಿಕ್ಕಿದರೆ ಕಂಪನಿಯ ಒಂದು ವಿಭಾಗದ ಮುಖ್ಯಸ್ಥನಾಗಿ ನೇಮಕಗೊಳ್ಳುವ ಸಾಧ್ಯತೆಯಿತ್ತು.

ಆದರೆ ಅವನ ಹಣೆಬರಹ ಆದದ್ದು ಹೀಗೆ.

"ಸ್ನಾನ ಆಗಲಿಲ್ಲವೇ ಇನ್ನೂ?" ಅಲಕಾಳ ಧ್ವನಿ ಕೇಳಿಸಿ "ಆಯ್ತು" ಎಂದ ಒಳಗಿನಿಂದ. ಸುಖವಾಗಿ ಸ್ನಾನ ಮಾಡಲು ಬಿಡುವುದಿಲ್ಲ, ಎಂದು ಗೊಣಗಿಕೊಂಡ. ತನ್ನಲ್ಲೇ ಹಂಡೆ ನೀರು ಪೂರಾ ಖಾಲಿಯಾದ್ದು ನೋಡಿ ನಕ್ಕು ಮೈ ಒರಸಿಕೊಂಡು ಒದ್ದೆಬಟ್ಟೆಯಲ್ಲಿ ಹೊರಗೆ ಬಂದ.

"ಇವತ್ತೆಲ್ಲಿಗೆ ನಿನ್ನ ಸವಾರಿ?"

ಅವನು ಮಂಡಿ ಉಡುತ್ತಿದ್ದಂತೆ ಕೇಳಿದಳು ರೇಣುಕೆ.

"ಎಲ್ಲಿಯಾದರೂ ಹೋಗಿ ಸಾಯ್ತೇನೆ, ನಿಂಗೇನು?"

"ಯಾಕೆ ನಿಮಗೆ ಮೂಗಿನ ನೇರಕ್ಕೇ ಸಿಟ್ಟು?" ಗದರಿಕೊಂಡಳು ಅಲಕಾ.

ಹಾಗೆಲ್ಲ ಹಿರಿಯರಿಗೆ ಎದುರುತ್ತರ ಕೊಟ್ಟರೆ ಅವಳಿಗಾಗದು. "ದಿನಾ ಒಂದು ಅಪದ್ಧ ಮಾತನಾಡದೆ ನಿಮಗೆ ನಿದ್ರೆ ಬಾರದು."

ಹೊರಳಿ ನೋಡಿದ. ಅವಳ ಮುಖ ಭುಸುಗುಡುತ್ತಿದೆ ಅಸಮಾಧಾನವಲ್ಲಿ. ಹಾಗೆ ನೋಡಿದರೆ ಹಳ್ಳಿಯಲ್ಲಿ ತನಗಿಂತ ಹೆಚ್ಚು ನೊಂದವಳು, ಬೇಸರಿಸಿದವಳು ಅಲಕಾ. ಯಾವಾಗ ಕಂಪನಿ ಪ್ರಾರಂಭವಾಗುತ್ತದೋ ಎಂದು ತುದಿಗಾಲಲ್ಲಿ ನಿರೀಕ್ಷೆ. ಮಕ್ಕಳನ್ನು ಅಗಲಿಯೇ ಗೊತ್ತಿಲ್ಲ. ಮಕ್ಕಳಿಗೂ ಹಾಸ್ಟೆಲ್ ವಾಸ ಹೊಸದು. ಹಾಸ್ಟೆಲ್ ಸೇರಿಸುವಾಗ ಸುಹಾಸ ಹರ್ಷಚಿತ್ತನಾಗಿದ್ದ. ತಮ್ಮ ಪರಿಸ್ಥಿತಿಯ ಅರಿವು ತಕ್ಕಮಟ್ಟಿಗೆ ಆಗಿತ್ತು. ಈಗಲೂ ಅವನ ಕಾಗದದಲ್ಲಿ, "ಅಮ್ಮನ ನೆನಪಾಗುತ್ತದೆ. ಯಾವಾಗ ನೀವು ಔರಂಗಾಬಾದ್‌ಗೆ ಬರುತ್ತೀರಿ?" ಎಂದು ಬರೆಯುತ್ತಾನೆ. ವಿಜಯ ಅತ್ತು ರಂಪಾಟ ಮಾಡಿದ್ದಳು. ಅವಳ ಕಾಗದವೂ ಒಂದೆರಡು ಬಂದಿವೆ. "ನನಗೆ ಹಾಸ್ಟೆಲ್ ವಾಸ ಬೋರ್ ಆಗಿದೆ. ಊಟ ಸೇರ್ತಾ ಇಲ್ಲ. ನಾನೂ ಅಜ್ಜಿ ಮನೆಗೇ ಬಂದುಬಿಡ್ತೇನೆ. ಇಲ್ಲಿಂದ ಕರ್ಕೊಂಡು ಹೋಗು."

ಮಕ್ಕಳ ಕಾಗದ ಬಂದ ದಿನಗಳಲ್ಲಿ ಅಲಕಾ ನಿದ್ರಿಸುವುದಿಲ್ಲ. ನೀರಿನಿಂದ ಹೊರಬಿದ್ದ ಮೀನಿನಂತೆ ಚಡಪಡಿಕೆ. "ಒಮ್ಮೆ ಔರಂಗಾಬಾದ್‌ಗೆ ಹೋಗಿ ಬರೋಣ. ಮಕ್ಕಳ ಮುಖ ನೋಡದೆ ಅನ್ನ ಸೇರಲಿಕ್ಕಿಲ್ಲ" ಎನ್ನುತ್ತಾಳೆ.

ಹೋಗುವ ಅವಸರ ನರಹರಿಗಿದ್ದರೂ ಇನ್ನೊಂದು ತಿಂಗಳಲ್ಲಿ ನವರಾತ್ರಿ ರಜೆ ಸಿಗುತ್ತದೆ ಮಕ್ಕಳಿಗೆ, ಆಗ ಹೋಗಿ ಕರೆದುಕೊಂಡು ಬರಬಹುದು ಎಂದುಕೊಂಡಿದ್ದಾನೆ. ಹಾಗೆ ಅಲಕಾಗೆ ಹೇಳಿದರೆ, "ಇನ್ನೊಂದು ತಿಂಗಳು ಕಾಯುವ ತಾಳ್ಮೆ ನನಗಿಲ್ಲ. ನಾಡಿದ್ದು ಶನಿವಾರ ನಾನೊಬ್ಬಳೇ ಔರಂಗಾಬಾದ್‌ಗೆ ಹೋಗಿ ಬರ್ತೇನೆ. ನಮ್ಮ ಬಾಡಿಗೆ ಮನೆ ಇದೆ, ಎರಡು ದಿನ ವಿಜಯ, ಸುಹಾಸನ ಜೊತೆ ಇದ್ದು ಬರ್ತೇನೆ" ಎಂದಿದ್ದಳು.

ಬಾಡಿಗೆ ಮನೆ ಒಮ್ಮೆ ಬಿಟ್ಟರೆ ಮತ್ತೆ ಸಿಗುವುದು ಕಷ್ಟವೆಂದು, ಪರಿಚಿತರಾದ ಇಬ್ಬರು ಕಾಲೇಜು ಹುಡುಗರಿಗೆ ಅಲ್ಲುಳಿಯಲು ತಿಳಿಸಿ, ಇತ್ತ ಬಂದಾಗಿತ್ತು. ಅದೇ ಧೈರ್ಯ ಅಲಕಾಗೆ.

ಮಕ್ಕಳ ನೆನಪಿನಿಂದ ಈ ಹೊತ್ತಿನಲ್ಲಿ ಮನಸ್ಸು ಮುದುಡಿ ಮಾತನಾಡದೆ, ನರಹರಿ ಮಡಿಯುಟ್ಟು, ದೇವರ ಕೋಣೆಗೆ ಕಾಲಿರಿಸಿದ ತನ್ನ ಕರ್ತವ್ಯ ಪೂರೈಸಲು.

೨

ಹೊರಜಗಲಿ ದಾಟಿ ಒಳಗೆ ಬಂದರೆ ಎಡಭಾಗದ್ದೇ ದೇವರ ಕೋಣೆ. ಹೆಚ್ಚು ವಿಶಾಲವಿಲ್ಲದ, ಬೆಳಕು ಕಡಿಮೆ ಇರುವ ಆ ಕೋಣೆಯಲ್ಲಿ ಹಗಲೂ ರಾತ್ರಿ ಬೆಳಗುವ ನಂದಾದೀಪ. ಹಲಸಿನ ಮರದಿಂದ ತಯಾರಿಸಲ್ಪಟ್ಟ ಮಂದಾಸನದಲ್ಲಿ ಬೆಳ್ಳಿ ಗಣಪತಿ ಮತ್ತು ಸಾಲಿಗ್ರಾಮದ ನಡುವೆ ಪಂಚಲೋಹದ ಒಂದಡಿ ಎತ್ತರದ, ನಿಂತ ಭಂಗಿಯಲ್ಲಿರುವ ದೇವಿ ವಿಗ್ರಹ. ಈ ದೇವಿಯನ್ನು ಅಷ್ಟಲಕ್ಷ್ಮಿ, ದುರ್ಗೆ, ಕಾಳಿ, ಸರಸ್ವತಿ, ಹೀಗೆ ಯಾವ ಹೆಸರಿನಿಂದಲೂ ಕರೆಯಬಹುದು. ನಾಲ್ಕು ಕೈಗಳಿರುವ ಸರ್ವಾಲಂಕಾರಭೂಷಿತೆಯಾಗಿ ಕಾಣುವ ಮಿರಮಿರನೆ ಹೊಳೆಯುವ, ಕಣ್ಮನ ಸೆಳೆಯುವ ಮೋಹಕ ರೂಪಿನ ದೇವಿ ತನ್ನ ಅಭಯಹಸ್ತದಿಂದ ಯಾವಾಗಲೂ ಅನುಗ್ರಹ ಮಾಡುತ್ತಾಳೆಂದು ಮನೆಯವರ ನಂಬಿಕೆ. ಪ್ರತಿದಿನ ಅನ್ನ ನೈವೇದ್ಯ, ರಾತ್ರಿಗೆ ಹಣ್ಣು ಹಾಲು ಇಟ್ಟು ನಮಸ್ಕಾರ. ನವರಾತ್ರಿಯ ಒಂಬತ್ತು ದಿನಗಳೂ ಪಾರಾಯಣ, ಅಷ್ಟೋತ್ತರ. ಸಹಸ್ರನಾಮಗಳಿಂದ ದೇವಿಯನ್ನು ಪೂಜಿಸುವುದು ವಾಡಿಕೆ. ಗಣಪತಿ ಮತ್ತು ಸಾಲಿಗ್ರಾಮ ಇದ್ದರೂ ಪೂಜೆಯಲ್ಲಿ ಸಿಂಹಪಾಲು ದೇವಿಗೆ. ಅದಕ್ಕೊಂದು ಇತಿಹಾಸವೇ ಇದೆ. ಈ ದೇವಿಯ ವಿಗ್ರಹ ಮನೆಗೆ ಬಂದು ಸೇರಿದ್ದು ಒಂದು ಕುತೂಹಲಕಾರಿ ಕಥೆ.

ಮಡಿಯುಟ್ಟು, ದೇವರ ಕೋಣೆಯಲ್ಲಿ ಕುಳಿತಿದ್ದ ನರಹರಿ ಹಳೆ ಕಥೆಯ ನೆನಪಿಗೆ ಇಳಿದಿದ್ದ. ಅಷ್ಟರಲ್ಲಿ ರೇಣುಕೆ ಬಿಸಿ ಅನ್ನ, ಹಾಲು ತಂದಿರಿಸಿದಳು. ಪೂಜೆ ಬೆಳಿಗ್ಗೆಯೇ ಆಗಿತ್ತು. ಇನ್ನು ಬಾಕಿ ಉಳಿದದ್ದು ನೈವೇದ್ಯ, ಮಂಗಳಾರತಿ. ನರಹರಿ ಗಂಟೆ ಬಾರಿಸುತ್ತ ನೈವೇದ್ಯ ಮುಗಿಸಿದ, ಮಂಗಳಾರತಿ ಎತ್ತಿದ. ಆರತಿಯ ಬೆಳಕಿನಲ್ಲಿ ದೇವಿ ನಕ್ಕಂತೆ ಭಾಸವಾಗಿ ಬೆಚ್ಚಿ ಕಣ್ಣು ಹೊಸಕಿಕೊಂಡು ನೋಡಿದ. ತನಗೆಲ್ಲೋ ಭ್ರಮೆ. ಆರತಿ ತಟ್ಟೆ ಕೆಳಗಿಟ್ಟು ಕೈ ಮುಗಿಯುವಾಗಲೂ ಅದೇನು ಕಳೆ ದೇವಿಯ ಮುಖದಲ್ಲಿ! ದೇವಿಯ ತಲೆಯ ಮೇಲಿನಿಂದ ಕೆಲವು ಹೂವುಗಳನ್ನು ತೆಗೆದು ಹರಿವಾಣದಲ್ಲಿರಿಸಿ ಅಮ್ಮನ ಕೈಗೂ, ಹೆಂಡತಿಯ ಕೈಗೂ ಹಾಕಿ ತೀರ್ಥ ಕೊಟ್ಟ.

"ಬೇಗ ನೌಕರಿಗೆ ಹಿಂದಿರುಗುವಂತೆ ಆಗಲಿ ಎಂದು ಬೇಡಿಕೊಳ್ಳಿ" ಎಂದಳು ಅಲಕಾ ಪಿಸುಧ್ವನಿಯಲ್ಲಿ.

ಅವನು ನಕ್ಕ. "ಬೇಡಿಕೊಂಡಾಕ್ಷಣ ಕಂಪನಿ ತೆರೆದುಕೊಳ್ಳುತ್ತದೆಯೇ?

ನಿನಗೆಲ್ಲೋ ಹುಚ್ಚು. ನನಗೆ ಇಂತಹದರಲ್ಲಿ ನಂಬಿಕೆ ಇಲ್ಲ!''

''ಮನೆದೇವಿಯನ್ನೇ ಭಕ್ತಿ-ಶ್ರದ್ಧೆಯಿಂದ ಬೇಡಿಕೊಂಡರೆ ಅವಳು ಅದನ್ನು ನೆರವೇರಿಸ್ತಾಳೆ ಅಂತ ಮಾವಯ್ಯ ಯಾವಾಗಲೂ ಹೇಳ್ತಾ ಇರ್ತಾರೆ. ಅವರಿಗೆ ನಂಬಿಕೆ ಇದೆ, ನಿಮಗ್ಯಾಕೆ ಇಲ್ಲವೋ?''

''ನಂಬಿಕೆ ಇಲ್ಲ ಎನ್ನಲಿಲ್ಲ. ಆದರೆ ನಮ್ಮ ಕೋರಿಕೆ ಸಕಾರಣ ಆಗಿರಬೇಕು. ಕಂಪನಿ ಮುಚ್ಚಿದ್ದು ಅಲ್ಲಿ ಕೆಲಸದವರ ಮುಷ್ಕರದಿಂದ. ಮುಷ್ಕರ ನಿಂತಾಗ ಕಂಪನಿ ತೆರೆದುಕೊಳ್ಳುತ್ತದೆ. ಇದು ಎಲ್ಲರಿಗೂ ತಿಳಿದದ್ದೇ.''

''ನೀವು ಸಕಾರಣವಾಗಿ ಕೇಳಿಕೊಳ್ಳಿ. ಕಂಪನಿ ತೆರೆದು ನಾವು ಆದಷ್ಟು ಬೇಗ ಔರಂಗಾಬಾದ್‌ಗೆ ಸೇರಿ ನಮ್ಮ ಮಕ್ಕಳನ್ನು ಕೂಡಿಕೊಳ್ಳುವಂತಾದರೆ ಇಲ್ಲೇ ಹೂವಿನ ಪೂಜೆ ಮಾಡಿಸುತ್ತೇನೆ ಅಂತ ಹೇಳಿಕೊಳ್ಳಿ.''

ಅವಳ ಆತಂಕ, ಆತುರ ಅರ್ಥವಾಗದಿರಲಿಲ್ಲ. ತೀರ್ಥದ ಬಟ್ಟಲನ್ನು ಪೀಠದ ಮೇಲಿಟ್ಟು ಎರಡೂ ಕೈ ಜೋಡಿಸಿ ದೇವಿಗೆ ಅಡ್ಡಬಿದ್ದ. ಅಲಕಾ ಹೇಳಿದ್ದನ್ನು ಕೇಳಿಕೊಳ್ಳಲಾರದೆ ಹಾಗೇ ಮೇಲೆದ್ದಾಗ ಮತ್ತೊಮ್ಮೆ ದೇವಿ ಮುಗುಳ್ನಗೆ ನಕ್ಕಂತೆ ಭಾಸವಾಯಿತು. ಕಣ್ಣುಜ್ಜಿಕೊಂಡ. ದೇವಿಯ ತಲೆಯ ಮೇಲೆ, ಭುಜಗಳ ಮೇಲೆ ಸುರಿದಿದ್ದ ಹೂವುಗಳ ರಾಶಿಯನ್ನು ಸರಿಸಿ ನೋಡಿದ. ಎರಡೂ ಕೈಗಳಿಂದ ವಿಗ್ರಹವನ್ನು ಹಿಡಿದು ಪರೀಕ್ಷಿಸಿದ. ದೇವಿ ನಕ್ಕಳೇ? ಅಥವಾ ತನ್ನ ಕಣ್ಣುಗಳು ಮೋಸ ಮಾಡುತ್ತಿವೆಯೋ? ಇಲ್ಲ, ಪಂಚಲೋಹದ ಈ ವಿಗ್ರಹ ಎಷ್ಟು ತಟಸ್ಥವಾಗಿದೆ! ತನ್ನನ್ನು ನೋಡಿ ನಕ್ಕಂತೆ, ಅಭಯ ಕೊಟ್ಟಂತೆ ಭಾಸವಾದದ್ದು ತನ್ನ ಮನದ ಭಾವನೆಯಿಂದಲೇ. ಇದಕ್ಕೊಂದು ರಂಗು ಕಟ್ಟುವುದೇ?

ಪಂಚಲೋಹದ ಈ ವಿಗ್ರಹ ದೊರೆತದ್ದು ನೀರಿನ ಹೊಂಡದಲ್ಲಿ, ಶಂಕರಯ್ಯನವರ ತಂದೆಯ ಅಜ್ಜನ ಕಾಲದಲ್ಲಿ! ಅಂದರೆ ಸುಮಾರು ಒಂದೂವರೆ ಶತಮಾನಗಳಷ್ಟು ಹಿಂದಿನ ಸಂಗತಿ. ಅದು ಸಿಕ್ಕಿದ ಕಥೆಯನ್ನು ಈಗಲೂ ಶಂಕರಯ್ಯ ತಾವೇ ಅನುಭವಿಸಿದವರಂತೆ ಬಣ್ಣಿಸುವುದುಂಟು. ನೋಡುತ್ತ ನರಹರಿಯ ಯೋಚನೆ ಸರಿಯಿತು ಹಿಂದಕ್ಕೆ.

* * *

ಶಂಕರಯ್ಯನವರ ತಂದೆಯ ಅಜ್ಜ ಅಚ್ಯುತಭಟ್ಟರಿಗೆ ಅವರ ಪೂರ್ವಜನ್ಮದ ಪುಣ್ಯಪ್ರಭಾವದಿಂದಲೇ ಕೆಸರುನೀರಿನ ಹೊಂಡದಲ್ಲಿ ದೇವಿಯ ವಿಗ್ರಹ ದೊರೆಯಿತೆಂದು ಈಗಲೂ ಹೇಳುತ್ತಾರೆ ಇಲ್ಲಿನ ಜನರು, ನಂಬಿಕೆಯಿಂದಲೂ,

ಪರೀಕ್ಷಾ ದೃಷ್ಟಿಯಿಂದಲೂ ಇಂದಿಗೂ ಶಂಕರಯ್ಯನವರ ಮನೆಗೆ ವಿಗ್ರಹ ನೋಡಲೆಂದು ಬರುವ ಮಂದಿ ಇದ್ದಾರೆ. ಅಷ್ಟೇಕೆ, ಕಾಣದ ಕಾಯಿಲೆ ಕಾಡಿದಾಗ, ಹುಡುಗಿಯ ಮದುವೆಗೆ ವಿಘ್ನ ಒದಗಿದಾಗ, ಭಟ್ಟರ ಮನೆದೇವಿಗೆ ಕುಂಕುಮ ಒಪ್ಪಿಸುತ್ತೇನೆ ಎಂದರೆ ಸಾಕಂತೆ, ಕೋರಿಕೆ ನೆರವೇರುತ್ತದೆ ಎಂಬ ನಂಬಿಕೆಯ ಮಾತಿದೆ. ಜನರ ಮಾತಿಗೆ ಅಲ್ಲ, ಇಲ್ಲ ಎಂದವರೆಲ್ಲ ಈ ಮನೆಯವರು.

ದೇವಿ ವಿಗ್ರಹ ದೊರೆತಾಗ ಅಚ್ಯುತನಿಗಿನ್ನೂ ಹದಿನಾರರ ಪ್ರಾಯ. ಹುಡುಗುತನದ ವಯಸ್ಸು. ಒಂಬತ್ತರ ಪ್ರಾಯದಲ್ಲಿ ಬ್ರಹ್ಮೋಪದೇಶವಾಗಿ ತಂದೆ ಸುಬ್ಬಾಭಟ್ಟರಿಂದ ವೇದಾಧ್ಯಯನ, ಪೂಜಾವಿಧಿವಿಧಾನ ಕಲಿತು ಅವರಂತೆ ಹಲವು ಹತ್ತು ಮನೆಗಳಿಗೆ ಪೂಜೆಗೆ ಹೋಗುವ ಮರಿಭಟ್ಟನಾಗಿದ್ದ. ಅವನ ಮಂತ್ರೋಚ್ಚಾರಣೆಯೂ ಸ್ಪಷ್ಟ. ಅಗಲ ಮುಖ, ದೊಡ್ಡ ಕಣ್ಣುಗಳು, ಹಾಲುಬಿಳುಪಿನ ಮೈಬಣ್ಣ, ವಿಶಾಲವಾದ ಭುಜ, ಸ್ವಲ್ಪ ಕುಳ್ಳ ಶರೀರ, ನೋಡಿದರೆ ಭಕ್ತಿಭಾವ ಹುಟ್ಟಿಸುವ ರೂಪರಾಶಿ. ಹದಿನಾರನೇ ವರ್ಷದಲ್ಲಿ ಹತ್ತರ ಬಾಲೆ ಮಹಾಲಕ್ಷ್ಮಿಯೊಂದಿಗೆ ಮದುವೆ. ಅವಳು ಓದುಬರಹ ತಿಳಿಯದವಳು. ತಾಯಿಯಿಂದ ಹಸೆಹಾಡು, ದೇವರನಾಮ ಕಲಿತಷ್ಟೇ ಗೊತ್ತು. ಓದುಬರಹ ಕಲಿತದ್ದು ಅಚ್ಯುತನ ಕೈ ಹಿಡಿದ ಮೇಲೆಯೇ.

ಮಹಾಲಕ್ಷ್ಮಿ ಈ ಮನೆಗೆ ಸೊಸೆಯಾಗಿ ಬಂದಾಗ ಸುಬ್ಬಾಭಟ್ಟರಿಗೆ ಕೇವಲ ಮುಳಿಹುಲ್ಲಿನ ಮನೆ ಹೊರತಾಗಿ ಇನ್ನೇನೂ ಇದ್ದಿರಲಿಲ್ಲ. ವೈದಿಕ ವೃತ್ತಿಯೊಂದೇ ಬದುಕಿಗೆ ಆಧಾರ. ಯಾರ ಮನೆಯಲ್ಲಿ ಪೂಜೆಯಿದೆ ? ಎಲ್ಲಿ ತಿಥಿ ಶ್ರಾದ್ಧಗಳಿವೆ ಎಂದು ಕಾಯುತ್ತ, ಕರೆದಲ್ಲಿಗೆ ಹೋಗಿ ತಮಗೆ ತಿಳಿದಂತೆ ಅವರ ಕಾರ್ಯ ನೆರವೇರಿಸಿ ಅಕ್ಕಿ-ತೆಂಗಿನಕಾಯಿ, ರೂಪಾಯಿ-ಪಾವಲಿ, ಪಾಣಿಪಂಚೆ, ಹೀಗೆ ಏನು ಕೊಟ್ಟರೂ ಮರುಮಾತಿಲ್ಲದೆ ಸ್ವೀಕರಿಸುವುದು ವಾಡಿಕೆ. ಕಡಿಮೆ ಕೊಟ್ಟರೂ ಗೊಣಗುವುದಿಲ್ಲ. ಇನ್ನೂ ಬೇಕು ಎಂದರೆ ಪೂಜಾಫಲಕ್ಕೆ ಪ್ರಾಪ್ತಿಯಿಲ್ಲ ಎಂದವರ ಅಭಿಪ್ರಾಯ. ಸಾಲದೆಂದು ಗೊಣಗಿದರೆ ತಾವು ನರಕಕ್ಕೆ ಹೋದೇವೆಂಬ ಭೀತಿ. ಅವರ ಮುಳಿಹುಲ್ಲಿನ ಎರಡು ಕೋಣೆಯ ಮನೆಯಲ್ಲಿ ಸೌಕರ್ಯ ಅಷ್ಟಕ್ಕಷ್ಟೆ. ಬಡತನದ ಬಿಸಿ ಅನುಭವಿಸಿದವರಿಗೇ ಗೊತ್ತು. ಅಚ್ಯುತನೂ ಅವರ ಜೊತೆಗೂಡಿದ ಮೇಲೆ ಏನೋ ಸ್ವಲ್ಪ ನೆಮ್ಮದಿ ಸಿಕ್ಕಿದ್ದು.

ಸುಬ್ಬಾಭಟ್ಟರಂತೆ ಅಚ್ಯುತ ಗೊಣಗದಿದ್ದರೂ ದಕ್ಷಿಣೆ ಕಡಿಮೆ ಸಿಕ್ಕಿದ ದಿನಗಳಲ್ಲಿ ಮನೆಗೆ ಬಂದಾಕ್ಷಣ ಸುಮ್ಮನೆ ಮಹಾಲಕ್ಷ್ಮಿ ಮೇಲೆ ಕೂಗಾಡುತ್ತಿದ್ದ.

ಊಟಕ್ಕೆ ಕುಳಿತರೂ ಅವನ ಮುಂಸುಮುಂಸು ತಪ್ಪಿದ್ದಲ್ಲ. ದಕ್ಷಿಣೆ ಹೆಚ್ಚಿಗೆ ಸಿಕ್ಕಿದ ದಿನಗಳಲ್ಲಿ ಅವನು ಸಂತುಷ್ಟ. ಆಗೆಲ್ಲ ಒಂದೆರಡು ಬಿಲ್ಲೆಗಳನ್ನು ಹತ್ತಿರದ ಶಿವ ದೇವಾಲಯದ ಕಾಣಿಕೆಡಬ್ಬಿಗೆ ಹಾಕುತ್ತಿದ್ದ.

ಅಂದಿನ ದಿನಗಳಲ್ಲಿ ಶಿವದೇವಾಲಯ ಒಂಡೀಮನೆ ನಾರಾಯಣಶಾಸ್ತ್ರಿಗಳ ಹೆಸರಿನಲ್ಲಿತ್ತು. ದೇವಾಲಯಕ್ಕೆಂದು ಹಿಂದಿನ ರಾಜನೊಬ್ಬ ಉಂಬಳಿ ಕೊಟ್ಟಿ ನಾಲ್ಕು ಎಕರೆ ಜಮೀನೂ ಇತ್ತು. ಶಾಸ್ತ್ರಿಗಳ ಹಿರಿಯರು ಬೇಸಾಯ ಮಾಡಿ ಕೊಂಡಿದ್ದ ಸಮತಟ್ಟಾದ ಜಮೀನು. ಅದನ್ನು ಬೇಸಾಯ ಮಾಡದ ಶಾಸ್ತ್ರಿ ಗಳು ಹಡೀಲು ಬಿಟ್ಟಿದ್ದು ಕಂಡು ತಾನು ವಹಿಸಿಕೊಂಡು ಬೇಸಾಯ ಮಾಡಿ ದರೆ ಹೇಗೆ ಎಂಬ ಆಲೋಚನೆ ಬಂದಿತು ಅಚ್ಯುತನಿಗೆ. ತನ್ನದೆಂಬ ತುಂಡು ಭೂಮಿ ಇಲ್ಲದಾಗಿ ಬೇರೆಯವರ ಜಾಗ ಪಡೆದು ಊಟಕ್ಕೆ ಬೇಕಾದ ಅಕ್ಕಿ ಬೆಳೆಯಬೇಕೆಂಬ ಅವನ ಉತ್ಕಟ ಇಚ್ಛೆಗೆ ದೇವಾಲಯದ ಜಮೀನು ಬಾಯಲ್ಲಿ ನೀರು ತರಿಸಿದ್ದು ನಿಜ. ನಾರಾಯಣ ಶಾಸ್ತ್ರಿಗಳು ಸಂತೋಷದಿಂದ, "ಜಮೀನು ಹಡೀಲು ಬಿದ್ದರೆ ಊರಿಗೆ ಬರಗಾಲ ಬಂದಂತೆ. ನನಗಂತೂ ಕೃಷಿ ಆಸಕ್ತಿ ಯಿಲ್ಲ. ನಿಮಗೆ ಬೇಕಾದದ್ದು ಬೆಳೆದುಕೊಂಡು ನೀವೇ ಇಟ್ಕೊಳ್ಳಿ" ಎಂದರು.

ಆದರೆ ಸುಬ್ಬಾಭಟ್ಟರು ಮಗನ ಆಸೆಗೆ ಕಡಿವಾಣ ಎಳೆದು "ದೇವರ ಜಮೀ ನಿನಲ್ಲಿ ನಾವು ಬೆಳೆ ತೆಗೆದು ಉಣ್ಣಬಾರದು. ಅದರ ಆಸೆ ಬಿಡು" ಎಂದರು, ಖಾರವಾಗಿ.

ಅಚ್ಯುತನಿಗಾದ ನಿರಾಸೆ ಅಷ್ಟಿಷ್ಟಲ್ಲ. ಎರಡು ದಿನ ಎಲ್ಲಿಯೂ ಹೋಗದೆ ಮನೆಯಲ್ಲೇ ಕುಳಿತುಬಿಟ್ಟ. ಮತ್ತೆರಡು ದಿನ ಕಾಡು-ಗುಡ್ಡ ಅಲೆದ. ಆಗೆಲ್ಲ ಗೋಚರವಾದ ಭೂಮಿ, ಹಡೀಲು ಬಿದ್ದ ಭೂಮಿ ಬೇಕಾದಷ್ಟು ಇದ್ದವು. ಅದನ್ನು ಸಮತಟ್ಟು ಮಾಡಿಸಿ ಹೊಸ ಗದ್ದೆಗೆ ಹುಟ್ಟು ಹಾಕುವುದು ಯೋಚಿ ಸಿದಷ್ಟು ಸುಲಭವಲ್ಲ. ಅವನ ಚಿಂತೆ ನೋಡಿ ಮೆಲ್ಲನೆ ಸಲಹೆ ನೀಡಿದಳು ಮಹಾಲಕ್ಷ್ಮಿ.

"ಪಟೇಲರ ಬಳಿ ಬೇಸಾಯ ಮಾಡದ ಗದ್ದೆಗಳಿವೆ. ಕೇಳಿ ನೋಡಿ!"

ಅವನು ಸಿದ್ಧನಾದ. ಆದರೆ ಈಗಲೂ ತಂದೆಯ ಅಡ್ಡಗಾಲು. ಪುರೋಹಿತ ವೃತ್ತಿಯಲ್ಲಿರುವ ತಾವು ಬೇಸಾಯಕ್ಕಿಳಿಯಬಾರದು ಎಂದವರ ತರ್ಕ. ಮಗ ಕೇಳಲಿಲ್ಲ.

"ಅಧ್ಯಯನ, ಪೂಜೆ ಇವೆಲ್ಲ ನಮ್ಮ ಆತ್ಮತೃಪ್ತಿಗೆ. ಬೇಸಾಯ ಹೊಟ್ಟೆ ಪಾಡಿಗೆ. ನಾಳೆ ನನಗೂ ನಾಲ್ಕು ಮಕ್ಕಳಾದರೆ ಇಲ್ಲೇನು ಮಣ್ಣು ತಿನ್ನಾ

ಕೂತಿರಬೇಕು ?"

ಆಗೆಲ್ಲ ಗೇಣಿ ಕಾನೂನು ಜಾರಿಯಲ್ಲಿದ್ದ ಕಾಲ. ಕೆಳಮನೆ ಪಟೇಲರಲ್ಲಿ ಕೇಳಿದಾಕ್ಷಣ ಅವರು ಸಂತೋಷದಿಂದ ಒಪ್ಪಿ ಒಂದೆಕರೆ ಗದ್ದೆಯನ್ನು ಗೇಣಿಗೆ ಕೊಟ್ಟುಬಿಟ್ಟರು. ಅದು ಅವರ ಜಮೀನಿನ ಉತ್ತರ ಭಾಗದಲ್ಲಿ, ಅಚ್ಯುತನ ಮನೆಯಿಂದ ಅರ್ಧ ಮೈಲು ದೂರ. ಸದ್ಯ ಇಷ್ಟಾದರೂ ದೊರೆಯಿತಲ್ಲ ಎಂಬ ಹಿಗ್ಗಿನಲ್ಲಿ ಅದೇ ಮಳೆಗಾಲದಲ್ಲಿ ಬೇಸಾಯಕ್ಕಿಳಿದ. ಮೊದಲು ಉಳುಮೆಮಾಡಬೇಕಿತ್ತು. ಗೌಡರು ತಮ್ಮ ಎರಡು ಜೊತೆ ಎತ್ತುಗಳನ್ನು "ಉಳಲು ಕೊಡುತ್ತೇನೆ" ಎಂದರು, ಅವನ ಉತ್ಸಾಹಕ್ಕೆ ನೀರೆರೆದು.

"ಗದ್ದೆ ಉತ್ತಾಗಲಿ. ಆಮೇಲೆ ನಾನೇ ಅದಕ್ಕೆ ಬೇಕಾದ ಗೊಬ್ಬರ ತಂದು ಹಾಕ್ತೇನೆ" ಎಂದ ವಾಲಗದ ತಿಮ್ಮ.

"ನೇಜಿಗಾಗಿ ನೀವೇನೂ ಚಿಂತಿಸಬೇಡಿ. ನಿಮಗೆ ಬೇಕಾದ ನೇಜಿ ನನ್ನಲ್ಲಿ ಸಿಗಬಹುದು" ಎಂದರು ಕೆಳಮನೆ ಪಟೇಲರು.

ಜನ ಕೊಡುವ ಸಹಕಾರಕ್ಕೆ ಬೆರಗಾದ ಅಚ್ಯುತನಲ್ಲಿ ಇಮ್ಮಡಿ ಉತ್ಸಾಹ ಮೂಡಿ ಹಗಲು ರಾತ್ರಿ ಅದೇ ಕನಸು. ತನ್ನ ಗದ್ದೆಯಲ್ಲಿ ತಲೆ ಎತ್ತಿ ನಿಲ್ಲುವ ಭತ್ತದ ಪೈರನ್ನು ಯಾವಾಗ ನೋಡುವೆನೋ, ತನ್ನ ಅಂಗಳದಲ್ಲಿ ಭತ್ತದ ರಾಶಿ ಯಾವಾಗ ಒಂದು ಬೀಳುವುದೋ. ಯಾವಾಗ ತನ್ನ ಪರಿಶ್ರಮದ ಅಕ್ಕಿಯ ಅನ್ನ ಉಣ್ಣುವೆನೋ !

ಇದೇ ಗುಂಗಿನಲ್ಲಿದ್ದಾಗ ಅದೊಂದು ರಾತ್ರಿ ನಿದ್ರೆಯಲ್ಲಿ ಕಂಡ ಕನಸು ಬೇರೆಯೇ. ಗದ್ದೆಯ ಪಶ್ಚಿಮ ಭಾಗದಲ್ಲಿ ಉತ್ತು ಕೆಸರಾದ ನೀರಿನ ತಳದಿಂದ ಯಾರೋ ಕರೆಯುತ್ತಿದ್ದಾರೆ ಅವನನ್ನು : "ಅಚ್ಯುತಾ ! ನನ್ನನ್ನು ಇಲ್ಲಿಂದ ಮೇಲೆತ್ತು, ಉಸಿರು ಕಟ್ಟುತ್ತಿದೆ !"

ಎಚ್ಚರವಾದಾಗ ಅಚ್ಯುತನ ಮೈ ಬೆವರಿಹೋಗಿದೆ. ಕಣ್ಣು ಹೊಸಕಿಕೊಂಡು ಸುತ್ತಲೂ ನೋಡಿದ. ಬೆಳಗಿನ ಕೋಳಿ ಕೂಗುವ ಹೊತ್ತು. ಕರೆದವರು ಯಾರೆಂದು ನೆನಪಿಸಿಕೊಂಡ. ಎಲ್ಲಾ ಅಸ್ಪಷ್ಟ. ಕಿವಿಗೆ ಕೇಳಿಸುತ್ತಿದೆ ಒಂದು ಇಂಪಾದ ಧ್ವನಿ. ಮರುದಿನ ರಾತ್ರಿಯೂ ಅದೇ ಕನಸು. ಈ ಬಾರಿ ಸಣ್ಣ ಪ್ರಾಯದ ಒಬ್ಬಳು ಸ್ತ್ರೀ ಗದ್ದೆಯ ದಂಡೆ ಬದಿಗೆ ನಿಂತು, "ನನ್ನನ್ನು ಎತ್ತಿಕೋ ಅಚ್ಯುತ. ಇಲ್ಲಿಂದ ಬೇರೆಡೆ ಸಾಗಿಸು. ನಿನಗಾಗಿ ಕಾಯುತ್ತಿದ್ದೇನೆ ಅಪ್ಪಾ !" ಎನ್ನುತ್ತಿದ್ದಾಳೆ. ಈಗಲೂ ಎಚ್ಚೆತ್ತಾಗ ಮೈಯೆಲ್ಲ ಬೆವರು. ಕನಸಿನಲ್ಲಿ ಕಂಡ ಹುಡುಗಿಯ ಮುಖ ನೆನಪು ಮಾಡಿಕೊಂಡ. ಆ ದಿನ ತನ್ನ ಗದ್ದೆಯತ್ತ ಹೋಗು

ವುದಕ್ಕೂ ಹೆದರಿಕೆ.

ಮೂರನೇ ರಾತ್ರಿ ಗಾಯತ್ರಿ ಹೇಳಿಕೊಳ್ಳುತ್ತ ನಿದ್ದೆ ಮಂಪರಿಗೆ ಜಾರಿದವನಿಗೆ ಎಲ್ಲಿಂದಲೋ ಕೇಳಿಸುತ್ತಿದೆ ವೇದಘೋಷ, ಡೋಲು, ತಮಟೆಗಳ ಸದ್ದು. ನೋಡುತ್ತಾನೆ, ಗದ್ದೆಯ ಪಶ್ಚಿಮ ಭಾಗದ ದಂಡೆಯಲ್ಲಿ ಕುಳಿತಿದ್ದಾಳೆ ನಿನ್ನೆ ಕನಸಿನಲ್ಲಿ ಕಂಡ ಹುಡುಗಿ. ಅವಳ ಮೈಯೆಲ್ಲ ಕೆಸರು, ಕಣ್ಣುಗಳಲ್ಲಿ ನೀರು. "ನಾನಿಲ್ಲಿ ಅನಾಥಳಾಗಿ ಬಿದ್ದಿದ್ದೇನೆ. ನನ್ನನ್ನು ಎತ್ತಿಕೋ. ನಿನ್ನ ಗುಡಿಸಲಿಗೆ ಕರೆದುಕೋ"— ಆರ್ತಳಾಗಿ ಕೇಳುತ್ತಿದ್ದಾಳೆ. ಅಚ್ಯುತ ಹತ್ತಿರ ಹೋದಂತೆ ಅವಳು ಒಳಕ್ಕನೆ ನೀರಿಗಿಳಿದು ಮಾಯವಾಗಿಬಿಟ್ಟಳು. ಅವಳ ಎರಡು ಕೈಗಳಷ್ಟೇ ಕಾಣಿಸುತ್ತಿವೆ ನೀರಿನಿಂದ ಹೊರಗೆ.

ಎಚ್ಚತ್ತ ಅಚ್ಯುತನ ಮೈಯಲ್ಲಿ ನಡುಕ. ಮೂರು ದಿನಗಳಿಂದ ಒಂದೇ ಕನಸು. ತನ್ನ ಗೇಣಿ ಗದ್ದೆಯ ಪಶ್ಚಿಮಕ್ಕೆ ಏನೋ ಇರುವುದು ದಿಟ. ಅದೇ ಈ ಹಾಳು ಕನಸು. ತಾನು ಕಂಡದ್ದನ್ನು ಯಾರಿಗೂ ಹೇಳದೆ ಬೆಳಗಿನ ಜಾವವೇ ಓಡಿ ಬಂದ ಗದ್ದೆ ಬಳಿಗೆ. ಹಾರೆ-ಪಿಕಾಸು ತರಲಿಲ್ಲವೆಂಬ ನೆನಪು ಬರಲಿಲ್ಲ. ಪಶ್ಚಿಮ ದಂಡೆ ಬಳಿ ಸ್ವಲ್ಪ ಹೊತ್ತು ಹಾಗೇ ಕುಳಿತ. ಮೂರು ದಿನಗಳಿಂದ ಉತ್ತು ಕೆಸರಾದ ಗದ್ದೆಯಲ್ಲಿ ತಾನು ಕಂಡ ಕೈಗಳ ನೆನಪು ಮಾಡಿಕೊಳ್ಳುತ್ತ ಕೆಸರು ನೀರಿಗಿಳಿದ. ಕೆಳಗೆ ಬಗ್ಗಿ ಎರಡೂ ಕೈಗಳಿಂದ ಕೆಸರುಮಣ್ಣನ್ನು ಗೋಚಿ ಮೇಲೆತ್ತಿ ಹಾಕಿದ. ಎಂತಹ ಆವೇಶ ಬಂದಿತೋ, ಮಣ್ಣನ್ನು ಮೊಗೆದು ತೆಗೆಯುವುದೇ ಉತ್ಸಾಹವಾಯಿತು. ನಿಂತ ನೀರಿಗೆ ಸುತ್ತಲೂ ಕಟ್ಟೆ ಕಟ್ಟಿ ಮಣ್ಣನ್ನು ಅಗೆಯುತ್ತಿದ್ದಂತೆ ಕೈಗೆ ಏನೋ ತಗಲಿದಂತಾಯಿತು. ಮತ್ತಷ್ಟು ಮಣ್ಣನ್ನು ಸರಿಸಿ ಕೈಗೆ ತಗಲಿದ್ದನ್ನು ಕಷ್ಟಪಟ್ಟು ಶಕ್ತಿ ಹಾಕಿ ಮೇಲಕ್ಕೆಳೆದ. ನೋಡಿದರೆ ಒಂದೂವರೆ ಅಡಿ ಉದ್ದದ ಒಂದು ತುಂಡು ! ಕೆಸರು ಮೆತ್ತಿ ಅದೇನೆಂದು ಅರ್ಥವಾಗಲಿಲ್ಲ. ಕೆಸರು ನೀರಿನಲ್ಲಿಯೇ ಅದನ್ನು ತಿಕ್ಕಿ ತೊಳೆಯುತ್ತಿದ್ದಂತೆ ಅವನ ಕಣ್ಣುಗಳು ಅಗಲವಾಗಿ ಉತ್ಸಾಹದಿಂದ ನಗತೊಡಗಿದವು. 'ಬ್ಬಾಪರೆ !' ಉದ್ಗರಿಸಿದ ತನ್ನಲ್ಲೇ. ತನ್ನ ಕಣ್ಣುಗಳು ಮೋಸ ಮಾಡುತ್ತಿಲ್ಲವಷ್ಟೆ. ಮೂರು ದಿನ ಕನಸಿನಲ್ಲಿ ಕಂಡ ಸಣ್ಣ ಪ್ರಾಯದ ಬಾಲೆ ಇವಳೆಯೇ ? ನಗುವ ಅರಳುಕಣ್ಣುಗಳು, ನೀಳ ನಾಸಿಕ, ತಲೆಗೆ ಕಿರೀಟ, ಕೈ ಕುತ್ತಿಗೆಗೆ ಆಭರಣಗಳ ರೂಪ, ಕಾಲಿಗೆ ಗೆಜ್ಜೆ, ರೇಶ್ಮೆ ಸೀರೆ ಸುತ್ತಿದಂತೆ ಪಾದದ ಕೆಳಗೆ ಪದ್ಮ, ಎಲ್ಲವೂ ಸೂಕ್ಷ್ಮ ಕುಸುರಿ ಕೆತ್ತನೆಯಲ್ಲಿ ಕಡೆದು ಮಾಡಿದ ಪಂಚಲೋಹದ ಸ್ತ್ರೀ ವಿಗ್ರಹ. ಎಷ್ಟು ಶತಮಾನಗಳ ಹಿಂದಿನದೋ. ಯಾರು ಇಲ್ಲಿ ಎಸೆದರೋ, ತನಗಾಗಿಯೇ ಇಲ್ಲಿ

ಕಾದು ಕುಳಿತಿರಬೇಕು. ಇದನ್ನು ಪಡೆಯುಲೆಂದೇ ಗದ್ದೆ ಗೇಣಿಗೆ ಮಾಡಿಕೋ ಎಂಬ ಪ್ರೇರಣೆ ತನಗಾಗಿರಬೇಕು. ಎಲ್ಲವೂ ದೈವಾನುಗ್ರಹ.

ಅವನು ಪುಟ್ಟ ಮಗುವಿನಂತೆ ಅದನ್ನು ಎದೆಗವಚಿಕೊಂಡು ಓಡಿ ಬಂದ ಮನೆಗೆ. ಸುಬ್ಬಾಭಟ್ಟರಿಗೆ ವಿಸ್ಮಯ. ಕೊಳೆ ತೊಳೆದು ಸ್ವಚ್ಛವಾದ ಮೇಲೆ ಪರೀಕ್ಷಿಸಿ ನೋಡಿದರು. ಆದರೆ ವಿವರಣೆ ಕೊಡಲು ಅವರಿಗಾಗಲಿಲ್ಲ. "ಎಂಥಾ ಚಂದದ ದೇವಿ ಮೂರ್ತಿ ! ಇದನ್ನೇನು ಮಾಡುತ್ತಿ?"—ಕೇಳಿದರು ಮಗನನ್ನು

"ಮೂರು ದಿನ ಕನಸಿನಲ್ಲಿ ಕಾಡಿದ ವಿಗ್ರಹ ಇದು. ನಮ್ಮ ಮನೇಲಿಟ್ಟು ಪೂಜೆ ಮಾಡೋಣ. ಇದು ಸಾಮಾನ್ಯ ದೇವಿ ವಿಗ್ರಹ ಇರಲಿಕ್ಕಿಲ್ಲ, ಅಪ್ಪಾ. ಹಿಂದೆ ಯಾರೋ ನಮ್ಮಂಥವರು ಪೂಜೆ ಮಾಡಿಕೊಂಡಿದ್ದೇ ಇರಬೇಕು. ಇಲ್ಲ ವಾದರೆ ಹೀಗೆ ನನಗೆ ಕನಸಿನಲ್ಲಿ ಕಾಡುವುದುಂಟೇ ?"

ಅಂದಿನಿಂದ ದೇವರ ಕೋಣೆಯಲ್ಲಿ ಪ್ರತಿಷ್ಠೆಗೊಂಡು ಸುಬ್ಬಾಭಟ್ಟರಿಂದ ಅಥವಾ ಅಚ್ಯುತನಿಂದ ಪೂಜೆ ಮಾಡಿಸಿಕೊಳ್ಳತೊಡಗಿತು ಆ ದೇವಿ ವಿಗ್ರಹ. ಮೊದಲಿಗೆ ದೇವರ ಕೋಣೆಯಲ್ಲಿ ಇದ್ದದ್ದು ಗಣಪತಿ ಮತ್ತು ಸಾಲಿಗ್ರಾಮ ಇಷ್ಟೇ. ವಿಗ್ರಹವೂ ಜೊತೆಗೂಡಿದ ಮೇಲೆ ದೇವರ ಕೋಣೆಗೆ ಒಂದು ಶೋಭೆ ಬಂದಂತೆ ಧನ್ಯತೆ ಮೂಡಿತು ಅಚ್ಯುತನಿಗೆ.

ಮಹಾಲಕ್ಷ್ಮಿಗೆ ವಿಸ್ಮಯ. ಗದ್ದೆ ಗೇಣಿಗೆ ಮಾಡಿಕೊಂಡದ್ದು ಇದನ್ನು ಕಾಪಾಡಲಿಕ್ಕಾಗಿಯೇ ? ಈ ನಿಧಿ ತಮ್ಮಲ್ಲಿಗೆ ಬಂದು ತಮ್ಮಿಂದ ಪೂಜೆ ಸ್ವೀಕ ರಿಸಬೇಕೆಂದು ವಿಧಿಸಂಕಲ್ಪವಾಗಿರಬೇಕು. ಏನೋ ದೇವರ ಅನುಗ್ರಹ ! ಅವ ಳಿಗೆ ಏನು ತೋಚಿತೋ, ಹಾಲು ಹಣ್ಣು ಇಷ್ಟೇ ನೈವೇದ್ಯ ಸಾಲದು, ಮಧ್ಯಾಹ್ನ ಅನ್ನನೈವೇದ್ಯ ಆಗಬೇಕು ಎಂಬ ಕ್ರಮ ಚಾವಿಗೆ ತಂದಳು. ಅಚ್ಯುತ ಬೇಡ ಎನ್ನಲಿಲ್ಲ. ವಿಗ್ರಹ ಇರಿಸಿದ್ದು ಕತ್ತಲೆ ಕೋಣೆಯಲ್ಲಿ. ದಿನವೆಲ್ಲ ದೇವಿ ಕತ್ತಲೆಯನ್ನು ನೋಡಬೇಕೇ ? ಮಹಾಲಕ್ಷ್ಮಿಗೆ ಆತಂಕ ಹೆಚ್ಚಿ ನಂದಾ ದೀಪ ಇಟ್ಟಳು ದೇವರ ಕೋಣೆಯಲ್ಲಿ. ದಿನವೆಲ್ಲ ಬೆಳಗುವ ದೀಪದ ಮುಂದೆ ದೇವಿ ಎಷ್ಟು ಚೆನ್ನಾಗಿ ನಗುತ್ತಾಳೆ ! ಅವಳಿಗೂ, ಅಚ್ಯುತನಿಗೂ ನೋಡಿದಷ್ಟೂ ಸಾಲದು. ಹೂವುಗಳಿಂದ ಶೃಂಗರಿಸಿದಷ್ಟೂ ಕಡಿಮೆಯೆ. ಭಯ, ಭಕ್ತಿ, ಶ್ರದ್ಧೆಯೇ ನಡೆಸಿತು ಅವರನ್ನು.

೩

"ಏನು ಯೋಚನೆ ?" ಅಲಕಾ ಎಚ್ಚರಿಸಿದಾಗಲೆ ನರಹರಿ ತನ್ನ ಹಿರಿಯರ ಸ್ಮರಣೆಯಿಂದ ವಾಸ್ತವಕ್ಕೆ ಬಂದು ಹೊರಗೆ ನೋಡಿದ. ಆಗಲೇ ಗಂಟೆ ಹನ್ನೊಂದು. ಮಡಿಬಟ್ಟೆ ಕಿತ್ತೆಸೆದು ಬೇರೆ ಬಟ್ಟೆ ಧರಿಸಿ ಹೊರಹೋಗಲು ಸಜ್ಜಾಗುತ್ತಿದ್ದಂತೆ ಅಲಕಾ ಅಂಚೆಗೆ ಹಾಕಲೆಂದು ಎರಡು ಕಾಗದ ತಂದು ಕೊಟ್ಟಳು ಅವನ ಕೈಗೆ. ಒಂದು ಸುಹಾಸನಿಗೆ, ಇನ್ನೊಂದು ವಿಜಯಳಿಗೆ. ವಾರಕ್ಕೆ ಎರಡು ಕಾಗದಗಳನ್ನು ತಪ್ಪದೇ ಬರೀತಾಳೆ ಇಬ್ಬರಿಗೂ. ಅಗಲಿಕೆಯ ನೋವು ಕಾಡಿದಾಗಲೆಲ್ಲ ಕಾಗದ ಬರೆದಾಗಲೇ ಅವಳಿಗೆ ಸಮಾಧಾನ. ಇನ್ನೆಷ್ಟು ದಿನ ಹೀಗೆ? ಎಲ್ಲೋ ಕೆಲವು ದಿನ. ಮತ್ತೆ ತನ್ನ ಸಂಸಾರ ಜೊತೆಗೂಡಿ ಇರಲಾರದೇ.....

ಅಷ್ಟರಲ್ಲಿ ಅಮ್ಮನ ಧ್ವನಿ ಕೇಳಿಸಿತು ಒಳಬಾಗಿಲಿನಿಂದ, "ಹಸನೆ ಬ್ಯಾರಿ ಸಿಕ್ಕಿದರೆ ಹಾಲು ಕೊಡುವ ದನ ಇದೆ ಅಂತ ಹೇಳಿಬಿಡು, ಕ್ರಯ ಮಾಡಿ ತೆಗೆದುಕೊಂಡು ಹೋಗಲಿ."

ಕೊಟ್ಟಿಗೆಯಲ್ಲಿ ಈಗಾಗಲೆ ಹಾಲು ಕರೆಯುವ ಎರಡು ಜರ್ಸಿ ದನಗಳಿದ್ದವು. ಹೆಚ್ಚಾದ ಹಾಲನ್ನು ಕೊಳ್ಳುವ ಗಿರಾಕಿಯಿರಲಿಲ್ಲ. ಪೇಟೆಗೆ ಒಯ್ದು ಮಾರುವ ವ್ಯವಸ್ಥೆಯೂ ಇರಲಿಲ್ಲ. ಹೀಗಾಗಿ ದನವನ್ನೇ ಮಾರುವ ಯೋಜನೆ ರೇಣುಕೆಯದು. ಇಲ್ಲಿ ದನ-ಕರು ಇರುವವರ ಹಣೆಬರಹ ಇಷ್ಟೇ. ತಮಗೆ ಹೆಚ್ಚಾಗಿ ಮಿಕ್ಕಿದ್ದನ್ನು ಏನು ಮಾಡಬೇಕು ಎನ್ನುವುದೇ ಸಮಸ್ಯೆ. ಬಾಡಿಗೆ ವಾಹನ ಗೊತ್ತುಮಾಡಿ ಪ್ರತಿದಿನ ಹಳ್ಳಿಯ ಹಾಲನ್ನು ಶೇಖರಿಸಿ ಪೇಟೆಗೆ ಒಯ್ಯಬಾರದೆ ಯಾರಾದರೂ. ತ್ಸತ್, ಎಲ್ಲರೂ ಸೋಮಾರಿಗಳು—ತನ್ನಲ್ಲೇ ಗೊಣಗಿಕೊಳ್ಳುತ್ತ ಅಂಗಳಕ್ಕಿಳಿದ ನರಹರಿ.

ಮನಸ್ಸು ಇನ್ನೂ ನೆಲೆಸಿತ್ತು ದೇವಿ ವಿಗ್ರಹದಲ್ಲಿ. ಅದು ಕೆಸರು ನೀರಿನ ಹೊಂಡದಿಂದ ಮೇಲೆದ್ದು ಅಚ್ಯುತನ ಮನೆ ಸೇರಿದ ಒಂದು ತಿಂಗಳಲ್ಲಿ ಪಟೇಲರ ಒಬ್ಬ ಆಳು ಬಂದು, "ಹೆಂಡತಿಗೆ ಕಾಹಿಲೆ ಕಷಾಲೆ ಜಾಸ್ತಿ, ಹಾಲು ಕರೆಯಲು ಆಗ್ತಾ ಇಲ್ಲ. ಈ ದನ ನಿಮ್ಮಲ್ಲಿರಲಿ" ಎಂದು ಹಾಲು ಕರೆಯುವ ಒಂದು ದನ ಮತ್ತು ಅದರ ಹೆಂಗರುವನ್ನು ಕಟ್ಟಿಹಾಕಿ ಹೋದ. ಹಾಗೆ ಹೋದ ಪುಣ್ಯಾತ್ಮ ಇತ್ತ ತಲೆ ಹಾಕಲೇ ಇಲ್ಲ. ನಾಲ್ಕು ಬಾರಿ ಅಚ್ಯುತ ಅವನಲ್ಲಿಗೆ ಹೋಗಿ "ನಿನ್ನ ದನ ಹೊಡ್ಕೊಂಡು ಹೋಗು" ಎಂದರೆ, "ಇರಲಿ ಬಿಡ

ಅಯ್ಯ, ನಿಮ್ಮ ದೇವರ ಅಭಿಷೇಕಕ್ಕೆ ಅದರ ಹಾಲು ಉಪಯೋಗಿಸಿಕೊಳ್ಳಿ'' ಎಂದುಬಿಟ್ಟ.

ಹೀಗೆ ಅಚ್ಯುತನ ಮನೆ ಸೇರಿದ ದನ ಮುಂದೆ ಎಂಟು ಕರುಗಳನ್ನು ಹಾಕಿತು. ಆ ಕರುಗಳೂ ಬೆಳೆದು ಕರುಗಳನ್ನು ಹಾಕಿ ತುಂಬಿಹೋಯಿತು ಕೊಟ್ಟಿಗೆ. ಇತ್ತ ಮಹಾಲಕ್ಷ್ಮಿಯೂ ಮೂರು ಗಂಡು, ಎರಡು ಹೆಣ್ಣುಮಕ್ಕಳ ತಾಯಿಯಾದಳು. ಗಂಡುಮಕ್ಕಳಲ್ಲಿ ಹಿರಿಯವನು ಅನಂತ, ಎರಡನೆಯವ ಜನಾರ್ದನ, ಮೂರನೆಯವ ಮುರಾರಿ. ಎರಡನೇ ಮಗ ಹುಟ್ಟಿದ ಸಂದರ್ಭದಲ್ಲಿ ಪಟೇಲರ ಮತ್ತಷ್ಟು ಗದ್ದೆಗಳನ್ನು ಗೇಣಿಗೆ ಬರೆಸಿಕೊಂಡು ಉಳುಮೆಗಾಗಿ ಎತ್ತುಗಳನ್ನೂ ಸಾಕತೊಡಗಿದ. ಮುರಾರಿ ಹುಟ್ಟಿದಾಗ ಒಂದೆಕರೆ ಗದ್ದೆಗೆ ಪ್ರಥಮವಾಗಿ ಅಡಿಕೆ ತೋಟ ಇಟ್ಟದ್ದು.

''ನಾನು ಕೊಟ್ಟದ್ದು ಭತ್ತ ಬೆಳೆಯಲು,'' ಪಟೇಲರು ಸ್ಪಷ್ಟವಾಗಿ ಅಂದರು. ''ತೋಟ ಇಡುವುದಕ್ಕಲ್ಲ. ತೋಟದ ಉತ್ಪತ್ತಿ ಬೇರೆ. ಗದ್ದೆ ಉತ್ಪತ್ತಿ ಬೇರೆ.''

''ಆದರೆ ಬೆಳೆದ ಬೆಳೆಯಲ್ಲಿ ನಿಮ್ಮ ಪಾಲು ತಪ್ಪಿಸುವುದಿಲ್ಲ. ಅದು ಅಡಿಕೆಯಿರಲಿ, ಭತ್ತವಾಗಿರಲಿ.''

ಹೇಳಿದ ಮಾತಿನಂತೆ ನಡೆದುಕೊಂಡ ಅಚ್ಯುತ ಅಡಿಕೆ ಫಸಲು ಪ್ರಾರಂಭವಾದ ಮೇಲೆ ಬಂದ ಆದಾಯದ ಅಂಶವನ್ನು ಪಟೇಲರಿಗೆ ಕೊಡುತ್ತಾ ಬಂದ. ಮುರಾರಿ ಹುಟ್ಟಿದ ಗಳಿಗೆ ಚೆನ್ನಾಗಿತ್ತು. ಹೊಸ ಹಂಚಿನ ಮನೆ ಸಿದ್ಧವಾಯಿತು. ದೇವಿ ವಿಗ್ರಹವನ್ನು ಹೆಚ್ಚು ವೈಭವದಿಂದ ಹೊಸ ಮನೆಯ ದೇವರ ಕೋಣೆಯಲ್ಲಿ ಪ್ರತಿಷ್ಠೆ ಮಾಡಲಾಯಿತು. ನವರಾತ್ರಿ ಪೂಜೆ ಪ್ರಾರಂಭವಾದದ್ದು ಈ ಹೊಸ ಮನೆ ಆದಮೇಲೆ. ನೆರೆಹೊರೆ, ನೆಂಟರಿಷ್ಟರು, ಬಡವರು ಎನ್ನುತ್ತ ಹತ್ತು ದಿನಗಳೂ ಸಮಾರಾಧನೆ. ಪತಿ ಪತ್ನಿ ವ್ರತಧಾರಣೆ ಮಾಡಿ, ಹಗಲು ಉಪವಾಸವಿದ್ದು, ರಾತ್ರಿದೇವಿಯನ್ನು ಪೂಜಿಸಿ,ಮಂಗಳಾರತಿ ಮಾಡಿ, ಎಲ್ಲರಿಗೂ ಪ್ರಸಾದ, ಹಸ್ತೋದಕವಿತ್ತು ಉಣಬಡಿಸಿದ ಮೇಲೆ ಅವರಿಗೆ ಊಟ. ಮಡಿ–ಮೈಲಿಗೆ, ನೇಮ-ನಿಷ್ಠೆಗಳು ಒಂದೊಂದಾಗಿ ಅನುಷ್ಠಾನಕ್ಕೆ ಬಂದವು. ಮಹಾಲಕ್ಷ್ಮಿ ಸಂಪ್ರದಾಯದ ಒಂದೇ ಒಂದು ಎಳೆ ಬಿಡದಂತೆ ಶ್ರದ್ಧೆಯಿಂದ ನಡೆಸಿದಳು. ಒಂದೊಂದು ಕಾರ್ಯವೂ ತಮಗೆ ಶ್ರೇಯಸ್ಸು ಮಾಡುತ್ತದೆ ಎಂದವಳ ನಂಬಿಕೆ. ಅಚ್ಯುತನ ಕೈಹಿಡಿದಾಗ ಮುರುಕು ಗುಡಿಸಲಿನಲ್ಲಿ ಒಡಕು ಮಡಿಕೆಗೂ ಗತಿಯಿರಲಿಲ್ಲ. ಈಗಲೋ ದೇವಿಯ ಅನುಗ್ರಹದಿಂದ ಗೇಣಿ ಭೂಮಿಯಾಗಿದೆ, ಹೊಸ ಮನೆ ಆಗಿದೆ, ಕೊಟ್ಟಿಗೆಯಲ್ಲಿ ಲಕ್ಷ್ಮಿ ನೆಲೆಸಿ

ದ್ದಾಳೆ, ಮತ್ತೇನು ಬೇಕು ?

ಸುಬ್ಬಾಭಟ್ಟರು ಈ ವೈಭವ ನೋಡಿ ಕಣ್ಮುಚ್ಚಿದರು ಸಂತೃಪ್ತಿಯಲ್ಲಿ. ಅವರು ತೀರಿಹೋದಾಗ ನಮ್ಮ ಅಚ್ಯುತಭಟ್ಟರಿಗೆ ಸುಮಾರು ನಲ್ವತ್ತೆಂಟು ವರ್ಷ ಇದ್ದೀತು. ದೈವಾನುಗ್ರಹ ಎಂಬಂತೆ ಶಿವದೇವಾಲಯದ ಮೊಕ್ತೇಸರರಾಗುವ ಅವಕಾಶ ಒದಗಿಬಂದಿತು. ಇದು ಅವರ ಜೀವನದ ಮಹತ್ವಪೂರ್ಣ ತಿರುವು.

ಹಳೆಯ ಗುಂಗಿನಲ್ಲಿ ನರಹರಿ ಆಗಲೇ ಗುಡ್ಡವೇರಿ ಶಾಲೆಯ ಸಮೀಪ ಬಂದುಬಿಟ್ಟಿದ್ದ. ಅವನು ಅಲ್ಲಿಗೆ ಬರುವುದೂ, ಅಂಚೆಯವ ಎದುರಾಗುವುದೂ ಸರಿಯಾಯ್ತು. ಮಾಧವನ ಒಂದು ಪತ್ರವಿತ್ತು ತಂದೆ ಹೆಸರಿಗೆ. ಈ ಸಲ ನವರಾತ್ರಿಗೆ ಬರುವುದಿಲ್ಲವೆಂದೂ, ಶಿಮ್ಲಾ, ಮುಸೂರಿ, ಬದರಿ ಕಡೆ ಸಂಸಾರಸಮೇತ ವಿಹಾರ ಹೋಗಲಿರುವುದಾಗಿಯೂ ಬರೆದಿದ್ದ. ಸ್ವಲ್ಪ ಅಸೂಯೆಯಾಯಿತು ಪತ್ರ ಓದಿ. ಈ ದಿನವೂ ನಿಖಿಲನ ಕಾಗದವಿರಲಿಲ್ಲ. ಕಂಪನಿ ಪರಿಸ್ಥಿತಿ ಹೇಗಿದೆಯೋ, ಒಮ್ಮೆ ಹೋಗಿ ಬಂದರೇನು ?

ಶಾಲೆ ಒಳಗೆ ಸೋಮಶೇಖರ ಮಾಸ್ತರರು ಐದನೇ ಕ್ಲಾಸು ಮಕ್ಕಳಿಗೆ ಗಣಿತ ಪಾಠ ಮಾಡುತ್ತಿದ್ದರೆ ನಾಲ್ಕನೇ ಕ್ಲಾಸಿನ ಹುಡುಗಿಯಿಂದ ಒಂದನೇ ಕ್ಲಾಸಿನ ಮಕ್ಕಳಿಗೆ ಕನ್ನಡ ಪಾಠ ! ಇದು ಇಲ್ಲಿ ದಿನನಿತ್ಯದ ನೋಟ. ನರಹರಿ ತನ್ನ ನಾಲ್ಕನೇ ಕ್ಲಾಸಿನ ತನಕ ಕಲಿತ ಶಾಲೆ ಇದು. ಆಗಿಗಿಂತ ಪರಿಸ್ಥಿತಿ ಹೆಚ್ಚೇನೂ ಭಿನ್ನವಾಗಿಲ್ಲ. ಆಗ ಇದ್ದವರು ರಂಗಪ್ಪ ಮಾಸ್ತರರು. ಎಲ್ಲೋ ಸ್ವಲ್ಪ ಮಂದಿ ಮಕ್ಕಳಿದ್ದರು ಶಾಲೆಯಲ್ಲಿ. ನಾಲ್ಕು ವರ್ಷಗಳ ಹಿಂದೆ ರಂಗಪ್ಪ ಮಾಸ್ತರರು ರಿಟೈರ್ ಆಗಿ ಅವರ ಬದಲಿಗೆ ಬಂದವರು ಆಗತಾನೇ ಶಿಕ್ಷಕ ಪದವಿ ಪಡೆದ ಸಣ್ಣ ಪ್ರಾಯದ ಸೋಮಶೇಖರ ಮಾಸ್ತರರು. ಅವರಿಗೆ ಕಲಿಸುವ ಉತ್ಸಾಹ. ಆದರೆ ಇಲ್ಲಿಯ ಪರಿಸ್ಥಿತಿಯಲ್ಲಿ ಒಬ್ಬರೇ ಐದು ಕ್ಲಾಸನ್ನು ತೆಗೆದುಕೊಳ್ಳುವ ಪ್ರಯಾಸದಿಂದ ಉತ್ಸಾಹ ತಗ್ಗಿದೆ. ವರ್ಷವರ್ಷವೂ ಹೆಚ್ಚುತ್ತಿರುವ ಮಕ್ಕಳ ಸಂಖ್ಯೆ ಬೇರೆ. ಪಾಠದ ಹೊರೆ ಹೆಚ್ಚಿದಾಗಲೆಲ್ಲ ಮೇಲಿನ ಕ್ಲಾಸಿನ ಮಕ್ಕಳು ಕೆಳಗಿನ ಕ್ಲಾಸಿನವರಿಗೆ ಪಾಠ ಮಾಡುವುದು ರೂಢಿಯಾಗಿದೆ. ಇನ್ನೊಬ್ಬರು ಶಿಕ್ಷಕರು ಬೇಕೆಂದು ಸೋಮಶೇಖರ ಮಾಸ್ತರರು ಸರಕಾರಕ್ಕೆ ಅರ್ಜಿ ಬರೆದು ಬರೆದು ರೋಸಿಹೋಗಿದ್ದಾರೆ. ಹಳ್ಳಿಯಲ್ಲಿ ಕಲಿತವರಿದ್ದರು ಸಾಕಷ್ಟು ಮಂದಿ. ಆದರೆ ಸಂಬಳ ಕೊಡದೆ ಸುಮ್ಮನೆ ಕಂಠಶೋಷಣೆ ಮಾಡುತ್ತಾರೆಯೇ ? ನರಹರಿಗೆ ಇದೆಲ್ಲ ಹಳ್ಳಿಗೆ ಬಂದು ನಿಂತಮೇಲೆಯೇ ತಿಳಿ

ದದು . ಪ್ರತಿದಿನ ಅಂಚೆಯವನಿಗಾಗಿ ಶಾಲೆಗೆ ಬಂದಾಗ ಮಕ್ಕಳ ಮತ್ತು ಮಾಸ್ತರರ ಬವಣೆ ಕಂಡು 'ಇದಕ್ಕೇನು ಪರಿಹಾರ ?' ಎಂದೂ ಚಿಂತಿಸಿದ್ದಾನೆ.

“ಪರಿಹಾರ ಸುಲಭ,” ಸೋಮಶೇಖರ ಮಾಸ್ತರರು ಕೆಲವು ದಿನಗಳ ಹಿಂದೆ ಹೇಳಿದ್ದರು. “ದೇವಾಲಯದ ಟ್ರಸ್ಟಿನಲ್ಲಿ ಸಾಕಷ್ಟು ಹಣ ಇದೆಯಂತೆ, ಅದರ ಒಂದಂಶ ಶಾಲಾ ಮಾಸ್ತರರಿಗೆ ಕೊಡುವ ಉದಾರತನ ತೋರಿಸಿದರೆ ಒಬ್ಬ ನಿರುದ್ಯೋಗಿಗೆ ಬದುಕು ಕೊಟ್ಟಹಾಗಾಯ್ತು, ಮಕ್ಕಳಿಗೆ ಸರಿಯಾದ ವಿದ್ಯೆ ನೀಡಿದಹಾಗಾಯ್ತು. ನಿಮ್ಮ ತಂದೆಗೆ ಒಮ್ಮೆ ಹೇಳಿ ನೋಡಿ.”

ತಂದೆಯನ್ನು ಕೇಳುವ ಧೈರ್ಯ ನರಹರಿಗಿಲ್ಲ. ದೇವಾಲಯದ ಟ್ರಸ್ಟಿನ ಸದಸ್ಯರಾಗಲು ಊರ ಮಂದಿ ಕೇಳಿಕೊಂಡಾಗ ನಿರಾಕರಿಸಿದ ಶಂಕರಯ್ಯ ಈಗಲೂ ಅಲ್ಲಿನ ವ್ಯವಹಾರಕ್ಕೆ ಮೂಗು ತೂರಿಸುವ ಪಾಪಕ್ಕೆಹೋದವರಲ್ಲ. ಅವರ ಸಲಹೆಗೆ ಟ್ರಸ್ಟಿನವರು ಮಾನ್ಯತೆ ಕೊಡಬಹುದೆಂಬ ಅಂದಾಜಿನಿಂದ ಸೋಮಶೇಖರ ಮಾಸ್ತರರು ಎರಡು ಬಾರಿ ಈ ಪ್ರಸ್ತಾಪ ಎತ್ತಿದ್ದರು ಅವರ ಮುಂದೆ. ಆದರೆ ಶಂಕರಯ್ಯನವರಿಗೆ ದೇವರ ಹಣವೆಂದರೆ ಸರ್ಪದ ಹೆಡೆಯ ಮೇಲಿನ ಮಣಿಯಷ್ಟೇ ಅಪಾಯಕಾರಿ. “ಟ್ರಸ್ಟಿನ ಅಧಿಕಾರವೆಲ್ಲ ಮಹಂತಯ್ಯನವರದು. ನೀವು ಅವರನ್ನೇ ಕೇಳಿ ನೋಡಿ” ಎಂದಿದ್ದರು ಸ್ಪಷ್ಟವಾಗಿ.

ನಿನ್ನೆ ರಾತ್ರಿ ನರಹರಿಗೂ ಅವರಿಗೂ ಬಹು ದೊಡ್ಡ ಚರ್ಚೆಯಾಗಿತ್ತು. ದೇವಾಲಯದ ಹಣವನ್ನು ಸಾರ್ವಜನಿಕ ಕಾರ್ಯಕ್ಕೆ ಉಪಯೋಗಿಸಿದರೆ ತಪ್ಪೇನಲ್ಲ ಎಂದು ನರಹರಿಯ ವಾದ. ಶಂಕರಯ್ಯ ಸಮಾಧಾನದಲ್ಲಿ ಅಂದಿದ್ದರು :

“ಭಕ್ತಾದಿಗಳು ಒಪ್ಪಿಸಿದ ಕಾಣಿಕೆಯಿಂದ ದೇವಾಲಯ ಊರ್ಜಿತಗೊಳ್ಳಬೇಕು. ಪೂಜಾ ವಿಧಿವಿಧಾನಗಳು, ಸೇವೆಗಳು ಹೆಚ್ಚಾಗಬೇಕು. ಅದು ಬಿಟ್ಟು ಯಾರೋ ಒಬ್ಬ ಶಿಕ್ಷಕನಿಗೆ ಆ ಹಣ ವಿನಿಯೋಗ ಮಾಡುವುದು ತಪ್ಪು.”

“ನಿಮ್ಮ ಅಭಿಪ್ರಾಯ ತಪ್ಪು. ಸರಕಾರ ಶಾಲಾ ಶಿಕ್ಷಕರನ್ನು ನೇಮಿಸದಿದ್ದರೆ ಮಕ್ಕಳು ಅಸಹಾಯಕರಾಗಿ ಇರಬೇಕೇ ? ವಿದ್ಯೆಗಿಂತ ದೊಡ್ಡ ಸೇವೆ ಇನ್ನೊಂದಿಲ್ಲ. ಭಕ್ತರ ಹಣ ವಿದ್ಯಾದಾನಕ್ಕೆ ಉಪಯೋಗವಾದರೆ ಅದಕ್ಕಿಂತ ದೊಡ್ಡ ಭಾಗ್ಯ ಬೇರೆ ಬೇಕೇ?”

“ಸರಕಾರ ಇವತ್ತು ಶಿಕ್ಷಕರನ್ನು ನೇಮಿಸುವುದಿಲ್ಲ. ನಾಳೆ ಧರ್ಮಾಸ್ಪತ್ರೆಗೆ ಡಾಕ್ಟರರನ್ನು ನೇಮಕ ಮಾಡುವುದಿಲ್ಲ. ಹಳ್ಳಿಗೆ ಕರಂಟ್ ಹಾಕಿಸಲೂ ಸರಕಾರದ ಅಡ್ಡಗಾಲು. ಇದಕ್ಕೆಲ್ಲ ದೇವರ ಹಣ ವಿನಿಯೋಗ ಆಗಬೇಕು ಅಂತೀಯ.

ಈ ನಮ್ಮ ಮನೆತನದವರು ಮಾಡಿದ್ದು ಇದೇ ಘನ ಕಾರ್ಯವನ್ನು. ಮೊದಲು ಸತ್ಕಾರ್ಯ ಎಂದು ಹೊರಟರು. ಆಮೇಲೆ ತಮ್ಮ ಸ್ವಕಾರ್ಯ ಮಾಡಿ ಕೊಂಡರು.'' ಶಂಕರಯ್ಯನ ಮುಖದಲ್ಲಿ ಸಿಟ್ಟಿತ್ತು. ''ದೇವರ ಹುಂಡಿಗೆ ಹಾಕಿದ ಹಣ ದೇವಕಾರ್ಯಕ್ಕೆ ವಿನಾಸಲು. ಆದನ್ನು ಕೇಳುವ ಅಧಿಕಾರವಿಲ್ಲ ಯಾರಿಗೂ. ನಿಮಗೆ ಹೊಸ ಶಿಕ್ಷಕರು ಬೇಕಿದ್ದರೆ ಹಳ್ಳಿಯಲ್ಲಿ ಚಂದಾ ಎತ್ತಿ ಹಣ ಸಂಗ್ರಹಿಸಿ ಅದನ್ನು ಬ್ಯಾಂಕ್‌ನಲ್ಲಿಟ್ಟು ಬಂದ ಬಡ್ಡಿ ಹಣ ಶಿಕ್ಷಕರ ಸಂಬಳಕ್ಕೆ ಹಾಕಿ.

ಶಂಕರಯ್ಯ ಸೂಚಿಸಿದ ಪರಿಹಾರಮಾರ್ಗ ಸಮ್ಮತವಾಗಿತ್ತು. ಇದನ್ನೇ ಈ ದಿನ ಸೋಮಶೇಖರ ಮಾಸ್ತರರಿಗೆ ಹೇಳಿದಾಗ ಅವರ ಮುಖ ಚಿಕ್ಕದಾಯಿತು. ''ಎಂತ ಹೇಳ್ತೀರಿ ಭಟ್ಟರೇ, ಕಳೆದ ವರ್ಷ ನಾನೂ ಸೇರಿ ಇನ್ನೂ ಅನೇಕರು ಒಂದು ಕಮಿಟಿ ಮಾಡಿ ಚಂದಾ ಎತ್ತಲು ಮನೆಮನೆಗೆ ಹೋಗಿದ್ದೆವು. ಆಗ ಸಂಗ್ರಹವಾದದ್ದು ಕೇವಲ ಏಳುನೂರು ರೂಪಾಯಿ!''

''ಯಾಕೆ, ಯಾರೂ ಕೊಡಲಿಲ್ಲವೇ ? ಗುತ್ತಿ ಮನೆ ಆನಂದ, ಬೀಡಿನ ಮನೆ ಶೇಖರ, ಮೋಹನ ಭಂಡಾರಿ, ಪಟೇಲರ ಮನೆ ವಾಸು, ಎಲ್ಲಾ ಶ್ರೀಮಂತರೇ. ಅವರೆಲ್ಲ ಏನಂದರು ?''

''ಏನಂತಾರೆ ? ನಾವು ಹಣ ಸಂಗ್ರಹಿಸಿ ಮಾಸ್ತರರನ್ನು ಇಡಬೇಕೇ ಅಂತ ಮುಖಕ್ಕೆ ಹೊಡೆದ್ಹಾಗೆ ಹೇಳಿ ಐದು ಹತ್ತು ಕೊಟ್ಟರು, ಭಿಕ್ಷೆಗೆ ಕೊಟ್ಟಂತೆ. ಹೇಗೋ ಚೂರು ಹಣ ಸಂಗ್ರಹವಾಯ್ತಲ್ಲ, ಕೊನೆಗೆ ಅದರಿಂದಲೇ ಒಂದು ಮೇಜು, ಪುಸ್ತಕದ ಕಪಾಟು ತಂದು ತಣ್ಣಗೆ ಕೂತಿದ್ದೇವೆ.'' ಮಾಸ್ತರರು ಆಚೆ ಈಚೆ ನೋಡಿದರು. ''ಅಲ್ಲ, ಈ ಶ್ರೀಮಂತರೆಲ್ಲ ದೇವರ ಹೆಸರಿನಲ್ಲಿ ಬೇರೆ ಬೇರೆ ಕಡೆ ಎಷ್ಟೊಂದು ಹಣ ಸುರೀತಾರೆ! ಪಟ್ಟಿ ಕೊಟ್ಟರೆ ನಿಮ್ಮ ತಲೆ ತಿರುಗೀತು!''

''ಹೇಗೆ ಗೊತ್ತು ನಿಮಗೆ ?''

''ಅದೇನು ಗುಟ್ಟಿನ ವ್ಯವಹಾರವೇ ? ಬೀಡಿನ ಮನೆ ಆನಂದ ಪ್ರತಿವರ್ಷ ಒತ್ತೆಕೋಲಕ್ಕೆ ಇಪ್ಪತ್ತು ಸಾವಿರ ಖರ್ಚು ಮಾಡ್ತಾರೆ. ದೇವಾಲಯದ ರಥೋತ್ಸವದ ಒಂದು ದಿನದ ಪೂರಾ ಖರ್ಚು ನಮ್ಮನಮ್ಮ ಪಟೇಲರ ಮನೆಯದು. ಮೋಹನ ಭಂಡಾರಿ ಕಳೆದ ವರ್ಷ ನಾಗಮಹೋತ್ಸವ ಅಂತ ನಲ್ವತ್ತು ಸಾವಿರ ಖರ್ಚು ಮಾಡಿದರು.''

''ಅವೆಲ್ಲ ಅವರ ನಂಬಿಕೆಗಳು ಮಾಸ್ತರರೇ, ನಾವು ಕೆಣಕಬಾರದು!''

''ಕೇಳುವ ಮಾತು ಹೇಳ್ಲಿಲ್ಲ. ಬೇಡ ಅನ್ನಲೂ ಇಲ್ಲ. ಅವರ ಅದ್ದೂರಿ ಉತ್ಸವದ ಖರ್ಚಿನ ಒಂದಂಶ ನಮ್ಮ ಶಾಲೆಗೆ ಕೊಟ್ಟಿದ್ದರೂ ಸಾಕಿತ್ತು. ಅಲ್ಲ, ವಿಷಯ ನಮ್ಮಲ್ಲೇ ಇರಲಿ, ಹೀಗೆ ಹೇಳಿದೆ ಅಂತ ಯಾರಿಗೂ ಹೇಳಬೇಡಿ.''

ನರಹರಿಗೂ ದಿಟ ಎನಿಸಿತು. ಆದರೆ ಅವನು ನಿಸ್ಸಹಾಯಕ. ಜನರ ನಂಬಿಕೆ, ಶ್ರದ್ಧೆ ಆಳವಾಗಿ ಬೇರೂರಿದ ಕಡೆ ಇವೆಲ್ಲ ಸಾಮಾನ್ಯ ನೋಟ. ಇನ್ನೊಬ್ಬರು ಯಾಕೆ ಹೀಗೆ ಎಂದು ತರ್ಕ ಮಾಡುವುದೂ ಸರಿಯಲ್ಲ. ಪಕ್ಕನೆ ಆಗ ಅವನಿಗೆ ನೆನಪಾದವಳು ಅಲಕಾ. ಹಳ್ಳಿಗೆ ಬಂದಮೇಲೆ ಸೋಮಾರಿಯಾಗಿದ್ದಾಳೆ. ಬೇಸರವೆಂದು ಮುಖ ಗಡಿಗೆ ಮಾಡುತ್ತಿದ್ದಾಳೆ. ಈ ಶಾಲೆ ಕೆಲಸ ಒಪ್ಪಿಕೊಂಡರೆ ಅವಳಲ್ಲಿ ಸ್ವಲ್ಪವಾದರೂ ಉತ್ಸಾಹ ಚಿಗುರೀತು. ಮಕ್ಕಳಿಗೂ ಉಪಕಾರ. ಪ್ರತಿ ಕೆಲಸಕ್ಕೂ ಹಣದ ಮುಖ ನೋಡಿಯೇ ಮಾಡಬೇಕಿಲ್ಲ.

ಅವನು ಉತ್ಸಾಹದಿಂದ ಅಂದ : ''ಈ ಸಲ ನವರಾತ್ರಿ ರಜೆ ಮುಗಿಯುವ ಮೊದಲೇ ಇಲ್ಲಿ ಶಿಕ್ಷಕರ ನೇಮಕ ಆಗಲೇಬೇಕು.''

''ಆದಷ್ಟು ಬೇಗ ಮಾಡಿ''— ಸಂಕೋಚದಿಂದ ಹೇಳಿದರು ಮಾಸ್ತರರು. ''ನಾನಿನ್ನೂ ಅವಿವಾಹಿತ, ನನ್ನ ಮದುವೆ ಆದ್ಮೇಲೆ, ಇನ್ನೊಬ್ಬ ಶಿಕ್ಷಕರಿದ್ದರೆ, ನನಗೂ ಆಗಾಗ ರಜೆ ಗಿಜೆ ಹಾಕ್ತಿರಬಹುದು.''

ನರಹರಿ ಗೊಳ್ಳನೆ ನಕ್ಕ, ಅವರ ಬೆನ್ನು ತಟ್ಟುತ್ತ. ನಿಖಿಲನ ಕಾಗದ ಬಂದಿಲ್ಲವೆಂಬ ನೋವು ಕ್ಷಣಕಾಲ ಮರೆಯಿತು.

ಮನೆಗೆ ಹೊರಟಾಗ ಅಲಕಾ ತನ್ನ ಮಾತಿಗೆ ಸುಲಭದಲ್ಲಿ ಒಪ್ಪುವವಳಲ್ಲ, ತಾನು ಕೇಳದಿರುವುದೇ ಲೇಸು ಎನಿಸಿದಾಗ ಸ್ವಲ್ಪ ಪೆಚ್ಚಾದ. ಸದ್ಯ ಸೋಮಶೇಖರರ ಕಿವಿಗೆ ಈ ವಿಷಯ ಹಾಕಿರಲಿಲ್ಲ. ನರಹರಿಗೆ ತನ್ನ ಹಳ್ಳಿಯ ಜನರ ಮೇಲೆಯೇ ಸಿಟ್ಟು ಉಕ್ಕಿತು. ತಾನೀಗ ಏನು ಮಾಡಲಿ ? ಕಂಪನಿ ಮುಚ್ಚಿದ ನೆಪದಲ್ಲಿ ನೊಣ ಹೊಡೆವ ಕೆಲಸ ತನ್ನದಾಗಬಾರದು. ತಾನೊಮ್ಮೆ ಮಹಂತಯ್ಯನವರನ್ನು ಭೇಟಿಯಾಗಬೇಕು.

ಅಷ್ಟರಲ್ಲಿ ಎದುರಾದಳು ಕೆಲಸದ ಚಾಮಕ್ಕ. ನಿನ್ನೆ ಭತ್ತ ಕುಟ್ಟುವಾಗ ಒನಕೆ ಕಾಲ ಬೆರಳಿಗೆ ಬಿದ್ದು ಬೆರಳು ಜಜ್ಜಿಹೋಗಿ ಅವಳ ಪಾಡು ನೋಡುವುದೇ ಕಷ್ಟ. ಕಾಲು ಬಾತು ಕುಂಟುತ್ತಿದ್ದಾಳೆ. ''ಹೇಗಿದೆ ಈಗ ?'' ಕೇಳಿದ ಉಪಚಾರಕ್ಕೆ.

''ಎಂತ ಹೇಳ್ಲಿ ಅಯ್ಯ, ಭತ್ತ ಕುಟ್ಟುವವರು ಯಾರೂ ಇಲ್ಲೆ. ಊಟಕ್ಕೂ ಅಕ್ಕಿ ಇಲ್ಲದೆ ಇವತ್ತು ಗೆಣಸು ಬೇಯಿಸಿ ತಿಂದೋ. ಇನ್ನು ನಾಲ್ಕು ದಿನ ಭತ್ತ

ಕುಟ್ಟುವುದು ಆಗಲ್ಲ. ಅದಕ್ಕೇ ಪಟೇಲರ ಮನೇಂದ ಅಕ್ಕಿ ತರಲು ಹೋಗ್ತಾ ಇದ್ದೇನೆ'' ಎಂದಳು ನೀರಸ ಧ್ವನಿಯಲ್ಲಿ.

ಅವಳು ಹೋಗುವುದನ್ನೇ ನೋಡುತ್ತ ನಿಂತ. ಇಲ್ಲಿ ಯಾರ ಮನೆಯ ಲ್ಲಿಯೂ ಅಕ್ಕಿ ಮಾಡುವ ಯಂತ್ರವಿರಲಿಲ್ಲ. ಅನುಕೂಲವಂತರು ಮಳೆಗಾಲ ಬರುವ ಮೊದಲೇ ಹತ್ತಿರದ ಪೇಟೆಗೆ ಭತ್ತ ಸಾಗಿಸಿ ವರ್ಷಕ್ಕೆ ಸಾಲುವಷ್ಟು ಕುಸುಲು ಮತ್ತು ಬೆಳ್ತಿಗೆ ಅಕ್ಕಿ ಮಾಡಿಸುವುದು ವಾಡಿಕೆ. ದಿನಗೂಲಿಗೆ ಹೋಗುವ ಚಾಮಕ್ಕಿಯಂತಹ ಬಡ ಹೆಂಗಸರಿಗೆ ಪ್ರತಿದಿನದ ಊಟಕ್ಕೆ ಭತ್ತ ಕುಟ್ಟಿಯೇ ಅಕ್ಕಿ ಆಗಬೇಕು. ತನ್ನ ಮನೆಯಲ್ಲಿ ಸಣ್ಣ ತೋಟಕ್ಕೆ ನೀರು ಹಾಯಿಸಲು ಹೇಗೂ ಒಂದು ಡೀಸಲ್ ಪಂಪ್ ಇದೆ. ಅದಕ್ಕೆ ಹಲ್ಲರ್ ಅಳ ವಡಿಸಿದರೆ ಹೇಗೆ ?

ತಡವಾಗಿ ಬಂದ ಈ ಯೋಚನೆ ಅವನನ್ನು ಪುಳಕಿತನನ್ನಾಗಿ ಮಾಡಿ ಬಿಟ್ಟಿತು. ತಾನು ಹಳ್ಳಿ ಬಿಟ್ಟು ಔರಂಗಾಬಾದ್‌ಗೆ ಹೋದರೂ ಆ ಹಲ್ಲರ್ ನಾಲ್ಕು ಜನಕ್ಕೆ ಪ್ರಯೋಜನವೇ. ತಾನೀಗ ಮಾಡಬೇಕಾದ ಕೆಲಸ ಎರಡು. ಮೊದಲನೆಯದು ಶಾಲೆಗೆ ಶಿಕ್ಷಕರ ನೇಮಕ. ಇನ್ನೊಂದು ತನ್ನ ಡೀಸಲ್ ಪಂಪ್‌ಗೆ ಹಲ್ಲರ್ ಜೋಡಣೆ. ಮಹಂತಯ್ಯನವರನ್ನು ಭೇಟಿಯಾದ ಮೇಲೆಯೇ ತನ್ನ ಮುಂದಿನ ಕೆಲಸ !

೪

ಹಳ್ಳಿಯ ಪ್ರತಿಷ್ಠಿತ ಶ್ರೀಮಂತರಲ್ಲಿ ಒಬ್ಬರು ಮಹಂತಯ್ಯ. ಅವರ ನಿಜವಾದ ಹೆಸರು ಮಹಾದೇವ.ಆರಡಿ ಎತ್ತರದ ಅವರ ಆಜಾನುಬಾಹು ಶರೀರ ನೋಡಿ ಯಾರೋ ತಮಾಷೆಗೆಂದು 'ಮಹಂತಯ್ಯ' ಎಂದರಂತೆ. ಅದೇ ಖಾಯಂ ಆಗಿದೆ. ಎಂಟು ಎಕರೆ ಅಡಿಕೆ ತೋಟ, ಐದು ಎಕರೆ ಗದ್ದೆ, ವರ್ಷಕ್ಕೆ ಹದಿ ನೈದು ಸಾವಿರಕ್ಕೂ ಮಿಕ್ಕಿ ತೆಂಗಿನಕಾಯಿ, ಟ್ರಾಕ್ಟರ್, ಟಿಲ್ಲರ್, ಜೀಪು ಎಲ್ಲಾ ಇದೆ. ಮೂವರು ಗಂಡುಮಕ್ಕಳಲ್ಲಿ ಇಬ್ಬರಿಗೆ ಮದುವೆಯಾಗಿ ಅವರ ಜೊತೆ ಇದ್ದಾರೆ, ಆಸ್ತಿಪಾಸ್ತಿ ನೋಡಿಕೊಳ್ಳುತ್ತ. ಇನ್ನೊಬ್ಬ ದುಬೈನಲ್ಲಿ. ಮಹಂತಯ್ಯನವರ ಒಬ್ಬನೇ ತಮ್ಮ ತೀರಿಹೋದಮೇಲೆ ಅವನ ಪಾಲಿನ ಆಸ್ತಿಗೂ ಅವರೇ ಯಜಮಾನ.

ಮಹಂತಯ್ಯನವರ ತಮ್ಮ ಮಹಾಬಲ. ಅವನು ಅಣ್ಣನಿಗಿಂತಲೂ ಬಲ ಶಾಲಿ. ಆದರೆ ಅಣ್ಣನೆದುರು ಮರಿ ಇಲಿ! ಅಣ್ಣ ಹಾಕಿದ ಗೆರೆ ದಾಟಿದವನಲ್ಲ.

ಸೌಮ್ಯ ಮುಖ, ಮೆಲುಮಾತು, ಕೃಷಿಯಲ್ಲಿ ತನ್ನನ್ನು ತೊಡಗಿಸಿಕೊಂಡವನು. ಹಳ್ಳಿ ಜನರಿಗೆ ಅವನೆಂದೂ ಆಪ್ತನಾಗಿರಲಿಲ್ಲ. ಹಾಗೆಂದು ಕಟುಕನೂ ಆಗಿರಲಿಲ್ಲ. ವಾಸ್ತವವಾಗಿ ಅವನೊಬ್ಬ ಇದ್ದಾನೆಂದು ಜನ ಗಮನದಲ್ಲಿಟ್ಟದ್ದು ಕಡಿಮೆಯೇ. ಮಹಂತಯ್ಯನವರ ಚಾವಡಿಯಲ್ಲಿ ಆಗಾಗ ಸೇರುವ ಜನರ ಸಭೆಗೆ ಅವನು ಇರುವುದೇ ಅಪರೂಪ. ವರ್ಷಾವಧಿ ಜಾತ್ರೆಯಲ್ಲಿ ಮಹಂತಯ್ಯನವರು ಶ್ರೀಮಂತಿಕೆಯ ದರ್ಪದಲ್ಲಿ ಮೆರೆಯುತ್ತ ದೇವಾಲಯದಲ್ಲಿ, ಜಾತ್ರೆ ಕಟ್ಟೆಯಲ್ಲಿ ಇರುವುದು ವಾಡಿಕೆಯಾದರೆ, ಮಹಾಬಲ ಮನೆಯಲ್ಲಿ ಇರುವವ. ಜಾತ್ರೆಯ ಸಮಯ ದೇವರ ಉತ್ಸವದ ಮೂರ್ತಿ ಅವನ ಮನೆಬಾಗಿಲಿಗೆ ಬಂದಾಗ ಸಂಭ್ರಮದಲ್ಲಿ ಎದುರುಗೊಳ್ಳುತ್ತಿದ್ದ. ಮಹಂತಯ್ಯನವರ ಠೀವಿಯಾಗಲಿ, ದರ್ಪವಾಗಲಿ ಅವನಲ್ಲಿ ಎಂದೂ ಕಾಣಲಿಕ್ಕಿಲ್ಲ. ಅವನು ತೀರಿಹೋದಾಗ ಇನ್ನೂ ಸಣ್ಣ ವಯಸ್ಸು. ಹೆಂಡತಿ ನೀರಜ ಚೊಚ್ಚಲು ಗರ್ಭಿಣಿ. ಮಹಂತಯ್ಯನವರು ನಾಲ್ಕು ಹನಿ ಕಣ್ಣೀರು ಸುರಿಸಿ ದೇವಸ್ಥಾನಕ್ಕೆ ಎರಡು ಕೊಡ ಅಭಿಷೇಕ ಮಾಡಿಸಿದರು. ಅವರ ಬಾಯಲ್ಲಿ ತಮ್ಮನ ಗುಣಗಾನ ಕೇಳಲಿಲ್ಲ ಯಾರೊಬ್ಬರೂ.

ಮುಂದೆ ಕೆಲವು ಸಂಗತಿಗಳು ಊರ ಜನರ ಕಿವಿ ತಲುಪಿದ್ದವು. ನೀರಜ ತವರುಮನೆಯಲ್ಲಿ ಬಾಣಂತನ ಮುಗಿಸಿ ಗಂಡುಮಗುವನ್ನು ಕರೆದುಕೊಂಡು ಬಂದದ್ದು, ಮಹಂತಯ್ಯನವರ ಮನೆಯಲ್ಲಿ ಕೆಲವು ತಿಂಗಳು ಇದ್ದದ್ದು ಗಮನಿಸಿದ್ದಾರೆ. ಅನಂತರ ಇಲ್ಲಿ ಯಾರೊಡನೆಯೂ ಸರಿಹೋಗುವುದಿಲ್ಲವೆಂದು ಬೇರೆಲ್ಲೋ ಹೋಗಿದ್ದಾಳೆಂದು ಸುದ್ದಿ. "ನೀರಜಳ ಸುದ್ದಿ ಏನು ?"–ಕುತೂಹಲದಿಂದ ಕೇಳುವವರಿಗೆ ಅವರ ಹೆಂಡತಿ ಭಾಗ್ಯಮ್ಮ, "ಏನೋ ಈ ಕಡೆ ಬಂದಿಲ್ಲ, ಅವಳ ತವರಿನಲ್ಲಿ ಇದ್ದಾಳು' ಎನ್ನುವರು. ಊರಿನಲ್ಲಿ ಯಾವ ವ್ಯಕ್ತಿಗೆ ವಿಶೇಷ ಮಹತ್ವವಿಲ್ಲವೋ, ಯಾವ ವ್ಯಕ್ತಿಯ ಕುರಿತು ಯಾರ ಮನದಲ್ಲೂ ಪ್ರಶ್ನೆಗಳು ಏಳುವುದಿಲ್ಲವೋ, ಯಾರೂ ಉಪಕಾರ ಪಡೆದಿರುವುದಿಲ್ಲವೋ ಅಂಥವರ ಹೆಂಡತಿಯನ್ನು ಜನರು ಮರೆತುಬಿಡುತ್ತಾರೆ. ಹಾಗೇ ಆಯಿತು. ನೀರಜ ಮಹಂತಯ್ಯನವರ ಮನೆ ಸೇರಿದ ಸೊಸೆಯೆಂದು ಜನ ಪೂರಾ ಮರೆತುಬಿಟ್ಟರು.

ತಮ್ಮ ಇಲ್ಲ, ತಮ್ಮನ ಹೆಂಡತಿಯಿಲ್ಲ. ಆಸ್ತಿ ಪೂರಾ ಮಹಾತಯ್ಯನವರ ಪಾಲಿಗೆ ಬಂದದ್ದು ಈ ವಿಧದಲ್ಲಿ. ಅವರ ಗಂಡುಮಕ್ಕಳು ಗೋಚರಾವು ಭೂಮಿಯನ್ನು ದರ್ಖಾಸ್ತು ಮಾಡಿಕೊಂಡು ಇತ್ತೀಚೆಗೆ ಹೊಸ ತೋಟ ಇಡಿ

ಸಾತ್ತಿದ್ದಾರೆ. ಮಹಂತಯ್ಯನಿಗೆ ದೇವಾಲಯದ ಟ್ರಸ್ಟಿನ ಅಧಿಕಾರ ಒಪ್ಪಿಕೊಳ್ಳಲು ಇಷ್ಟವಿರದಿದ್ದರೂ ಜನ ಆರಿಸಿದ್ದು ಅವರನ್ನೇ. ದೇವರ ಖಜಾನೆ ಬೀಗದ ಕೈ ಕೂಡ ಅವರ ಬಳಿಯೇ. ಒಂದೊಂದು ಪೈಸೆ ಲೆಕ್ಕವಿಡುವ ಅವರು ದೇವರ ಹಣದ ವಿಷಯದಲ್ಲಿ ಶಂಕರಯ್ಯನವರಷ್ಟೇ ಕಟ್ಟುನಿಟ್ಟು. ದೇವರ ಚೂರುಪಾರು ಸೊತ್ತೂ ಮುಟ್ಟದ ನಿಯತ್ತಿನ ಮನುಷ್ಯ.

ಪ್ರತಿದಿನ ಮಧ್ಯಾಹ್ನ ಮಂಗಳಾರತಿ ಹೊತ್ತಿಗೆ ದೇವಾಲಯದಲ್ಲಿದ್ದು ತೀರ್ಥಪ್ರಸಾದ ಸ್ವೀಕರಿಸಿ ಹೋಗುವುದು ಅವರ ವಾಡಿಕೆ ಕ್ರಮ. ಈ ದಿನ ನರಹರಿ ಅವರನ್ನು ಕಾಣಲೆಂದು ಅಲ್ಲಿಗೆ ಹೋದಾಗ, "ಈಗಷ್ಟೇ ಮನೆಗೆ ಹೋದರು. ಅದೇನೋ ತಲೆ ತಿರುಗುತ್ತಾ ಇತ್ತಂತೆ" ಎಂದನು ಅರ್ಚಕ ಶೀನಪ್ಪಯ್ಯ.

ಸರಿ. ಮನೆಗೇ ಹೋಗಿ ನೋಡಿದರಾಯ್ತು ಎಂದುಕೊಂಡವ ಮೂರು ಬಾರಿ ದೇವಾಲಯಕ್ಕೆ ಪ್ರದಕ್ಷಿಣೆ ಬಂದು ಗರ್ಭಗುಡಿಯ ಬಾಗಿಲಲ್ಲಿ ನಿಂತು. ಗಂಧ-ಪುಷ್ಪಗಳಿಂದ ಅಲಂಕೃತವಾದ ಈಶ್ವರಲಿಂಗವನ್ನು ತದೇಕಚಿತ್ತನಾಗಿ ನೋಡುತ್ತಾ ಕಣ್ಮುಚ್ಚಿದ. ಯಾರೋ ಗಂಟೆ ಬಾರಿಸಿದರು. ಇನ್ಯಾರೋ 'ಹರ ಹರ ಮಹಾದೇವ' ಎಂದರು. ಎಲ್ಲೆಡೆಗೂ ಧೂಪ, ಗಂಧ, ಪುಷ್ಪಗಳ ಪರಿಮಳ. ಆತನು ಅರಿಯದೆಯೇ ಭಾವುಕನಾದ, ಸಂಭ್ರಾತನಾದ. ಶೀನಪ್ಪಯ್ಯ ಕೊಟ್ಟ ತೀರ್ಥ-ಪ್ರಸಾದ ಸ್ವೀಕರಿಸಿ ಅಡ್ಡ ಬಿದ್ದು ಹೊರಜಗಲಿಯಲ್ಲಿ ಸ್ವಲ್ಪ ಹೊತ್ತು ಕುಳಿತ.

ಆ ದಿನ ಭಕ್ತಾದಿಗಳ ಸಂಖ್ಯೆ ಜಾಸ್ತಿ. ಆ ದಿನವೇನು ಬಂತು, ಇತ್ತೀಚೆಗೆ ಯಾವಾಗಲೂ ಹೀಗೇ. ಅಮಾವಾಸ್ಯೆ, ಏಕಾದಶಿ, ಶಿವರಾತ್ರಿಯೆಂದು ಇಲ್ಲಿ ನೂಕುನುಗ್ಗಲು. ಈ ಹಳ್ಳಿಯ ಜನರಲ್ಲದೆ ನೆರೆ-ಕೆರೆಯ ಹಳ್ಳಿಯವರೂ ಇಲ್ಲಿಗೆ ಬಂದು ಹೋಗುತ್ತಾರೆ. ಚೋಳರ ಕಾಲದಲ್ಲಿ ಕಟ್ಟಿಸಿದ್ದು ಎಂದು ನಂಬಲಾದ ದೇವಾಲಯ ಅಷ್ಟೇನೂ ಕಾರಣಿಕ ಸ್ಥಳವಲ್ಲ, ಆದರೂ ಜನರಿಗೆ ಶ್ರದ್ಧೆ ಬಹಳ. ದೇವಾಲಯದ ಮಾಡು, ತೊಲೆ, ಕಂಭಗಳು ಪೂರಾ ಗೆದ್ದಲು ಬಂದು ಮುರಿದು ಬೀಳುವ ಸ್ಥಿತಿಯಲ್ಲಿದ್ದದ್ದು ಗಮನಿಸಿ ನಾಲ್ಕು ವರ್ಷಗಳ ಹಿಂದೆ ಅದರ ಜೀರ್ಣೋದ್ಧಾರ ಕಾರ್ಯ ನಡೆದು ಅಷ್ಟಬಂಧ ಮುಂತಾದ ವಿಧಿ ವಿಧಾನಗಳನ್ನು ಕ್ರಮಬದ್ಧವಾಗಿ ಜರುಗಿಸಲಾಗಿತ್ತು. ಅನಂತರ ಇಲ್ಲಿಗೆ ಬರುವ ಭಕ್ತಾದಿಗಳ ಸಂಖ್ಯೆ ಇಮ್ಮಡಿಯಾಗಿದ್ದು ಆದಾಯ ಗಣನೀಯವಾಗಿ ಏರಿದೆಯಂತೆ. ಗರ್ಭಗುಡಿಯ ಮುಂದೆ ಆಳೆತ್ತರದ ನಂದಿ, ಅದರ ಎದುರು ಒಂದು

ಧ್ವಜಸ್ತಂಭ, ಗರ್ಭಗುಡಿಯ ಎಡಭಾಗದಲ್ಲಿ ದುರ್ಗೆ, ಬಲಭಾಗಕ್ಕೆ ಗಣಪತಿ— ಸಾಮಾನ್ಯ ಎಲ್ಲ ದೇವಾಲಯಗಳಲ್ಲಿ ಇರುವ ರೀತಿ ಇಲ್ಲಿಯೂ, ಪೂರಾ ಕಲ್ಲಿನಿಂದ ಕಟ್ಟಿದ ಗರ್ಭಗುಡಿಯ ಹೊರಮೈಯ ಗೋಡೆಯಲ್ಲಿ ಸುತ್ತಲೂ ದೀಪ ಹೊತ್ತಿಸುವ ವ್ಯವಸ್ಥೆಯಿದೆ. ಭಕ್ತಾದಿಗಳು ದೀಪೋತ್ಸವ ಮಾಡಿಸುವ ಇಚ್ಛೆ ತಳೆದರೆ ಗೋಡೆಯ ಗುಳಿಗೆಗಳಿಗೆ ಎಣ್ಣೆ ಹಾಕಿ, ದೀಪ ಉರಿಸಿ, ವಿಶೇಷ ಪೂಜೆ ಮಾಡಲಾಗುತ್ತದೆ. ಅದನ್ನು ನೋಡುವುದೇ ಒಂದು ಚೆಂದ: ಸಹಸ್ರ ದೀಪಗಳ ಬೆಳಕಿನಲ್ಲಿ ಸಾಕ್ಷಾತ್ ಶಿವನೇ ಧರೆಗಿಳಿದು ಬಂದಂತೆ.

ದೇವಾಲಯದ ಸುತ್ತಲೂ ನೆಲಕ್ಕೆ ಕಲ್ಲು ಹಾಸಿದೆ. ಹಾಸಿದ ಕಲ್ಲುಗಳನ್ನು ಪರೀಕ್ಷಿಸಿದರೆ ಅಲ್ಲಲ್ಲಿ ಅಚ್ಯುತಭಟ್ಟರ ಮೂವರು ಗಂಡುಮಕ್ಕಳ ಹೆಸರು ಕೆತ್ತಿದ್ದನ್ನು ನೋಡಬಹುದು. ಅನಂತ, ಜನಾರ್ದನ, ಮುರಾರಿ! ತಮ್ಮ ಹೆಸರು ಇಲ್ಲಿ ಚಿರಸ್ಥಾಯಿ ಆಗಿರಲಿ ಎಂದುಕೊಂಡರೇನೋ.

ಅಚ್ಯುತಭಟ್ಟರ ಜೀವನದಲ್ಲಿ ಮಹತ್ವವಾದ ತಿರುವು ಬಂದದ್ದು ಈ ದೇವಾಲಯದ ಮೊಕ್ತೇಸರ ಪದವಿ ಸಿಕ್ಕಿದ ಮೇಲೆ. ಇದರಿಂದ ಒಳಿತೂ ಆಯಿತು, ಕೆಡಕೂ ಒದಗಿಬಂದಿತು.

ಬಂಡಿಮನೆ ನಾರಾಯಣಶಾಸ್ತ್ರಿಗಳಿಗೆ ಮಕ್ಕಳಿರಲಿಲ್ಲ. ಅವರಿಗೆ ಒತ್ತಾಯದಲ್ಲಿ ಮದುವೆ ಮಾಡಿದ್ದರಂತೆ. ಹೆಂಡತಿ ಎರಡೇ ವರ್ಷದಲ್ಲಿ ತೀರಿಹೋದ ಮೇಲೆ ಇವರದು ಒಂಟಿ ಬದುಕು, ಸನ್ಯಾಸಿ ಜೀವನ. ಅವರು ಬಯಸಿದ್ದು ಇದನ್ನೇ. ಮೊದಲಿಂದಲೂ ಹರನ ಭಕ್ತರು. ಹೆಂಡತಿ ತೀರಿಹೋದಮೇಲೆ ಪೂರಾ ವೈರಾಗ್ಯ ಬಂದು ತನ್ನನ್ನೇ ಶಿವನಿಗೆ ಅರ್ಪಿಸಿಕೊಂಡುಬಿಟ್ಟರು. ದಿನವೆಲ್ಲ ಶಿವಧ್ಯಾನ ಒಂದೇ. ಶಿವನನ್ನು ಎಷ್ಟು ಅರ್ಚಿಸಿದರೂ ಸಾಲದು. ಗರ್ಭಗುಡಿಯಲ್ಲಿ ಅಥವಾ ನಂದಿ ಬದಿಯಲ್ಲಿ ಪದ್ಮಾಸನ ಹಾಕಿ ಕಣ್ಮುಚ್ಚಿ ಕುಳಿತರೆ ಅವರನ್ನು ಎಬ್ಬಿಸಲು ಇನ್ನೊಂದು ಜನ ಬೇಕು. ಊಟ-ತಿಂಡಿ ಕೊಟ್ಟರೆ ಉಂಟು,ಇಲ್ಲವಾದರೆ ಉಪವಾಸವೇ ಗತಿ. ಮಾತುಕಡಿಮೆ. ಅವರಿಗೇನೋ ಇಹಲೋಕದ ವ್ಯಾಮೋಹವಿಲ್ಲದೆ ಶಿವಧ್ಯಾನ ಪ್ರಾಮುಖ್ಯವಾಯಿತು, ನಿಜ. ಆದರೆ ದೇವರ ಪೂಜೆ, ವಿಧಿ–ವಿಧಾನಗಳು, ಭಕ್ತರ ಕೋರಿಕೆ, ಸೇವೆ ಆಗಬೇಕಲ್ಲ, ಗ್ರಾಮಸ್ಥರು ಅಸಮಾಧಾನ ತೋರಿಸಿದರು. ನಾರಾಯಣಶಾಸ್ತ್ರಿಗಳಿಗೂ ತಮ್ಮಿಂದ ದಯಾಮಯನಾದ ಶಿವನ ಪೂಜೆಗೆ ಲೋಪ ಬರಬಾರದೆಂದು ಅಚ್ಯುತಭಟ್ಟರ ಎರಡನೇ ಮಗ ಜನಾರ್ದನನಿಗೆ ಆ ಕೆಲಸ ವಹಿಸಿಬಿಟ್ಟರು.

ಆಗ ಜನಾರ್ದನನಿಗೆ ಹನ್ನೆರಡರ ಪ್ರಾಯ. ಉಪನಯನವಾಗಿತ್ತು. ತಂದೆ

ಯಿಂದ ವೇದಮಂತ್ರ ಕಲಿಯುತ್ತಿದ್ದ. ದೇವರ ಪೂಜೆ ಮಾಡುವ ಅವಕಾಶ ದೊರೆತದ್ದು ತನ್ನ ಭಾಗ್ಯ ಎಂದೇ ತಿಳಿದು ನಿಷ್ಠೆ ವೈಗೂಡಿಸಿಕೊಂಡ. ನಾರಾಯಣಶಾಸ್ತ್ರಿಗಳು ಅವನ ಕಾರ್ಯದಿಂದ ತೃಪ್ತರಾಗಿ ತಮಗೆ ತಿಳಿದ ಮಂತ್ರ ತಂತ್ರಗಳನ್ನು ಅವನಿಗೆ ಉಪದೇಶಿಸಿ, ತಾವು ದಿನವೆಲ್ಲಾ ಶಿವಧ್ಯಾನದಲ್ಲಿ ಕಳೆದರಷ್ಟೇ ಅಲ್ಲ, ಕೊನೆಗೆ ಜನಸಂಪರ್ಕದಿಂದಲೂ ದೂರವಾಗಿ, ಕಾಡಿನಲ್ಲಿ ನೆಲೆಸಿ, ಅಲ್ಲೇ ಶಿವಧ್ಯಾನದಲ್ಲಿ ಇಹಲೋಕ ತ್ಯಜಿಸಿದರಂತೆ.

ಹೀಗೆ ಈ ದೈವಭಕ್ತ ಪುಣ್ಯಾತ್ಮನಿಂದ ಪೂಜಾಕಾರ್ಯ ಜನಾರ್ದನನಿಗೂ, ಆಡಳಿತ ವ್ಯವಹಾರ ಅಚ್ಯುತಭಟ್ಟರ ಕೈಗೂ ಬಂದಿತು. ಅಚ್ಯುತಭಟ್ಟರು ವ್ಯವಹಾರದಲ್ಲಿ ಹದಿನಾರಾಣೆ ಸಾಚಾ ಮನುಷ್ಯ. ದೇವಾಲಯದ ರಿಕಾರ್ಡು ನಾರಾಯಣಶಾಸ್ತ್ರಿಗಳ ಹೆಸರಿನಲ್ಲಿದ್ದ ಕಾರಣ ಅದನ್ನು ಊರ ಗುರಿಕಾರರಿಗೆ ಒಪ್ಪಿಸಿ "ನಿಮಗಿಷ್ಟ ಬಂದಂತೆ ಮಾಡಿ"ಎಂದುಬಿಟ್ಟರು. ಶಾಸ್ತ್ರಿಗಳ ಕುಟುಂಬದವರಾರೂ ಇದ್ದಿರಲಿಲ್ಲ. ಹಾಗೆಂದು ಅದನ್ನು ತಿದ್ದುವ ಅಧಿಕಾರವೂ ಯಾರಿಗೂ ಇಲ್ಲ. "ರಿಕಾರ್ಡು ಹಾಗೇ ಇರಲಿ, ನಿಮ್ಮ ವ್ಯವಹಾರ ಮುಂದುವರಿಸಿ" ಎಂದರು ಗುರಿಕಾರರು. ಮುಂದೆ ನಾಗರಾಜನ ಕಾಲದಲ್ಲಿ ಗ್ರಾಮದ ಹಿರಿಯರೆಲ್ಲ ಸೇರಿ ಒಂದು ಟ್ರಸ್ಟ್ ಮಾಡಬೇಕಾದ ಅಗತ್ಯ ಒದಗಿಬಂದಿತು : ಆ ಮಾತು ಬೇರೆ.

ಅಚ್ಯುತಭಟ್ಟರು ಮೊಕ್ತೇಸರರಾದ ಸಂದರ್ಭದಲ್ಲಿ ದೇವಾಲಯದ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಕ್ರಮೇಣ ಹುಂಡಿಗೆ ಬೀಳುವ ಬಿಲ್ಲೆ-ದಮ್ಮಡಿ, ಆಣೆ-ಪಾವಲಿಗಳನ್ನು (ಅಂದಿನ ನಾಣ್ಯಗಳು) ಜೋಪಾನವಾಗಿ ತೆಗೆದಿಟ್ಟು ಅದರಿಂದಲೇ ದೇವಾಲಯದ ಹೊರಗೆ ಭಕ್ತರಿಗೆ ಕುಳಿತುಕೊಳ್ಳಲು ಒಂದು ಕಟ್ಟೆ, ನಂದಿಯ ಸುತ್ತಲೂ ಜಗಲಿ, ಧ್ವಜಸ್ತಂಭಕ್ಕೆ ದೀಪದ ವ್ಯವಸ್ಥೆ, ಗರ್ಭಗುಡಿಯಲ್ಲಿ ತೂಗುವ ನೀಲಾಂಜನ ಮಾಡಿಸಿದರು. ಇವನ್ನೆಲ್ಲ ಗ್ರಾಮದ ಹಿರಿಯರನ್ನು ಕರೆದು 'ನಿಮಗೆ ಒಪ್ಪಿಗೆಯೇ ?' ಎಂದು ಕೇಳಿಯೇ ಮುಂದಿನ ಕೆಲಸ. ವರ್ಷವರ್ಷವೂ ಉತ್ಸವ ನಡೆಯುತ್ತಿತ್ತು. ಆಗ ಅಲಂಕೃತ ದೇವರನ್ನು ಹೊರುವ ಹೊಣೆ ಅವರ ಪಾಲಿಗೇ. ದಿನವೆಲ್ಲ ಉಪವಾಸವಿದ್ದು ಮಡಿಯುಟ್ಟು ಉತ್ಸವಮೂರ್ತಿಯನ್ನು ತಲೆಯಲ್ಲಿ ಹೊತ್ತು, ದೇವಾಲಯದ ಸುತ್ತಲೂ ಇಪ್ಪತ್ತೊಂದು ಪ್ರದಕ್ಷಿಣೆ ಹಾಕುವಾಗ ಭಕ್ತರು 'ಹರಹರ ಮಹಾದೇವ! ಶಿವ ಶಿವ ಶಂಭೋ!' ಎನ್ನಬೇಕು. ಅಚ್ಯುತಭಟ್ಟರ ಆವೇಶ ಏರುತ್ತದೆ. ಆಗ ಅವರು ಸಾಕ್ಷಾತ್ ಶಿವನೇ; ಅಂತಹ ರೂಪ, ಗಂಭೀರಭಾವ, ಗಂಭೀರ ನಡಿಗೆ.

ಜನ ಅವರಲ್ಲಿ ದೇವರನ್ನೇ ಕಂಡರು. ಮನೆಯಲ್ಲಿ ಯಾರಿಗೇ ಅಸೌಖ್ಯವಾಗಲಿ, ಓಡಿ ಬರುತ್ತಿದ್ದರು ದೇವಾಲಯಕ್ಕೆ: "ಭಟ್ಟರೇ, ತಲೆಗೆ ನೀರು ಹಾಕಿ!" ಅವರು ಮಂತ್ರಿಸಿದ ನೀರನ್ನು ಪ್ರೋಕ್ಷಣೆ ಮಾಡಿ ತಲೆ ಮುಟ್ಟಿ ಆಶೀರ್ವದಿಸಬೇಕು. ಭೂತ, ಪ್ರೇತ, ಜಕಣಿ ಹಿಡಿದವರಿಗೂ ಅವರು ಮಂತ್ರಿಸಿದ ನೀರು ಬೇಕು.

ತನ್ನ ಮನೆದೇವಿಯೇ ತನ್ನಿಂದ ಇಷ್ಟೆಲ್ಲ ಮಾಡಿಸುತ್ತಾಳೆಂಬ ನಂಬಿಕೆ ಅಚ್ಯುತಭಟ್ಟರಿಗೆ. 'ಧರ್ಮದ ಹಾದಿ ತಪ್ಪದಂತೆ ನಡೆಸು, ದೇವಿ' ಎನ್ನುತ್ತಾರೆ ಕೈ ಜೋಡಿಸಿ. ಕುಂಕುಮಾರ್ಚನೆ, ಹೂವಿನ ಪೂಜೆ, ಸಹಸ್ರನಾಮಾವಳಿ—ಹೀಗೆ ತಮಗೆ ತೋಚಿದ್ದನ್ನು ಮಾಡಿ ಮುಗಿಸಿದಾಗಲೇ ಅವರಿಗೆ ನೆಮ್ಮದಿ. ಮನೆದೇವಿ ಅವರ ಪಾಲಿಗೆ ಮಗು. ತಾಯಿ ಮಡಿಲಲ್ಲಿ ಮಗು ಇರುವಂತೆ ತನ್ನ ಹೃದಯದಲ್ಲಿ ದೇವಿ ನೆಲೆಸಿದ್ದಾಳೆ ಎಂದವರ ನಂಬಿಕೆ.

ಜನಾರ್ದನ ಹೇಗೂ ಶಿವದೇವಾಲಯದಲ್ಲಿ ಅರ್ಚಕನಾಗಿ ತನ್ನತನ ಕಂಡುಕೊಂಡಿದ್ದ. ನಸುಕಿನಲ್ಲಿ ಮನೆ ಬಿಟ್ಟರೆ ಬರುವುದು ರಾತ್ರಿ ಒಂಬತ್ತು ಗಂಟೆಯ ನಂತರ. ಅಮಾವಾಸ್ಯೆ, ಶಿವರಾತ್ರಿ ದಿನಗಳಲ್ಲಿ ರಾತ್ರಿ ದೇವಾಲಯದಲ್ಲಿ ವಾಸ್ತವ್ಯ. ಮಧ್ಯಾಹ್ನದ ಊಟಕ್ಕೆ ದೇವರ ನೈವೇದ್ಯದ ಅನ್ನವಿರುತ್ತಿತ್ತು. ಯಾರಾದರೂ ಬ್ರಾಹ್ಮಣರು ಬಂದರೆ ಅವರಿಗೂ ಬಡಿಸಿ ತಾನೂ ಉಣ್ಣುವುದು ಅವನ ಕ್ರಮ. ಮದುವೆಯಾದ ಮೇಲೆಯೂ ಈ ಕ್ರಮ ತಪ್ಪಲಿಲ್ಲ. ಭಕ್ತರು ಹೇಳಿಕೊಂಡ ಪಂಚಕಜ್ಜಾಯ, ಅರಳುಂಬೆಲ್ಲ, ಇತ್ಯಾದಿ ಮಾಡಲಿದ್ದರೆ ಹೆಂಡತಿ ಬರುತ್ತಿದ್ದಳು ಸಹಾಯಕ್ಕೆ. ವಾರದಲ್ಲಿ ನಾಲ್ಕು ಬಾರಿ ಈ ಕೆಲಸ ಇರುವ ಕಾರಣ ಜನಾರ್ದನನ ಸಂಸಾರದ ವಾಸ್ತವ್ಯವೂ ಹೆಚ್ಚಾಗಿ ದೇವಾಲಯದ ಉಗ್ರಾಣದ ಕೋಣೆಯಲ್ಲೇ. ಹೀಗಾಗಿ ಇವರಿಬ್ಬರೂ ಮನೆಯಲ್ಲಿ ನಡೆಯುವ ಯಾವತ್ತೂ ಸಮಾಚಾರದಿಂದ ದೂರವುಳಿದರು. ಮುಂದೆ ಎಷ್ಟೋ ವರ್ಷಗಳ ನಂತರ ಜನಾರ್ದನ ಭಟ್ಟರಿಗೆ ಮನೆವಾಸ ಬೇಡವೆನಿಸಿ, ಕುಟುಂಬದಿಂದ ದೂರವಾಗಿ, ತಮ್ಮ ಹೆಚ್ಚಿನ ಸಮಯ ಕಳೆದದ್ದು ಉಗ್ರಾಣದ ಕೋಣೆಯಲ್ಲೇ.

ಅನಂತ ಮತ್ತು ಮುರಾರಿ—ಇಬ್ಬರಿಗೂ ಕೃಷಿದಾಹ. ತಂದೆಯೊಡನೆ ಅಲ್ಲಲ್ಲಿ ಪೂಜೆಗೆ ಹೋದರೂ ಕೃಷಿಭೂಮಿಯ ಮೇಲೇ ಕಣ್ಣು. ಬೀಡಿನ ಗುತ್ತು ಮನೆಯವರ ಎರಡು ಎಕರೆ ಜಮೀನು, ಪಟೇಲರಿಂದ ಒಂದೂವರೆ ಎಕರೆ ಗೇಣಿಗೆ ಪಡೆದು ಬೇಸಾಯಕ್ಕೆ ಸಜ್ಜಾದಾಗ ಅಚ್ಯುತಭಟ್ಟರಿಗೆ ಅನುಮಾನ, ಇವರು ಇಷ್ಟೆಲ್ಲಾ ಬೇಸಾಯ ಮಾಡಲಿಕ್ಕುಂಟೇ ? ಮಾಡದಿದ್ದರೂ ಗೇಣಿ ಕೊಡುವುದು

ತಪ್ಪಿಸುವಹಾಗಿಲ್ಲ.

"ಬೇಸಾಯುವೇಕೆ, ನಾವು ಚಿನ್ನ ಬೆಳೀತೇವೆ"—ಆತ್ಮವಿಶ್ವಾಸವಿತ್ತು ಅನಂತ ನಿಗೆ, ಉತ್ಸಾಹವಿತ್ತು ಮುರಾರಿಗೆ. ಒಂದು ಬೆಳೆ ಬರುವ ಜಮೀನಿನಲ್ಲಿ ಎರಡು ಬೆಳೆ ತಗೆದು ಜನ ಮೆಚ್ಚುವಂತೆ ಮಾಡಿದಾಗ ಬೆರಗಾದರು ಅಚ್ಯುತಭಟ್ಟರು. 'ಇದಕ್ಕೆಲ್ಲ ಮನೆದೇವಿಯೇ ಕಾರಣಳಲ್ಲವೇ' ಎಂದುಕೊಂಡರು ತಮ್ಮಲ್ಲೇ. ನ್ಯಾಯವಾಗಿ ದುಡಿದರು ಅಣ್ಣ-ತಮ್ಮ. ನಿಧಾನವಾಗಿ ವೃದ್ಧಿಸಿತು ಮನೆ ಸಂಪತ್ತು.

ಮೂವರಿಗೂ ಮದುವೆಯಾಗಿ ಹೆಂಡತಿ–ಮಕ್ಕಳು ಎನ್ನುತ್ತ ಮನೆ ತುಂಬಿ ದಾಗ ಇರುವ ಮನೆಗೆ ಒಂದೊಂದೇ ಕೋಣೆ ಸೇರಿಸುವ, ಜಗಲಿ ಇಳಿಸುವ. ಮುಹಡಿ ಏರಿಸುವ ಕೆಲಸ ಮನೆಗೊಂದು ಆಕಾರ ಬೇಕಿರಲಿಲ್ಲ. ಅನುಕೂಲ ಬೇಕಿತ್ತು. ಸಂಸಾರ ವೃದ್ಧಿಸಿದಂತೆ ಸಂಪತ್ತು ಹೆಚ್ಚಿಸುವ ಆಸೆ. ಕ್ರಮೇಣ ಪಟೇ ಲರ ಮತ್ತು ಬೀಡಿನ ಗುತ್ತಿನವರ ಗದ್ದೆಗಳು ಅಡಿಕೆ ತೋಟಗಳಾಗಿ ತಲೆ ಎತ್ತಿ ದವು.

ಅವರ ಕೃಷಿದಾಹ ಇಲ್ಲಿಗೇ ಮುಗಿದಿದ್ದರೆ ಚೆನ್ನಾಗಿತ್ತು. ಆದರೆ ದೃಷ್ಟಿ ಹೊರಳಿತು. ದೇವಾಲಯದ ಭೂಮಿಯ ಮೇಲೆ. ಯಾರೂ ವಹಿಸಿಕೊಳ್ಳದೆ ಹಾಳಾದ ಗದ್ದೆಗಳು, ನೀರು ಕಾಣದೆ ಸೊರಗಿದ ತೆಂಗಿನ ಮರಗಳು. ಸ್ವಲ್ಪ ಶ್ರಮಪಟ್ಟರೂ ಚಿನ್ನ ಬೆಳೆಯಬಹುದು. ಬೇಸಗೆಯಲ್ಲೂ ಬತ್ತದ ಕೆರೆ ಒಂದೇ ಸಾಕು ನೀರುಣಿಸಲು.

ಮಹಾಲಕ್ಷ್ಮಿ ಮುತ್ತೈದೆಯಾಗಿ ತೀರಿಹೋದ ವರ್ಷ ದೇವಾಲಯದ ಗದ್ದೆಗಳಲ್ಲಿ ಅಣ್ಣ-ತಮ್ಮ ಪ್ರಥಮ ಬೆಳೆ ತೆಗೆದದ್ದು. ಗದ್ದೆ ಸುತ್ತಲೂ ಹಿಂದಿನ ವರು ನೆಟ್ಟ ತೆಂಗಿನ ಮರಗಳಿದ್ದವು. ಆದರ ಫಸಲು ಮನೆಯ ಉಗ್ರಾಣಕ್ಕೆ, ಅಚ್ಯುತಭಟ್ಟರು ಪ್ರತಿಭಟಿಸಿದರು ಮಕ್ಕಳನ್ನು: "ಇದು ಆಕ್ರಮ, ಫಸಲನ್ನು ಏಲು ಹಾಕಬೇಕು, ಇಲ್ಲಾ ದೇವರ ಹೆಸರಿನಲ್ಲಿ ದಾನಧರ್ಮ ಮಾಡಬೇಕು."

"ನಾವು ಬಿಚ್ಚಿದವರಿಗೆ ಪ್ರತಿಫಲ ಬೇಡವೇ ?"—ದಿಟ್ಟನಾಗಿ ಕೇಳಿದ ಅನಂತ. "ಭೂಮಿ ಹಡೀಲು ಬಿದ್ದರೆ ಒಳ್ಳೆಯದೋ ಅಥವಾ ಶ್ರಮದಿಂದ ನಮ್ಮ ಉಗ್ರಾಣ ತುಂಬುವುದು ಒಳ್ಳೆಯದೋ."—

"ದೇವಾಲಯು ನೋಡಿಕೊಳ್ಳಲು, ದೇವರ ತಲೆಗೆ ಹೂವು ಹಾಕಲು ನಮ್ಮ ಮನೆತನದವರು ಬೇಕು," ಮುರಾರಿಯೂ ಧ್ವನಿಗೂಡಿಸಿದ. "ಅದರ ಬೆಳೆ ಮುಟ್ಟುವ ಹಕ್ಕು ನಮಗಿಲ್ಲ, ಇದಾವ ನ್ಯಾಯ ?"

ಸಮಾಧಾನವಾಗಲಿಲ್ಲ ಅಚ್ಯುತಭಟ್ಟರಿಗೆ. ಗ್ರಾಮದ ಹಲವು ಹಿರಿಯರನ್ನು ಭೇಟಿಯಾಗಿ ತಮ್ಮ ಮಕ್ಕಳು ಅಕ್ರಮ ಹೆಜ್ಜೆ ಇಟ್ಟಿದ್ದಾರೆಯೋ ಎಂದು ತಿಳಿಯಲೆತ್ನಿಸಿದರು. ಆದರೆ ಯಾರೊಬ್ಬರದೂ ತಕರಾರಿಲ್ಲ. ಬದಲಾಗಿ, "ನೀಯತ್ತಿನಿಂದ ಬೆಳೆ ತೆಗೆದು ಕಿಂಚಿತ್ ದೇವತಾಕಾರ್ಯಕ್ಕೆ ಉಪಯೋಗಿಸಲಿ" ಎಂದರು.

ಈಗಲೂ ಸಮಾಧಾನವಾಗಲಿಲ್ಲ. ಪ್ರಥಮ ಬೆಳೆ ಅಂಗಳದಲ್ಲಿ ಬಂದಾಗ ಅದನ್ನು ಪತ್ತಾಯದಲ್ಲಿ ಸುರಿಯಲು ಒಪ್ಪಿಕೊಳ್ಳದೆ ತಡೆಗೋಡೆಯಂತೆ ನಿಂತುಬಿಟ್ಟರು. ಇವತ್ತಿನ ಒಂದು ತಪ್ಪು ಹೆಜ್ಜೆ ನಾಳೆಯ ಹಲವು ತಪ್ಪು ಹೆಜ್ಜೆಗಳಿಗೆ ನಾಂದಿಯಾದೀತು. ತಂದೆಯ ವಿರೋಧ ಕಟ್ಟಿಕೊಳ್ಳುವ ಇಚ್ಛೆಯಿಲ್ಲದೆ ಇಬ್ಬರೂ ಒಪ್ಪಿಕೊಂಡು, ಮಾತಿಲ್ಲದೆ ಅದರ ಲೆಕ್ಕ ತೆಗೆದಿಟ್ಟರು ಬೇರೆಯಾಗಿ. ಫಸಲು ಅಂಗಳದಿಂದಲೇ ಮಾರಿಹೋಯಿತು. ಬಂದ ಹಣದಿಂದ ಮೊದಲು ದೇವಾಲಯದ ಸುತ್ತಲೂ ಕಲ್ಲು ಹಾಸಿದ್ದು ; ಆ ಕಲ್ಲುಗಳ ಮೇಲೇ ತಮ್ಮ ಹೆಸರು ಬರೆಯಿಸಿದ್ದು.

ನರಹರಿ ಹಾಸಿದ ಕಲ್ಲುಗಳುದ್ದಕ್ಕೂ ದೃಷ್ಟಿ ಚೆಲ್ಲಿದ. ಅಚ್ಯುತಭಟ್ಟರು ಇರುವಷ್ಟು ಕಾಲ ಅನಂತ, ಮುರಾರಿಗೆ ಅಧರ್ಮಕಾರ್ಯಕ್ಕಿಳಿಯುವ ಧೈರ್ಯ ಬರಲಿಲ್ಲ. ಆದರೆ ಅನಂತರ ನಡೆದದ್ದೇ ಬೇರೆ. ಈಗಲೂ ನೆನಪಿಸಿ ಹೇಳುತ್ತಾರೆ ಶಂಕರಯ್ಯ: "ಕೈಗೆ ಲಕ್ಷ್ಮಿ ಬಂದಳೆಂದರೆ ಪೂರಾ ತಲೆ ತಿರುಗಿಸಿಬಿಡುತ್ತಾಳೆ !"

"ನಿಜ ನಿಜ"—ಗೊಣಗಿಕೊಂಡ ನರಹರಿ ಕೈ ಗಡಿಯಾರ ನೋಡಿದ. ಆಗಲೇ ಎರಡು ಗಂಟೆ. ತನಗೆಲ್ಲೋ ಬಿಸಿಲಿನ ಝಳಕ್ಕೆ ಸ್ವಲ್ಪ ಜೊಂಪು ಹತ್ತಿರಬೇಕು, ಅರ್ಚಕರು ತನ್ನನ್ನು ಎಬ್ಬಿಸದೆ ಹಾಗೇ ಹೋಗಿದ್ದಾರೆ. ಅವನಿಗೀಗ ಈ ಹೊತ್ತಿನಲ್ಲಿ ಮಹಂತಯ್ಯನವರನ್ನು ಕಾಣುವ ಉತ್ಸಾಹವಿಲ್ಲದೆ ಸೀದಾ ಹೊರಟು ಬಂದ ಮನೆಗೆ.

ಒಳಕೋಣೆಯಿಂದ ರೇಣುಕೆ ಮಗನನ್ನು ಗದರಿಕೊಂಡಳು: "ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದೆ ? ಬಿಸಿಲು ಇಳೀತಾ ಬಂತು, ಊಟ ಗೀಟ ಏನೂ ಬೇಡವೇ ?"

ನರಹರಿ ಬಗ್ಗಿ ನೋಡಿದ. ಅಮ್ಮ ನೆಲದಲ್ಲಿ ಕುಳಿತು ದೇವದಾರು ಮರದ

ಪೆಟಾರಿ ತೆರೆದು ಸೀರೆಗಳನ್ನು ಸರಿಪಡಿಸಿ ಇಡುತ್ತಿದ್ದಾಳೆ. ಬಳಿಯಲ್ಲಿ ಕುಳಿತಿದ್ದಾಳೆ ಅಲಕಾ, ಅವಳ ಮುಖದ ತುಂಬಾ ಕುತೂಹಲ.

"ನಿಮ್ಮ ತಾಯಿ ಹೇಳ್ತಾರೆ, ಈ ಒಂದು ಪೆಟಾರಿಯನ್ನು ನಾವು ಔರಂಗಾಬಾದಿಗೆ ತೆಗೆದುಕೊಂಡು ಹೋಗಬೇಕಂತೆ. ಇದರಲ್ಲಿ ಒಂದು ಸಣ್ಣ ಹುಳ, ಜಿರಲೆ ಕೂಡ ಹೋಗುವುದಿಲ್ಲವಂತೆ. ನೀವು ಹೂಂ ಅಂದರೆ ನಾ ತಯಾರು!"

"ಇಷ್ಟು ದೊಡ್ಡ ಪೆಟಾರಿ! ನಿಂಗೇನು ಹುಚ್ಚೇ?"

"ಹಳೆಗಾಲದ್ದು, ನಮಗೆ ಹಾಸಿಗೆ ಬಟ್ಟೆ ಇಡಲಿಕ್ಕಾಯ್ತು. ಮೇಲೆ ಬಟ್ಟೆ ಹೊದೆಯಿಸಿದರೆ ಕೂರಲು ಬೆಂಚು, ಮಲಗಲು ಮಂಚ. ಏನ್ಹೇಳ್ತೀರಿ?"

ನರಹರಿ ನಕ್ಕ. "ಈಗ ಹೊಟ್ಟೆ ಹಸೀತಾ ಇದೆ. ಮೊದಲು ಬಡಿಸು."

ಊಟಕ್ಕೆ ಕುಳಿತಾಗಲೂ ಅಲಕಾಳ ಕಣ್ಣುಗಳಲ್ಲಿ ಕುಣಿಯುತ್ತಿತ್ತು ಆ ಪೆಟಾರಿ. "ಇವತ್ತು ನಿಮ್ಮ ತಾಯಿ ಆ ಪೆಟಾರಿ ಕಥೆ ಹೇಳಿದರು. ನಂಗೆ ತಿಳಿದಿರಲೇ ಇಲ್ಲ. ನಿಮ್ಮ ಅಜ್ಜ ಹಲಸಿನ ಮರದ ಇನ್ನೆರಡು ಪೆಟಾರಿಗಳನ್ನು ದೇವಾಲಯಕ್ಕೆ ಕೊಟ್ಟರಂತೆ, ಹೌದಾ?"

"ಹೌದು, ಅದು ದೇವಾಲಯದ ಸೊತ್ತು. ಅಲ್ಲಿ ಅರ್ಚಕರು ಒಂದರಲ್ಲಿ ದೇವರ ಸಾಮಗ್ರಿ. ಬೆಳ್ಳಿ ಸಾಮಾನು ಹಾಕಿ ಉಗ್ರಾಣದಲ್ಲಿಟ್ಟಿದ್ದಾರೆ. ಇನ್ನೊಂದು ಖಾಲಿಯಾಗಿ ಹೊರಜಗಲಿಯಲ್ಲಿದೆ. ಯಾಕೆ, ನಿನಗೆ ಬೇಕಿತ್ತಾ'?

"ಇಲ್ಲಪ್ಪ, ಸುಮ್ಮನೆ ಕೇಳಿದೆ. ಮನೇಲಿರುವ ಪೆಟಾರಿಗಿಂತ ಅವು ಇನ್ನೂ ಚೆಂದ, ನಾಜೂಕು ಇತ್ತಂತೆ. ಚಿನ್ನ-ಬೆಳ್ಳಿ ಹಾಕಲು ಅದೆಗಳು ಒಳಗೆ ಇದ್ದಾವಂತೆ. ಏನೇ ಹೇಳಿ, ಹಿಂದಿನವರ ಮಂಡೆಗೆ ಮೆಚ್ಚಲೇಬೇಕು."

"ಮಂಡೆ ಏನು ಬಂತು? ಹಣ.... ಹಣ. ಇಲ್ಲವಾದರೆ ಈ ಮನೆಗೆ ನಾಲ್ಕು ಪೆಟಾರಿಗಳು ಯಾಕೆ ಬೇಕಿತ್ತು? ಹೆಂಗಸರು ಹೇಳಿದರು. ಗಂಡಸರು ಮಾಡಿಸಿದರು!"

ಹೌದೇ. ಆಗಿನ ದರ್ಬಾರದ ಕಾಲ ಅದು. ಹೆಂಗಸರಿಗೆ ಸೀರೆ. ಚಿನ್ನ ಇಡಲು ಈಗಿನಂತೆ ಕಪಾಟುಗಳು ಇದ್ದಿರಲಿಲ್ಲ. ಮರದ ಪೆಟ್ಟಿಗೆಗಳದೇ ಉಪಯೋಗ. ಗೇಣಿ ಭೂಮಿಯಲ್ಲಿದ್ದ ದೇವದಾರು ಮರ ಕಡಿಸಿ, ಹಲಗೆ ಕುಯ್ಸಿ, ಪೆಟಾರಿ ಮಾಡಿಸಲು ಸಜ್ಜಾದಾಗ ಹೆಂಗಸರು 'ನಮಗೆ ಒಂದು ಸಾಲದು. ಇನ್ನೂ ಎರಡು ಬೇಕು' ಎಂದರಂತೆ. ದೊಡ್ಡ ಕುಟುಂಬ, ಮಣಭಾರ ಚಿನ್ನ-ಬೆಳ್ಳಿ, ಪಟ್ಟೆಸೀರೆಗಳ ರಾಶಿ, ಅವನ್ನು ಜೋಪಾನವಾಗಿ ಇಡಬೇಡವೇ? ಸರಿ, ಅನಂತ, ಮುರಾರಿ ಹಿಂದೆಮುಂದೆ ನೋಡಲಿಲ್ಲ. ಆಗ ಅವರ ಕಾಲವಾಗಿತ್ತು.

ದೇವಾಲಯದ ಜಮೀನಿನಲ್ಲಿದ್ದ ಹಳೆ ಹಲಸಿನ ಮರ ಕಡಿದು ಹೊತ್ತು ಸಾಗಿಸಿದರು ತಮ್ಮ ಮನೆಗೆ. ಊರ ಬಡಗಿಗಳು ಬೇಡವೆಂದು ದೂರದ ಕೇರಳದಿಂದ ಮಲೆಯಾಳೀ ಬಡಗಿಗಳನ್ನು ಕರೆಯಿಸಲಾಯಿತು. ಮೂವರು ಬಡಗಿಗಳು ಎಂಟು ತಿಂಗಳ ಕಾಲ ನಾಲ್ಕು ಪೆಟಾರಿಗಳನ್ನು ಮಾಡಿದ್ದೇ ಮಾಡಿದ್ದು. ಎರಡು ದೇವದಾರು ಪೆಟಾರಿ, ಇನ್ನೆರಡು ಹಲಸಿನ ಮರದ ಪೆಟಾರಿ. ಹಲಸಿನ ಮರದ ಪೆಟಾರಿಯ ಮೇಲೆಲ್ಲ ಕೆತ್ತನೆಯ ಕೆಲಸ ಮಾಡಿ ತಮ್ಮ ಜಾಣತನ ಮೆರೆದು ಸೈ ಅನ್ನಿಸಿಕೊಂಡರು. ಹೆಂಗಸರಿಗೆ ಸ್ವರ್ಗಕ್ಕೆ ಮೂರೇ ಗೇಣು. ಒಂದು ಪೆಟಾರಿ ತುಂಬ ತುಂಬಿಕೊಂಡಿತು ಚಿನ್ನ–ಬೆಳ್ಳಿ ಆಭರಣಗಳು. ಇನ್ನೊಂದರಲ್ಲಿ ಪಟ್ಟೆಸೀರೆಗಳು, ಮತ್ತೊಂದು ಹೊರಜಗಲಿಯಲ್ಲಿ ಗಂಡಸರ ಉಪಯೋಗಕ್ಕೆ.

ಆಗಿನ ವೈಭವ ಈಗ ಕೇವಲ ನೆನಪು. ರೇಣುಕೆ ಈಗಲೂ ಅವನ್ನೆಲ್ಲ ನೆನಪಿಸಿಕೊಳ್ಳುತ್ತಾಳೆ, ಅವಳು ಕಂಡರಿಯದಿದ್ದರೂ ಅತ್ತೆಯಿಂದ, ಹಿರಿಯರಿಂದ ಕೇಳಿದ್ದನ್ನು. ಒಬ್ಬ ಚಿನ್ನದ ಆಚಾರಿಗೆ ಇಲ್ಲೇ ಖಾಯಂ ಕೆಲಸ. ಮನೆ ಹೆಂಗಸರು ಹೇಳಿದ್ದನ್ನು ಅವನು ಮಾಡಿಕೊಡಬೇಕು. ಮೂರಾರಿಗೆ ಆರೂ ಹೆಣ್ಣು ಮಕ್ಕಳು. ಅವರ ಮೈಮೇಲೆ ಅಲಂಕರಿಸಿದ ಆಭರಣಗಳಿಗೆ ಲೆಕ್ಕವಿಲ್ಲ. ಆದರೆ ಆರು ಪಾಲು ಜನಾರ್ದನ ಮತ್ತು ಅನಂತನ ಹೆಂಡತಿಯರ ಮೈಮೇಲೆ! ಜನಾರ್ದನನಿಗೆ ನಾಗರಾಜ ಒಬ್ಬನೇ ಮಗ. ಅನಂತನಿಗೆ ಇಬ್ಬರು ಗಂಡು ಮಕ್ಕಳು, ನಾರಾಯಣ ಮತ್ತು ಈಶ್ವರ. ಹೆಂಗಸರ ಆಭರಣಗಳು ನವರಾತ್ರಿಯಂದು ಪೆಟಾರಿಯಿಂದ ಹೊರಬಂದು ಮೈಬೆವರನ್ನು ಕುಡಿಯುತ್ತಿದ್ದವು. ಒಂಬತ್ತು ದಿನಗಳೂ ಬಂದ ಅತಿಥಿ ಅಭ್ಯಾಗತರ ಎದುರು ಆಭರಣಗಳ ಪ್ರದರ್ಶನ. ವಿದ್ಯಾದಶಮಿಯಂದು ಮಧ್ಯಾಹ್ನ ಮಂತ್ರಾಕ್ಷತೆ ಮುಗಿದ ಮೇಲೆ ಹೆಂಗಸರೆಲ್ಲ ಪಟ್ಟೆಸೀರೆ ಉಟ್ಟು ಮೈತುಂಬ ಆಭರಣ ಧರಿಸಿ ಬೆಳ್ಳಿ ತಟ್ಟೆಯಲ್ಲಿ ಹೂ ಕುಂಕುಮ ಆರತಿ ಹೊತ್ತು ಶಿವದೇವಾಲಯಕ್ಕೆ ಹೋಗುತ್ತಿದ್ದರಂತೆ. ಆಗ ಅವರನ್ನು ನೋಡಲು ಎರಡು ಕಣ್ಣುಗಳು ಸಾಲದು. ಆ ದಿನ ಈ ಮನೆಯ ಹೆಂಗಸರನ್ನು ನೋಡಲೆಂದೇ ಬರುತ್ತಿದ್ದರು ಊರ ಜನರು. ನೋಡುವುದು ಅವರ ಸೌಂದರ್ಯವನ್ನಲ್ಲ, ಮೈ ಅಲಂಕರಿಸಿದ ಬಂಗಾರವನ್ನು! ಕುತ್ತಿಗೆ ಬಗ್ಗುವಷ್ಟು ಚಿನ್ನದ ಸರಗಳು, ಕಿವಿಯೋಲೆ, ಝುಮಕಿ, ನೆತ್ತಿ ಎಳೆ, ಸೊಂಟದ ಡಾಬು, ಕೈಗೆ ಉಂಗುರ, ತೋಳಿನ ಕಡಗ, ಕಾಲ್ಗೆಜ್ಜೆಗಳ ಝಣಝಣ ಇಂಚರದೊಂದಿಗೆ ಆಭರಣಗಳು ಫಳಫಳ ಹೊಳೆವಾಗ ನೋಡುವವರು ದಿಗ್ಭ್ರಾಂತರಾಗಬೇಕು.

"ಇದನ್ನೆಲ್ಲ ನಿಮ್ಮ ತಾಯಿಯೇ ಇವತ್ತು ಹೇಳಿದ್ರು. ಆದರೆ ನಂಗ್ಯಾಕೋ ನಂಬಿಕೆ ಬರ್ತಾ ಇಲ್ಲ. ಅಷ್ಟು ರಾಶಿ ಚಿನ್ನ, ಬೆಳ್ಳಿ ಎಲ್ಲಾ ಎಲ್ಲಿಗೆ ಹೋಯ್ತು ? ಈಗ ಪೆಟಾರಿ ಖಾಲಿ ಆಗಿದೆಯಲ್ಲ ?" ಅಚ್ಚರಿಯಿಂದ ಕೇಳಿದಳು ಅಲಕಾ.

ನರಹರಿ ಕೈ ತೊಳೆಯಲು ಎದ್ದವನು ಉತ್ತರಿಸಲು ಬಾಯ್ತೆರೆದಿದ್ದ. ಹೊರಗಿನಿಂದ ಶಂಕರಯ್ಯನವರ ಧ್ವನಿ ಕೇಳಿಸಿತು: "ನರಹರೀ, ಮನೇಲಿದ್ದೀಯಾ ? ಎಲ್ಲಿ ?"

"ಬಂದೆ"—ಕೈ ತೊಳೆದು ಹೊರಬರುವ ಮೊದಲೇ ಅವರು ಬಂದಾಗಿತ್ತು ಹಿತ್ತಲು ಬಾಗಿಲಿಗೆ. "ಊಟ ಆಯ್ತಾ ? ಬೇಗ ಬಟ್ಟೆ ಹಾಕ್ಕೊ. ಮಹಂತಯ್ಯನವರು ಎಚ್ಚರ ತಪ್ಪಿ ಬಿದ್ದಿದ್ದಾರೆ. ಕೈಕಾಲು ಸ್ವಾಧೀನದಲ್ಲಿಲ್ಲ. ಅವರನ್ನ ಆಸ್ಪತ್ರೆಗೆ ಕರ್ಕೊಂಡು ಹೋಗ್ಬೇಕು."

"ಏನಾಯ್ತಂತೆ ? ನಟೇಶ, ಗಂಗಾಧರ ಮನೇಲಿಲ್ಲವೇ ?"

"ಏನಾಯ್ತೋ ತಿಳೀದು. ಮಧ್ಯಾಹ್ನ ದೇವಾಲಯದ ಪ್ರಸಾದ ತೆಗೆದುಕೊಳ್ಳದೆ ಬಂದವರು ಊಟ ಕೂಡ ಮಾಡಲಿಲ್ಲವಂತೆ. ಕೈ ಕಾಲು ತಿರುಚಲು ಪ್ರಾರಂಭವಾಯ್ತು." ಶಂಕರಯ್ಯ ತಮ್ಮ ಚೀಲ ಕೆಳಗಿಟ್ಟು ಅದರಿಂದ ಹೂವು ಹಣ್ಣು ತೆಗೆದು ಅಲಕಳ ಕೈಗಿತ್ತರು. "ತಿಮ್ಮಣ್ಣನ ಮನೇಲಿ ರುದ್ರಾಭಿಷೇಕ ಇತ್ತು. ಅದರ ಪ್ರಸಾದ. ಅವರ ಮನೆಯಿಂದ ಬರ್ತಾ ಮಹಂತಯ್ಯನವರಲ್ಲಿಗೆ ಬಂದಿದ್ದೆ. ಅನರ್ಥ ಆಗಿಹೋಗಿದೆ. ಬೇಗ ಹೋಗು. ಅವರ ದೊಡ್ಡ ಮಗ ನಟೇಶ ಹೆಂಡತಿ ಮಕ್ಕಳ ಸಂಗಡ ತಿರುಪತಿಗೆ ಹೋಗಿದ್ದಾನಂತೆ. ಸಣ್ಣವ ಗಂಗಾಧರ ಹೆಂಡತಿ ಮನೆಗೆ. ಇಬ್ಬರೂ ಮನೇಲಿಲ್ಲ, ಭಾಗ್ಯಮ್ಮನ ಗೋಳು."

"ಆಸ್ಪತ್ರೆಗೆ ಹೇಗೆ ಹೋಗುವುದು ? ಈ ಹೊತ್ತಿನಲ್ಲಿ ಬಾಡಿಗೆ ಕಾರು ಸಿಗುತ್ತಾ ?" ನರಹರಿಗೆ ಅನುಮಾನ.

"ಅವರ ಜೀಪು ಇದೆ ಮನೇಲಿ. ನೀನು ಹೋಗ್ತಾ, ವಾಸು ಪಟೇಲರ ಜೀಪಿನ ಡ್ರೈವರ್‌ನನ್ನು ಕರ್ಕೊಂಡು ಹೋಗು. ಮತ್ತೆ ನೀನೇ ಜೀಪು ಬಿಟ್ಟೀಯಾ.... ಜೋಕೆ ! ಹಳ್ಳಿ ರಸ್ತೆ ಇದು. ಎಲ್ಲಾದರೂ ಗುಂಡಿಗೆ ಹಾಕಿ ಗೋವಿಂದ ಅನ್ನ ಬೇಡ !"

ನರಹರಿಗೆ ವಾಹನ ನಡೆಸುವುದು ದೊಡ್ಡ ವಿದ್ಯೆಯೇನಲ್ಲ, ಔರಂಗಾಬಾದ್‌ನಲ್ಲಿ ಕಂಪನಿ ಸಾಮಾನು ಸಾಗಿಸಲು ಕಂಪನಿಯಿಂದೇ ಕಾರು ತೆಗೆದುಕೊಂಡು ಹೋಗಿ ಅಭ್ಯಾಸವಿದೆ. ಆದರೂ ತಂದೆಯ ಹದರಿಕೆ, ಎಚ್ಚರಿಕೆಯ ಧ್ವನಿಗೆ ಮನದಲ್ಲಿ ನಕ್ಕು ಅವಸರದಲ್ಲಿ ಸಿದ್ಧನಾದ.

* * *

ಮಹಂತಯ್ಯನವರ ಸ್ಥಿತಿ ತೀರಾ ಕರುಣಾಜನಕವಾಗಿತ್ತು. ಎರಡು ಕಾಲು, ಒಂದು ಕೈ ಸೆಟೆದುಕೊಂಡಿತ್ತು. ಕಂತ್ಥಿಗೆ ನಡುಗುತ್ತಿತ್ತು. ಅವರ ಕಾಲಿಗೆ ಕೈಗೆ ನೀಲಗಿರಿ ತಿಕ್ಕುತ್ತಿದ್ದ ಭಾಗ್ಯಮ್ಮ ನರಹರಿಯನ್ನು ಕಂಡಾಕ್ಷಣ ಹೋ ಎಂದು ಅಳಲಾರಂಭಿಸಿದರು. ತಮ್ಮ ಗಂಡುಮಕ್ಕಳು, ಸೊಸೆಯಂದಿರೂ ಈ ಹೊತ್ತಿನಲ್ಲಿ ಇಲ್ಲವಲ್ಲ ಎಂಬ ದುಃಖ ಕಾಡಿರಬೇಕು. ಆಗಲೇ ಜನ ಸೇರಿದ್ದರು. ಅಲ್ಲಿ ಆಳುಕಾಳುಗಳು, ಆಚೆ ಈಚೆಯವರು, ಹಳ್ಳಿಯ ಒಬ್ಬ ಮುದುಕ ಪಂಡಿತರು, ಎಲ್ಲರೂ ಸಲಹೆ ಹೇಳುವವರೇ. ಪಂಡಿತರನ್ನು ಕರೆಯಿಸಿದ್ದು ತತ್ಕಾಲ ಚಿಕಿತ್ಸೆಗೆ, ಅಷ್ಟೇ. ಆದಷ್ಟು ಬೇಗ ಹದಿನೈದು ಮೈಲು ದೂರವಿರುವ ಮಹಂತಯ್ಯನವರ ಮನೆವೈದ್ಯರನ್ನು ಕಾಣುವುದು, ತುರ್ತು ಚಿಕಿತ್ಸೆ ನೀಡುವುದು ಆವಶ್ಯಕ. ನರಹರಿಯ ಕಣ್ಣುಗಳು ಅರಿಯದೆ ತುಂಬಿಬಂದವು. ಶಾಲಾ ಶಿಕ್ಷಕರ ಬಗ್ಗೆ ಕೇಳಬೇಕು ಎನ್ನುವಾಗಲೇ ಇಲ್ಲಿ ಪರಿಸ್ಥಿತಿ ಬಿಗಡಾಯಿಸಿಹೋಗಿದೆ ; ಈಚೆಗಿನ ಪ್ರಶ್ನೆ ಇಲ್ಲದೆ ಪೂರಾ ಒದ್ದಾಟ.

ಈ ಹಳ್ಳಿಯಲ್ಲಿ ಬಹಳಷ್ಟು ಮಂದಿ ಇದ್ದರೂ ಭಾಗ್ಯಮ್ಮ ಕರೆಯಿಸಿದ್ದು ನರಹರಿಯನ್ನು. ಇದಕ್ಕೆ ಕಾರಣ ಶಂಕರಯ್ಯನವರ ಮೇಲಿರುವ ವಿಶ್ವಾಸ. ನರಹರಿಯೂ ಔರಂಗಾಬಾದ್‌ನಿಂದ ಬಂದಾಗಲೆಲ್ಲ ಇಲ್ಲಿಗೆ ಬಂದು ನಟೇಶ, ಗಂಗಾಧರರೊಡನೆ ಲೋಕಾಭಿರಾಮ ಮಾತನಾಡುವುದು ವಾಡಿಕೆ. ಎಷ್ಟಾದರೂ ಸಮವಯಸ್ಕರು. ಅಷ್ಟೇ ಅಲ್ಲ, ಭಾಗ್ಯಮ್ಮನ ಕೈ ಅಡಿಗೆ ರುಚಿ ಚಪ್ಪರಿಸಿ ಹೋಗಲೇಬೇಕು. "ನೀನು ಹಳ್ಳಿಯಲ್ಲೇ ಉಳಿದುಬಿಡು, ನರಹರಿ"—ಕೆಲವು ದಿನಗಳ ಮೊದಲು ಹೇಳಿದ್ದ ನಟೇಶ. "ನಾನು ಗೇರುಬೀಜದ ಫ್ಯಾಕ್ಟರಿ ತೆಗೀಬೇಕು ಎಂದುಕೊಂಡಿದ್ದೇನೆ,ನೀನೂ ಪಾರ್ಟನರ್‌ನಾದರೆ ಕೂಡಿ ಮಾಡೋಣ!"

ಮನದಲ್ಲಿ ಆಸೆ ಮಿಂಚಿದರೂ ಹಣವಿಲ್ಲದೆ ಪಾರ್ಟನರ್ ಆಗುವುದುಂಟೇ ? ಆಮೇಲೆ ತಿಳಿಯಿತು ನಟೇಶ ಕುಚೇಷ್ಟೆಗೆಂದು ಈ ಮಾತು ಹೇಳಿದನಂತೆ. ಕೆಲಸವಿಲ್ಲದವರು ಎಲ್ಲರ ಕಣ್ಣುಗಳಲ್ಲಿ ಹಗುರವೇ. ವ್ಯಥೆಯಾಗಿತ್ತು ನರಹರಿಗೆ. ತನ್ನ ಹಿಂದಿನವರು ಹಣ ಕೂಡಿಹಾಕಿದ್ದರೆ ಈ ಸ್ಥಿತಿ ಬರುತ್ತಿತ್ತೇ ? ಐಶ್ವರ್ಯ ಲಕ್ಷ್ಮಿಯನ್ನು ತಮ್ಮ ಅಂಗೈಯಲ್ಲಿ ಕುಣಿಸಿದ ಮನೆಯಲ್ಲಿ ಈಗ ಅದರ ಕುರುಹು ಕೂಡ ಇಲ್ಲ. ಜನ ಶಂಕರಯ್ಯನವರ ಪ್ರಾಮಾಣಿಕ ನಿಷ್ಠೆಗೆ ಬೆಲೆ ಕೊಡುತ್ತಾರೆ. ಆದರೆ ಲಕ್ಷ್ಮಿ ಇಲ್ಲದಾಗ ಸಿಗುವ ಬೆಲೆ ಪಡೆದವರಿಗೇ ಗೊತ್ತು. ಅದಕ್ಕೆಂದೇ

ಇತ್ತೀಚೆಗೆ ಈ ಮನೆಗೆ ಬರುವುದೇ ಅಪರೂಪ. ಇವತ್ತು ಭಾಗ್ಯಮ್ಮ ಹೇಳಿ ಕಳುಹಿಸಿದ್ದಾರೆ, ಬಂದಿದ್ದಾನೆ.

ಮತ್ತೆ ಅರ್ಧ ಗಂಟೆಯಲ್ಲಿ ಮಹಂತಯ್ಯನವರನ್ನು ಕೆಲಸದವರ ಸಹಾಯದಿಂದ ಜೀಪಿನ ಹಿಂಭಾಗದಲ್ಲಿ ಮಲಗಿಸಿ ತಾನು ಡ್ರೈವರ್ ಸ್ಥಾನದಲ್ಲಿ ಕುಳಿತ. ಭಾಗ್ಯಮ್ಮ ಆಸ್ಪತ್ರೆಯಲ್ಲಿ ನಿಲ್ಲಲು ಬೇಕಾಗುವ ಅಗತ್ಯದ ಸಾಮಾನುಗಳ ಗಂಟು ಕಟ್ಟಿ ಸಿದ್ಧರಾಗಿ, ಅಡಿಗೆಯವನಿಗೆ ಎಚ್ಚರಿಕೆ ಹೇಳಿ ನರಹರಿಯ ಕೈಗೆ ಗಂಗಾಧರನ ಹೆಂಡತಿಯ ತಂದೆಯ ಫೋನ್ ನಂಬರ್ ಕೊಟ್ಟು, "ಆಸ್ಪತ್ರೆಗೆ ಹೋದಾಕ್ಷಣ ಮೊದಲು ಗಂಗಾಧರನಿಗೆ ಫೋನ್ ಮಾಡಿ ತಿಳಿಸಿದರೆ ನಾಳೆ ನಸುಕಿಗೆ ಹೊರಟುಬರ್ತಾನೆ. ಏನಪ್ಪ, ನೀನು ಡ್ರೈವ್ ಮಾಡ್ತೀಯಾ? ಗೊತ್ತು ತಾನೇ?"—ಕೇಳಿದರು ಆ ಸಂಕಟದಲ್ಲಿಯೂ.

"ಗಂಗಾಧರನಷ್ಟೇ ನನ್ನನ್ನೂ ನಂಬಬಹುದು. ಕೂತ್ಕೊಳ್ಳಿ. ಹೇಗೆ ನಡೆಸುತ್ತೇನೆ ನೋಡಿ" ಎಂದ.

ಹಳ್ಳಿಯ ಕಾಡುದಾರಿ. ಬೆಟ್ಟದ ಏರಿಳಿತದಲ್ಲಿ ಸುಮಾರು ಹದಿನೈದು ಮೈಲು ದೂರ ಡಾ. ಸುಬ್ರಹ್ಮಣ್ಯಂ ಇರುವ ಊರು. ಸಾಧಾರಣ ದೊಡ್ಡ ಪೇಟೆಯೇ. ನಾಲ್ಕಾರು ಪ್ರಸಿದ್ಧಿ ಪಡೆದ ಡಾಕ್ಟರರಿದ್ದಾರೆ. ಧರ್ಮಾಸ್ಪತ್ರೆ ಬೇರೆ ಇದೆ. ಮಹಂತಯ್ಯನವರ ಮನೆಗೆ ಅನೇಕ ವರ್ಷಗಳಿಂದಲೂ ಡಾ. ಸುಬ್ರಹ್ಮಣ್ಯಂ ಅವರೇ ವೈದ್ಯರು. ಮಧ್ಯ ವಯಸ್ಸು ಮೀರಿದ ವ್ಯಕ್ತಿ. ಅವರದೇ ಹದಿನೈದು ಮಂಚಗಳಿರುವ ಸಣ್ಣ ಚಿಕಿತ್ಸಾಲಯವಿದೆ. ಮಹಂತಯ್ಯನವರನ್ನು ಪರೀಕ್ಷಿಸಿ ತಮ್ಮ ಚಿಕಿತ್ಸಾಲಯದಲ್ಲಿ ತತ್‌ಕ್ಷಣ ಅಡ್ಮಿಟ್ ಮಾಡಿಕೊಂಡು, "ಒಂದ್ಹತ್ತು ದಿನ ಇರಬೇಕಾದೀತು" ಎಂದರು.

ನರಹರಿ ಅವರ ಚಿಕಿತ್ಸಾಲಯದಿಂದ ಗಂಗಾಧರನಿಗೆ ಫೋನ್ ಮಾಡಿ ವಿಷಯ ತಿಳಿಸಿ, "ನೀವು ಬರುವತನಕ ನಿಮ್ಮ ತಂದೆ ಜೊತೆ ಇರ್ತೇನೆ" ಎಂದ.

ಮರುದಿನ ಹತ್ತು ಗಂಟೆಯಾಗಿತ್ತು ಗಂಗಾಧರ ಚಿಕಿತ್ಸಾಲಯಕ್ಕೆ ಬರುವಾಗ. ಅವನು ಬಂದ ಮೇಲೆ ನರಹರಿಗೆ ಇನ್ನೇನೂ ಕೆಲಸವಿರಲಿಲ್ಲ. ಕೂಡಲೇ ಹೊರಟುಬಿಟ್ಟ. "ನಿಮ್ಮ ತಂದೆ ಇನ್ನೂ ಮಂಪರಿನಲ್ಲಿದ್ದಾರೆ. ಮನೆ ಕಡೆ ಚಿಂತಿಸಬೇಡಿ. ನೀವು ಬರುವತನಕ ನಾನು ನಿಗಾ ಇಟ್ಟಿರ್ತೇನೆ" ಎಂದವನು ಜೀಪಿನ ಕೀಯನ್ನು ಗಂಗಾಧರನ ಕೈಗಿತ್ತ.

ಗಂಗಾಧರ ಬೈಕ್‌ನಲ್ಲಿ ಬಂದಿದ್ದ. "ನೀವು ಈ ಜೀಪಿನಲ್ಲೇ ಮನೆಗೆ ಹೋಗಿ ಇದನ್ನು ನಮ್ಮ ಶೆಡ್‌ನಲ್ಲಿ ಇಟ್ಟುಬಿಡಿ. ನನ್ನ ಓಡಾಟಕ್ಕೆ ಬೈಕ್ ಸಾಕು,

ತುಂಬಾ ಉಪಕಾರ ಮಾಡಿದಿರಿ. ಅಂದ್ಹಾಗೆ ಕಂಪನಿ ಸುದ್ದಿ ಇದೆಯಾ? ಪ್ರಾರಂಭವಾಗುವ ಸೂಚನೆ ಇದೆಯಾ?"—ಕೇಳಿದ ಆ ಕಷ್ಟದ ಸಮಯದಲ್ಲಿಯೂ.

'ಇಲ್ಲ' ಎಂದು ತಲೆಯಲ್ಲಾಡಿಸಿದ. ಪಕ್ಕನೆ ಹಲ್ಲರ್‌ನ ನೆನಪಾಯಿತು. ಹೇಗೂ ಇಲ್ಲಿ ತನಕ ಬಂದಾಗಿದೆ. ಹಲ್ಲರ್‌ಗೆ ಬೇಕಾದುದು ಇಲ್ಲಿ ಸಿಕ್ಕಿದರೆ ತೆಗೆದು ಕೊಂಡು ಹೋಗುವುದು ವಾಸಿ. ಅವನು ನಾಲ್ಕಾರು ಅಂಗಡಿಗಳನ್ನು ತಿರುಗಿದ. ಕೊನೆಗೆ ಒಂದು ದೊಡ್ಡ ಅಂಗಡಿಯಲ್ಲಿ ಅವನಿಗೆ ಬೇಕಾದ ಹಲ್ಲರ್‌ಗೆ ಸಂಬಂಧಿಸಿದ ಎಲ್ಲ ಸಾಮಾನುಗಳೂ ದೊರೆಯಿತು. ಆದರೆ ಹಣ ತಾರದೆ ಖರೀದಿಮಾಡುವುದು ಹೇಗೆ? ಪರಿಚಿತರಿಲ್ಲದ ಊರು.

"ಎಲ್ಲಾ ಪ್ಯಾಕ್ ಮಾಡಿ ಇಟ್ಟಿರ್ತೇನೆ. ನಾಳೆ ಹಣ ತಂದು ಇವನ್ನು ಕೊಂಡು ಹೋಗಿ" ಎಂದ ಅಂಗಡಿಯವ.

ಅದೇ ಸರಿ ಎನಿಸಿ ಅವನು ಹೊರಡಲನುವಾದಾಗ ಅದೇಕೋ ಅಂಗಡಿಯವನಿಗೆ ಅನುಮಾನ ಬಂದಿತು. "ಅಂದ್ಹಾಗೆ ದೊಡ್ಡಕಾಡು ಶಂಕರಯ್ಯನವರಿಗೆ ನೀವೇನಾಗಬೇಕು?"

"ಅವರ ಮಗ."

"ಹಾಗೆ ಹೇಳಿ ಮತ್ತೆ"—ಚಿಟಿಕೆ ಹೊಡೆದ ಅಂಗಡಿಯವ. "ನೀವು ಅಂಗಡಿಗೆ ಬಂದಾಗಲೇ ಅನುಮಾನ ಬಂದಿತ್ತು. ಸರಿಹೋಯ್ತು ಈಗ. ಹಣದ ಬಗ್ಗೆ ಏನೂ ಯೋಚಿಸಬೇಡಿ. ನಿಮ್ಮ ಸಾಮಾನು ತೆಗೆದುಕೊಂಡು ಹೋಗಿ ಇವತ್ತೇ. ಇನ್ನೊಮ್ಮೆ ಇತ್ತ ಬಂದಾಗ ಹಣ ಕೊಡುವಿರಂತೆ."

ಆಶ್ಚರ್ಯವಾಯಿತು ನರಹರಿಗೆ, ಅವನ ಧ್ವನಿಯಲ್ಲಿದ್ದ ಆತ್ಮೀಯತೆ ಕಂಡು. ಆಮೇಲೆ ತಿಳಿಯಿತು, ಶಂಕರಯ್ಯ ಪ್ರತಿವರ್ಷವೂ ಗಣೇಶ ಚೌತಿಯಂದು ಅವರಲ್ಲಿಗೆ ಪೂಜೆಗೆ ಬರುತ್ತಾರಂತೆ; ಅವರ ಮಗನ ಮತ್ತು ಮಗಳ ಮದುವೆ ಮಾಡಿಸಿದ ಮುಖ್ಯ ಪುರೋಹಿತರೂ ಹೌದು. ಹಳ್ಳಿಯಲ್ಲಿ ತಂದೆಗೆ ವಿಶೇಷ ವ್ಯಕ್ತಿತ್ವ ಇಲ್ಲ ಎಂದುಕೊಂಡಿದ್ದ. ಆದರೆ ತಂದೆ ಸದ್ದಿಲ್ಲದೆ ಹೆಸರು ಮಾಡಿದ್ದಾರೆಯೇ?

ಅಂಗಡಿಯವ ಗೌರವದಿಂದ ನರಹರಿಗೆ ಕಾಫಿ ತಿಂಡಿ ತರಿಸಿದ. ಅಷ್ಟೇ ಅಲ್ಲ, ತಾನೇ ಹಲ್ಲರ್‌ನ ಸಾಮಾನಿನ ಕಟ್ಟನ್ನು ಜೀಪಿನವರೆಗೂ ತಂದು ಇಟ್ಟು, "ಹಲ್ಲರ್ ಡೀಸಲ್ ಪಂಪ್‌ಗೆ ಜೋಡಿಸಲು ನನಗೆ ತಿಳಿದ ಒಬ್ಬ ಮೆಕ್ಯಾನಿಕ್ ಇದ್ದಾನೆ. ನೀವು ಹೇಳಿದಾಗ ಕಳುಹಿಸಿಕೊಡ್ತೇನೆ" ಎಂದ.

ಇಷ್ಟು ಉಪಕಾರ ಯಾರು ಮಾಡುತ್ತಾರೆ ಈಗಿನ ಕಾಲದಲ್ಲಿ ? ನರಹರಿ ಉತ್ಸಾಹಿತನಾಗಿದ್ದ. "ನಿಮಗೆ ತೊಂದರೆ ಆಗದಿದ್ದರೆ ನಾಳೆಯೇ ಕಳುಹಿಸಿ ಕೊಡಿ. ಅವನ ಕೈಯಲ್ಲಿ ನಿಮ್ಮ ಹಣ ವಾಪಸ್ಸು ಮಾಡ್ತೇನೆ."

ಮನೆ ಸೇರಿದ ಮೇಲೆ ಅವನ ಯೋಜನೆಗೆ ಬಹು ದೊಡ್ಡ ಗಲಾಟೆ ಆಗಿಹೋಯಿತು. ಆದರೆ ಅವನು ಕಿವಿಗೊಡಲಿಲ್ಲ. ತಾನು ಔರಂಗಾಬಾದ್‌ಗೆ ಹೊರಟುಹೋದರೇನಂತೆ. ಹಲ್ಲರ್ ತನ್ನ ಕಾರ್ಯ ನಿರ್ವಹಿಸುತ್ತದೆ. ತೋಟಕ್ಕೆ ನೀರು ಹಾಯಿಸಲು ಬರುವ ಹನುಮನಿಗೆ ಅಕ್ಕಿ ಮಾಡಲು ಕಲಿಸಿದ ರಾಯಪ್ಪ. ಸುತ್ತಲಿನ ಜನರಿಗೂ ಉಪಕಾರ, ತಂದೆಗೂ ಆದಾಯ.

ಒಂದೇ ವಾರದಲ್ಲಿ ತೋಟದ ಡೀಸಲ್ ಪಂಪ್‌ಗೆ ಹಲ್ಲರ್ ಜೋಡಿಸಲಾಯಿತು. ನವರಾತ್ರಿ ಹೊತ್ತಿಗೆ ಕೆಲಸವೂ ಪ್ರಾರಂಭ. ಹಲ್ಲರ್‌ಗೆ ಮೊದಲು ಬೋಣಿವ ಮಾಡಿದವಳು ಚಾಮಕ್ಕ. "ಇನ್ನು ಕಾಲು ಜಜ್ಜಿಕೊಳ್ಳುವ ಕಷ್ಟವಿಲ್ಲ". ಎಂದಳು ಸಂತೋಷದಲ್ಲಿ.

ಗಂಗಾಧರ, ನಟೇಶ ನೋಡಲೆಂದು ಬಂದಾಗ ಸ್ವತಃ ನರಹರಿಯೇ ಭತ್ತ ಹಾಕುವ ಕೆಲಸದಲ್ಲಿದ್ದ. ಬೇರೆ ಇಬ್ಬರು ಭತ್ತದ ಗೋಣಿ ಇಟ್ಟು ಕಾದಿದ್ದರು ತಮ್ಮ ಸರತಿಗಾಗಿ. ಗಂಗಾಧರ ಮೆಚ್ಚುಗೆಯಿಂದ ನರಹರಿಯ ಹೆಗಲು ತಟ್ಟಿದ.

"ಸರಿಯಾದ ಕೆಲಸ ಮಾಡಿದಿರಿ. ನಾವು ಈ ವರ್ಷ ಹಲ್ಲರ್ ಇಡಬೇಕು ಎಂದುಕೊಂಡಿದ್ದೆವು. ನೀವು ಮೊದಲಿಗೆ ಇಟ್ಟಿರಿ. ಜಾಬ್ ವರ್ಕ್ ಅಂತ ಒಂದು ಲೈಸನ್ಸ್ ಮಾಡಿಸಿಕೊಂಡು ಬಿಡಿ. ಮತ್ತೆ ಯಾರ ತಕರಾರೂ ಇಲ್ಲ ನಿಮಗೆ."

"ಕಂಪನಿ ಪೂರ್ತಿಯಾಗಿ ಮುಚ್ಚಿದರೂ ನಿಮಗೇನೂ ನಷ್ಟವಿಲ್ಲ. ಇದರಲ್ಲೇ ಗಳಿಸಬಹುದು."

ನಟೇಶನ ಧ್ವನಿಯಲ್ಲಿ ಕೊಂಕು ಇತ್ತೇ ? ಶ್ರೀಮಂತಿಕೆಯ ದರ್ಪದಲ್ಲಿ ಯಾರೂ ಕಾಣುವುದಿಲ್ಲ ಈತನಿಗೆ. ನರಹರಿಗೆ ಬಿಮ್ಮಾಯಿತು ಮುಖ.

ಮಹಂತಯ್ಯನವರಿಗೆ ಆಸ್ಪತ್ರೆಯಿಂದ ಬಿಡುಗಡೆ ಆಗಿಲ್ಲ. ಚಿಕಿತ್ಸೆ ನಡೆಯುತ್ತಿದೆ. ಇನ್ನೂ ಹದಿನೈದು ದಿನ ಉಳಿಯಬೇಕು ಎಂದಿದ್ದಾರೆ ಡಾ. ಸುಬ್ರಹ್ಮಣ್ಯಂ. ಅವರಿಗೆ ಬಂದದ್ದು ಗಂಭೀರ ರೂಪದ ಪಾರ್ಶ್ವವಾಯು !

ಯಾರಿಗೂ ನೋವುಂಟು ಮಾಡದ, ಪ್ರತಿ ಜೀವಿಯಲ್ಲಿ ಪರಮಾತ್ಮನನ್ನು ನೋಡುವ ಈ ಮಹನೀಯನಿಗೆ ಎಂತಹ ಅವಸ್ಥೆ ? ಪುಣ್ಯಾತ್ಮರನ್ನು ಅವರ ಬದುಕಿನಲ್ಲಿ ನೋಡು, ಸಾವಿನಲ್ಲಿ ನೋಡು ಎನ್ನುತ್ತಾರೆ ತಿಳಿದವರು. ಆದರೆ ಮಹಂತಯ್ಯ ಹೀಗಾದಾರೆಂದು ತಾವು ಯಾರೂ ಯೋಚಿಸಿರಲಿಲ್ಲ. ಈ

ಮಾತನ್ನು ನರಹರಿ ಶಂಕರಯ್ಯನವರಿಗೆ ಹೇಳಿದಾಗ ಅವರು ಗಂಭೀರರಾದಿದ್ದರು. ತಮಗೆ ತಿಳಿಯದ ಎಷ್ಟೋ ವಿಷಯದ ಬಗ್ಗೆ ತಾವು ಗಮನ ಕೊಡಬಾರದೆಂದು ಅವರ ತರ್ಕ. ಮಹಂತಯ್ಯನವರನ್ನು ನಿಕಟವಾಗಿ ನೋಡಿದ ಕಾರಣವೋ, ಅವರ ಇಂದಿನ ಅಸಹಾಯಕ ಸ್ಥಿತಿಯ ಬಗ್ಗೆ ತಮ್ಮಲ್ಲೇ ಜಿಜ್ಞಾಸೆ ಮಾಡುವ ಕಾರಣವೋ, ಅವರ ಮುಖ ನೋವಿನಿಂದ ವಿವರ್ಣವಾಯಿತು.

"ನಿಷ್ಠಾವಂತ ವ್ಯಕ್ತಿಗೆ ಹೀಗಾಗಬಾರದಿತ್ತು ನರಹರಿ. ಆದರೆ ತಲೆಗೆ ಎರೆದದ್ದು ಕಾಲಿಗೆ ಇಳಿಯಲೇಬೇಕು ಅಲ್ಲವೇ—"

"ತಲೆಗೆ ಎರೆದದ್ದು ಅಂದರೆ ಏನಪ್ಪಾ ?" ನರಹರಿಗೆ ತಿಳಿಯುವ ಕುತೂಹಲ.

"ನಾವು ಕಲ್ಲಿನಲ್ಲಿದ್ದ ಕಣ್ಣಿಗೆ ಕಾಣದ ದೇವರನ್ನು ನಂಬುತ್ತೇವೆ. ಕಾಣದ ದೇವರ ಶಾಪಕ್ಕೆ ಹೆದರುತ್ತೇವೆ. ಅಗೋಚರ ಶಕ್ತಿಗೆ ಎದುರು ಹೋಗಬಾರದು ಎನ್ನುತ್ತೇವೆ. ದೇವಸ್ಥಾನದ ಹಣದ ವಿಷಯದಲ್ಲಿ, ಅದರ ಕೆಲಸದ ಬಗ್ಗೆ ಮಹಂತಯ್ಯನವರು ಹದಿನಾರಾಣೆ ಸಾಚಾ ಮನುಷ್ಯ. ಆದರೆ ಈ ಸಾಚಾತನದ ಇನ್ನೊಂದು ಮಗ್ಗಲು ನೋಡಬೇಕು. ಅಲ್ಲಿಯೂ ಅದೃಶ್ಯ ಶಕ್ತಿಗಳಿವೆ, ಅದೃಷ್ಟದಾಟವಿದೆ. ಇದೆಲ್ಲ ಚರ್ಚಿಸಿ ಪ್ರಯೋಜನವಿಲ್ಲ. ಮಾಡಿದವರ ಪಾಪ ಆಡಿದವರ ಬಾಯಲ್ಲಿ. ನಮಗ್ಯಾಕೆ ಬೇಕು ಅವರ ಉಸಾಬರಿ ? ಬಿಡು." ಶಂಕರಯ್ಯ ಮಗನ ಹೆಗಲು ತಟ್ಟಿದರು. "ಮಹಂತಯ್ಯನವರನ್ನು ದಿನಾ ಆಸ್ಪತ್ರೆಯಲ್ಲಿ ಭೇಟಿಯಾಗಿ ಬಾ, ಭಾಗ್ಯಮ್ಮನವರಿಗೂ ಸಾಂತ್ವನ ಹೇಳು. ನಿನ್ನಿಂದ ಅವರಿಗೆ ಕಿಂಚಿತ್ ಸಮಾಧಾನ ಸಿಗಲಿ !"

೬

ಈ ಮಧ್ಯೆ ನರಹರಿ ಅಲಕಾಳ ಜೊತೆಗೂಡಿ ಔರಂಗಾಬಾದ್‌ಗೆ ಹೋಗಿಬಂದ. ಅವರ ಬಾಡಿಗೆ ಮನೆಯಲ್ಲಿದ್ದ ಕಾಲೇಜು ಹುಡುಗರು ಮನೆಯನ್ನು ಗಲೀಜು ಮಾಡಿಟ್ಟ ರೀತಿ ಓಕರಿಕೆ ತರಿಸಿತು ಇಬ್ಬರಿಗೂ. ವಿದ್ಯುತ್ ಒಲೆ ಪೂರಾ ಕೆಟ್ಟಿದೆ, ಇಸ್ತ್ರಿ ಪೆಟ್ಟಿಗೆ ಹಾಳಾಗಿದೆ. ಅಡಿಗೆ ಕೋಣೆ, ಬಚ್ಚಲು, ಪಾಯಿಖಾನೆಯ ಗೋಡೆಗಳ ಮೇಲೆಲ್ಲಾ ಹದಿಹರಯದ ಹುಡುಗಿಯರ ಚಿತ್ರಗಳು. ಮಂಚ-ಕಪಾಟಿನ ಮೇಲೆಲ್ಲಾ ಮೇಲುಡುಪು, ಒಳಉಡುಪುಗಳ ರಾಶಿ. ಅವಿವಾಹಿತರಿಗೆ ಕೊಟ್ಟರೆ ಇದಕ್ಕಿಂತ ಹೆಚ್ಚಿಗೆ ನಿರೀಕ್ಷಿಸುವಂತಿಲ್ಲ. ಸದ್ಯ ಇಷ್ಟಾದರೂ

ನೋಡಿಕೊಂಡಿದ್ದಾರೆಂಬ ಸಮಾಧಾನ. ಆ ಹುಡುಗರ ಮಧ್ಯೆ ಉಳಿಯಲಾಗದೆ ಎರಡು ದಿನಗಳೂ ಹೋಟೆಲ್‌ನಲ್ಲಿ ವಾಸ್ತವ್ಯ.

ಬಟ್ಟೆ ಕಂಪನಿ ಈಗಲೂ ತೆರೆಯುವ ಲಕ್ಷಣದಲ್ಲಿಲ್ಲ. ಮ್ಯಾನೇಜರ್ ಯಾರಿಗೂ ಕಾಣಲು ಸಿಗುವುದಿಲ್ಲವಂತೆ. ಪ್ರತಿದಿನ ಕಾರ್ಮಿಕರ ದೊಡ್ಡ ಗುಂಪು ಕಂಪನಿ ಮುಂದೆ ಕಾಯುತ್ತದೆ, ಹೋಗುತ್ತದೆ. ದೊಡ್ಡ ದೊಡ್ಡ ಬ್ಯಾನರು ಹಾಕಿದ್ದಾರೆ ಇಂಗ್ಲಿಷ್‌ನಲ್ಲಿ, ಹಿಂದಿಯಲ್ಲಿ, "ನಮ್ಮ ಅನ್ನಕ್ಕೆ ಕಲ್ಲುಹಾಕಬೇಡಿ!" "ಧಿಕ್ಕಾರ ! ಕಾರ್ಮಿಕರ ಶೋಷಣೆಗೆ ಧಿಕ್ಕಾರ !" ನಿಖಿಲನನ್ನು ಅವನ ಮನೆಯಲ್ಲೇ ಭೇಟಿಯಾದ ನರಹರಿ ಅವನ ದಾರುಣ ಸ್ಥಿತಿಗೆ ಮೂಕಪ್ರೇಕ್ಷಕನಾದ. ಈ ದಿನಗಳಲ್ಲಿ ತುಂಬಾ ಇಳಿದುಹೋಗಿದ್ದ ನಿಖಿಲ. ಮುದುಕ ತಂದೆ, ರೋಗಿಷ್ಠ ತಾಯಿ, ಮದುವೆಗಿರುವ ತಂಗಿಯರ ಮಧ್ಯೆ ಅವನ ಪರಿಸ್ಥಿತಿ ಶೋಚನೀಯ. "ಒಂದು ಗುಟುಕು ವಿಷ ಕುಡಿದು ಪ್ರಾಣ ಬಿಡುತ್ತೇನೆ ಎಂದರೂ ನನ್ನ ಸುತ್ತಲಿನ ಬಂಧನಗಳು ನನ್ನನ್ನು ಬಿಡುತ್ತಾ ಇಲ್ಲ. ಅವರಿಗೆಲ್ಲ ನೋವು ಕೊಟ್ಟು ನಾ ಸಾಯಲೇ ?"—ಕೇಳಿದ ರೋಷದಲ್ಲಿ. ಆಮೇಲೆ "ಒಂದು ನೂರು ಇದ್ದರೆ ಕೊಡುತ್ತೀಯಾ ? ನಿನ್ನ ಹೆಸರು ಹೇಳಿ ಪಾಯಸ ಮಾಡಿ ತಿನ್ನೇನೆ" ಎಂದ. ಮಾತಿಲ್ಲದೆ ನರಹರಿ ತೆಗೆದುಕೊಟ್ಟ.

ನರಹರಿಯ ಹೆಚ್ಚಿನ ಸ್ನೇಹಿತರ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಕೆಲವರು ತಮ್ಮ ಮನೆಯಿಂದಲೋ, ಸ್ನೇಹಿತರಿಂದಲೋ ಹಣ ತರಿಸಿಕೊಂಡು ಕಾಲ ತಳ್ಳುತ್ತಿದ್ದಾರೆ ಆಶಾವಾದದಲ್ಲಿ. ಕೆಲವು ಅದೃಷ್ಟವಂತರು ಬೇರೆ ಕಂಪನಿ ಅರಸಿ ಹೋಗಿದ್ದಾರೆ. ಅಲಕಾ ಬರುವಾಗಲೇ ಅಂದಿದ್ದಳು, "ನವರಾತ್ರಿ ಕಳೆದ ಮೇಲೆ ಕಷ್ಟವೋ ಸುಖವೋ ನಾವು ಔರಂಗಾಬಾದಿನಲ್ಲೇ ಇರೋಣ, ಆ ಹುಡುಗರಿಗೆ ಮನೆ ಖಾಲಿ ಮಾಡಲು ಹೇಳಿ." ಆದರೆ ಇಲ್ಲಿ ನಿಖಿಲನ ಸ್ಥಿತಿ ನೋಡಿದಮೇಲೆ ಬಂದುಳಿಯುವ ಮಾತು ಗಂಟಲಲ್ಲೇ ಹೂತುಹೋಯಿತು.

ಮಕ್ಕಳಿಗೆ ರಜೆ ಸಿಕ್ಕಿತು. ಅವರೊಡನೆ ದೊಡ್ಡಕಾಡಿಗೆ ಹಿಂತಿರುಗಿ ಹಲ್ಲರ್‌ನ ಕೆಲಸ ಕೈಗೆತ್ತಿಕೊಂಡಾಗ ನಿಜವಾಗಿಯೂ ಅಂದು ತನ್ನ ಮನೆದೇವಿಯ ಮೇಲೆ ನಂಬಿಕೆ ಬಂದದ್ದು ! ಸದ್ಯ, ತನ್ನ ಬದುಕಿಗೊಂದು ಅರ್ಥವಿದೆ !

ಮೊದಲೇ ತಿಳಿಸಿದಂತೆ ನವರಾತ್ರಿಗೆ ಬರಲಿಲ್ಲ ಮಾಧವನ ಸಂಸಾರ. ನರಹರಿಯ ಮಕ್ಕಳದೇ ಕಾರುಬಾರು, ಗಲಾಟೆ, ಕೋಲಾಹಲ. ಮೊದಲಿನಿಂದಲೂ

ಅವರಿಗೆ ಅಜ್ಜ ಮನೆಯೆಂದರೆ ಸಾಕು, ಬಾಲ ಇಲ್ಲದ ಕಪಿಗಳು. ವಿಜಯ ಹತ್ತಿರದ ಕೆರೆಯೊಳಲ್ಲಿರುತ್ತಾಳೆ ದಿನವೆಲ್ಲ. ಈಜು ಪಂಚಪ್ರಾಣ ಅವಳಿಗೆ. ಸುಹಾಸ ಕಾಡಿನಲ್ಲಿ ಗಿಡಗಳೆಷ್ಟು ಎಂದು ಲೆಕ್ಕ ಹಾಕಲು ಹೊರಡುತ್ತಾನೆ. ದೇವರಿಗೆ ಹೂವು, ತುಳಸಿ ಕೊಯ್ಯುವುದು, ಮಾಲೆ ಕಟ್ಟುವುದು, ತೋರಣ ಶೃಂಗರಿಸುವುದು, ಎಲ್ಲಾ ಈ ಮಕ್ಕಳೇ. ರಾತ್ರಿ ರಂಗೋಲಿ ಕೆಲಸ ವಿಜಯಳದು. ಆರತಿ ಹೊತ್ತಿಗೆ ಸುಶ್ರಾವ್ಯವಾಗಿ ಕೊಳಲು ಬಾರಿಸುತ್ತಾನೆ ಸುಹಾಸ. ಅದು ಅವನ ಪ್ರೀತಿಯ ಕಲಿಕೆ. ಶಂಕರಯ್ಯನವರಿಗೆ ದಿನವೆಲ್ಲ ಉಪವಾಸ, ಪಾರಾಯಣ, ದೇವೀಸ್ತೋತ್ರ ಪಠಣ. ರಾತ್ರಿ ಊಟಕ್ಕೆ ಹತ್ತಿರದ ಕೆಲವು ಬ್ರಾಹ್ಮಣರು ಬರುತ್ತಾರೆ. ಈ ಒಂಬತ್ತು ದಿನಗಳೂ ಶಂಕರಯ್ಯ ಹೊರಗೆಲ್ಲೂ ಹೋಗುವುದಿಲ್ಲ. ಅವರನ್ನು ಹುಡುಕಿಕೊಂಡು ಜನರು ಬರಬೇಕು ಮನೆಗೆ.

ಆ ದಿನ ನಾಲ್ಕನೆಯ ಪೂಜೆ. ಶಂಕರಯ್ಯ ಸ್ನಾನ ಮಾಡಿ ಮಡಿಯುಟ್ಟು ಪಾರಾಯಣಕ್ಕೆ ಕುಳಿತಿದ್ದರಷ್ಟೆ, ಚಾಮುಕ್ಕಿಯ ಮಗ ಶಿವು ಓಡಿಬಂದು, "ಅಯ್ಯನೋರು ಇದ್ದಾರಾ ? ಈಗಲೇ ನಮ್ಮ ಮನೆಗೆ ಬರಬೇಕಂತೆ" ಎಂದ.

ಏನೋ ಆಗಬಾರದ್ದು ನಡೆದಿರಬೇಕು. ಪಂಚಾಯ್ತಿಯೋ ಇನ್ನೇನೋ ಇರಬೇಕು, ಅದಕ್ಕೇ ತುರ್ತು ಕರೆ. ಇಲ್ಲಿ ಪೋಲೀಸ್ ಸ್ಟೇಶನ್ ಇಲ್ಲ. ಯಾವ ತಕರಾರು, ಜಗಳ ಬಂದರೂ ಊರ ಹಿರಿಯರ ಮತ್ತು ಆಯಾ ಜನಾಂಗದ ಗುರಿಕಾರರು ವಿಚಾರವಿನಿಮಯ ಮಾಡಿ ತೀರಿಸಿಕೊಳ್ಳುವುದು ವಾಡಿಕೆ. ಹಾಗೆ ತೀರಿಸಿಕೊಳ್ಳುವ ಮುನ್ನ ಸಾಮಾನ್ಯವಾಗಿ ಎಲ್ಲರೂ ಶಂಕರಯ್ಯನವರ ಬಳಿ ಸಲಹೆ ಕೇಳಲು ಬರುತ್ತಾರೆ. ಅವರು ಹೇಳಿದ ಅಭಿಪ್ರಾಯದ ಮೇಲೆ ಮುಂದಿನ ಕ್ರಮ. ಈಗ ನವರಾತ್ರಿ ದಿನಗಳು. ಶಂಕರಯ್ಯ ಎಲ್ಲಿಗೂ ಬರುವುದಿಲ್ಲವೆಂದು ತಿಳಿಸಿದ್ದರೂ ಪರಿಸ್ಥಿತಿ ಬಿಗಡಾಯಿಸಿದ ಕಾರಣ ಓಡಿ ಬಂದಿದ್ದಾನೆ ಶಿವು. ಆದರೆ ಶಂಕರಯ್ಯ ಪಾರಾಯಣಕ್ಕೆ ಕುಳಿತಾಗಿದೆ, ಅರ್ಧದಿಂದ ಏಳುವಂತಿಲ್ಲ. ಅವರು ನರಹರಿಯನ್ನು ಕರೆದು,

"ಏನೋ ಅವರೊಳಗೆ ಬಗೆಹರಿಯದ ಜಗಳ ಎದ್ದಾಗಿರಬೇಕು. ಹೋಗಿ ನೋಡಿ, ಕೇಳಿ ಬಾ. ದುಡುಕಿ ಮಾತನಾಡಿಯ, ಜೋಕೆ !" ಎಂದರು.

ಬೇರೆಯವರ ಜಗಳದಲ್ಲಿ ತಾನು ಮಧ್ಯಸ್ಥಿಕೆ ವಹಿಸುವುದು ಒಳಿತಲ್ಲ ಎಂದು ನರಹರಿಯ ಪ್ರಜ್ಞೆಗೆ ಅನಿಸಿದರೂ ತಂದೆ ಈ ಕೆಲಸ ವಹಿಸಿದಮೇಲೆ ಬೇರೆ ಮಾತುಂಟೇ ? ಉತ್ಸಾಹ ಗರಿಗೆದರಿತು. ಚಾಮುಕ್ಕಿಯ ಮನೆಗೆ ಅಲ್ಲಿಂದ ಒಂದು ಮೈಲು ದೂರ. ಶಾಲೆಗೆ ಹೋಗುವ ಗುಡ್ಡವೇರಿ ಎಡಕ್ಕೆ ತಿರುಗಿ

ಸಾಗುವ ಗದ್ದೆಹುಣಿಯಲ್ಲಿ ನಡೆದು ಒಂದು ಸಣ್ಣ ತೋಡು ದಾಟಬೇಕು. ಶಿವು ಜೊತೆಯಲ್ಲಿ ಅಲ್ಲಿಗೆ ಹೋದಾಗ ಜನರ ಗಲಾಟೆ ಮಾರಾಮಾರಿ ಕೇಳುವಷ್ಟು ಸ್ಥಾಯಿಗೇರಿದೆ. ಚಾಮುಕ್ಕಿಯ ಮುಳಿಹುಲ್ಲಿನ ಮನೆ ಮುಂದೆ ಸೇರಿದ್ದಾರೆ ಹತ್ತಿಪ್ಪತ್ತು ಮಂದಿ. ಎಲ್ಲಾ ಕೆಳವರ್ಗದವರು. ಚಾಮುಕ್ಕಿಯ ಗಂಡ ಲಕ್ಷ್ಮಣ, ಮಗ ಶಂಭು, ಪಾಲಗದ ಮನೆ ಮುದುಕ ನರಸ, ಅವನ ಹರೆಯದ ಮಗ ಸುಬ್ಬು, ಗುರಿಕಾರ ಸೋಂಪ, ಗುಡಿಗಾರ ಮನೆಯ ಅನಂತು, ಇನ್ನೂ ಹಲವರ ಬಾಯಿ ಏರುತ್ತಿದೆ. ಗುಡಿಸಲ ಬಾಗಿಲ ಬಳಿ ಚಾಮುಕ್ಕಿಯ ಹದಿಹರೆಯದ ಹುಡುಗಿ ಗೌರಿ ತಲೆ ತಗ್ಗಿಸಿ ನಿಂತಿದ್ದಾಳೆ. ಇಡೀ ಗಲಾಟೆಯ ಕೇಂದ್ರ ಇವಳೇ ಎಂದು ನೋಡಿದಾಕ್ಷಣ ತಿಳಿದುಹೋಯಿತು. ಇವರೆಲ್ಲರ ಮಧ್ಯೆ ಇನ್ನೂ ಒಬ್ಬ ನಿದ್ದ. ಅವ ಚಾಮುಕ್ಕಿಯ ತಂಗಿ ಮಗ ತ್ಯಾಂಪ. ಅವನು ಕುಡಿದು ಬಂದಿದ್ದನೋ, ಕೂಗಾಟದಿಂದಲೋ ತಿಳಿಯದು, ಕಣ್ಣುಗಳು ಕೆಂಪಾಗಿವೆ. ಭೂತ ಹಿಡಿದವನಂತೆ ಥರಗುಡುತ್ತಿದ್ದಾನೆ ಸಿಟ್ಟಿನಲ್ಲಿ.

ತಮ್ಮ ಅಹವಾಲು ಕೇಳಲು ಶಂಕರಯ್ಯನವರ ಬದಲು ಅವರ ಮಗ ಬಂದದ್ದು ಹಿತವೆನಿಸಲಿಲ್ಲ ಯಾರಿಗೂ. ಅವರ ಮನೆಗೇ ಹೋಗೋಣ ಎಂದರು ಇನ್ನಾರೋ. "ಇವರಿಗೆಂತ ವಿದ್ಯೆ ಇಲ್ಲಾ? ಪಟ್ಟಣ ಕಂಡವರಲ್ವ? ನಿಲ್ಲಿ ಕಾಂಬ. ಎಲ್ಲಾ ಚೌಕಾಶಿ ಮಾಡ್ತ್ರು."—ಮುದುಕ ನರಸ ಸಮಾಧಾನ ಹೇಳಿದ ಎಲ್ಲರಿಗೂ.

ಅಲ್ಲಿ ನಡೆದ ವಿಷಯ ಇಷ್ಟೇ. ನೆರೆ ಹಳ್ಳಿಯ ತ್ಯಾಂಪ ಬಾಲ್ಯದಿಂದ ಚಾಮುಕ್ಕಿ ಮನೆಗೆ ಬಂದು ಹೋಗುತ್ತಿದ್ದವ. ತಾಯಿಯಷ್ಟೇ ಸಲುಗೆಯಿತ್ತು ಚಾಮುಕ್ಕಿಯೊಡನೆ. ಗೌರಿಗೂ ಅವನಿಗೂ ಕೇವಲ ಎರಡು ವರ್ಷಗಳ ಅಂತರ. ಅವರಲ್ಲಿ ಅಣ್ಣತಂಗಿಗಿಂತಲೂ ಮಿಗಿಲಾದ ಅನ್ಯೋನ್ಯತೆ, ಸಲುಗೆ ಭಾವ. ಚಾಮುಕ್ಕಿ ಅಪಾರ್ಥ ಕಲ್ಪಿಸಿಕೊಳ್ಳಲೂ ಇಲ್ಲ. ಪ್ರಾಯ ಬಂದಮೇಲೆ ತ್ಯಾಂಪ ಬರುವುದು ಹೆಚ್ಚಿತು. ಗೌರಿ ಅವನೊಂದಿಗೆ ಓಡಾಡುವುದು ಹೆಚ್ಚಿತು. ಮಗಳನ್ನು ಅವನಿಗೇ ಕೊಟ್ಟು ಮದುವೆ ಮಾಡುವುದೇ ? ಅಥವ ಬೇರೆ ಸಂಬಂಧ ನೋಡಲೇ ಎಂಬ ಸಂದಿಗ್ಧದಲ್ಲಿದ್ದಾಗಲೇ ಆಗಬಾರದ ಅನಾಹುತ ನಡೆದು ಚಾಮುಕ್ಕಿಗೆ ದಿಗ್ಭ್ರಮೆ. ಕೊಟ್ಟ ಸಲಿಗೆಯು ದುರುಪಯೋಗವಾಗಿತ್ತು. ಗೌರಿ ಮೂರು ತಿಂಗಳ ಬಸುರಿ ! "ನಾ ಮಂದಿ ಆದರೆ ಅವನನ್ನೇ, ಬೇರೆ ಯಾರನ್ನೂ ಅಲ್ಲ. ಅವನೂ ನನ್ನನ್ನು ಮಂದಿ ಆಗ್ತೆ ಅಂದ" ಎಂದಳು ದಿಟ್ಟಳಾಗಿ.

"ಮತ್ತೆ ಇದೆಂತ ಹೊಲಸು ? ಎಂತ ಮಾಡ್ಕಂಡೆ ?"

"ಹೊಲಸೆಂತ ? ನಾವಿಬ್ಬರೂ ಕೂಡದೋ. ಅದು ತಪ್ಪಾಯ್ತು. ನಂಗೆ ತಿಳೀಲಿಲ್ಲ."

ಚಾಮಕ್ಕ ಲಬೋ ಲಬೋ ಎಂದಳು. ಲಕ್ಷ್ಮಣ ಎದೆ ಚಚ್ಚಿಕೊಂಡ. ಸರಿ. ತ್ಯಾಂಪನಿಗೆ ಹೇಳಿಕಳುಹಿಸಿ ಬರಮಾಡಿದರೆ ಅವನು ಗೌರಿಯನ್ನು ಕಣ್ಣೆತ್ತಿಯೂ ನೋಡದೆ, "ನಂಗೇನೂ ತಿಳೀದು" ಎಂದುಬಿಟ್ಟ. ಅವನು ಹಾಗೆ ಹೇಳಬಹುದೆಂಬ ನಿರೀಕ್ಷೆಯಿಂದಲೇ ಲಕ್ಷ್ಮಣ ತನ್ನ ಕಡೆಯ ಹಲವರನ್ನು ಇವತ್ತು ಒಟ್ಟುಗೂಡಿಸಿದ್ದ ಇಲ್ಲಿ. ತೀರ್ಮಾನ ಎಲ್ಲರೆದುರು ಆಗಲೇಬೇಕಿತ್ತು. ಆದರೆ ಆಗುವ ಲಕ್ಷಣ ಕಾಣಲಿಲ್ಲ. ತ್ಯಾಂಪ ತಾನು ಗೌರಿಯನ್ನು ಬಸುರಿ ಮಾಡಿದ್ದು ಅಲ್ಲವೆಂದು ಸಾಧಿಸುತ್ತಲೇ ಇದ್ದಾನೆ. ಅವನಿಗೆ ಈಗಾಗಲೇ ಮನೆಯಲ್ಲಿ ಮದುವೆ ಪ್ರಯತ್ನ ನಡೆದಿದ್ದು, ವರದಕ್ಷಿಣೆ ತರುವ ಹುಡುಗಿಯೊಡನೆ ಸಂಬಂಧ ಕುದುರಿಸುತ್ತಿದ್ದಾರೆ ಅವನ ತಂದೆತಾಯಿ. ಹುಡುಗಿಯನ್ನು ನೋಡಿಯಾಗಿದೆ. ಗೌರಿಯಷ್ಟು ರೂಪವತಿ ಅಲ್ಲದಿದ್ದರೂ ಅವರು ತರುವ ಹಣವೆಲ್ಲಿ ? ಈ ಬಡ ಗೌರಿ ಎಲ್ಲಿ ? ಗೌರಿ ಯಾರಿಂದಲೋ ಬಸುರಿಯಾಗಿ ತನ್ನತ್ತ ಬೊಟ್ಟುಮಾಡಿದ್ದಾಳೆ. ಇಂಥವಳನ್ನು ತನಗೆ ಗಂಟುಹಾಕುವ ಹಿರಿಯರ ದುರಾಲೋಚನೆಗೆ ಕಿಡಿ ಹಾಯ್ದು ಅವನದು ಒಂದೇ ಮಾತು, "ಗೌರಿಯನ್ನು ನಾ ಮುಟ್ಟಿ ಕಾಣ್ಲಿಲ್ಲ. ಅವಳ ಸೆರಗಿಗೆ ಕೈಹಚ್ಚಿಲ್ಲ. ಯಾರಿಂದ ಹಿಂಗಾತು ಅಂತ ಸಮಾ ವಿಚಾರಿಸಿಕಳ್ಳಿ. ನನ್ನ ಕಥಿ ಇದಲ್ಲ."

"ಇನ್ಯಾರದೋ ಸಂಗಡ ಮಲಕ್ಕಂಡು ನಿನ್ನ ಮೇಲೆ ದೂರು ಹಾಕ್ತಾಳಾ?" —ಚಾಮಕ್ಕ ಅಬ್ಬರಿಸಿದಳು ಸಿಟ್ಟಿನಲ್ಲಿ. "ನನ್ನ ಮಗಳು ಅಂತವಳಲ್ಲ. ಗನಾ ಮಾತ್ನಲ್ಲಿ ಹೇಳ್ತಿ, ಏನೋ ಇಬ್ಬರಲ್ಲೂ ಸಂಬಂಧ ಆಗ್ಹೋತು. ಈಗ ಇದ್ದ ಪ್ರಶ್ನೆ ಮದಿ ಅಪದು. ಬೇಗ ಮದಿ ಮಾಡ್ಕಂಡರೆ ಎಲ್ಲಾ ಮುಗೀತು."

ನರಹರಿಯೂ ಅನುಮೋದಿಸಿದ ಈ ಮಾತನ್ನು. "ಒಂದು ಹೆಣ್ಣನ್ನು ನಂಬಿಸಿ, ಕೆಡಿಸಿ ಕೈಬಿಡಬಾರದು. ನೀವು ಒಬ್ಬರನ್ನೊಬ್ಬರು ಮೆಚ್ಚಿದ್ದೀರಿ. ಮತ್ತೇನು, ಬೇಗ ಮದುವೆ ಮಾಡಿಕೋ. ಯಾವ ಪ್ರಶ್ನೆಯೂ ಇಲ್ಲ."

"ಪ್ರಶ್ನೆ ನಿಮಗಿಲ್ಲ ಭಟ್ಟರೇ ನನಗೆ !" ಗುಡುಗಿದ ತ್ಯಾಂಪ. "ಈ ಲೌಡಿಯನ್ನು ನಾನ್ಯಾಕೆ ಮದಿ ಆಗಲಿ ? ಊರಲ್ಲಿ ಕಾಡಲ್ಲಿ ಪೋಲೀ ದನದ್ಹಾಂಗೆ ತಿರುಗಿ ಯಾರಿಗೆ ಬಸುರಾದಳೋ. ಅವನನ್ನೇ ಕರೆಯಿಸಿ ಅವನ ಕುತ್ತಿಗೆಗೆ ಕಟ್ಟಿ. ನಂಗ್ಯಾಕೆ ಈ ಉರುಳು ?"

ನರಹರಿಯ ದೃಷ್ಟಿ ಹೊರಳಿತು ಗೌರಿಯತ್ತ. ಅವಳು ಎರಡೂ ಕೈ

ಜೋಡಿಸಿ ಹಲುಂಬಿಕೊಂಡಳು. "ನಾ ಇವನ ಹೊರತಾಗಿ ಬೇರೆ ಯಾರನ್ನೂ ಕಾಣೆ ಅಯ್ಯ, ಶಿವನಾಣೆ ! ಆ ದೇವಸ್ಥಾನದ ಈಶ್ವರನಾಣೆ !!"

ನರಹರಿ ತ್ಯಾಂಪನತ್ತ ದೃಷ್ಟಿ ಹೊರಳಿಸಿದ. ಅವನು ಗೌರಿಯನ್ನು ನುಂಗುವಂತೆ ನೋಡುತ್ತಿದ್ದ. "ಶಿವನಾಣೆ ಹಾಕಿದ ಕೂಡಲೇ ಎಲ್ಲರೂ ನಂಬುತ್ತಾರೇನೇ ! ನಿನ್ನ ಹಾಗೆ ನಾನೂ ಆಣೆ ಹಾಕ್ತೇನೆ !"

"ನೀನೂ ಆಣೆ ಹಾಕ್ತೀಯಾ ?" ನರಹರಿಗೆ ಮಿಂಚಿನಂತೆ ಮೂಡಿತು ಒಂದು ಉಪಾಯ. ಅವನು ಅಲ್ಲೇ ಬೆಳೆದಿದ್ದ ಒಂದು ಕಾಡುಹೂವನ್ನು ಕೊಯ್ದು ಒಂದು ಕಲ್ಲಿನ ಮೇಲಿಟ್ಟು ಅಲ್ಲಿ ಸೇರಿದ ಜನರತ್ತ ಹೊರಳಿದ : "ಈ ಹೂವು ಮುಟ್ಟಿ ತ್ಯಾಂಪ ನಿಜಸಂಗತಿ ಹೇಳಬೇಕು—ಗೌರಿಯ ಸ್ಥಿತಿಗೆ ತಾನು ಕಾರಣ ಹೌದು, ಅಥವಾ ಅಲ್ಲ. ನಿಮಗೆ ಇದು ಒಪ್ಪಿಗೆಯೇ ?"

ಜನರಲ್ಲಿ ಗುಸುಗುಸು ಎದ್ದಿತು. ಕಾಡುಹೂವು ಮುಟ್ಟಿ ಶಿವನಾಣೆ ಹಾಕಬೇಕು. ಆ ಹೂವನ್ನು ನರಹರಿ ದೇವಾಲಯಕ್ಕೆ ಒಪ್ಪಿಸುತ್ತಾನಂತೆ. ತ್ಯಾಂಪ ತನ್ನ ಅಪರಾಧದಿಂದ ನುಣುಚಿಕೊಳ್ಳಲು ಸುಳ್ಳು ಆಣೆ ಮಾಡಲು ಹಿಂಜರಿಯಲಾರ. ಇದಕ್ಕಿಂತ ಬೇರೆ ಸವಾಲು ಹಾಕಬಹುದಿತ್ತು.

ಮಾಲಗದ ಸುಬ್ಬು ಹುಬ್ಬೇರಿಸಿದ. ಅವನಿಗೆ ಹೂವಿನ ಮೇಲೆ ನಂಬಿಕೆಯಿಲ್ಲ. ಆಣೆ–ಪ್ರಮಾಣದ ಮೇಲೆಯೂ ನಂಬಿಕೆಯಿಲ್ಲ. ತ್ಯಾಂಪ ತಪ್ಪು ಮಾಡಿದ್ದಾನೋ ಇಲ್ಲವೋ ತಿಳಿಯದು. ಅವನಿಂದ ಹೀಗೆ ಪ್ರಮಾಣ ಮಾಡಿಸುವುದು ಎಷ್ಟು ಸರಿ ? ಇದೇ ತ್ಯಾಂಪ ಪ್ರತಿ ಶಿವರಾತ್ರಿಯಂದು ಉಪವಾಸವಿದ್ದು ಶಿವಾಲಯಕ್ಕೆ ಎಣ್ಣೆ–ತೆಂಗಿನಕಾಯಿ ತಂದೊಪ್ಪಿಸಿ ಭಕ್ತಿಯಿಂದ ಪ್ರಸಾದ ಸ್ವೀಕರಿಸುತ್ತಾನೆ. ಆಗಾಗ ಪೂಜೆ ಮಾಡಿಸುತ್ತಾನೆ. ತಪ್ಪು ಮಾಡಿರದಿದ್ದರೂ ತಾನು ನಂಬಿದ ದೇವರೆದುರು ಪ್ರಮಾಣ ಹಾಕಲಾರ. ಶಿವದೇವಾಲಯದಲ್ಲಿ ತನ್ನಂತೆ ಅವನಿಗೂ ನಾಗಸ್ವರ ಬಾರಿಸುವ ಆಸೆ. "ನನಗೂ ಹೇಳಿಕೊಡ್ತೀಯಾ?" ಚಿಕ್ಕವನಿದ್ದಾಗ ಕೇಳಿದ್ದ ತನ್ನನ್ನು. ಇರುವುದು ನೆರೆಗ್ರಾಮವಾದರೂ ಬಂದು ಕಲೀತೇನೆ ಎಂದಿದ್ದ. ನಾಗಸ್ವರ ಬಾರಿಸುವುದು ಬಾಳೆಹಣ್ಣು ತಿಂದಷ್ಟು ಸುಲಭವೇ. ತನಗಾದರೆ ವಂಶಪಾರಂಪರೆಯಿಂದ ಬಂದದ್ದು. ನಾಗಸ್ವರ ಬಾರಿಸುವುದೇ ತನ್ನ ಹೊಟ್ಟೆಪಾಡು. ಆದರೂ ಹುಡುಗ ಕಲಿಯುವ ಆಸೆಯಿಂದ ಬರುತ್ತಾನೆಂದು ಒಪ್ಪಿ ಹೇಳಿಕೊಟ್ಟಿದ್ದ ಕೆಲವು ಸಮಯ. ಆದರೆ ತ್ಯಾಂಪನಿಗೆ ಅವರಿಂದ ಸ್ವರ ಹೋಗಲಿ, ಉಸಿರೂ ಹೊರಬೀಳದೆ ಬರೀಒದ್ದಾಟ. "ಶಿವ ನಿನ್ನ ಉಸಿರಿನಲ್ಲಿ ಶಕ್ತಿ ತುಂಬಿದಾನಪ್ಪೋ, ನೀ ಪುಣ್ಯಾತ್ಮ. ದೇವರ

ಮುಂದೆ ಬಾರಿಸುವ ಪುಣ್ಯ ಪಡೆದಿದ್ದೀ'' ಎಂದವ ಮತ್ತೆ ಕಲಿಯುವ ಉತ್ಸಾಹ ತೋರಿಸಲಿಲ್ಲ.

ಆದರೆ ತಾನು ಶಿವದೇವಾಲಯದಲ್ಲಿ ನಾಗಸ್ವರ ಬಾರಿಸದೆ ನಾಲ್ಕು ವರ್ಷಗಳು ಕಳೆದುಹೋದುವು ಎನ್ನುವುದು ನೆನಪಾಗಿ ಸುಬ್ಬುವಿನ ಮನಸ್ಸು ಮುದುಡಿತು ಅರೆಗಳಿಗೆ ಹೊತ್ತು. 'ದೇವರು ಕೊಟ್ಟರೂ ಪೂಜಾರಿ ಬಿಡ' ಎಂಬಂತಾಗಿದೆ ತನ್ನ ಸ್ಥಿತಿ. ಅರ್ಚಕ ಶೀನಪ್ಪಯ್ಯನವರಿಗೆ ಯಾಕೆ ಇಷ್ಟು ಸೊಕ್ಕು ? ಅವರಿಗೆ ಇದು ಲೋಪ ಎನಿಸಲೇ ಇಲ್ಲ. ಮುಹಂತಯ್ಯನವರು, ಈ ನರಹರಿ ಅಪ್ಪ, ಅರ್ಚಕರು, ಎಲ್ಲರೂ ಕೇವಲ ಸ್ವಾರ್ಥಿಗಳು....

ಯೋಚಿಸುತ್ತಿದ್ದಂತೆ ಸುಬ್ಬುವಿನ ಮೈ ಬೆವರಿತು. ನರಹರಿ ಜನರನ್ನು ಉದ್ದೇಶಿಸಿ ಹೇಳುತ್ತಿದ್ದಾನೆ: ''ಈ ಹೂವು ದೇವಾಲಯಕ್ಕೆ ಹೋಗುತ್ತದೆ ಅಂದೆನಲ್ಲ. ನಾನೂ ನೀವೂ ಯಾವ ತೀರ್ಮಾನ ಮಾಡಿದರೂ ತ್ಯಾಂಪನಿಗೆ ಸರಿಹೋಗುತ್ತಿಲ್ಲ, ದೇವರೇ ನೋಡಿಕೊಳ್ಳುತ್ತಾನೆ. ನಿಜ ಸಂಗತಿ ಹೇಳಿ ಹೂವು ಮುಟ್ಟಲಿ !''

ತ್ಯಾಂಪ ಏನೂ ಹೇಳದೆ ನರಹರಿಯ ಮಾತಿಗೆ ತಲೆದೂಗಿದ. ತನ್ನ ಜನರನ್ನೊಮ್ಮೆ ತೀಕ್ಷ್ಣವಾಗಿ ನೋಡಿದ. ನಿಜಸಂಗತಿ ಹೇಳಲೇಬೇಕು ! ಈ ಕಾಡು ಹೂವಿನಲ್ಲಿ ಶಿವದೇವಾಲಯದ ಆ ಈಶ್ವರಲಿಂಗ ಜೀವ ತಳೆಯುತ್ತದೆಯೋ ? ಎಲ್ಲೋ ಹುಚ್ಚು ! ಅವನು ಮುಂದೆ ಬಂದು ನೆಲಕ್ಕೆ ಬಗ್ಗಿ ಹೂವು ಮುಟ್ಟಿ, ''ಗೌರಿ ಸ್ಥಿತಿಗೆ ನಾನು ಕಾರಣನಲ್ಲ !'' ಎಂದಷ್ಟೇ ಗುಡುಗಿ ನರಹರಿಯನ್ನು ಆಪಾದಮಸ್ತಕ ದಿಟ್ಟಿಸಿ, ''ನಾಳೆ ನಿಮ್ಮನ್ನು ನೋಡಿಕೊಳ್ತೇನೆ. ಸಿಗ್ತೀರಲ್ಲ'' ಎಂದು ಹೊರಟುಹೋದ ಬಿರುಗಾಳಿಯಂತೆ.

ಸ್ವಲ್ಪ ಪೆಚ್ಚಾದರೂ ತೋರ್ಪಡಿಸದೆ ನರಹರಿ ಗೌರಿಯನ್ನು ಕರೆದ. ಈಗ ಅವಳು ಪ್ರಮಾಣ ಮಾಡಬೇಕಿತ್ತು, ತ್ಯಾಂಪನಿಂದಲೇ ತನಗೆ ಹೀಗಾಯಿತು ಎಂದು. ಆದರೆ ಅದೇಕೋ ಗೌರಿ ಬಿಕ್ಕಳಿಸಿದಳು ಜೋರಾಗಿ. ಹೋಗುತ್ತಿದ್ದ ತ್ಯಾಂಪನ ಬೆನ್ನನ್ನು ನೋಡುತ್ತಾ, ಮುಖ ಮುಚ್ಚಿಕೊಂಡು, ಮತ್ತೊಂದು ನಿಮಿಷ ಅಲ್ಲಿ ನಿಲ್ಲದೆ ಗುಡಿಸಲಿನೊಳಗೆ ಕಣ್ಮರೆಯಾದಳು.

ಎಲ್ಲರಿಗೂ ಅರ್ಥವಾಯಿತು, ತಪ್ಪು ಗೌರಿಯದೇ. ಆದರೆ ನರಹರಿ ಅನುಮಾನದಲ್ಲಿ ಅಂದ. ''ಗೌರಿ ತ್ಯಾಂಪನನ್ನು ರಕ್ಷಿಸಲು ಪ್ರಮಾಣ ಮಾಡದೆ ಒಳಗೋಡಿದ್ದಾಳೆ. ತಪ್ಪು ಅವನದೇ !''

''ದೇವರ ಹೆಸರಿನಲ್ಲಿ ಅವನ್ಯಾಕೆ ಸುಳ್ಳು ಹೇಳ್ತ ? ಚಾಮುಕ್ಕೆ ಮಂಗಳ

ನಮ್ಮನ್ನೇ ಹೆಡ್ಡು ಮಾಡ್ತಳೆ. ನಾವು ಹೆಡ್ಡು ಆದ್ರೋ. ನಡೀರಿ. ಹೋಪಾ."

ಅವರೆಲ್ಲ ಹೋಗುವುದನ್ನು ನೋಡುತ್ತ ಗೋಳಾಡಿದಳು ಚಾಮುಕ್ಕೆ. "ಇನ್ನೆಂತ ಮಾಡಲಿ ಅಯ್ಯ, ಈ ಶೀಲಗೆಟ್ಟವಳ್ನ ನಾ ಎಂತ ಮಾಡ್ಲಿ ಇನ್ನು?"

"ಒಂದು ನಾಲ್ಕು ದಿನ ಕಳೆಯಲಿ" —ಸಮಾಧಾನ ಹೇಳಿದ ನರಹರಿ. "ತ್ಯಾಂಪ ತಪ್ಪು ಮಾಡಿದ್ದರೆ ಇತ್ತ ಬಂದೇ ಬರ್ತ್ತಾನೆ. ನಿರೀಕ್ಷೆ ಮಾಡ್ತಾ ಇರು. ಧೈರ್ಯಕ್ಕೆ ನಾನಿದ್ದೇನೆ."

"ನೀನಿದ್ದೀಯ ಧೈರ್ಯಕ್ಕೆ?" ರಾತ್ರಿ ಊಟದ ನಂತರ ನೆರೆಹೊರೆ ಬ್ರಾಹ್ಮಣರು ಹೊರಟುಹೋದ ಮೇಲೆ ಸಿಡಿಲಿನಂತೆ ಗುಡುಗಿದರು ಶಂಕರಯ್ಯ. "ನೀನಿದ್ದೀಯ ಧೈರ್ಯಕ್ಕೆ?' ಏನೋ ಅವರು ಕರೆದರೆಂದು ನನ್ನ ಪರ ನಿನ್ನನ್ನು ಕಳುಹಿಸಿದರೆ ನೀನೋ ಇಲ್ಲದ ಕೆಲಸ ಮಾಡಿ ಬಂದಿ. ಯಾರು ಹೇಳಿದರು ನಿನಗೆ ಆ ಪ್ರಮಾಣ ಮಾಡಿಸು ಎಂದು. ಯಾರು ಹೇಳಿದರು, ಅವರ ಸತ್ಯಸಂಗತಿ ಬಯಲು ಪಡಿಸಲು?"

ನರಹರಿ ತಲೆ ತಗ್ಗಿಸಿದ ಬೆಪ್ಪನಂತೆ. ಅಲ್ಲಿಂದ ಬರುವಾಗ ತಾನೇನೋ ಘನ ಕಾರ್ಯ ಮಾಡಿದೆನೆಂಬ ಅಹಂನೊಂದಿಗೆ ತಂದೆಯಿಂದ ಶಹಭಾಷ್ ಸಿಕ್ಕೀತೆಂಬ ನಿರೀಕ್ಷೆಯಿತ್ತು. ಆದರೆ ಅವರಿಗೆ ಹಿತವಾಗಲಿಲ್ಲ ಎಂದು ಬಂದಾಗಲೇ ತಿಳಿದಿತ್ತು. ಆಗ ಪೂಜೆ ಹೊತ್ತು. ಮಾತಿಗೆ ಸಮಯವಲ್ಲ. ಈಗ ನೋಡಿದರೆ ತಂದೆ ತಾನೇನೋ ಅಪರಾಧ ಮಾಡಿದೆ ಎಂಬಂತೆ ಆರ್ಭಟಿಸುತ್ತಿದ್ದಾರೆ. ದೇವರ ಹೆಸರಲ್ಲಿ ತಾನು ಆಣೆ, ಪ್ರಮಾಣ ಹಾಕಿಸಿದ್ದು ಬಹು ದೊಡ್ಡ ತಪ್ಪು! ಆ ಜನರಿಗೆಲ್ಲ ಈಶ್ವರನ ಮೇಲೆ ಅಪಾರ ನಂಬಿಕೆ, ಶ್ರದ್ಧೆ. ಕುಡಿದ ಅಮಲಿನಲ್ಲಿ ಕೂಡ ಅಪ್ಪಿತಪ್ಪಿ ಆಣೆ ಹಾಕಲಾರರು. ಅವರು ನಂಬಿಕೆ ಶ್ರದ್ಧೆಯೊಡನೆ ಆಟವಾಡಿದ್ದೇಕೆ? ಗೌರಿ ಬಸುರಿಯಾಗಲಿ, ತ್ಯಾಂಪ ಹಾಳು ಕೆಲಸ ಮಾಡಿರಲಿ, ಅವೆಲ್ಲ ಅವರ ವೈಯಕ್ತಿಕ ಪ್ರಶ್ನೆ. ಅವಿವಾಹಿತೆ ಗೌರಿ ಮದುವೆ ಮೊದಲು ತನ್ನಿರುವನ್ನು ನೋಡಬೇಕಿತ್ತು, ಪುರುಷರೊಡನೆ ಸಲ್ಲಾಪ ಮಾಡಲು ಹೋದಳೇಕೆ? ನಮ್ಮ ಶಾಸ್ತ್ರದ ಪ್ರಕಾರ ಇದು ಅಪರಾಧವೇ ಸರಿ, ಹೆಣ್ಣು ಜಾರಿದಳು ಎಂದರ್ಥ. ಧರ್ಮ ತಪ್ಪಿದ ಹೆಣ್ಣಿಗೆ ರಕ್ಷಣೆ ಒದಗಿಸಲು ಆಣೆ, ಪ್ರಮಾಣ ಮಾಡಿಸಬೇಕಾಗಿಲ್ಲ. ಅವಳು ಒಲಿದು ಬಂದಳು, ಅವನು ಒಲುಮೆ ತೋರಿದ. ಅದು ಪ್ರಕೃತಿಸಹಜ ಧರ್ಮ. ತ್ಯಾಂಪನಲ್ಲದಿದ್ದರೆ ಇನ್ನೊಬ್ಬ ಅವಳ ಈ ಸ್ಥಿತಿಗೆ ಕಾರಣನಾಗಿದ್ದಾನೆ. ಅಷ್ಟೇ ತಾನೇ. ಇರಲಿ, ದೇವರನ್ನು ಎಳೆತಂದು ನ್ಯಾಯತೀರ್ಮಾನಕ್ಕೆ ಯಾಕೆ ಹೊರಟದ್ದು? ಪುರಾತನ ಕಾಲದ ಈಶ್ವರ

ಲಿಂಗ. ಅದೆಷ್ಟೋ ಶತಮಾನಗಳಿಂದ ಭಕ್ತಿ ಶ್ರದ್ಧೆಯಿಂದ ನಡೆದು ಕೊಳ್ಳುತ್ತಿದ್ದಾರೆ ಜನ. ಅವರ ಪರಿಶುದ್ಧತೆ ಏನು! ಶಿವಶಿವ ಎನ್ನುವುದಕ್ಕೂ ನಾಲಿಗೆ ಪುಣ್ಯ ಮಾಡಿರಬೇಕು. ದರ್ಶನ ಮಾತ್ರದಿಂದ ಪಾಪ ನೀಗಿಹೋಗಬೇಕು. ಒಂದು ಚಿಕ್ಕ ಹೂವು ತಪ್ಪಿತಸ್ಥರನ್ನು ಶಿಕ್ಷಿಸುತ್ತದೆ ಎಂದು ಯಾರೂ ನಂಬಲಾರರು ನಿಜ, ಆದರೆ ಆ ಚಿಕ್ಕ ಹೂವು ಕೆಲವೊಮ್ಮೆ ದೇವರ ಶಕ್ತಿ ಪಡೆದು ವಿರಾಟಸ್ವರೂಪ ತಳೆಯುತ್ತದೆ. ಹೂವಿನ ಮೇಲೆ ಮಾಡಿದ ಆಣೆ ಅದು ; ಶಿವಲಿಂಗ ಮುಟ್ಟಿ ಮಾಡಿದ ಆಣೆಯಷ್ಟೇ ಫಲಕಾರಿ ! ದುರಂತದ ಸೂಚಕ. ಈ ಸಣ್ಣ ವಿಷಯು ನರಹರಿಗೆ ತಿಳಿಯದೆ ಹೋಯಿತಲ್ಲ. ತ್ಯಾಂಪ ತಪ್ಪಿತಸ್ಥನಾಗಿದ್ದರೆ ಅವನಿಟ್ಟ ಸುಳ್ಳು ಆಣೆ ಅವನನ್ನೇ ಹಿಂಸಿಸಲು ಪ್ರಾರಂಭವಾಗಬಹುದು. ಅವನು ನಿರ್ದೋಷಿಯಾದರೆ ಆಣೆ ಹಾಕದೆ ಹಿಂಜರಿದ ಗೌರಿಯ ಮನೋವೇದನೆಗೆ ಕಾರಣವಾದೀತು. ಎರಡೂ ಕಷ್ಟವೇ. ಈ ತರಹದ ಸಂಘರ್ಷ, ಮಾನಸಿಕ ತಾಕಲಾಟದಿಂದಲೇ ನಾವು ನಂಬಿದ ದೇವರ ಮೇಲೆ ಬಾಯಿಮಾತಿಗೂ, ಕುಶಾಲಿಗೂ ಆಣೆ ಇಡಬಾರದು. ದೇವರಿದ್ದಾನೆಂಬ ನಂಬಿಕೆ ಭೀತಿಮೂಲವಾಗಿರಬಹುದು ಅಥವಾ ರೂಢಿಮೂಲವಾಗಿರಬಹುದು. ಈ ನಂಬಿಕೆ ವ್ಯಕ್ತಿಯ ಮನಸ್ಸಿಗೊಂದು ಅರ್ಥ ನೀಡುತ್ತದೆ. ಈ ಪರಿಜ್ಞಾನವೂ ನರಹರಿಗೆ ಇರಲಿಲ್ಲವೇ ?

ಶಂಕರಯ್ಯ ಹೇಳುತ್ತಲೇ ಇದ್ದಾರೆ ದೇವರೆಷ್ಟು ದಯಾಮಯನೆಂದು. ಒಲಿದರೆ ಸಕಲ ಇಷ್ಟಾರ್ಥಗಳನ್ನೂ ನೆರವೇರಿಸುವ ದಯಾಮಯ. ಯಾರು ಕರೆದರೂ ಬರಲಾರೆ ಎಂಬನೇ ಶಿವ ? ಕಷ್ಟದಲ್ಲಿ, ನೋವಿನಲ್ಲಿ, ದುಃಖದಲ್ಲಿ ಆರ್ತನಾಗಿ ಕರೆದರೆ ಓಗೊಡಲಾರನೇ ಶಿವ ? ಅವನಿಗೆ ಗೊತ್ತು ತ್ಯಾಂಪ, ಗೌರಿಯ ಪಾಡು. ಅಭಯಹಸ್ತ ಕೊಟ್ಟು ರಕ್ಷಿಸಬಲ್ಲ. ಆದರೆ ಹಾಕಿದ ಆಣೆ ಪ್ರಮಾಣ ಒಂದಿದೆಯಲ್ಲ. ಅದು ತಪ್ಪಬಾರದಷ್ಟೇ. ಕರೆದಾಗ ಓಗೊಡುವ ದಯಾಮಯ ಮುನಿಯುವುದು ಇದಕ್ಕಾಗಿ. ನರಹರಿ ಇದನ್ನೇಕೆ ಅರ್ಥಮಾಡಿಕೊಳ್ಳಲಿಲ್ಲ ?

ಉದ್ವಿಗ್ನರಾಗಿದ್ದರು ಶಂಕರಯ್ಯ. ಮಾತುಗಳು ತಡವರಿಸಿದವು. "ನಿನ್ನ ಮುತ್ತಜ್ಜಂದಿರು ಮಾಡಿದ ಪಾಪಗಳಿಗೆ ಲೆಕ್ಕವಿಲ್ಲ. ಅವರು ದೇವಾಲಯದ ಸೊತ್ತನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡರು. ನಿನಗೂ ಸುಲಭದಲ್ಲಿ ಹೆಸರು ಬೇಕಿತ್ತು. ನೀನು ನೋಡಿದ್ದು ನಿನ್ನ ಸ್ವಾರ್ಥವನ್ನೇ."

"ಇದೇನಪ್ಪ, ಇಲ್ಲಿ ಸ್ವಾರ್ಥ ಎಲ್ಲಿಂದ ಬಂತು ? ಒಂದು ಮುಗ್ಧ ಹುಡು

ಗಿಯೂ ಜೀವನ ಹಾಳಾಗಬಾರದೆಂದು ಈ ಯೋಜನೆ ಹಾಕಿದೆ.''

''ನೀನೇ ಹಾಳಾದೆ. ನಿನಗೆ ದೇವಾಲಯದ ಪವಿತ್ರತೆ ಗೊತ್ತಿಲ್ಲ. ದೇವರ ಹೆಸರಿನ ಮಹತ್ವ ತಿಳಿದಿಲ್ಲ. ಶುದ್ಧ ನಾಸ್ತಿಕ. ಪಟ್ಟಣದಲ್ಲಿದ್ದ ಅಹಂಕಾರ. ಒಂದು ಕ್ಷುಲ್ಲಕ ವಿಷಯಕ್ಕೆ ಶಿವನ ಹೆಸರೆತ್ತಿ ಅಪಚಾರ ಮಾಡಿದವನು ನೀನೇ. ನಿನ್ನ ಹಿಂದಿನವರ ಕತೆ ನಿನಗೆ ತಿಳಿಯದ್ದೇನಲ್ಲ.ನಿನ್ನ ಆಜ್ಜನ ಅಣ್ಣಂದಿರು ಕವಡೆ ಹಾರಿಸಿ ದೇವಾಲಯದ ಆವರಣವನ್ನು ಅಪವಿತ್ರಗೊಳಿಸಲು ನೋಡಿದ್ದುಂಟು. ಆಗ ಮಾರಾಮಾರಿ ಆಗಿತ್ತಂತೆ ಅವರವರಲ್ಲಿ. ಮನೆ ಪಾಲಾಗಲು ಇದೇ ಕಾರಣ. ಇನ್ನೇನು ಮಾಡ್ತಾರೆ.'' ಶಂಕರಯ್ಯ ಎರಡೂ ಕೈಗಳಿಂದ ತಮ್ಮ ಹಣೆ ಒತ್ತಿಕೊಳ್ಳುತ್ತ, ''ನನ್ನ ತಲೆ, ಮನಸ್ಸು ಹಾಳಾಗಿಹೋಯಿತು'' ಎಂದವರೇ ತಮ್ಮ ಕೋಣೆಗೆ ಹೊರಟುಹೋದರು.

ನರಹರಿ ಸ್ತಬ್ಧನಾಗಿಹೋದ. ತನ್ನ ತಂದೆಗೆ ಅಪಾರ ನೋವಾಯಿತೆಂದು ವಿಲಪಿಸಿದ ತನ್ನಲ್ಲೇ. ಕಣ್ಣುಗಳಿಂದ ನೀರಿಳಿಯಿತು. ಏನಾಗಿಹೋಯಿತು ಇದೆಲ್ಲ ? ತಾನು ಸ್ವಾರ್ಥಕ್ಕಾಗಿ ಮಾಡಿದೆನೇ ? ತಮಾಷೆಗೆ ಮಾಡಿದೆನೇ ? ಏನೋ ಆ ಗಳಿಗೆಯಲ್ಲಿ ತನಗೆ ಆ ಯೋಚನೆ ಬಂದದ್ದು ತಪ್ಪಾಗಿಹೋಯಿತೆ ? ಆ ಮುಗ್ಧ ಜನರ ನಂಬಿಕೆಯ ಮೇಲೆ ತಾನು ಪ್ರಹಾರ ಮಾಡಿದ ಆಣೆ ಪ್ರಮಾಣದಿಂದ ಅವರಲ್ಲಿ ಒಬ್ಬರು ತಮ್ಮ ಜೀವ ತೆಗೆದುಕೊಂಡರೆ ?

ಈ ಯೋಚನೆಯಿಂದ ತಲೆ ಸಿಡಿದುಹೋಗುವಂತಾಯಿತು. ಮಲಗಲು ಬಂದರೆ ಬುಡ್ಡಿದೀಪದ ಬೆಳಕಿನಲ್ಲಿ ಪೂರಾ ಕಣ್ಣು ತೆರೆದು ಮಲಗಿದ್ದ ಅಲಕಾ, ''ಯಾಕೆ ಬೇಕಿತ್ತು ನಿಮಗೆ ಈ ಪಂಚಾಯ್ತಿಕೆ ?'' ಎಂದಳು ಕಹಿಯಾಗಿ.

ಅಲಕಾಳ ಬಾಯಿಯಿಂದಲೂ ಈ ಮಾತು ? ಮೈ ಉರಿದುಹೋಯಿತು. ತಾನು ಮಾಡಿದ್ದು ಹೇಗೇ ಇರಲಿ, ಇವಳೂ ತನ್ನ ತಂದೆತಾಯಿಯ ಪಕ್ಷಕ್ಕೆ ಸೇರಿ ಮೂದಲಿಸಿದಳಲ್ಲ. ಇದಕ್ಕಿಂತ ಬೇರೆ ಅವಮಾನ ಬೇಕೇ ? ನಾಳೆ ಗೌರಿ ಅಥವ ತ್ಯಾಂಪನಿಗೆ ಏನಾಗಿಹೋದರೆ ಮತ್ತೊಮ್ಮೆ ಇವರೆಲ್ಲರ, ಹಳ್ಳಿಯವರ ಬಾಯಿಗೆ ತಾನು ಬಲಿಪಶು. ತಾನು ಯೋಚಿಸಿದಷ್ಟು ಸರಳವಾಗಿಲ್ಲ ಈ ಪರಿಸ್ಥಿತಿ. ತಮ್ಮ ತಪ್ಪು ನೋಡಿಕೊಂಡು ಅವರಿಬ್ಬರೂ ಒಂದಾದರೆ....

ಒಂದು ಕ್ಷಣ ಹೊತ್ತು ಅವನ ಮನಸ್ಸು ಪೂರಾ ಮನೆದೇವಿಯನ್ನು ಆವರಿಸಿಕೊಂಡಿತು. ದೇವರ ಕೋಣೆಯತ್ತ ಇಣುಕಿದ. ನಂದಾದೀಪದ ಬೆಳಕಿನಲ್ಲಿ ನಗುವ ದೇವಿ ! ''ನನ್ನಿಂದ ಅಪರಾಧವಾಯಿತೇ ತಾಯಿ ? ಅರಿಯದೆ ಶಿವನ ಹೆಸರೆತ್ತಿ ಅಪಚಾರ ಮಾಡಿದೆನೇ ? ಲೋಕವನ್ನು ಕಾಪಾಡಬಲ್ಲ ಶಕ್ತಿ

ಸ್ವರೂಪಿಣಿಯೇ. ನಿನಗೆ ನಮೋ ನಮಃ !.ನನ್ನಿಂದಾಗಿ ಆ ಮುಗ್ಧ ಜೀವಿಗಳಿಗೆ
ಏನೂ ಆಗದಂತೆ ನೋಡಿಕೊಳ್ಳುವ ಭಾರ ನಿನಗಿರಲಿ'' ಎನ್ನುತ್ತ ಕೈಜೋಡಿಸಿ
ಸಾಷ್ಟಾಂಗ ನಮಸ್ಕಾರ ಮಾಡಿದ. ಸಮಾಧಾನವಾಗಲಿಲ್ಲ. ಮೈ ಬೆವರಿಕೊಳ್ಳು
ತ್ತಿತ್ತು. ಏನೋ ಒಂದು ವಿಧದ ಆಲಸಿಕೆಯಿಂದ. ಮೆಲ್ಲನೆ ಹೊರಬಾಗಿಲು
ತೆರೆದು ಹಾಗೇ ಮುಚ್ಚಿ ಅಂಗಳಕ್ಕಿಳಿದ, ರಾತ್ರಿ ತಂಪಿಗೆ ಸ್ವಲ್ಪ ಹಿತವಾಗಲಿ
ಎಂದು.

ಅಂಗಳಕ್ಕಿಳಿದ ಮೇಲೆ ಮನ ತಡೆಯದೆ ಕತ್ತಲೆಯಲ್ಲಿ ಹೆಜ್ಜೆ ಹಾಕಿದ ಶಿವ
ದೇವಾಲಯದತ್ತ. ನಕ್ಷತ್ರಗಳ ಬೆಳಕಿನಲ್ಲಿ ಕಾಣುವ ಅಸ್ಪಷ್ಟ ದಾರಿಯಲ್ಲಿ ತಡ
ವರಿಸುತ್ತ ಹೆಜ್ಜೆ ಇಟ್ಟು ದೇವಾಲಯದ ಬಳಿ ಬಂದಾಗ ಹೆಬ್ಬಾಗಿಲು ಮುಚ್ಚಿ
ಹೊರಗಿನಿಂದ ಬೀಗ ಹಾಕಿದ್ದು ತಿಳಿಯಿತು. ಹೇಗೆ ಹೋಗಲಿ ಒಳಗೆ?
ಸುತ್ತಲೂ ಕಲ್ಲಿನ ಪಾಗಾರ. ಅಷ್ಟೇನೂ ಎತ್ತರವಿಲ್ಲ. ಅವನು ಕತ್ತಲೆಯಲ್ಲಿ
ಕೈ ತಡವುತ್ತ ಸರಿದು ಒಂದೆಡೆ ಹತ್ತಿ ಒಳ ಆವರಣಕ್ಕೆ ಹಾರಿಕೊಂಡ. ಗರ್ಭ
ಗುಡಿಯ ಬಾಗಿಲು ಮುಚ್ಚಿತ್ತು. ಅವನು ಅರೆಗಳಿಗೆ ನಿಂತ ಬಾಗಿಲೆದುರು.
ಎಣ್ಣೆ ದೀಪ ನಂದಿ ಹೋಗಿದ್ದು ಒಳಗೆಲ್ಲ ಕತ್ತಲೆ. ಆದರೆ ಅವನ ಮನದೊಳಗೆ
ಕಾಣಿಸುತ್ತಿದೆ ಶಿವಲಿಂಗ, ಸ್ಮರಣೆಯ ಕಂಗಳಲ್ಲಿ ಅದನ್ನೇ ತುಂಬಿಕೊಳ್ಳುತ್ತ
ಸಾಷ್ಟಾಂಗ ನಮಸ್ಕಾರ ಮಾಡಿ ಮೆಟ್ಟಿಲಿಗೆ ಮೂರು ಬಾರಿ ತಲೆ ಹೊಡೆದು
ಕೊಂಡುರಕ್ತ ಚಿಮ್ಮಿದರೂ ಹಾಯೆನಿಸಿತು.ಅನಂತರ ಎದ್ದು ಗರ್ಭಗುಡಿಗೆ ಪ್ರದ
ಕ್ಷಿಣೆ ಹಾಕಲಾರಂಭಿಸಿದ. ಒಂದು, ಎರಡು....ಹಾಕುತ್ತಲೇ ಹೋದ, ತಾನು
ಮಾಡಿದ ಪ್ರಮಾದದಿಂದ ತನ್ನನ್ನೇ ಪ್ರಾಯಶ್ಚಿತ್ತ ಮಾಡಿಕೊಳ್ಳುವವನಂತೆ.

ಪ್ರದಕ್ಷಿಣೆ ಹಾಕುತ್ತಿದ್ದಂತೆ ಹಾಸಿದ ಕಲ್ಲುಗಳಲ್ಲಿ ಕೆತ್ತಿದ ಹೆಸರಿನಿಂದ
ಜನಾರ್ದನ, ಅನಂತ, ಮುರಾರಿ ಎದ್ದು ಬಂದಂತೆ, ತನ್ನ ಹತ್ತಿರ ನಿಂತು ಮೈ
ದಡವಿದಂತೆ ಭಾಸವಾಗಿ ಬೆಚ್ಚಿಬಿದ್ದ. ತನ್ನ ವಂಶದ ಆ ಮೂವರು ಹಿರಿಯರೂ
ಒಂದು ಕಾಲಕ್ಕೆ ಇದೇ ದೇವಾಲಯದಲ್ಲಿ ಮೆರೆದವರಲ್ಲವೇ.

ಹೌದು, ಮೆರೆಯುವ ಕಾಲ ಅದಾಗಿತ್ತು. ಅಚ್ಯುತ ಭಟ್ಟರ ಅವಸಾನ
ದೊಂದಿಗೆ ಆ ಕುಟುಂಬ ಉಚ್ಛ್ರಾಯಸ್ಥಿತಿಗೇರಿದ್ದು ಎಷ್ಟು ಸೋಜಿಗವೋ
ಅಷ್ಟೇ ದುರಂತವೂ ಹೌದು. ಮನೆ ಸಂಪತ್ತು ಏರಿದಂತೆ ಅವರ ಮಕ್ಕಳು
ವಿವೇಕಶೂನ್ಯರಾದದ್ದು ಇನ್ನೊಂದು ದುರಂತ. ಅಚ್ಯುತಭಟ್ಟರು ದೇವಾಲ
ಯದ ಜಮೀನಿನಲ್ಲಿ ಬೆಳೆದುದನ್ನು ತಾವೇ ಅನುಭೋಗಿಸಲು ವಿರೋಧಿಸಿದ್ದ
ರಷ್ಟೆ. ಈ ವಿರೋಧ ಅವರು ಇರುವಾಗ ಚಾಲ್ತಿಯಲ್ಲಿತ್ತು. ನಿಜ. ಅನಂತರ

ಮನೆ ಪತ್ತಾಯ ಸಮೃದ್ಧಿಯಾಗಿ ತುಂಬತೊಡಗಿತು. ಇಲ್ಲಿ ಅಪರಾಧಿ ಪ್ರಜ್ಞೆ ಇರಲಿಲ್ಲ. ತಮ್ಮ ಬೆವರಿನ ಫಲವೆಂಬ ಹೆಮ್ಮೆಯಿತ್ತು. ಹಡೀಲು ಬಿದ್ದ ಜಾಗದಲ್ಲಿ ಇಷ್ಟಾದರೂ ಬೆಳೆಯುತ್ತಿದ್ದೇವೆಂಬ ಸಮಾಧಾನ. ಆದರೆ ಕಿಂಚಿತ್ ಭಾಗ ದೇವತಾವಿನಿಯೋಗಕ್ಕೆ ಮೀಸಲಾಗಿಡಲು ಸ್ವಾರ್ಥ ಬಿಡಲಿಲ್ಲ, ಆಸೆ ಕೇಳಲಿಲ್ಲ. ಇಷ್ಟೇ ಅಲ್ಲ, ಪಟೇಲರ ಮತ್ತು ಗುತ್ತಿನ ಮನೆಯವರ ಗೇಣಿಗೆ ಮಾಡಿಕೊಂಡ ಭೂಮಿಯಲ್ಲಿ ಪ್ರತಿ ವರ್ಷ ಸಮೃದ್ಧ ಬೆಳೆಯಾದರೂ ಕಡಿಮೆಯಾಯಿತೆಂದು ಲೆಕ್ಕ ತೋರಿಸಿ ಜೋಲುಮೋರೆ ಹಾಕಿ ಪೂರಾ ಗೇಣಿ ಒಪ್ಪಿಸುವ ಕ್ರಮ ನಿಂತುಹೋಯಿತು. 'ಅಚ್ಯುತಭಟ್ಟರ ಮಕ್ಕಳು ಸುಳ್ಳು ಹೇಳಲಿಕ್ಕಿಲ್ಲ' ಎಂಬ ನಂಬಿಕೆಯಿಂದ ಪಟೇಲರು ಮತ್ತು ಗುತ್ತಿನ ಮನೆಯವರು ಬಾಕಿ ಕೇಳುವ ಪಾಪಕ್ಕೂ ಹೋಗಲಿಲ್ಲ. ಸಂಪತ್ತು ವೃದ್ಧಿಸಿದ್ದು ಈ ವಿಧದಲ್ಲಿ!

ಅನಂತನಿಗೆ ಇಬ್ಬರು ಗಂಡುಮಕ್ಕಳು, ಈಶ್ವರ ಮತ್ತು ನಾರಾಯಣ. ಇಬ್ಬರೂ ಅಜ್ಜನಿಂದ ವೇದಾಧ್ಯಯನ, ಮಂತ್ರ, ಶಾಸ್ತ್ರ ಕಲಿತವರು. ಈಶ್ವರನಿಗೆ ಇಷ್ಟು ಕಲಿತದ್ದು ಸಾಲದು ಎನಿಸಿ ಕೇರಳಕ್ಕೆ ತೆರಳಿ ಅಲ್ಲಿ ನಾಲ್ಕು ವರ್ಷ ಇದ್ದು ಪಂಡಿತರೊಬ್ಬರಿಂದ ಜ್ಯೋತಿಷ್ಯಶಾಸ್ತ್ರ, ಮಂತ್ರ-ತಂತ್ರ ಕಲಿತು ಸಾಕಷ್ಟು ಪ್ರಾವೀಣ್ಯತೆ ಗಳಿಸಿಕೊಂಡ. ಕಲಿತುದನ್ನು ವ್ಯರ್ಥಗೊಳಿಸುವ ಹುಡುಗುಬುದ್ಧಿ ಅವನದಲ್ಲ. ಜನರನ್ನು ಆಕರ್ಷಿಸಬೇಕು, ಹಣ ಮಾಡಬೇಕು. ಅವನು ತರ್ಕಬದ್ಧವಾಗಿ ಆಲೋಚಿಸಿ ಶಿವದೇವಾಲಯದ ಪೌಳಿ ಆರಿಸಿದ ತನ್ನ ಹೊಸ ದಂಧೆಗೆ. ದೇವಾಲಯಕ್ಕೆ ಬರುವ ಜನರನ್ನು ಸುಲಭದಲ್ಲಿ ಆಕರ್ಷಿಸಬಹುದು ಎಂದವನ ಎಣಿಕೆ. ಹಾಗೇ ಆಯಿತು. ಪೌಳಿ ಮೂಲೆಯಲ್ಲಿ ಜ್ಯೋತಿಷ್ಯಶಾಸ್ತ್ರದ ಕಟ್ಟು, ಪಂಚಾಂಗ, ಕವಡೆಗಳನ್ನಿಟ್ಟು ಭದ್ರವಾಗಿ ಕುಳಿತು ಇನ್ನೂ ಇಪ್ಪತ್ತೈದು ಮೀರದ ಈ ತರುಣ ಆಕರ್ಷಿಸಿದ ಎಲ್ಲರನ್ನೂ. ಬರುವವರು ಮೊದಲು ಅವನನ್ನು ನೋಡಿ ಮಾತನಾಡುತ್ತಾರೆ, ಅನಂತರ ದೇವಾಲಯಕ್ಕೆ ಪ್ರದಕ್ಷಿಣೆ. ಅಂಗೈ ನೋಡಬೇಕೇ, ಜಾತಕ ತೋರಿಸಬೇಕೇ, ಮದುವೆ ಮುಂಜಿಗೆ ಮುಹೂರ್ತ ಕೊಡಬೇಕೇ, ಪರಿಹಾರ ಯಾವುದು ? ಎಲ್ಲಿ ? ಹೇಗೆ ? ಎಲ್ಲವೂ ಇದೆ ಈಶ್ವರನ ಬಳಿ. ಕವಡೆಗಳ ಗಲಗಲ ಸದ್ದಿನೊಂದಿಗೆ ತಮ್ಮ ಸಮಸ್ಯೆಗೆ ಪರಿಹಾರ ಕೇಳಿ ತಿಳಿಯಲು ಜನರಿಗೂ ಕಾತರ.

ಒಂದು ತಿಂಗಳು ಕಳೆದಿತ್ತು, ಅಷ್ಟೇ. ಜನಾರ್ದನನಿಗೆ ತನ್ನ ಅಣ್ಣನ ಮಗ ಇಲ್ಲೇ ಪೌಳಿಯಲ್ಲಿ ಖಾಯಂ ಈ ದಂಧೆ ಮಾಡುವುದು ಸಹ್ಯವಾಗಲಿಲ್ಲ. ನೇರವಾಗಿ ಆಕ್ಷೇಪಿಸಿದ. "ದೇವಾಲಯದ ಆವರಣದಲ್ಲಿ ಇಂಥ ಕೆಲಸ ಮಾಡ

ಬಾರದು. ಬೇರೆ ಕಡೆ ಜಾಗ ನೋಡಿಕೋ.''

ಈಶ್ವರನಿಗೂ ಸಹ್ಯವಾಗಲಿಲ್ಲ ಚಿಕ್ಕಪ್ಪನ ಮಾತುಗಳು. ''ನನ್ನ ಬಳಿ ಭಕ್ತಾದಿಗಳು ಬಂದರೆ, ಭವಿಷ್ಯ ಕೇಳಿ ತಿಳಿದುಕೊಂಡರೆ ನಿಮಗೇಕೆ ಇಷ್ಟು ಅಸಹನೆ ?''

''ಸರ್ವಾಂತರ್ಯಾಮಿ ದೇವರ ಬಳಿ ಭಕ್ತ ಕಾಣಿಕೆಯಿಲ್ಲದೆಯೂ ಬರಬಲ್ಲ. ನೀನೋ ಕಾಣಿಕೆ ಇಟ್ಟ ಹೊರತು ಯಾರ ಭವಿಷ್ಯವೂ ಹೇಳಲಾರೆ, ಕವಡೆ ಹಾರಿಸಲಾರೆ. ನಿಜ ತಾನೇ?''

''ಜನರಿಗೆ ತಮ್ಮ ಭವಿಷ್ಯ ತಿಳಿದುಕೊಳ್ಳುವ ಆಸೆ. ತಮ್ಮ ಪ್ರಶ್ನೆಗೆ ಕವಡೆಗಳಿಂದ ಉತ್ತರ ಪಡೆಯುವ ಆಸೆ. ಕೇಳ್ತಾರೆ. ಸಮಾಧಾನ ಸಿಕ್ಕಿದರೆ ಹಣ ಕೊಡ್ತಾರೆ. ಇದರಲ್ಲಿ ತಪ್ಪೇನಿದೆ ಚಿಕ್ಕಪ್ಪ ? ನಾನು ಅಕ್ರಮ ದಂಧೆ ಮಾಡ್ತಾ ಇಲ್ಲವಲ್ಲ. ಬೇಕಿದ್ದರೆ ಪೌಳಿ ತುದಿಗೆ ಒಂದು ಪರದೆ ಕಟ್ಟೋಣ. ಅಥವಾ ಒಳ ಉಗ್ರಾಣ ಕೋಣೆ ಉಪಯೋಗಿಸೋಣ.''

ಈ ವಿಷಯದಲ್ಲಿ ನಾಲ್ಕು ದಿನ ಚರ್ಚೆ ನಡೆಯಿತು ಮನೆಯಲ್ಲಿ. ಈಶ್ವರ ಸುತರಾಂ ತನ್ನ ತಳ ಕೀಳಲು ತಯಾರಾಗಲಿಲ್ಲ. ಜನಾರ್ದನ ಕೇವಲ ತನ್ನ ಸ್ವಾರ್ಥ ನೋಡಿಕೊಳ್ಳುತ್ತಿದ್ದಾನೆ. ಬರುವ ಜನರು ಆರತಿತಟ್ಟೆಗೆ ಹಣ ಹಾಕದೆ ಈಶ್ವರನ ಬಳಿಗೇ ಹೋಗಿಬಿಟ್ಟರೆ ಗತಿ ಏನು ಎಂಬ ಚಿಂತೆ ಇದ್ದೀತು, ಆದಕ್ಕೇ ಈ ಅಡ್ಡಗಾಲು. ಅನಂತನಿಗೂ ಮಗ ಹೇಳಿದ್ದು ವೇದವಾಕ್ಯ. ಬುದ್ಧಿವಂತ ಮಗನ ಬಳಿ ಬರುವ ತಂಡ, ಈ ಒಂದು ತಿಂಗಳಲ್ಲಿ ಅವನು ಗಳಿಸಿದ ಹಣ, ಜನಪ್ರಿಯತೆ ಕಂಡು ತನಗೆ ಸಂತೋಷವಾದರೂ ಜನಾರ್ಧನನಿಗೆ ಅಸೂಯೆ ಆಗಿರಬೇಕು. ತನ್ನ ಜನಪ್ರಿಯತೆಗೆ ಕುಂದು ತಂದ ಎಂದು ಭಾವಿಸಿದನೇ ? ಜನಾರ್ದನನದು ಒಂದೇ ಮಂತ್ರ—

''ನಿನ್ನ ಪಡಿ ಬಿಡಾರ ತೆಗೆಯಲೇಬೇಕು. ಗ್ರಾಮಸ್ಥರ ಮುಂದೆ ನಾವು ತೀರ ಅಲ್ಪರಾಗಬಾರದು.''

''ಹಾಗಾದರೆ ಚಿಕ್ಕಪ್ಪ, ದೇವಾಲಯ ನಿನ್ನೊಬ್ಬನದೇ ಏನು ?'' ದಿಟ್ಟನಾಗಿ ಕೇಳಿದ ಈಶ್ವರ.

''ಈ ಯೋಚನೆ ಬಂದಿದ್ದರೆ ನಿಮಗೆ ತಿಳಿಯದಂತೆ ನಾನೇ ಹಣ ಮಾಡ್ತಾ ಇದ್ದೆ. ತನುಮನದಿಂದ ದೇವರ ಸೇವೆ ಮಾಡುವುದೊಂದೇ ತಿಳಿದವ.''

''ನಿನ್ನ ಮಗ ನಾಗರಾಜ ಹಸಿದಡ್ಡ. ವ್ಯವಹಾರ ತಿಳಿಯದವ. ಅದಕ್ಕೆಂದೇ ಇನ್ನೊಬ್ಬರನ್ನು ಆ ತಕ್ಕಡಿಯಲ್ಲಿ ತೂಗಬೇಡ'' –ಅನಂತ ತಮ್ಮನಿಗೆ ಬುದ್ಧಿ

ಹೇಳಲು ನೋಡಿದ. "ಏನೋ ಈಶ್ವರ ಸರಿಯಾದ ಉದ್ಯೋಗಕ್ಕೆ ಇಳಿದನೆಂದು ಪ್ರೋತ್ಸಾಹ ಕೊಡು!"

"ನನ್ನ ಮಗ ವ್ಯವಹಾರ ತಿಳಿಯದ ಶುಂಠನಿರಲಿ, ಇನ್ನೇನೇ ಆಗಿರಲಿ, ಆ ಮಾತು ಈಗ ಬೇಡ. ನಿನ್ನ ಮಗ ದೇವಾಲಯದ ಪೌಳಿಯಿಂದ ಕದಲದ ಹೊರತು ನಾನು ಪೂಜೆಗೆ ಹೋಗುವವನಲ್ಲ. ಇದು ದೃಢ ನಿಶ್ಚಯ."

ಜನಾರ್ದನ ಹೇಳಿದನೆಂದರೆ ಬೇರೆ ಮಾತಿಲ್ಲ. ಅವನ ನಿಶ್ಚಯದ ಎದುರು ಮಣಿಯಲೇಬೇಕಿತ್ತು ಈಶ್ವರನಿಗೆ. ಕಾರಣ ಜನಾರ್ದನನ ಪೂಜಾನಿಷ್ಠೆ, ಭಕ್ತಿ, ಅನನ್ಯ ಶ್ರದ್ಧೆ ಇಲ್ಲಿ ಬೇರೆ ಯಾರಿಗೂ ಇಲ್ಲ. ತನ್ನ ಸರ್ವಸ್ವವೂ ಶಿವನೇ ಎಂದು ನಂಬಿದವ. ಅಭಿಷೇಕ, ಅರ್ಚನೆ, ಆರತಿ, ಮೃತ್ಯುಂಜಯ ಜಪ, ರುದ್ರಾಭಿಷೇಕ, ದೀಪೋತ್ಸವ, ರಥೋತ್ಸವ ಎಲ್ಲವನ್ನೂ ಅವನೇ ನಡೆಸುವವ. ಅಚ್ಯುತಭಟ್ಟರ ನಂತರ ಉತ್ಸವಮೂರ್ತಿ ಹೊರುವವನೂ ಅವನೇ. ಹುಂಡಿಗೆ ಬೀಳುವ ಕಾಣಿಕೆ, ಆರತಿ ತಟ್ಟೆಯ ನಾಣ್ಯಗಳ ಲೆಕ್ಕ ಅವನಿಗಿಲ್ಲ. ಅದರ ಜವಾಬ್ದಾರಿ ಅನಂತ, ಮುರಾರಿಯ ಮೇಲೆ. ಅವರೇನು ಮಾಡುತ್ತಾರೆಂದು ತಪ್ಪಿಯೂ ಕೇಳಿದವನಲ್ಲ.

ನಾಗರಾಜ ಅವನ ಏಕೈಕ ಸಂತಾನ. ಹುಟ್ಟಿದ್ದೂ ಅವನ ಮದುವೆಯಾಗಿ ಹನ್ನೆರಡು ವರ್ಷಗಳ ನಂತರ. ವ್ರತ, ನಿಯಮ, ಪೂಜೆಯಾದಿ ಸೇವೆಗಳನ್ನು ಮಾಡಿದ ನಂತರ ಹುಟ್ಟಿದವ. ಅವನಿಗೆ ನಾಗರಾಜ ಎಂದು ಹೆಸರಿಡಲು ಒಂದು ಕಾರಣ ಇದೆಯಂತೆ. ಈ ಕಥೆ ದಂತಕಥೆಯಾಗಿ ಊರಲ್ಲಿ, ಮನೆತನದಲ್ಲಿ ಮುಂದಕ್ಕೆ ಪ್ರಚಾರವಾಗಿ ಇನ್ನಷ್ಟು ರಂಗು ಪಡೆಯಿತು. ಆ ಮಾತು ಬೇರೆ. ಆಗ ಅವನಿನ್ನೂ ಒಂದು ತಿಂಗಳ ಶಿಶು. ಜನಾರ್ದನನ ಮುದ್ದಿನ ಕಣ್ಮಣಿ. ಒಂದು ದಿನ ಜನಾರ್ದನನ ಹೆಂಡತಿ ಮಗುವನ್ನು ಸ್ನಾನ ಮಾಡಿಸಿ ಹಾಲು ಕುಡಿಸಿ ತೊಟ್ಟಿಲಲ್ಲಿ ಮಲಗಿಸಿ ಹೊರಗೆ ಹೋದ ಹೊತ್ತು. ಎಲ್ಲಿಗೋ ಹೋಗಿದ್ದ ಜನಾರ್ದನ ಒಳಗೆ ಬಂದು ನೋಡುತ್ತಾನಂತೆ, ತೊಟ್ಟಿಲು ಹಗ್ಗದ ಉದ್ದಕ್ಕೂ ಸುಮಾರು ಎಂಟು ಅಡಿ ಉದ್ದದ ಸರ್ಪ, ಪೂರಾ ಹೆಡೆ ಅರಳಿಸಿ ತೊಟ್ಟಿಲು ಬದಿಗೆ ಬಾಗಿಕೊಂಡಿದೆಯಂತೆ. ಜನಾರ್ಧನನಿಗೆ ಕಣ್ಣು ಕತ್ತಲೆಯಿಟ್ಟಿತು. ತೊಟ್ಟಿಲಿಗೆ ಕೈಹಾಕಿ ಮಗುವನ್ನು ಎತ್ತಿಕೊಳ್ಳೋಣವೆಂದರೆ ಸರ್ಪದ ಹೆಡೆ ಮಗುವಿನ ತಲೆ ಬದಿಗೇ ಇದೆ. ಕೋಲಿನಿಂದ ಹೊಡೆದರೆ ಅದು ಸೀದಾ ತೊಟ್ಟಿಲೊಳಗೆ ಬೀಳುವುದು ಖಂಡಿತ. ಅರಿಸಿನ ಬಣ್ಣದ ಮಿರಿಮಿರಿ ಮಿಂಚುವ ಸರ್ಪ. ಅಬ್ಬ, ಏನದರ ಕಣ್ಣುಗಳು!

ಜನಾರ್ದನನ ನಾಲಿಗೆ ದ್ರವ ಪೂರಾ ಆರಿಹೋಯಿತು. ಆ ಗಳಿಗೆಯಲ್ಲಿ ಏನು ಮಾಡಬೇಕೆಂದು ತಿಳಿಯದೆ ಹತಾಶನಾಗಿ ನೆಲಕ್ಕೆ ಕುಸಿದನಂತೆ. ಆಮೇಲೆ ಬಾರಿ ಬಾರಿಗೂ ಸರ್ಪಕ್ಕೆ ಕೈಮುಗಿಯುತ್ತ, "ಅಪ್ಪಾ, ನಾಗರಾಜನೇ! ನನ್ನ ಮಗುವಿಗೆ ಯಾವ ತೊಂದರೆ ಮಾಡದೆ ಹಾಗೇ ಹೊರಟುಹೋದರೆ ನಿನ್ನ ಹೆಸರನ್ನೇ ಅದಕ್ಕೆ ಇಡುತ್ತೇನೆ. ಪ್ರತಿ ಷಷ್ಠಿ ದಿನ ನಿನ್ನ ಹೆಸರಿನಲ್ಲಿ ಉಪವಾಸ ಮಾಡುತ್ತೇನೆ. ನನ್ನ ಮೇಲೆ ಕರುಣೆ ತೋರಿಸು" ಎಂದು ಬೇಡಿಕೊಂಡನಂತೆ.

ಸರ್ಪ ಒಮ್ಮೆ ತೊಟ್ಟಿಲತ್ತ ಬಗ್ಗಿ ಆಮೇಲೆ ಜನಾರ್ದನನನ್ನು ನೋಡಿ ಉದ್ದಕ್ಕೂ ಹೆಡೆ ಅಲ್ಲಾಡಿಸಿತಂತೆ. ಅನಂತರ ನಿಧಾನವಾಗಿ ಹೆಡೆ ಇಳಿಸಿ ಹಗ್ಗದಲ್ಲಿ ಮೇಲ್ಮುಖವಾಗಿ ಚಲಿಸಿ ಮಾಡು ಏರಿ ಕಣ್ಮರೆಯಾಯಿತಂತೆ. ಉಸಿರು ಬಿಗಿಹಿಡಿದಿದ್ದ ಜನಾರ್ದನ ಸದ್ದಿಲ್ಲದೆ ಹಿಂದೆ ಬಂದು ನಿಂತ ಮನೆಯವರು ಸಂಭ್ರಾಂತರಾಗಿದ್ದರಂತೆ ಅದೆಷ್ಟೋ ಹೊತ್ತು. ಇದು ನಡೆದ ಕಥೆ!

ನಾಗರಾಜನ ದಿವ್ಯದೃಷ್ಟಿಗೆ ಒಳಗಾದ ಶಿಶು ನಾಗರಾಜನೆಂಬ ಹೆಸರಿನಲ್ಲಿಯೇ ಬೆಳೆದ ಎಲ್ಲರ ಅಂಗೈ ಮೇಲೆ. ಅಪರೂಪಕ್ಕೆ ಹುಟ್ಟಿದವ. ತಾಯಿತಂದೆಯ ಕೊಂಡಾಟ, ಉಳಿದವರ ಮುದ್ದಾಟ ಜಾಸ್ತಿ. ಅವನೋ ವಿಪರೀತ ತುಂಟ. ಒಂದೇ ಕಡೆ ಕುಳಿತುಕೊಳ್ಳದ ಕಿಲಾಡಿ. ಕಲ್ಲನ್ನು ಕರೆದು ಮಾತನಾಡಿಸಬೇಕು. "ನಿನ್ನ ಬಾಯಿಗೆ ಬೀಗ ಹಾಕೋ. ನಿನ್ನ ಕಾಲಿಗೆ ಬೇಡಿ ಹಾಕ್ತೇನೆ"— ಗದರುತ್ತಿದ್ದಳು ತಾಯಿ. ಆದರೆ ಅವನೆಲ್ಲಿ ಕೇಳುತ್ತಾನೆ? ದಿನವೆಲ್ಲ ಕಾಡಿನಲ್ಲಿ ಅಥವಾ ಶಿವದೇವಾಲಯದ ತೋಟದಲ್ಲಿ. ಎಲ್ಲಿ ಕೆರೆ, ಹಳ್ಳ, ತೋಡು ಇವೆಯೋ ಅಲ್ಲೆಲ್ಲ ಈಜಾಡಿ, ಹಾರಾಡಿ ಮೀನು ಹಿಡಿಯುವ ಗೀಳು. ಹಸು ಕರುಗಳನ್ನು ಕಂಡರೆ ಸಾಕು, ತಾಯಿಯ ಬಳಿ ಬಿಟ್ಟು ಅವು ಹಾಲು ಕುಡಿದು ಮುಗಿಸುವ ತನಕ ನೋಡುತ್ತ ನಿಲ್ಲುವ ಮನಸ್ಸು. ಆಗ ಏಟು ಹಾಕಬೇಕು ತಾಯಿ, "ಪೂರಾ ಹಾಲು ಕುಡಿದಾಯ್ತು. ಇನ್ನೆಂತ ಕರೆಯಲಿ?"

ಹೀಗೆ ಚೂಟಿಯಾಗಿದ್ದ ಹುಡುಗ ಪ್ರಾಯಪ್ರಬುದ್ಧನಾದಂತೆ ಗಂಭೀರನಾದ. ಮಾತು ಕಡಿಮೆಯಾಯಿತು. ಮನೆದೇವಿಯ ಪೂಜೆ ಮಾಡುವಾಗ ಹಸನ್ಮುಖನಾಗಿರುವ ಅವನ ಮುಖ ಹೊರಬಂದಮೇಲೆ ಬಿಗಿದುಕೊಳ್ಳುತ್ತಿತ್ತು. "ಅಪ್ಪಾ, ಈ ವಿಗ್ರಹಕ್ಕೆ ಜೀವ ಇದೆಯೇ? ಇದನ್ನು ಯಾಕೆ ಪೂಜಿಸಬೇಕು?" ಕೇಳುತ್ತಿದ್ದ ಅರ್ಥವಾಗದವನಂತೆ. ಶಿವದೇವಾಲಯಕ್ಕೆ ಬಂದರೆ ಅಲ್ಲಿ ನೀರಿನ ಅಭಿಷೇಕ, ಪೂಜೆ, ಮಂಗಳಾರತಿ ನೋಡುತ್ತ ತನ್ಮಯನಾಗುತ್ತಿದ್ದ. ಕೆಲವೊಮ್ಮೆ ಎರಡೂ ಕಣ್ಣುಗಳಿಂದ ನೀರು. ಅದು ಸಂತೋಷದಿಂದಲೋ, ದುಃಖದಿಂದಲೋ

ತಿಳಿಯದು. ಪಕ್ಕನೆ ಅನ್ಯಮನಸ್ಕನಾಗುತ್ತಿದ್ದ ಅವನಿಗರಿಯದವನಂತೆ. ರಥೋತ್ಸವದ ದಿನ ತಂದೆ ಉತ್ಸವದ ಮೂರ್ತಿ ಹೊರುವಾಗ ಇವನ ಮೈಯಲ್ಲಿ ಸಣ್ಣ ನಡುಕ. ಅತಿ ಭಾವುಕತೆಯಿಂದ ಹೀಗಾದೀತು ಎಂದರೂ, "ಅಣ್ಣಗಳಿರಾ! ಇರುವುದೊಂದೇ ನೋಡಿ. ಎಲ್ಲವನ್ನೂ ಬಿಡಿ!" ಎನ್ನುತ್ತಿದ್ದ ಪ್ರಾಜ್ಞನಂತೆ. ಅವನ ಮಾತಿನ ಅರ್ಥ ಆಗುತ್ತಿರಲಿಲ್ಲ ಯಾರಿಗೂ.

ಜನಾರ್ದನನಿಗೆ ಚಿಂತೆಯಾಗಿತ್ತು ಮಗನ ಬದಲಾದ ವರ್ತನೆ ಕಂಡು. ಪ್ರಾಯಪ್ರಬುದ್ಧನಾದಂತೆ ತನ್ನ ಹಾಗೆ ಅವನೂ ಪೂಜಾ ಕಾರ್ಯಗಳಲ್ಲಿ ಪಳಗುತ್ತಾನೆ, ಶಿವದೇವಾಲಯ ನಡೆಸಿಕೊಂಡು ಹೋಗುತ್ತಾನೆ ಎಂದುಕೊಂಡರೆ ಅವನಲ್ಲಿ ಯಾವ ಲಕ್ಷಣಗಳೂ ಕಾಣಿಸಲಿಲ್ಲ. ಎಲ್ಲೋ ಒತ್ತಾಯಕ್ಕೆ ಕಟ್ಟುಬಿದ್ದವನಂತೆ ಇದ್ದ. "ಹೇ ಭಗವಂತ!" ವಿಲಪಿಸುತ್ತಿದ್ದ ಜನಾರ್ದನ ತನ್ನಲ್ಲೇ, "ನಿನಗೂ ಕರುಣೆಯಿಲ್ಲವೇ. ನಿನ್ನ ಕರುಣೆಯ ಅನುಗ್ರಹದಿಂದ ಹುಟ್ಟಿದವನು ಇವನು. ನಿನ್ನ ಕೊರಳ ಆದಿಶೇಷನ ರೂಪ ಇವನು ಎಂದು ತಿಳಿದವನು ನಾನು. ಆದರೆ ಇದೇಕೆ ಇಷ್ಟು ಜಡಭರತನಾಗಿದ್ದಾನೆ?"

ಈಶ್ವರ, ನಾರಾಯಣರು "ಇವನೊಬ್ಬ ನಿಷ್ಪ್ರಯೋಜಕ" ಎಂದು ತಮಾಷೆ ಮಾಡುವುದಿತ್ತು ಆಗಾಗ. ಆದರೆ ಅನಂತನೂ ತನ್ನ ಮಕ್ಕಳೊಡನೆ ನಾಗರಾಜನನ್ನು ಹೋಲಿಸಿ 'ಹಸಿದಡ್ಡ' ಎನ್ನಬೇಕೇ. ಪಿತೃಸ್ಥಾನಕ್ಕೆ ಮಾಡಿದ ಅಪಮಾನ ಇದು. ಅತಿ ಬುದ್ಧಿವಂತಿಕೆಯಿಂದ ವಂಚನೆಯ ಹಾದಿ ಹಿಡಿದ ಮಕ್ಕಳಿಗಿಂತ ಹಸಿ ದಡ್ಡ ಎಷ್ಟೋ ಪಾಲು ಮೇಲು. ದೇವಸ್ಥಾನದ ಪೌಳಿ ಧರ್ಮಪಠನೆಗೆ, ವೇದಾಧ್ಯಯನಕ್ಕೆ, ಭಕ್ತಾದಿಗಳಿಗೆ ಹಾಯಾಗಿ ಕುಳಿತುಕೊಳ್ಳಲು ಮೀಸಲಾಗಿರಬೇಕಲ್ಲದೆ ಎಂತದೋ ಹಾಳು ದಂಧೆಗಲ್ಲ. ಈಶ್ವರನಿಗೆ ಅದು ಬದುಕುವ ದಾರಿ, ನಿಜ. ಆದರೆ ಇಲ್ಲಲ್ಲ. ಅವನು ಸ್ಪಷ್ಟವಾಗಿ ಆದರೆ ಅಷ್ಟೇ ದೃಢವಾಗಿ ತನ್ನ ನಿರ್ಧಾರ ತಿಳಿಸಿದ, "ಈಶ್ವರ ಪೌಳಿಯಿಂದ ಕದಲದ ಹೊರತು ನಾನು ಪೂಜೆ ಮಾಡುವವನಲ್ಲ! ದೇವರು ಮುನಿದರೆ ಮುನಿಯಲಿ!"

ಈಶ್ವರನಿಗೂ ಅರ್ಥವಾಗಿರಬೇಕು. ಚಿಕ್ಕಪ್ಪನನ್ನು ನೋಯಿಸಿ ಅವನಿಗೆದುರಾಗಿ ತಾನಿಲ್ಲಿ ಕುಳಿತರೆ ಜನರ ನಗೆಪಾಟಲಿಗೆ ಗುರಿಯಾಗಬಹುದು. ಇಲ್ಲಿ ಆಗದಿದ್ದರೇನಂತೆ, ಬೇರೆ ಜಾಗವಿಲ್ಲವೇ ತನಗೆ? ಚಿಕ್ಕಪ್ಪನಿಗೆ ತಾನು ಮಾಡಿ ತೋರಿಸಬೇಕು, ತನ್ನ ಸಾಧನೆ ಏನೆಂದು. ತಾಕತ್ತು ಇದ್ದರೆ ಎಲ್ಲಿಯೂ ಗೆದ್ದು ಬಂದೇನು.

ಅವನು ಸಿಟ್ಟಿನಲ್ಲಿಯೇ ಪೌಳಿಯಿಂದ ತಳ ಕಿತ್ತು, ಅರ್ಧ ಮೈಲು ದೂರದ

ಒಂದು ಅಶ್ವತ್ಥ ಮರದ ನೆರಳನ್ನಾಶ್ರಯಿಸಿದ. ಅಲ್ಲಿ ಕವಡೆಗಳು ಫಲಫಾಲ ಎನ್ನತೊಡಗಿದವು. ಭವಿಷ್ಯ ತಿಳಿಯಬಯಸುವವರ ಮಾತು, ಧ್ವನಿ, ಕಾಲ ಹೆಜ್ಜೆಯ ಸದ್ದಿಗೆ ಮರದ ಮೇಲಿದ್ದ ಹಕ್ಕಿಗಳು ನಕ್ಕವು, ಕುತ್ತಿಗೆ ಉದ್ದುದ್ದ ಮಾಡಿ ನೋಡಿದವು. ಹಾಸಿದ ಜಮಖಾನದ ಮೇಲೆ ಒಂದು ಮಣೆ, ಮಣೆಯ ಮೇಲೆ ಕವಡೆಗಳು, ಪಂಚಾಂಗದ ಕಟ್ಟು, ಕೆಲವು ಪುಸ್ತಕಗಳು. ಈಶ್ವರ ಅವುಗಳೊಡನೆ ಒಂದಾಗಿಹೋದ.

ಮುಂದಿನ ವರ್ಷಗಳಲ್ಲಿ ಈಶ್ವರ ಧನಸಂಪಾದನೆ ಮಾಡಿದ್ದಕ್ಕೆ ಲೆಕ್ಕವಿಲ್ಲ. ಅವನ ಹಣೆಯಲ್ಲಿ ರಾಜಯೋಗ ಬರೆದಿರಬೇಕು. ಅಂಗೈಯಲ್ಲಿ ಕವಡೆ ಕುಣಿಸುತ್ತ ಅಂಗೈಯಿಂದ ಬಾಚತೊಡಗಿದ ಹಣವನ್ನು. ಭವಿಷ್ಯ ತಿಳಿದುಕೊಳ್ಳಲು, ಜಾತಕ ಬರೆಯಿಸಲು, ಮದುವೆ ಮುಂಜಿಗೆ ಮುಹೂರ್ತ ನೋಡಲು ಜನ ಬರತೊಡಗಿದರು. ಇದಿಷ್ಟೇ ಅಲ್ಲ, ಮಕ್ಕಳಿಗೆ ಕಾಹಿಲೆಯಾದರೆ ತಾಯಿತ ಕಟ್ಟಿಸಿಕೊಳ್ಳಲು, ಭಸ್ಮ ಹಾಕಿಸಿಕೊಳ್ಳಲು, ಅವನಿಂದ ಪ್ರೋಕ್ಷಣೆ ಮಾಡಿಕೊಳ್ಳಲು ಜನ ಮುಂದಾದರು. ಬಂದವರಿಗೆ ಎಂದಿಗೂ ಇಲ್ಲ ಎಂದವನಲ್ಲ ಈಶ್ವರ. ಅವರವರ ಕಷ್ಟಕ್ಕೆ ಸರಿಯಾದ ಪರಿಹಾರ ಸೂಚಿಸಿ, ಮನಃಶ್ಶಾಂತಿ ಕೊಡುವುದು ಅವನ ಕರ್ತವ್ಯ. ಅವನ ನಗುಮುಖ, ಮೆಲುಮಾತು, ಪ್ರೀತಿ ಧ್ವನಿಯೇ ಸಾಕು ಸಾಂತ್ವನವೀಯಲು.

ಈಶ್ವರನ ಆದಾಯದೊಂದಿಗೆ ಶಿವದೇವಾಲಯದ ಆದಾಯ ವೃದ್ಧಿಸಿದ್ದೂ ಇನ್ನೊಂದು ಸೋಜಿಗ. ತನ್ನ ಬಳಿ ಕಷ್ಟ ಕೇಳಿಕೊಂಡು ಬರುವ ಜನರಿಗೆ ಸೂಚಿಸುವ ಪರಿಹಾರಮಾರ್ಗದಲ್ಲಿ ಮುಖ್ಯವಾದುವು ಶಿವದೇವಾಲಯಕ್ಕೆ ಕಾಣಿಕೆ ಹಾಕುವುದು, ಶಿವಲಿಂಗಕ್ಕೆ ನೀರಿನ ಅಭಿಷೇಕ, ಮೃತ್ಯುಂಜಯ ಜಪ, ನಂದಿಗೆ ಪ್ರದಕ್ಷಿಣೆ, ಗಣಪತಿಗೆ ಪಂಚಕಜ್ಜಾಯ, ಪಂಚಾಮೃತ ಸೇವೆ ಇತ್ಯಾದಿ. ಅವನು ಹೇಳಿದಂತೆ ಮಾಡುವ ಜನರು ತಮ್ಮ ಕಷ್ಟ ಪರಿಹಾರವಾಗುವ ಮೊದಲು ಅಥವಾ ನಂತರ ಶಿವದೇವಾಲಯಕ್ಕೆ ಬಂದು ಅದನ್ನು ನೆರವೇರಿಸತೊಡಗಿದರು. ಹಿಂದೆಂದೂ ಕಾಣದಷ್ಟು ಭಕ್ತಾದಿಗಳ ಗುಂಪು ಬರತೊಡಗಿತು ದೇವಾಲಯಕ್ಕೆ. ಜನಾರ್ದನನಿಗೂ ಅವರನ್ನು ಕಂಡು ಸಂತೃಪ್ತಿ. ಜನರಲ್ಲಿ ಇನ್ನೂ ಧರ್ಮ, ಭಕ್ತಿ, ಶ್ರದ್ಧೆ ಉಳಿದುಕೊಂಡಿವೆ ಎಂದುಕೊಂಡ ಮೆಚ್ಚುಗೆಯಲ್ಲಿ. ಆದರೆ ಒಂದು ದಿನ ಯಾರೋ ಒಬ್ಬರು.—

"ಅಣ್ಣ ತಮ್ಮಂದಿರ ವ್ಯವಹಾರ ಅಂದರೆ ಹೀಗಿರಬೇಕು ನೋಡಿ! ಅಲ್ಲಿ ಈಶ್ವರಭಟ್ಟರು ಜನರನ್ನು ಚೆನ್ನಾಗಿ ಮರುಳುಮಾಡುತ್ತಿದ್ದಾರೆ. ಇಲ್ಲಿ

ಜನಾರ್ದನಭಟ್ಟರು ಅಮಾಯಕರಂತೆ ತಮ್ಮ ಆರತಿ ತಟ್ಟೆ, ಕಾಣಿಕೆ ಡಬ್ಬ ಭರ್ತಿ ಮಾಡ್ತಾ ಇದ್ದಾರೆ" ಎಂದದ್ದು ಕೇಳಿಸಿತು.

ಈ ಮಾತನ್ನು ಅರ್ಥೈಸಿಕೊಳ್ಳಲು ಕೆಲವು ನಿಮಿಷಗಳು ಬೇಕಾದವು. ಅದೇ ದಿನ ಈಶ್ವರನನ್ನು ತರಾಟೆಗೆ ತೆಗೆದುಕೊಂಡ : "ಜನರಲ್ಲಿ ನಂಬಿಕೆ–ವಿಶ್ವಾಸ ಬೆಳೆಸಬೇಕಾದ ನೀನು ಕೇವಲ ಅಂಧಶ್ರದ್ಧೆ ಹುಟ್ಟಿಸುತ್ತಿದ್ದೀ.ದೇವರ ಹೆಸರು ಹೇಳಿ ನೀನು ಸೂಚಿಸುವ ಪರಿಹಾರಮಾರ್ಗ ಸರಿಯಾದದ್ದಲ್ಲ, ನಿಲ್ಲಿಸಿಬಿಡು."

"ಜನರ ಮನಸ್ಸಿಗೆ ನೆಮ್ಮದಿ ಸಿಗಲು ಇಂತಹ ಒಂದು ತಂತ್ರ ಬೇಕು ಚಿಕ್ಕಪ್ಪ. ನಿಮಗೆ ಗೊತ್ತಿಲ್ಲ, ಶೀನಣ್ಣ ನಾಯ್ಕನ ಕೊನೆ ಮಗನಿಗೆ ವಿಪರೀತ ಗಂಟು ನೋವು, ಔಷಧಿ ಮಾಡಿಸಿ ಸಾಕಾಯ್ತಂತೆ. ನನ್ನಲ್ಲಿ ಪ್ರಶ್ನೆ ಕೇಳಲು ಬಂದಿದ್ದ. ನಾನು ಕೇವಲ ಶಿವದೇವಾಲಯಕ್ಕೆ ಹೋಗಿ ದಿನಾ ಹನ್ನೆರಡು ಅಥವಾ ಇಪ್ಪತ್ತೊಂದು ಪ್ರದಕ್ಷಿಣೆ ಹಾಕಿ ತೀರ್ಥಪ್ರಸಾದ ತೆಗೆದುಕೊಳ್ಳಲಿ ಎಂದೆ. ಹಾಗೇ ಮಾಡಿದ ಅವನು. ಆಶ್ಚರ್ಯವೆಂದರೆ ಅವನಿಗೀಗ ಪೂರಾ ಗುಣವಾಗಿದೆ. ಇದಕ್ಕೆ ಕಾರಣ ಬೆಳಗಿನ ಪ್ರದಕ್ಷಿಣೆ ನೆಪದ ವ್ಯಾಯಾಮ ಇದ್ದೀತು. ಆದರೆ ಅದಕ್ಕಿಂತ ಮಿಗಿಲಾಗಿ ನನ್ನ ಮಾತಿನ ಮೇಲೆ ನಂಬಿಕೆ ಮತ್ತು ಶಿವನ ಅನುಗ್ರಹ! ಈಗ ಹೇಳು, ನಾನು ಅವನನ್ನು ದೇವರ ಸೇವೆಗೆ ಕಳುಹಿಸಿದ್ದು ಮುಖ್ಯವಲ್ಲ. ಅವನಿಗೆ ಗುಣವಾದದ್ದು ಮುಖ್ಯ, ಹೌದೋ ಅಲ್ಲವೋ ?"

ಆದರೂ ಇದು ತಪ್ಪು. ನೀನು ಹೇಳದಿದ್ದರೆ ಅವರೇಕೆ ದೇವಾಲಯಕ್ಕೆ ಪ್ರದಕ್ಷಿಣೆ ಹಾಕ್ತಾರೆ ?"

"ಕೆಲವರಿಗೆ ಹೇಳದೆ, ಒತ್ತಾಯಿಸದೆ ಯಾವುದರಲ್ಲೂ ನಂಬಿಕೆ ಬರುವುದಿಲ್ಲ. ನೆರೆಗ್ರಾಮದ ಒಬ್ಬಳು ಹೆಂಗಸು ಬಂದಿದ್ದಳು ಇಲ್ಲಿಗೆ. ಇನ್ನೂ ಮೂವತ್ತರ ಪ್ರಾಯ. ಅವಳಿಗೆ ಎಂತದೋ ಹಾಳು ಕಾಹಿಲೆ. ಏನು ಅವಳ ಬೊಬ್ಬೆ, ಗಲಾಟೆ, ಅಳು,ಮೈಮೇಲೆ ಭೂತ ಬಂದಂತೆ ನಡುಕ. ಗಾಳಿಗನೋ, ಯಾವುದೋ ಭೂತ ಪ್ರೇತದ ಕಾಟ ಇದ್ದೀತು. ನಾನು ಮಂತ್ರಿಸಿದ ನೀರು ಹಾಕಿದೆ ಅವಳ ತಲೆಗೆ. ತಾಯಿತ ಕೊಟ್ಟೆ. ಯಾವುದೂ ಪರಿಣಾಮ ಬೀರಲಿಲ್ಲ. ಈ ಗಾಳಿಗ, ಭೂತ–ಪ್ರೇತಗಳ ನಿವೃತ್ತಿಗೆ ಶಿವನ ಗಣ–ಬಣಗಳೇ ಬೇಕು. ನಾನು ತೋರಿಸಿದ್ದು ಅದೇ ದಾರಿ. 'ಪ್ರತಿ ಅಮಾವಾಸ್ಯೆಯಂದು ಉಪವಾಸವಿದ್ದು ಈ ಊರ ಶಿವದೇವಾಲಯಕ್ಕೆ ಒಂದು ಬಟ್ಟಲು ತೆಂಗಿನೆಣ್ಣೆ ಕೊಡಬೇಕು ಮತ್ತು ಪ್ರತಿ ಶನಿವಾರ ನಸುಕು ತಲೆಸ್ನಾನ ಮಾಡಿ ದೇವಾಲಯಕ್ಕೆ ಪ್ರದಕ್ಷಿಣೆ ಹಾಕಿ ಪ್ರಸಾದ ತೆಗೆದುಕೊಳ್ಳಬೇಕು. ಅವಳ ಹೆಸರಿನಲ್ಲಿ ಪ್ರತಿ ಶನಿವಾರ ಮೃತ್ಯುಂ

ಜಯ ಜಪ ಮಾಡಿಸಬೇಕು' ಎಂದೆ. ನಾನು ತಿಳಿಸಿದ್ದಂತೆ ಆ ಹೆಂಗಸಿನಿಂದ ಮಾಡಿಸಿದರು ಮನೆಯವರು. ಏನು ದೇವರ ಪವಾಡ! ಒಂದು ತಿಂಗಳಲ್ಲಿ ಅವಳ ಅಳು, ಗಲಾಟೆ ಕಡಿಮೆ ಆಗಿದೆ. ನಂಬಿಕೆಯೇ ಜನರಿಗೆ ಔಷಧಿ, ನಿಜ. ಆದರೆ ನಂಬಿಕೆಗಿಂತ ಮಿಗಿಲಾದದ್ದು ದೇವರ ಶಕ್ತಿ. ಅದು ನಂಬದವರನ್ನೂ ನಂಬಿಸಿ ಕೈಹಿಡಿಯುತ್ತದೆ ಪ್ರೀತಿಯಿಂದ!"

ಈಶ್ವರನ ತರ್ಕಕ್ಕೆ ಪಕ್ಕನೆ ಉತ್ತರ ಸಿಗಲಿಲ್ಲ. ಸ್ವಲ್ಪ ಆಲೋಚಿಸಿ ಹೇಳಿದ: "ನೀನು ಸೂಚಿಸುವ ಪರಿಹಾರಮಾರ್ಗದಿಂದ ದೇವಾಲಯಕ್ಕೆ ಬರುವ ಆದಾಯ ಧರ್ಮಸಮ್ಮತವಾದದ್ದೇ, ಒಪ್ಪಿಕೊಳ್ಳುತ್ತೇನೆ. ಆದರೂ ನಾನೊಂದು ಮಾತು ಹೇಳಲೇ. ನೀನು ನನ್ನ ಅಣ್ಣನ ಮಗ, ರಕ್ತಸಂಬಂಧಿ. ನಾವೆಲ್ಲರೂ ಒಂದೇ ಕುಟುಂಬದಲ್ಲಿ ವಾಸಿಸುವವರು. ಹೀಗಾಗಿ ನಾವು ಅಧರ್ಮ ಮಾಡಿದಂತಾದೀತು. ನಿನ್ನ ಬದಲಿಗೆ ಇನ್ಯಾರೇ ನಿನ್ನ ಸ್ಥಾನದಲ್ಲಿದ್ದರೂ ನನ್ನ ಆಕ್ಷೇಪಣೆ ಇರಲಿಲ್ಲ. ಇಲ್ಲಿ ಮೋಸದ ಪ್ರಶ್ನೆ ಇಲ್ಲ. ಆದರೆ ಜನರು ನಮ್ಮನ್ನು ಆಡಿಕೊಳ್ಳಬಾರದಷ್ಟೆ."

ಈಶ್ವರನ ಮುಖದಲ್ಲಿ ಸಿಟ್ಟು ಕುಣಿಯಿತು, "ಮೋಸ ಇಲ್ಲ ಅನ್ನುತ್ತಿ, ಅಂದ್ಮೇಲೆ ಜನ ಯಾಕೆ ಹೇಳ್ತಾರೆ? ಜನರಿಗಿಂತ ನಿನಗೇ ಅನುಮಾನ ಜಾಸ್ತಿ. ಪೌಳಿಯಿಂದ ನನ್ನ ತಳ ಕೀಳಿಸಿದಿ ಇನ್ನೀಗ ಹಳ್ಳಿಯಿಂದಲೂ ಓಡಿಸುವ ಅಂದಾಜೇ? ಯಾಕೆ ಚಿಕ್ಕಪ್ಪ, ನಿನ್ನ ಮನಸ್ಸಿನಲ್ಲಿ ಏನಿದೆ ಅದನ್ನಾದರೂ ಹೇಳು?"

ಜನಾರ್ದನ ಮಾತನಾಡಲಿಲ್ಲ. ಎಲ್ಲೋ ತಾವು ತಪ್ಪು ಮಾಡುತ್ತಿದ್ದೇವೆಂಬ ಸಂಶಯದ ಕೀಟ ಕೊರೆಯತೊಡಗಿತು ಮನಸ್ಸನ್ನು. ಈ ನಡುವೆ ಮುರಾರಿಯ ಎರಡನೇ ಮಗಳು ತನ್ನ ನಾಲ್ಕನೆಯ ಹೆರಿಗೆಗೆ ಬಂದಾಗ ಬಾಣಂತಿ ಅಸೌಖ್ಯವೆಂದು ಇಲ್ಲೇ ಉಳಿಯುವಂತಾದದ್ದು ದುರದೃಷ್ಟದ ಸಂಗತಿ. ಅವಳ ಗಂಡ ಮೊದಲ ಮೂರು ಮಕ್ಕಳನ್ನು ತಾನಿಟ್ಟುಕೊಂಡು ಇನ್ನೊಂದು ಮದುವೆಯನ್ನೂ ಮಾಡಿಕೊಂಡು, ಇವಳನ್ನು ಮರಳಿ ಕರೆಯಿಸಿಕೊಳ್ಳಲೇ ಇಲ್ಲ. ಮುರಾರಿಯ ಕೊನೆ ಮಗಳು ಮದುವೆಯಾದ ವರ್ಷಕ್ಕೇ ವಿಧವೆಯಾಗಿ ತವರುಮನೆ ಸೇರಿದ್ದು ಇನ್ನೊಂದು ದುರಂತ. ಈ ನೋವಿನ ಗಾಯಕ್ಕೆ ಉಪ್ಪು ಬೆರೆಸಿದ್ದು ಅವಳು ಪೆಟಾರಿ ಮಾಡಲೆಂದು ಬಂದ ಮಲೆಯಾಳಿ ಆಚಾರಿಯೊಡನೆ ಗುಟ್ಟಾಗಿ ವ್ಯವಹರಿಸಿ ಬಸುರಿಯಾದದ್ದು. ಆಗ ಆದ ಗಲಾಟೆಗೆ ಲೆಕ್ಕವಿಲ್ಲ. ಈಶ್ವರ ಮತ್ತು ನಾರಾಯಣನ ಹೆಂಡತಿಯರು ಅವಳದೇ ಪ್ರಾಯದ ಹುಡುಗಿ

ಯಾರಾದರೂ ನಾದಿನಿಯ ಅಪರಾಧ ಲಕ್ಷ್ಮಮ್ಮ ಎಂದೆಣಿಸಿದ್ದು ಮಾತ್ರವಲ್ಲ, ಏನೇನೋ ಹಾಳುಮೂಳು ತಿನ್ನಿಸಿ ಗರ್ಭ ತೆಗೆಯಿಸಲು ಪ್ರಯತ್ನಿಸಿ, ಕೊನೆಗೆ ಅವಳ ಪ್ರಾಣಕ್ಕೆ ಸಂಚಕಾರ ತಂದಿಟ್ಟರು. ನಳನಳಿಸಬೇಕಿದ್ದ ಹೂವು ಮಣ್ಣಿಗೆ ಸೇರಿದಾಗ ಮುರಾರಿ ಅದೇ ಚಿಂತೆಯಲ್ಲಿ ಹಾಸಿಗೆ ಹಿಡಿದು ಕಣ್ಣುಮುಚ್ಚಿದ. ಆಗ ಅವನಿಗೆ ಇನ್ನೂ ನಲ್ವತ್ತೆರಡರ ಪ್ರಾಯ. ಮುಂದೆ ನಾಲ್ಕು ವರ್ಷದಲ್ಲಿ ಅನಂತನೂ ವಿಷದ ಹಾವು ಕಚ್ಚಿದ ನೆಪದಿಂದ ತಮ್ಮನ ಹಾದಿ ಹಿಡಿದು. ಇನ್ನೀಗ ಉಳಿದವರು ಆ ಕುಟುಂಬಕ್ಕೆ ಹಿರಿಯರಾಗಿ ಜನಾರ್ದನಭಟ್ಟರು ಒಬ್ಬರೇ.

ಮೊದಲೆಲ್ಲ ಮನೆ ವ್ಯವಹಾರದಲ್ಲಿ ಕೈಹಾಕದ ಜನಾರ್ದನಭಟ್ಟರಿಗೆ ಅಣ್ಣನ ನಂತರವೇ ಮನೆಯಲ್ಲಿ ನಡೆಯುತ್ತಿದ್ದುದರ ವಾಸ್ತವದ ಅರಿವು ಮೂಡಿದ್ದು. ಮನೆದೇವಿಗೆ ನಿಷ್ಠೆಯಿಂದ ನಾಗರಾಜ ಪೂಜೆ ಮಾಡುತ್ತಿದ್ದ. ಅದರಲ್ಲಿ ಯಾವ ಲೋಪವೂ ಬಂದಿರಲಿಲ್ಲ. ಆದರೆ.... ಅವರು ಯಾವುದನ್ನು ನೋಡಬಾರದು ಎಂದುಕೊಂಡಿದ್ದರೋ ಅದನ್ನೇ ನೋಡಿದರು ಬೆರಗಿನಿಂದ, ಭೀತಿಯಿಂದ. ಹೌದು, ನಾರಾಯಣನ ಕೈಯಲ್ಲಿ ಖಾಲಿಯಾಗುತ್ತಿತ್ತು ದೇವಾಲಯದ ಕಾಣಿಕೆ ಡಬ್ಬಿ, ಆರತಿ ತಟ್ಟೆ. ನಾರಾಯಣನ ಕೊಡಲಿಯೇಟಿನ ಪ್ರಹಾರಕ್ಕೆ ಬಲಿಯಾಗಿದ್ದವು ಆ ಜಮೀನಿನ ಹೆಮ್ಮರಗಳು. ಗೇಣಿ ಕೊಡುವುದು ಪೂರಾ ನಿಂತು ತಾವೇ ಭೂಪಾಲಕರೆಂಬ ಗರ್ವ ಮೆರೆಯುತ್ತಿತ್ತು. ಮನೆ ಹೆಂಗಸರ ಮೈ ಮೇಲೆ ಹೊರಲಾರದಷ್ಟು ಚಿನ್ನಾಭರಣಗಳು. ಅವರು ನೋಡಿದರು ದುಃಖದಿಂದ, ನಲುಗಿದರು ಪಾಪಪ್ರಜ್ಞೆಯಿಂದ. ತನ್ನ ಅಣ್ಣ ಮತ್ತು ತಮ್ಮನ ಧೈರ್ಯಕ್ಕೆ. ಈಗ ನಾರಾಯಣನ ಸರ್ವಾಧಿಕಾರಕ್ಕೆ ದಿಗಿಲಾಗಿಹೋಯಿತು. ಮೊಟ್ಟಮೊದಲು ಪ್ರತಿಭಟಿಸಿದರು, ಗದರಿದರು ನಾರಾಯಣನನ್ನು.

"ಭಕ್ತಾದಿಗಳು ಆರತಿ ತಟ್ಟೆಗೆ ಹಾಕುವ ಹಣ ತೆಗೆದುಕೊಳ್ಳುವ ಅಧಿಕಾರ ನಮಗಿದೆ. ಆದರೆ ಕಾಣಿಕೆ ಡಬ್ಬಿ ಪೂರಾ ದೇವಾಲಯದ ಸೊತ್ತು. ಅದನ್ನು ಮುಟ್ಟುವುದೂ ಪಾಪ. ಎಷ್ಟು ಸಮಯದಿಂದ ನಡೀತಾ ಇದೆ ಈ ಕಾರುಭಾರ ?"

ಗಹಗಹಿಸಿ ನಕ್ಕ ನಾರಾಯಣ. "ಅಪ್ಪ, ಮುರಾರಿ ಚಿಕ್ಕಪ್ಪ ಮಾಡಿದ್ದನ್ನೇ ನಾನೂ ಮಾಡ್ತಿದ್ದೇನೆ. ನೀವು ಗೊತ್ತಿಲ್ಲದವನಂತೆ ನಟಿಸ್ತಾ ಇದ್ರಿ ಚಿಕ್ಕಪ್ಪ. ಕಾಣಿಕೆ ಡಬ್ಬಿ ಹಣದಿಂದಲೇ ಗರ್ಭಗುಡಿ ಕಳಸಕ್ಕೆ ಬೆಳ್ಳಿ ಮುಂಗಳಿ ಮಾಡಿಸಿದ್ದು, ಕಲ್ಲಿನ ಪಾಗಾರ ಮತ್ತಷ್ಟು ಏರಿಸಿದ್ದು, ಎರಡು ಹೆಬ್ಬಾಗಿಲ ಗಂಟೆ

ತಂದದ್ದು, ಕೆರೆಗೆ ಕಲ್ಲು ಕಟ್ಟಿಸಿದ್ದು. ಇನ್ನೂ ಎಷ್ಟೋ ಕೆಲಸ ಆಗಿದೆ. ಮತ್ತೆ ಅದೆಲ್ಲ ಮನೆಹಣದಿಂದ ಆದದ್ದು ಅಂದುಕೊಂಡೆಯಾ ?''

ಆದರೆ ಅವಕ್ಕೆಲ್ಲ ಹೆಚ್ಚು ಖರ್ಚಾಗಿಲ್ಲ. ತಮ್ಮ ಹೆಡ್ಡು ಮುಂಡೆಗೆ ಇಷ್ಟು ವರ್ಷಗಳೂ ಏನೊಂದು ತಿಳಿಯಂದೆ ಹೋಗಿದೆ. ತಾವು ಅತ್ತ ಲಕ್ಷ್ಯಕೊಡದೆ ಆದ ಅಪರಾಧ. ಅನಂತರದ ದಿನಗಳಲ್ಲಿ ತಮ್ಮ ವಾಸದ ಮನೆ, ತಿನ್ನುವ ಅನ್ನ, ತೊಡುವ ಬಟ್ಟೆ, ಅಲ್ಲಿದ್ದ ಗಾಳಿ, ಬೆಳಕು, ನೀರು ಎಲ್ಲವೂ ಇನ್ಯಾರದೋ ಎಂಬ ಭಾವ ಬಲಿಯುತ್ತ ಮನೆಗೆ ಬರುವುದನ್ನು ಕಡಿಮೆ ಮಾಡಿಬಿಟ್ಟರು. ಹೆಂಡತಿಯ ಮೈಮೇಲಿದ್ದ ಆಭರಣಗಳನ್ನು ಒತ್ತಾಯದಲ್ಲಿ ತೆಗೆಸಿ ಮರದ ಪೆಟಾರಿಗೆ ಹಾಕಿದ ಮೇಲೇ ಅವರಿಗೆ ಸಮಾಧಾನ. ನಾಗರಾಜನಿಗೆ ಮದುವೆಯಾಗಿ ನೂತನ ವಧು ಮನೆ ತುಂಬುವಾಗ ಅರಿಸಿನ ದಾರದಲ್ಲಿ ಕಟ್ಟಿದ ತಾಳಿ ಒಂದೇ ಅವಳ ಮೈಯ್ಯನ್ನು ಅಲಂಕರಿಸಿದ್ದು. ''ಒಂದು ಚೂರು ಚಿನ್ನ ಮನೆಯಿಂದ ಮುಟ್ಟಲಾರೆ'' ಎಂದವರ ಶಪಥ. ಆಶ್ಚರ್ಯವೆಂದರೆ ನಾಗರಾಜನಿಂದಲೂ ತಕರಾರಿಲ್ಲ. ನಗುಮುಖದಿಂದ ಒಪ್ಪಿಕೊಂಡ ತಂದೆಯ ಮಾತನ್ನು.

ಆದರೆ ಈಶ್ವರನಿಗೆ ನೇರ ಮುಖಕ್ಕೆ ಹೊಡೆದಂತಾಯಿತು ಅವರ ಈ ವರ್ತನೆ. ನಾಗರಾಜನಿಗೂ ಅವನಿಗೂ ವಯಸ್ಸಿನಲ್ಲಿ ಬಹಳಷ್ಟು ಅಂತರವಿತ್ತು. ಆ ಕಾರಣವೋ ಅಥವಾ ನಾಗರಾಜನ ಸೌಮ್ಯ ಸ್ವಭಾವವೋ, ಈಶ್ವರನಿಗೆ ಅವನೆಂದರೆ ಎಣೆಯಿಲ್ಲದ ಪ್ರೀತಿ. ಅವನ ಮದುವೆ ಗೌಜಿಯಲ್ಲಿ ಮಾಡಬೇಕು ಎನ್ನುವಾಗಲೇ ಗಲಾಟೆ ಎಬ್ಬಿಸಿದ್ದರು ಜನಾರ್ದನಭಟ್ಟರು. ಶಿವದೇವಾಲಯದಲ್ಲಿ ಸರಳವಾಗಿ ಎಂದವರ ಹಠ. ಮಾತಿಲ್ಲದೆ ಒಪ್ಪಿದ ಈಶ್ವರನೂ. ಆದರೆ ಹುಡುಗಿಗೆ ಚಿನ್ನಾಭರಣವೂ ಹಾಕಬೇಡವೇ ? ಅವನು ಹುಬ್ಬೇರಿಸಿದ್ದ ಸಿಟ್ಟಿನಲ್ಲಿ.

''ನಮ್ಮ ಹೆಂಡತಿ–ಮಗಳಂದಿರು ಅಷ್ಟೊಂದು ಆಭರಣ ಹಾಕಿ ಮೆರೆಯುವಾಗ ನಿನ್ನ ಸೊಸೆ ಬಿಚ್ಚೋಲೆ ಗೌರಮ್ಮನಂತೆ ಇರಬೇಕೇ ? ನಾವೇನು ಅನ್ಯಾಯ ಮಾಡಿದ್ದೇವೆ ? ಧರ್ಮದ ಹಾದಿ ತಪ್ಪದಂತೆ ನಡೆದವನು ನಾನು. ಹಣದ ವಿಲೇವಾರಿಯೇನೋ ನಾರಾಯಣನ ಮೇಲಿದೆ. ಅಷ್ಟಕ್ಕೇ ಸಿಟ್ಟು ಮಾಡಿ ಸಣ್ಣ ವಿಷಯದಲ್ಲೂ ತಪ್ಪು ತೋರಿಸಿ ನಮ್ಮನ್ನು ಆರೋಪಿಯನ್ನಾಗಿ ಮಾಡುವುದೇ ?''

ಜನಾರ್ದನಭಟ್ಟರು ಕಿವುಡರಾದರು ಅವನ ಮಾತಿಗೆ. ಸೊಸೆ ಬಂದ ಮೇಲೆ ನವರಾತ್ರಿಯ ಒಂಬತ್ತು ದಿನಗಳ ಹೊರತಾಗಿ ವರ್ಷದ ಉಳಿದೆಲ್ಲ

ದಿನಗಳೂ ಮನೆಗೆ ಬರುವುದು ಪೂರಾ ನಿಂತುಹೋಯಿತು. ದೇವಾಲಯದ ಒಂದು ಕೋಣೆಯಲ್ಲಿ ಕಳೆದರು ತಮ್ಮ ಶೇಷಾಯುಷ್ಯದ ದಿನಗಳನ್ನು ನಿರ್ಲಿಪ್ತ ರಾಗಿ, ಈ ಭವಬಂಧನದಿಂದ ದೂರವಾಗಿ. ಅವರು ಸಾಯುವ ಎರಡು ದಿನ ಗಳ ಮೊದಲು ನಾಗರಾಜನ ಕೈಹಿಡಿದು, "ಮಗು, ನನ್ನ ನಂತರ ನೀನೇ ಈ ದೇವಾಲಯದ ಪೂಜೆ ಮುಂದುವರಿಸಿಕೊಂಡು ಹೋಗು. ಮನೆದೇವಿಯಲ್ಲೂ ಲೋಪ ಬರದಂತೆ ನೋಡಿಕೋ. ಆದರೆ ಎಲ್ಲಿಯೂ ಧರ್ಮದ ಹಾದಿ ತಪ್ಪ ಬೇಡ. ನಿನ್ನ ಸಂಸಾರ ನಿರ್ಗತಿಕವಾದರೂ ಧರ್ಮ ನಿನ್ನನ್ನು ಕಾಪಾಡುತ್ತದೆ" ಎಂದರು ಗದ್ಗದಿತರಾಗಿ.

ತಂದೆಯ ನಂತರ ಅವರ ಸ್ಥಾನ ಅಲಂಕರಿಸಲು ನಾಗರಾಜನಿಗೆ ಮನಸ್ಸಿ ರಲಿಲ್ಲ. ಮನೆದೇವಿ ಪೂಜೆ ಒಂದೇ ಸಾಕು ತನಗೆ ಎಂದಿದ್ದ. ಆದರೆ....

* * *

"ಏಳು, ಇಲ್ಲೇನು ಹೀಗೆ ಮಲಗಿದ್ದೀ ?"

ಯಾರೋ ಮೈದಡವಿ ಎಬ್ಬಿಸಿದಾಗ ನರಹರಿ ದೊಡ್ಡದಾಗಿ ಕಣ್ಣು ಬಿಟ್ಟು ಎಂತಹ ಮಂಪರೋ, ತಾನೆಲ್ಲಿದ್ದೇನೆಂದು ತಿಳಿಯಲು ಎರಡು ನಿಮಿಷ ಬೇಕಾ ದವು. ಅವನು ಬೋರಲಾಗಿ ಬಿದ್ದಿದ್ದ ಗರ್ಭಗುಡಿಯ ಮೆಟ್ಟಿಲಿನ ಬದಿಯಲ್ಲಿ. ಮೈ ಕೈ ಎಲ್ಲಾ ಮರಗಟ್ಟಿತ್ತು ಕಲ್ಲಿನ ಶೀತಕ್ಕೆ. ಎದ್ದು ಮೈ ಮುರಿದು ಆಕಳಿ ಸಿದ. ತೀರ ಸಮೀಪ ಯಾರೋ ಕುಳಿತಿದ್ದಾರೆ ಕುಕ್ಕುರುಗಾಲಿನಲ್ಲಿ. ಮುತ್ತ ಜ್ಜನೇ, ಅಜ್ಜನೇ ? ಕಣ್ಣರಳಿಸಿ ದಿಟ್ಟಿಸಿದ ಕತ್ತಲೆಯಲ್ಲಿ. ಕುಳಿತವರ ಕೈಯಲ್ಲಿದ್ದ ಟಾರ್ಚ್ ಬೆಳಗಿದಾಗ ತಿಳಿಯಿತು, ಅವರು ಶಂಕರಯ್ಯ ! ಅವರ ಕಣ್ಣುಗಳಿಂದ ಇಳಿಯುತ್ತಿದ್ದ ನೀರನ್ನು ಕಂಡು ಅವಾಕ್ಕಾಗಿ ಹೋದ. ರಾತ್ರಿ ತನಗೂ ತಂದೆಗೂ ಆದ ಗಲಾಟೆ, ಆಮೇಲೆ ತಾನಿಲ್ಲಿಗೆ ಬಂದದ್ದು, ಪ್ರದಕ್ಷಿಣೆ ಹಾಕಿದ್ದು ನೆನಪಾ ಯಿತು. ಆಗಸದ ಚುಕ್ಕಿಗಳನ್ನು ನೋಡಿದರೆ ಬೆಳಗಿನ ನಾಲ್ಕುಗಂಟೆ ಇದ್ದೀತು. ಈ ಅವೇಳೆಯಲ್ಲಿ ಅವನನ್ನು ಹುಡುಕುತ್ತ ಬಂದಿದ್ದಾರೆ ಶಂಕರಯ್ಯ. ಪ್ರಾಯಶಃ ಅವರೂ ಇಲ್ಲಿನ ಪಾಗಾರ ಹಾರಿ ಒಳಬಂದಿರಬೇಕು.

"ಅಲಕಾ ತುಂಬಾ ಗಾಬರಿಯಾಗಿದ್ದಾಳೆ. ನೀನು ಮನೇಲಿಲ್ಲ ಎಂದು ಎರಡು ಗಂಟೆ ರಾತ್ರಿಗೆ ಎಬ್ಬಿಸಿ ಹೇಳಿದಳು. ಆಗಿನಿಂದಲೂ ನಿನಗಾಗಿ ಹುಡುಕುತ್ತಾ ಇದ್ದೇನೆ. ನೀನಿಲ್ಲಿಗೆ ಬಂದಿದ್ದೀಯ. ಏನೋ, ನಾನು ಆಡಿದ ಮಾತಿಗೆ ಹೀಗೆ ಮುನಿಸಿನಿಂದ ಇಲ್ಲಿಗೆ ಬಂದದ್ದೋ. ನಡಿ ಮನೆಗೆ." ಎರಡೂ ಕೈಗಳಿಂದ ಅವನನ್ನು

ಎಬ್ಬಿಸಿ ವೈದ್ಯಡವಿ ಶಂಕರಯ್ಯ ಅವನ ಹಣೆಗಾಯ ಸರ್ವದರೂ ಆತ್ಮೀಯ ವಾಗಿ.

ಮುಂದೆ ಎರಡು ದಿನಗಳಾದರೂ ತ್ಯಾಂಪ ಬರಲಿಲ್ಲ. ಚಾಮುಕ್ಕಿ ಮನೆ ಯಿಂದ ಸುದ್ದಿ ಬಂದಿತ್ತು. ಗೌರಿ ಎರಡು ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ ಳಂತೆ. ನರಹರಿಗೆ ದಿಗಿಲಾಗಿಹೋಗಿ ಬುದ್ಧಿ ಹೇಳಲೇ ಎಂದುಕೊಂಡ. ಆದರೆ ಮತ್ತೊಮ್ಮೆ ತನ್ನ ಬಾಯಿಯಿಂದ ಹಾಳು ಶಬ್ದಗಳು ಹೊರಬೀಳಬಾರದೆಂದು ಸುಮ್ಮನಾದ.

ನವರಾತ್ರಿ ಮುಗಿದ ಮರುದಿನ ಮಹಂತಯ್ಯನವರು ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಹಿಂದಿರುಗಿದರು. ಈಗಲೂ ಅವರ ಆರೋಗ್ಯದಲ್ಲಿ ಹೆಚ್ಚಿನ ಬದಲಾವಣೆಯಿಲ್ಲ. ಇಲ್ಲಿಂದ ಹೋಗುವಾಗ ಇದ್ದಂತೆ ಇದ್ದ ದೇಹ ಸ್ಥಿತಿ. ಬಲಗೈ ಮತ್ತು ಬಲಗಾಲು ಮರಗಟ್ಟಿ ನಿರ್ಜೀವವಾಗಿದೆ. ಇನ್ನು ಅವು ನಿಷ್ಪ್ರಯೋಜಕ. ಹಳ್ಳಿ ಎಣ್ಣೆ ಲೇಪ ಮಾಡಿಸಿ ನೋಡಿ ಎಂದಿದ್ದಾರೆ ಸುಬ್ರಹ್ಮಣ್ಯ ಡಾಕ್ಟರರು. ಮಾತು ಅಸ್ಪಷ್ಟ. ಅರ್ಥ ಮಾಡಿಕೊಳ್ಳುವುದು ಕಷ್ಟ. ಕುತ್ತಿಗೆಯ ಮೇಲೆ ಮುಖ ಮತ್ತು ತಲೆ ಸ್ವಾಧೀನ ತಪ್ಪಿದಂತೆ ಸ್ವಲ್ಪ ಅಲುಗಾಟ. ಅವರ ಕಷ್ಟ ನೋಡಲಸಾಧ್ಯ. ಯಾವ ಜನ್ಮದ ಪಾಪವೋ. ಅವರ ಹೆಸರಿನಲ್ಲಿ ಮೃತ್ಯುಂಜಯ ಜಪ. ಶತರುದ್ರ ನಡೆಯುತ್ತದೆ ಮನೆಯಲ್ಲಿ ಮತ್ತು ದೇವಾಲಯದಲ್ಲಿ. ಶಾಂತಿಹೋಮ ಮಾಡಬೇಕು ಎಂದಿದ್ದಾರಂತೆ ಯಾರೋ ಅವರ ಜಾತಕ ನೋಡಿ. ಅದಕ್ಕೂ ಸನ್ನಾಹ ನಡೆಯುತ್ತಿದೆ.

ಅವರನ್ನು ನೋಡಲೆಂದು ನರಹರಿ ಬಂದಾಗ ಸೋಮಶೇಖರ ಮಾಸ್ತರರೂ ಇದ್ದರು ಅವರ ಮನೆಯಲ್ಲಿ. ಭಾಗ್ಯಮ್ಮ ಆಗಷ್ಟೇ ಆಸ್ಪತ್ರೆ ಕಷ್ಟ ಹೇಳಿಕೊಂಡು ಅತ್ತು ಮುಗಿಸಿದ್ದರು, ನರಹರಿಯನ್ನು ನೋಡಿದಾಕ್ಷಣ ಕಣ್ಣೀರು ಹರಿದು ಸ್ವರ ತಾರಕಕ್ಕೇರಿತು.

"ಇದಕ್ಕೆ ಯಾವ ನಿವೃತ್ತಿಯೂ ಇಲ್ಲ. ಗಟ್ಟಿಯಾದ ಜೀವ ಹೀಗೆ ಮಲಗಿದ್ದಲ್ಲೇ ಆಗಬೇಕೇ ? ಅದರ ಬದಲಿಗೆ ನನಗಾದರೂ ಈ ಅವಸ್ಥೆ ಬರಬಾರದಿತ್ತೇ. ನನ್ನ ಕರ್ಮ, ದೇವರು ಇನ್ನಾದರೂ ನನ್ನನ್ನು ಬೇಗ ಕರೆಯಿಸಿಕೊಳ್ಳ ಬಾರದೇ ?"

ಗಂಗಾಧರ ಮುಖ ಕಿವುಚಿಕೊಂಡ, "ಹೀಗೆ ಬಂದವರೆದುರು ನೀನು ಅಳ್ತಾ ಇದ್ದರೆ ಯಾರು ಬರ್ತಾರೆ ಇಲ್ಲಿಗೆ ? ಹೋಗು ಒಳಗೆ."

"ಇರಲಿ ಬಿಡಿ, ದುಃಖ ಹೇಳಿಕೊಂಡು ಅತ್ತಾಗಲೇ ಅವರಿಗೆ ಸಮಾಧಾನ

ಸಿಕ್ಕೀತು. ಈ ದಿನಗಳಲ್ಲಿ ಅವರ ಪಾಡಿಗೆ ಇರಲಿ.''

''ಚೆನ್ನಾಗಿ ಹೇಳಿದಿರಿ, ಆಸ್ಪತ್ರೆಯಲ್ಲಿದ್ದಾಗಲೂ ಇವಳದೇ ಗೋಳು. ಎಲ್ಲರ ಮುಂದೆ ಗಲಾಟೆ. ಮನೆಗೆ ಬಂದರೂ ಇದೇ ಹಾಡು. ನಮ್ಮ ಕಷ್ಟ ನಮಗೆ. ಅದನ್ನು ಬೇರೆಯವರಿಗೆ ಹೇಳಿ ಅವರ ಕಿವಿ ಕೊರೀಬಾರದು. ಸಹಿಸಿ ಕೊಳ್ಳಲು ಕಲಿಯಬೇಕಲ್ಲವೇ—''

ಮಹಂತಯ್ಯನವರ ಕಣ್ಣುಗಳಿಂದ ನೀರಿಳಿಯುವುದನ್ನು ನೋಡಲಾಗಲಿಲ್ಲ ನರಹರಿಗೆ. ಅಪ್ಪ ಹೇಳುವುದೆಲ್ಲ ನೆನಪಾಗುತ್ತದೆ. ''ಒಬ್ಬ ವ್ಯಕ್ತಿಯ ಇನ್ನೊಂದು ಮುಖ ಯಾವಾಗಲೂ ಜನರಿಗೆ ಅಪರಿಚಿತ. ಅದನ್ನು ಮರೆಯಿಸುವಷ್ಟು ಉತ್ತಮ ಕಾರ್ಯ ಮಾಡಿದಾಗ ಜನರ ದೃಷ್ಟಿಯಲ್ಲಿ ಅವನು ತೂಕವುಳ್ಳ ಮನುಷ್ಯ. ಮಹಂತಯ್ಯ ಮಾಡಿದ್ದು ಇದನ್ನೇ. ಅದೆಲ್ಲ ನಿನಗೆ ಹೇಳಬಾರದು, ನೀನು ಕೇಳಬಾರದು!''

ಹಳೆ ನೆನಪಿನಿಂದ ಅವರ ಮುಖ ಗಂಭೀರವಾಗುತ್ತದೆ. ಆಗೆಲ್ಲ ನರಹರಿಗೆ ಅನುಮಾನ. ಅಪ್ಪನಿಗೆ ಬಹಳಷ್ಟು ತಿಳಿದಿದ್ದರೂ ತನ್ನಿಂದ ಎಲ್ಲವನ್ನೂ ಅಡಗಿಸಿಡುತ್ತಾರೆ. ಮನಸ್ಸಾದರೆ ಆಗಾಗ ಒಂದಷ್ಟು ಹೇಳುತ್ತಾರೆ. ಮಹಂತಯ್ಯ ತಮ್ಮ ಅಪರಿಚಿತ ಮುಖ ಮರೆಯಿಸಿಕೊಂಡು ಸೀದಾ ಸಾದಾ ಉದಾರ ವ್ಯಕ್ತಿಯಾದರು, ನಿಜ. ಆ ಅಪರಿಚಿತ ಮುಖದ ಹಿಂದೆ ಇದ್ದದ್ದು ಏನು? ಕ್ರೌರ್ಯ, ಹಿಂಸೆ, ದಬ್ಬಾಳಿಕೆ, ಒಂದು ಹೆಣ್ಣಿನ ಶೋಷಣೆ! ಆ ಹೃದಯದಲ್ಲಿತ್ತು ಹಣದ ದಾಹ, ಭೂಮಿ ಮೋಹ, ಒಡಹುಟ್ಟಿದ ಸಹೋದರನ ಪಾಲು ಕಬಳಿಸುವ ತಂತ್ರ! ಇಪ್ಪತ್ತೈದು ವರ್ಷಗಳ ಹಿಂದೆ ಊರು ಬಿಟ್ಟು ಹೋದ ಅವರ ತಮ್ಮನ ಹೆಂಡತಿ ನೀರಜ ಎಲ್ಲೋ ಇದ್ದಾಳೆ ಅಜ್ಞಾತವಾಸಿಯಾಗಿ. ಎಲ್ಲಿದ್ದಾಳೆಂದು ಮಹಂತಯ್ಯನವರಿಗೆ ತಿಳಿದಿರಬಹುದು. ಆದರೆ ತಿಳಿಯದಂತೆ ನಟನೆ! ಎರಡು ಬಾರಿ ಊರಿಗೆ ಬಂದಿದ್ದಳು. ಆಗ ಉಳಿದದ್ದು ಶಂಕರಯ್ಯನ ಮನೆಯಲ್ಲಿ. ಆ ವಿಷಯ ಮಹಂತಯ್ಯನವರಿಗೆ ಕೆಲಸದವರಿಂದ ತಿಳಿದರೂ ಶಂಕರಯ್ಯನವರನ್ನು ಕೇಳಲಿಲ್ಲ, ಅವರೂ ಚಕಾರ ಎತ್ತಲಿಲ್ಲ.

ನರಹರಿಗೆ ಕುತೂಹಲವಾಗಿತ್ತು. ತಾನೆಂದೂ ಕಾಣದ ನೀರಜಳ ಮೇಲೆ ಅನುಕಂಪವುಕ್ಕಿ ಒಮ್ಮೆ ನೋಡುವ ಆಸೆಯಾಗಿತ್ತು. ಆದರೆ ಶಂಕರಯ್ಯ ತಡೆದಿದ್ದರು ಅವನನ್ನು: ''ಅವಳು ಈ ಊರಿಗೆ ಬರದಿರುವುದೇ ಒಳ್ಳೆಯದು. ಅವಳ ಪಾಡಿಗೆ ಹಾಯಾಗಿದ್ದಾಳೆ. ಈಗಂತೂ ವಯಸ್ಸೂ ಆಗಿದೆ.''

ತಂದೆ ಹೇಳಿದ್ದೆಲ್ಲ ಈ ಹೊತ್ತಿನಲ್ಲಿ ಏಕೆ ನೆನಪಾಗುತ್ತಿದೆ? ತಲೆ ಕೊಡಹಿ

ಕೊಂಡ ನರಹರಿ, ವಿಷಯ ಬದಲಿಸಲು. "ನೀವು ಅಜ್ಜನ ಮನೆಯಿಂದ ಯಾವಾಗ ಬಂದಿರಿ ಮಾಸ್ತರರೇ?"— ಕೇಳಿದ ಸೋಮಶೇಖರ ಮಾಸ್ತರರತ್ತ ಹೊರಳಿ.

ಶಾಲೆಗೆ ನವರಾತ್ರಿ ರಜೆ ಸಿಕ್ಕಿದಾಕ್ಷಣ ಅವರು ಹಾಸನದಲ್ಲಿರುವ ತಮ್ಮ ತಾಯಿಯ ತಂದೆ ಮನೆಗೆ ಹೋಗಿದ್ದರು. ಇನ್ನೆರಡು ದಿನಗಳಲ್ಲಿ ಶಾಲೆ ಪ್ರಾರಂಭ. "ನಿನ್ನೆಯಷ್ಟೇ ಬಂದೆ. ಅಂದ್ಹಾಗೆ ನಿಮ್ಮ ಹೊಸ ಮಾಸ್ತರರ ಅನ್ವೇಷಣೆ ಎಲ್ಲಿ ತನಕ ಬಂದಿತು ?"— ಕೇಳಿದರು ನಗುತ್ತ.

ಈ ವೇಳೆಗಾಗಲೇ ನರಹರಿ ಅಥವಾ ಬೇರೆ ಯಾರಾದರೂ ಶಾಲೆಗೆ ಒಬ್ಬ ಸಹಶಿಕ್ಷಕರನ್ನು ಹುಡುಕಿರುತ್ತಾರೆ ಎಂದವರ ನಿರೀಕ್ಷೆ. ನರಹರಿಗೆ ನೆನಪಿತ್ತು. ಆದರೆ ಮಹಂತಯ್ಯನವರನ್ನು ಈ ಸ್ಥಿತಿಯಲ್ಲಿ ಕೇಳುವುದು ಹೇಗೆ ? ಈ ವಿಷಯದಲ್ಲಿ ಇಬ್ಬರಿಗೂ ಸ್ವಲ್ಪ ಮಾತಾಯಿತು. ಕೊನೆಗೆ ನರಹರಿ ಅಂದ: "ಶಾಲೆ ಶುರು ಆದ್ಮೇಲೆ ನೋಡೋಣ. ಏನಾದರೂ ದಾರಿ ಇದ್ದೀತು !"

"ನಿಜ, ನಾನು ರಿಟೈರ್ ಆಗುವ ಕಾಲಕ್ಕೆ ಒಬ್ಬ ಬೇಕೇ ಬೇಕಲ್ಲ!"

ಮಾಸ್ತರರ ಮಾತು ಮುಗಿಯುವ ಮೊದಲೇ ಜೋರಾಗಿ ತಲೆ ಅಲ್ಲಾಡಿಸಿದರು ಮಹಂತಯ್ಯ. ಅವರಿಗೆ ಏನೋ ಹೇಳುವ ತವಕ. ಆದರೆ ತೊದಲುವಿಕೆಯಿಂದ ಅರ್ಥವಾಗಲಿಲ್ಲ ಯಾರಿಗೂ.

"ಏನು ಹೇಳಬೇಕು ಅಪ್ಪಾ? ಕಾಗದ ಪೆನ್ನು ತರಲೇ ?"— ಕೇಳಿದ ಗಂಗಾಧರ ಅವರತ್ತ ಬಗ್ಗಿ.

ಕಾಗದ ಪೆನ್ನು ಬಂತು. ಪೆನ್ನನ್ನು ಅವರ ಎಡಗೈಗೆ ಕೊಟ್ಟು ದಪ್ಪ ರಟ್ಟಿನ ಮೇಲೆ ಕಾಗದ ಇಟ್ಟು ಗಂಗಾಧರ ಅವರ ಸಮೀಪಕ್ಕೆ ಸರಿದು ಕುಳಿತ, ಅವರಿಗೆ ಬರೆಯಲು ಅನುಕೂಲವಾಗುವಂತೆ. ಎಡಗೈಯ್ಯಲ್ಲಿ ಬರೆಯುವುದು ಕಷ್ಟವೇ. ಬಹು ಪ್ರಯಾಸದಿಂದ ಕಾಗದದ ಮೇಲೆ ಅಂಕುಡೊಂಕಾಗಿ ಮೂಡಿದವು ಅಕ್ಷರಗಳು. ಅವರು ಬರೆದುದನ್ನು ನೋಡುತ್ತ ಗಂಗಾಧರನ ಹುಬ್ಬುಗಳು ಹೆಣೆದುಕೊಂಡವು. ನರಹರಿ ಮತ್ತು ಸೋಮಶೇಖರ ಮಾಸ್ತರರು ಆ ಕಾಗದ ಕೈಗೆತ್ತಿಕೊಂಡು ನೋಡುತ್ತಾರೆ, ಒಂದು ಕ್ಷಣ ಅರ್ಥವಾಗಲೇ ಇಲ್ಲ. ಇದರಲ್ಲಿ ಬರೆದದ್ದು ಸತ್ಯವೇ ?

"ಹೊಸ ಮಾಸ್ತರರನ್ನು ಮಾಡಿಕೊಳ್ಳಿ. ಅವರ ತಿಂಗಳ ಸಂಬಳದ ಏರ್ಪಾಡು ನನಗಿರಲಿ !"

ಯಾವುದರ ಬಗ್ಗೆ ನರಹರಿ ಕೇಳಬೇಕೆಂದು ಹಿಂದೆ ಯೋಚಿಸಿದ್ದನೋ

ಅದು ಅನಾಯಾಸವಾಗಿ ಒದಗಿಬಂದಿತ್ತು ಈ ದಿನ. ತನ್ನ ಸ್ಥಿತಿ ಹೀಗಾಯಿತೆಂಬ ದುಃಖ ಕಾಡಿದ ಕಾರಣವೇ ಅವರು ಉದಾರ ಕೊಡುಗೆ ನೀಡಲು ಸಜ್ಜಾದರೇ ? ತಿಂಗಳು ಮುನ್ನೂರು ಕೊಟ್ಟರೂ ಸಾಕು, ಒಬ್ಬ ಸಹಾಯಕನ ನೇಮಕ ಮಾಡಬಹುದು.

ಸೋಮಶೇಖರ ಮಾಸ್ತರರು ವಿನಯದಿಂದ ಕೈ ಮುಗಿದರು. "ನಿಮ್ಮದು ದೊಡ್ಡ ಮನಸ್ಸು, ನೀವು ಸೂಚಿಸಿದವರನ್ನು ಆಯ್ಕೆ ಮಾಡಿಕೊಳ್ಳಬೇಕೇ ?"

ಇಲ್ಲ ಎಂಬಂತೆ ತಲೆಯಲ್ಲಾಡಿಸಿದರು ಮುಹಂತಯ್ಯ. ಮರುಕ್ಷಣ ಕಣ್ಣುಗಳಲ್ಲಿ ನೀರಾಡಿತು.

ಏನೋ ಹೇಳಲು ಹವಣಿಸಿ ಸಾಧ್ಯವಾಗದೆ ಬಿಕ್ಕಳಿಸಿದರು ಜೋರಾಗಿ. ಕಾಗದ ಬೇಕೇ ಬರೆಯಲು?—ಕೇಳಿದ ನರಹರಿ. ಬೇಡವೆಂದು ಕೈಯಿಂದ ಸನ್ನೆ ಮಾಡಿ ಎದೆ ಬಡಿದುಕೊಂಡರು ದುಃಖದಲ್ಲಿ.ಅವರ ಈಗಿನ ಸ್ಥಿತಿ ಕಂಡು ತೀರಾ ಕೆಡುಕೆನಿಸಿ ಹೆಚ್ಚು ಹೊತ್ತು ಕುಳಿತಿರಲಾರದೆ ಇಬ್ಬರೂ ಹೊರಟುಬಿಟ್ಟರು. "ಪ್ರತಿದಿನ ಬರ್‍ತಾ ಇರು ನರಹರಿ," ಭಾಗ್ಯಮ್ಮ ಬಿಸುಸುಯ್ದರು. "ಇವರಿಗೆ ಸ್ವಲ್ಪ ಸಮಯವಾದರೂ ಕಳೆದೀತು ನಿನ್ನಿಂದ."

ಅವರಿಬ್ಬರೂ ಮನೆಗೇಟು ದಾಟಿ ಹತ್ತು ಹೆಜ್ಜೆ ಹೋಗುವಷ್ಟರಲ್ಲಿ ಹಿಂಬಾಲಿಸಿಕೊಂಡು ಬಂದ ಗಂಗಾಧರ. "ಮಾಸ್ತರರೇ, ಅಪ್ಪ ಹೊಸ ಶಿಕ್ಷಕನಿಗೆ ತಿಂಗಳ ಸಂಬಳ ತಾವೇ ಕೊಡ್ತೇನೆ ಅಂದರು. ಅದು ಸಾಧ್ಯವಿಲ್ಲ ಅಂತ ಹೇಳಲು ಬಂದೆ."

ಸೋಮಶೇಖರ ಮಾಸ್ತರರು ಪೆಚ್ಚಾದರು. ಕೆಲನಿಮಿಷಗಳ ಮೊದಲು ತಮ್ಮ ಭಾರ ಹಗುರವಾಯಿತು, ಯಾರನ್ನು ತನ್ನ ಸಹಶಿಕ್ಷಕನನ್ನಾಗಿ ಈ ಹಳ್ಳಿಯಿಂದ ಆರಿಸಿಕೊಳ್ಳಲಿ ? ಎಂದು ಎಣಿಸುತ್ತಿದ್ದಾಗಲೇ ಗಂಗಾಧರನಿಂದ ಬಂದ ಮಾತೇ ಬೇರೆಯೇ. ತಂದೆ ಒಪ್ಪಿದರೂ ಮಗನಿಂದ ವಿಘ್ನ.

"ತಪ್ಪು ತಿಳಿಯಬೇಡಿ" ವಿನಯದಿಂದ ಕೈಜೋಡಿಸಿದ ಗಂಗಾಧರ,"ಅಪ್ಪನ ಸ್ಥಿತಿ ನೀವೇ ನೋಡಿದಿರಿ. ಆಸ್ಪತ್ರೆಯಿಂದ ಹೊರಬರುವಾಗ ಹತ್ತಾರು ಸಾವಿರರೂಪಾಯಿ ಖರ್ಚಾಯ್ತು. ಇನ್ನೀಗ ತಿಂಗಳ ಔಷಧಿಗೇ ಬೇಕು ಕನಿಷ್ಠ ಸಾವಿರ ರೂಪಾಯಿ. ಹಳ್ಳಿಗೆ ಶಿಕ್ಷಕರು ಬೇಕು, ನಿಜ.ಆದರೆ ಆ ಭಾರ ನಮ್ಮೊಬ್ಬರ ತಲೆಗೆ ಯಾಕೆ ? ನಾನು ಹೇಳ್ತೇನೆ ಕೇಳಿ, ಈಗ ಇದ್ದ ಹಾಗೇ ಇರಲಿ ಶಾಲೆ ವ್ಯವಸ್ಥೆ. ನಿಮಗೊಬ್ಬರಿಗೆ ಕಷ್ಟವಾದರೆ ಒದ್ದಾಟಕ್ಕೆ ಹೋಗಬೇಡಿ. ನಿಮ್ಮಿಂದ ಎಷ್ಟು ಪಾಠ ಹೇಳಲು ಸಾಧ್ಯವೋ ಅಷ್ಟು ಮಾಡಿ. ಹಾಯಾಗಿ

ನಿದ್ದೆ ಮಾಡಿ ! ಮಕ್ಕಳಿಗೆ ಆಸಕ್ತಿ ಇದ್ದರೆ ಕಲೀತಾವೆ, ಇಲ್ಲಾ ಬಿಡ್ತಾವೆ. ನಿಮ ಗಂತೂ ಸರಕಾರದಿಂದ ಸಂಬಳ ಬರುತ್ತದೆ, ಹಾಯಾಗಿರಿ !''

ಇಷ್ಟುದ್ದದ ಭಾಷಣ ಬೇಕಿರಲಿಲ್ಲ. ಮಾಸ್ತರರ ಮುಖ ಬಿಮ್ಮಾದರೂ ತೋರ್ಪಡಿಸದೆ ಅವನು ಹೇಳಿದಷ್ಟನ್ನು ಕೇಳಿಸಿಕೊಂಡರು. ಬೇರೆ ಗತಿ ಇ ಲ್ಲಿಲ್ಲ. ಅಷ್ಟು ದೂರ ನಡೆದ ಮೇಲೆ ನರಹರಿಯು ಮೇಲೆ ಎಗರಿಬಿದ್ದರು.

``ಈಗ ಹೇಳಿ, ಹಳ್ಳಿಯಲ್ಲಿ ಇಂಥವರನ್ನು ಕಟ್ಟಿಕೊಂಡು ನಾನು ಇನ್ನೊಬ್ಬ ಸಹಶಿಕ್ಷಕನ ಸಹಾಯ ಪಡೆಯುವುದುಂಟೇ ? ನೀವು ಹೇಳ್ತೀರಿ, ಒಬ್ಬನೆ ಪಾಠ ಮಾಡಲಿ ಎಂದು. ಒಂದು ನಾಲ್ಕು ದಿನ ಪಾಠ ಮಾಡಿ ನೋಡಿ, ಗೊತ್ತಾ ಗುತ್ತದೆ ಪಾಠ ಪ್ರವಚನ ಸುಖ !''

ಈಗಲೂ ಅಲಕಾಳನ್ನು ಒಂದು ಮಾತು ಕೇಳಬಹುದಿತ್ತು. ನರಹರಿ ಆಳ ಕಿದ ತನ್ನಲ್ಲೇ.

ಮುಂದೆ ನಾಲ್ಕು ದಿನಗಳಲ್ಲಿ ಸುಹಾಸ, ವಿಜಯರನ್ನು ಔರಂಗಾಬಾದ್‌ಗ ಬಿಟ್ಟುಬರಲು ಅವನೇ ಸಿದ್ಧನಾದ. ಈ ಸಲ ವಿಜಯ ರಚ್ಚೆ ಹಿಡಿದು ಅಳ ವುದನ್ನು ನೋಡಲಾಗಲಿಲ್ಲ ಅವನಿಗೂ, ಅಲಕಳಿಗೂ. ಮೊರಡಿಸುವುದ ಪ್ರಯಾಸ. ಇಲ್ಲೇ ಉಳಿಸಿಕೊಳ್ಳುವ ಎಂದರೆ ಹತ್ತಿರ ಎಲ್ಲಿಯೂ ಇಂಗ್ಲೀಷ ಶಾಲೆಯಿಲ್ಲ ಈಗಾಗಲೇ ಅರ್ಧವರ್ಷ ಕಳೆದಾಗಿದೆ. ಅಲ್ಲದೆ ಒಮ್ಮೆ ಪಟ್ಟಣದ ಶಾಲೆಯಾದರೆ ಆಮೇಲೆ ಸೀಟು ಸಿಗುವುದು ಕಷ್ಟಕರ.

``ಕೆಲವೇ ದಿನ ಹಾಸ್ಟೆಲ್‌ನಲ್ಲಿ ಇರು. ಕಂಪನಿ ತೆರೆದಾಕ್ಷಣ ನಾವೂ ಬಂದು ಬಿಡ್ತೇವ''— ಮಂಗಳ ತಲೆಸವರಿ ಮುತ್ತಿಟ್ಟ.

ಔರಂಗಾಬಾದಿನಲ್ಲಿ ಮಕ್ಕಳನ್ನು ಅವರವರ ಹಾಸ್ಟೆಲ್‌ಗೆ ತಲುಪಿಸಿ ನಾಲ್ಕು ದಿನ ತನ್ನ ಬಾಡಿಗೆಮನೆಯಲ್ಲುಳಿದ ನರಹರಿ. ಕಂಪನಿ ಮ್ಯಾನೇಜರ್ ಪಕ್ಕಾ ಗುಜರಾಥಿ. ಅಳಗೇಲಿ ಮುಖ. ಕಂಪನಿ ಬಂದ್ ಆಗಿದ್ದರೂ ಅವರ ದೇಹ ತೂಕದಲ್ಲಿ ವ್ಯತ್ಯಾಸವಾಗಿರಲಿಲ್ಲ. ಬಂಗಲೆ, ಕಾರು, ಆಳುಕಾಳುಗಳ ವೈಭವ ಹಾಗೇ ಇವೆ. ಯಾರಾದರೂ ಆಕ್ರಮಣ ಮಾಡಿದರೆ ? ಎಂಬ ಹೆದರಿಕೆಯಿಂದ ಇಬ್ಬರು ಗೂರ್ಖಾಗಳಿದ್ದಾರೆ ಮನೆ ಹೊರಗೆ. ನರಹರಿಯನ್ನು ಮಾತನಾಡಿ ಸುವ ಇಚ್ಛೆಯಿರಲಿಲ್ಲ. ಎಲ್ಲೋ ಕಾರ್ಯಾರ್ಥ ಹೊರಟವರು ಹೊರಗೇಟಿನ ಬಾಗಿಲಲ್ಲಿ ನರಹರಿಗೆದುರಾಗಿ ಸಿಕ್ಕಿಬಿದ್ದದ್ದು. ಸೌಜನ್ಯಕ್ಕಾದರೂ ಮಾತನ್ನಾಡು ವುದು ಅನಿವಾರ್ಯವಾಗಿತ್ತು ಅವರಿಗೆ. ಕಂಪನಿ ಸದ್ಯಕ್ಕೆ ತೆರೆಯುವ ಸೂಚನೆ ಇಲ್ಲವೆಂದು ಒತ್ತಿ ಹೇಳುತ್ತ,

"ನಿಮಗೆ ಬೇರೆ ಕಡೆ ಉತ್ತಮ ಕೆಲಸ ಸಿಕ್ಕಿದರೆ ಹೋಗುವುದು ಒಳಿತು. ಪಾಪ, ಎಷ್ಟು ದಿನ ಕಾಯ್ತೀರಿ ? ಕೆಲಸಗಾರರು ನಮ್ಮನ್ನು ಅರ್ಥಮಾಡಿಕೊಂಡಿದ್ದರೆ ಈ ಬಂದ್‌ನ ಬವಣೆ ಇರ್ತಿರಲಿಲ್ಲ. ಈ ಎಂಟು ತಿಂಗಳಲ್ಲಿ ಉತ್ಪಾದನೆ ಇಲ್ಲದೆ ನಾನೂ ಪೂರಾ ದಿವಾಳಿ ತೆಗೆದುಹೋಗಿದ್ದೇನೆ. ನನ್ನ ಆರ್ಥಿಕ ಕಷ್ಟಕ್ಕೆ ನೀವ್ಯಾರಾದರೂ ಬರ್ತೀರಾ ಹೇಳಿ ?"— ಕೇಳಿದರು ಗಡುಸಾಗಿ

"ನಾನು ಹನ್ನೆರಡು ವರ್ಷ ಸರ್ವೀಸ್ ಮಾಡಿದ್ದೇನೆ ನಿಮ್ಮ ಕಂಪನಿಯಲ್ಲಿ. ಅದನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲವೇ ?"

"ಕಂಪನಿ ಲಾಭದಲ್ಲಿ ನಡೀತಿದ್ರೆ ನಿಮ್ಮ ಸರ್ವೀಸ್ ಲೆಕ್ಕಕ್ಕೆ ಬರ್ತಿತ್ತು. ನನ್ನನ್ನು ಜಾಲಾಡಿದರೂ ಪೈಸೆ ಹುಟ್ಟಲಿಕ್ಕಿಲ್ಲ. ಹೆಚ್ಚಿನ ಸಂಬಳದ ಬೇಡಿಕೆ, ಬೋನಸ್ ಅಂತ ಗಲಾಟೆ ಮಾಡದೇ ನನ್ನ ಷರತ್ತುಗಳಿಗೆ ಒಪ್ಪಿದರೆ ನಾಳೆಯೇ ಕಂಪನಿ ಬಾಗಿಲು ತೆರೆಯಲು ನಾ ತಯಾರು. ನಾನೂ ನಿಮ್ಮ ಹಾಗೇ ಇರುವವ. ಪರಮಾತ್ಮನ ಸೃಷ್ಟಿಯಲ್ಲಿ ನಾವೆಲ್ಲರೂ ಒಂದೇ ತಾನೇ"-ಬಾಯಲ್ಲಿ ತುಂಬಿದ್ದ ಬೀಡಾದ ಕೆಂಪು ರಸ ಉಗುಳಿ ಹ್ಹೆ ಹ್ಹೆ ಎಂದರು. "ಕೆಲವು ಸಮಯ ಇನ್ನೂ ಸಹಿಸಿಕೊಳ್ಳಿ, ಸುಧಾರಿಸಿಕೊಳ್ಳಿ. ದೇವರು ನಡೆಸಿದರೆ ಎಲ್ಲಾ ಸರಿಹೋಗಬಲ್ಲದು. ಇಲ್ಲಪ್ಪ ಅಂದರೆ ನಮ್ಮ ತಲೆಗೆ ನಮ್ಮದೇ ಕೈ....ಹ್ಹೆ ಹ್ಹೆ...."

ಕೊಬ್ಬಿದ ಮನುಷ್ಯ. ಕಾರ್ಮಿಕರ ಬಗ್ಗೆ ಒಂದಿನಿತೂ ಕರುಣೆಯಿಲ್ಲದವ. ಅಲ್ಲ ಈ ಕಾರ್ಮಿಕರಿಗೆ ಯಾಕಿಷ್ಟು ಹಠ ? ಬೇರೆ ಖಾಸಗಿ ಕಂಪನಿಗಳಲ್ಲಿ ವೇತನ, ಬೋನಸ್ ಜಾಸ್ತಿಯಾದಂತೆ ತಮಗೂ ಆಗಬೇಕೆಂದು ಮುಷ್ಕರ ಮಾಡಿದ್ದಲ್ಲವೇ. ಯಾಕೆ ಹಠ ? ತಾನು ಹೋಗಿ ಕಾರ್ಮಿಕ ಧುರೀಣನನ್ನೇ ಮಾತಾಡಿಸಿದರೆ ಹೇಗೆ ?

ಅವನು ನಿಖಿಲನ ಬಳಿ ಇದನ್ನೇ ಪ್ರಸ್ತಾಪಿಸಿದಾಗ ನಿಖಿಲ ಹಾರಿಬಿದ್ದ. "ಮ್ಯಾನೇಜರ್ ನಿಮಗೆ ಇಷ್ಟಾದರೂ ಮಾತಿಗೆ ಸಿಕ್ಕಿದ. ಕಾರ್ಮಿಕ ಧುರೀಣ ಪಕ್ಕಾ ಆಸಾಮಿ. ಅವನು ಬಡ ಕೆಲಸಗಾರರನ್ನು ಪ್ರತಿಭಟನೆಗೆ ಹುರಿದುಂಬಿಸಿ ಕಂಪನಿ ಬಂದ್ ಮಾಡಿಸಿದ. ಅವನಿಗೆ ಯಾವ ಬಿಸಿಯೂ ತಟ್ಟಲಿಲ್ಲ. ಯಾಕೆ ಗೊತ್ತೇ ? ಹೆಂಡತಿ ಕಡೆಯಿಂದ ಬೇಕಾದಷ್ಟು ಆಸ್ತಿಪಾಸ್ತಿ ದಕ್ಕಿದೆ. ಗಮ್ಮತ್ತಾಗಿ ಗುಂಡಿನ ಮತ್ತಿನಲ್ಲಿದ್ದಾನೆ. ಬಡವರ ಕಷ್ಟ ನೋಡಲು ಅವನಿಗೂ ಮಜಾ."

"ಇವರಿಗೆ ದೇವರು ದಿಂಡರ ಹೆದರಿಕೆ ಇಲ್ಲವೇ ?"

"ದೇವರು ದಿಂಡರ ಹೆದರಿಕೆಯೇ ? ಎಲ್ಲಾ ಗುಂಡಿ ಗೋಪುರಕ್ಕೆ ದಿನಕ್ಕೆ

ಹತ್ತು ಸಾರಿ ಕೈಮುಗೀತಾರೆ. ಎಲ್ಲಾ ಠಕ್ಕು. ಜೀವ ಇದ್ದ ಒಬ್ಬನಿಗೆ ಸಹಾಯ ಮಾಡುವುದು ಇವರಿಗೆ ಬೇಕಿಲ್ಲ. ಹೆದರಿಕೆ ನಮ್ಮಂಥವರಿಗೆ, ಇನ್ನೊಬ್ಬರನ್ನು ನೋಯಿಸಬಾರದು, ಕೆಡಕು ಮಾಡಬಾರದು, ಮೋಸ ಮಾಡಬಾರದು ಇವೆಲ್ಲ. ಎಂಟುತಿಂಗಳಿಂದ ನೂರಾರು ಕಾರ್ಮಿಕರ ಅನ್ನಾನ್ನಗತಿಯಾದರೂ ಆ ಮ್ಯಾನೇಜರನ ಡೊಳ್ಳು ಕರಗಲಿಲ್ಲ. ಹೃದಯ ನೀರಾಗಲಿಲ್ಲ. ಇನ್ನೂ ಒಂದು ವಿಷಯ ಗೊತ್ತೇ ? ನಿಖಿಲ ಗುಟ್ಟಿನಲ್ಲಿ ಹೇಳಿದ : "ಈ ಮ್ಯಾನೇಜರನ ತಮ್ಮನ ಒಂದು ಕಂಪನಿ ಮಹಾರಾಷ್ಟ್ರದಲ್ಲಿ ತೆಗೀತಾರಂತೆ. ಬುದ್ಧಿವಂತಿಕೆ ಏನು ಗೊತ್ತೇ ? ಇಲ್ಲಿ ನಷ್ಟದ ಬಾಬ್ತು ತೋರಿಸಿ ಅಲ್ಲಿ ಲಾಭ ಗಿಟ್ಟಿಸುವುದು."

"ಹಾಗಾದರೆ ನಮ್ಮ ಕೆಲಸ ಹೋದಹಾಗೆಯೇ"— ನಿರಾಸೆ ಇಣುಕಿತ್ತು ನರಹರಿಯ ಧ್ವನಿಯಲ್ಲಿ.

"ಮಹಾರಾಷ್ಟ್ರದಲ್ಲಿ ತೆರೆದ ಕಂಪನಿಗೆ ನಮ್ಮನ್ನು ಸೇರಿಸಿಕೊಳ್ಳಬಹುದೇನೋ. ಅದೂ ಗ್ಯಾರಂಟಿ ಇಲ್ಲ. ನಾನೀಗ ಚಿಂತೆ ಬಿಟ್ಟಿದ್ದೇನೆ. ಒಂದಿನ ನಾಲ್ಕು ಜನರನ್ನು ಕರೆದುಕೊಂಡು ಹೋಗಿ ಮ್ಯಾನೇಜರ್‌ನ ಮನೆ-ಬಂಗಲೆ ಹುಡಿ ಮಾಡಬೇಕೆಂದು ಎನಿಸಿದೆ. ಆದರೆ ನಮಗೂ ನೀತಿ-ಧರ್ಮ ಇದೆ. ಇಷ್ಟು ವರ್ಷ ಅನ್ನ ಕೊಟ್ಟ ದೇವರು. ಅವರು ನಮಗೆ ಅನ್ಯಾಯ ಮಾಡಿದರೂ ನಾವು ತಿರುಗಿ ಬೀಳುವುದು ಅಪರಾಧ ತಾನೇ. ಒಳ್ಳೆ ದಿನಗಳ ನಿರೀಕ್ಷೆ ಮಾಡೋಣ."ನಿಖಿಲ ತಲೆ ಸವರಿಕೊಳ್ಳುತ್ತ ಮೆಲ್ಲನೆ ಕೇಳಿದ: "ಒಂದುನೂರು ರೂಪಾಯಿ ಕೊಟ್ಟಿರು. ನಿನ್ನ ಹೆಸರು ಹೇಳಿ ಒಂದು ಜೊತೆ ಬೂಟ್ಸ್ ತೆಗೆದುಕೊಳ್ತೇನೆ."

ನಿಖಿಲನ ಗುಳಿಬಿದ್ದ ಕಣ್ಣುಗಳಲ್ಲಿ ಎಂತಹ .ನೋವು, ದಯನೀಯ ಸ್ಥಿತಿ. "ಮಾತಿಲ್ಲದೆ ಕಿಸೆಯಿಂದ ಹೊರಬಂದಿತು ನೂರರ ನೋಟು. ತಾನು ಅದೃಷ್ಟವಂತ. ದೊಡ್ಡಕಾಡಿಗೆ ಹೋದಮೇಲೆ ಗುಳಿಬಿದ್ದ ತನ್ನ ಕಣ್ಣುಗಳಲ್ಲಿ ಬೆಳಕು ಮೂಡಿದೆ. ಹಳ್ಳಿಯ ತಂಪು, ಹಾಲು ಹೈನುಗಳ ಆರೈಕೆಯಿಂದ ಮೈ ಹೊಳಪು ಕಂಡಿದೆ. ಹಸಿವೆಯ ಬಿಸಿ ಸೋಂಕಿಲ್ಲ. ಆದರೆ ಇನ್ನೆಷ್ಟು ದಿನ ಹೀಗೆ.—"

ಔರಂಗಬಾದ್‌ನಿಂದ ಮುಂಬಯಿ–ಬೆಂಗಳೂರು ಸುತ್ತಿ ಮರಳಿ ದೊಡ್ಡ ಕಾಡಿಗೆ ಹೊರಟಾಗ ಹದಿನಾರು ದಿನಗಳು ಕಳೆದುಹೋಗಿದ್ದವು. ಇನ್ನೂ ಹದಿನೈದು ದಿನ ಅಲ್ಲಿ ಕಾಲಹರಣ ಮಾಡಬಹುದಿತ್ತು. ಯಾಕೆಂದರೆ ಹಳ್ಳಿಯಲ್ಲಿ ಗುರುತಿಸುವ ಕೆಲಸಕಾರ್ಯ, ಒಂದು ಉದ್ದೇಶ ಇದ್ದಿರಲಿಲ್ಲ, ಆತುರ, ಆವಸರಗಳಿಲ್ಲ. ಅಲಕಾ ಒಬ್ಬಳು ಇದ್ದಾಳೆಂದು ಸ್ವಲ್ಪ ಎಳೆತ. ತನಗಾಗಿ

ಕಾಯುತ್ತಾಳಲ್ಲ.

ಆಲಕಾಳ ನೆನಪಿನಿಂದ ಮನಸ್ಸು ಮೃದುವಾದಂತೆ ತನ್ನ ಹಳ್ಳಿಗೆ ಯಾವ ಸೌಕರ್ಯವಿಲ್ಲ ಎಂಬ ಯೋಚನೆ ಬಂದದ್ದು. ವಿದ್ಯುತ್ ಇಲ್ಲ, ಟೆಲಿಫೋನ್ ಸೌಲಭ್ಯವಿಲ್ಲ. ತಾನು ಹಳ್ಳಿಯಲ್ಲಿ ವೃಥಾ ಕಾಲಹರಣ ಮಾಡುವ ಬದಲು ಇವುಗಳ ಬಗ್ಗೆ ಗಮನ ಹರಿಸಿದರೆ ಹೇಗೆ ಹಳ್ಳಿ ಸುಧಾರಿಸೀತು. ಅಕ್ಕಿ ಹಲ್ಲರ್ ಇಟ್ಟದ್ದೇ ಉಪಕಾರವಾಗಿದೆ ಜನರಿಗೆ. ವಿದ್ಯುತ್, ಟೆಲಿಫೋನ್ ಬಂದರೆ ವ್ಯವಹಾರಗಳೆಷ್ಟೋ ಸುಲಭವಾಗಬಹುದು. ಸಂಬಂಧಿತ ಅಧಿಕಾರಿಗಳನ್ನು ಹಿಡಿದು ಕನಿಷ್ಠ ಸೌಕರ್ಯ ಮಾಡಿಸಿದರೆ ಜನ ತನ್ನನ್ನು ಹೊಗಳುವುದು ಬೇಡ, ಅನುಕೂಲ ಪಡೆಯುವಂತಾದರೆ ಸಾಕು. ಆದರೆ....?

ನರಹರಿಗೆ ತನ್ನ ಮೇಲೆ ನಂಬಿಕೆ ಬರಲಿಲ್ಲ. ಈಗಿನ ಕಾಲದಲ್ಲಿ ದುಡ್ಡೇ ದೊಡ್ಡಪ್ಪ. ಅದಿಲ್ಲದೆ ಕಡ್ಡಿ ಕೂಡ ಆಚೀಚೆ ಆಗಲಿಕ್ಕಿಲ್ಲ. ಅಜ್ಜ ನಾಗರಾಜನ ಕಾಲದಲ್ಲಿ ಇದ್ದ ಚಿನ್ನ,ಧನ ಉಳಿದಿದ್ದರೂ ಸಾಕಿತ್ತು ತನ್ನ ಮನದಾಸೆ ಪೂರೈಸಿಕೊಳ್ಳಲು. ಈ ಹಿರಿಯರಿಗೆ ಮುಂದಿನ ಪೀಳಿಗೆಯ ಆಲೋಚನೆ ಇರಲಿಲ್ಲವೋ ಅಥವಾ ಅಜ್ಜ ಬೇಕೆಂದೇ ತನ್ನ ಗುಂಡಿ ತಾನೇ ತೋಡಿಕೊಂಡನೋ. ಗೇಣಿಗಿದ್ದ ಭೂಮಿ ಹಾಗೇ ಉಳಿಸಿಕೊಂಡಿದ್ದರೆ ಅಪ್ಪನ ಕಾಲಕ್ಕೆ ಟೆನೆನ್ಸಿ ಕಾಯಿದೆ ಬಂದು ಉಳುವವನಿಗೇ ಭೂಮಿಯಾಗುತ್ತಿತ್ತು. ಹತ್ತಾರು ಎಕರೆ ಗದ್ದೆ ನಾಲ್ಕಾರು ಎಕರೆ ಅಡಿಕೆ ತೋಟದ ಜಮೀನ್ದಾರ ಆಗುತ್ತಿದ್ದರು ತನ್ನ ತಂದೆ. ತನ್ನ ಹಿರಿಯರು ಇಟ್ಟು ಬೆಳೆಸಿದ ಅಡಿಕೆ ತೋಟದಲ್ಲಿ ಇವತ್ತಿಗೆ ಪಟೇಲರ ವಂಶದವರು ಚಿನ್ನ ತೆಗೆಯುತ್ತ ಹೇಗೆ ವೈಭವದ ಜೀವನ ನಡೆಸಿದ್ದಾರೆ! ನ್ಯಾಯವಾಗಿ ತಮಗೆ ಸಲ್ಲಬೇಕಾದ ಜಮೀನು ಏನೋ ತಕರಾರು ಬರುವ ಮುಂಚೆ ಅವರ ಹೆಸರೇ ಇದ್ದದ್ದು. ತಾವಲ್ಲದೆ ಇನ್ನಾರೂ ಗೇಣಿಭೂಮಿ ಬಿಟ್ಟುಕೊಟ್ಟಿಲ್ಲ ಆದರೆ ಒಡೆಯನಿಗೆ. ಅಜ್ಜ ಎಷ್ಟು ನಿಷ್ಠುರಿ. ತನ್ನ ಕಾಲಕ್ಕೆ ಮಾಡಿದ್ದೇ ಬೇರೆ.

ನಾಗರಾಜ ಶಿವದೇವಾಲಯದ ಪೂಜೆಗೆ ಒಪ್ಪಿಕೊಂಡದ್ದು ಮನಸ್ಸಿಲ್ಲದೆ, ಒತ್ತಾಯದಿಂದ. ನಾರಾಯಣನಿಗೆ ಮೂರು ಹೊತ್ತು ಒಂದೇ ಕಡೆ ಬಂದಿಯಾಗಲು ಇಷ್ಟವಿಲ್ಲದ ಕಾರಣ, ಈಶ್ವರನಿಗೆ ಸಮಯವಿಲ್ಲದ ಕಾರಣ ನಾಗರಾಜನ ಹೆಗಲಿಗೇರಿತ್ತು ಈ ಭಾರ. ಕೆಲವು ವರ್ಷ ಪೂಜೆ ಮಾಡಿಕೊಂಡು ಹೋದ. ಆದರೆ ಮನೆದೇವಿಯ ಪೂಜೆಯಲ್ಲಿ ಸಿಗುವ ತನ್ಮಯತೆ, ಭಕ್ತಿಭಾವ ಇಲ್ಲಿ

ಬರಲಿಲ್ಲ. ಇದು ಅವನ ದೌರ್ಬಲ್ಯವೋ, ಒತ್ತಾಯಕ್ಕೆ ಕಟ್ಟುಬಿದ್ದ ಕಾರಣವೋ, ಅಥವಾ ತಾನು ಅನರ್ಹ ಎಂಬ ಹೆದರಿಕೆಯ ಬೀಜ ಮನದಲ್ಲಿ ಮೊಳೆತ ಕಾರಣವೋ ತಿಳಿಯದು. ಅಭಿಷೇಕ ಮಾಡುವಾಗ, ಜಪಕ್ಕೆ ಕುಳಿತಾಗ, ರುದ್ರಾಭಿಷೇಕ ನಡೆಸುವಾಗ ಹೂಗಂಧ ಅರ್ಪಿಸುವಾಗ ತನ್ನೆದುರು ಯಾರೋ ನಿಂತಂತೆ. ಮಂಗಳಾರತಿಗೆ ಬರುವ ಕೆಲವರು "ಪ್ರಸಾದ ನೋಡಿ ಹೇಳಿ" ಎಂದು ತಮ್ಮ ಮನದ ಪ್ರಶ್ನೆ ಕೇಳುವುದಿತ್ತು. ಅವನು ಕೈಮುಗಿದು ನಿಂತು ಕೇಳುತ್ತಿದ್ದ. ಆಗ ಎದೆಯಾಳದಿಂದ ಒಂದು ಧ್ವನಿ ಅವನನ್ನು ಬೆಚ್ಚು ವಂತೆ ಮಾಡುತ್ತದೆ. ಆರತಿ ತಟ್ಟೆಗೆ, ಕಾಣಿಕೆ ಡಬ್ಬಿಗೆ ನಾಣ್ಯಗಳು ಬಿದ್ದು ಠಣ್ ಎಂದಾಗ ಎದೆಯೊಳಗೆ ಝಿಲ್ ಎನ್ನುತ್ತದೆ. ಅವನ ಕಾಲಿಗೆರಗಿ ಕೆಲವರು ಕಾಣಿಕೆ ಕೊಡುವುದಿತ್ತು. ಅದನ್ನು ಕೈಯಿಂದ ಮುಟ್ಟಲೂ ಹೆದರಿಕೆ. "ಹಾಗೇ ಕಾಣಿಕೆ ಡಬ್ಬಿಗೆ ಹಾಕಿ,ಇಲ್ಲಾ ತೆಗೆದುಕೊಂಡು ಹೋಗಿ"ಎನ್ನುತ್ತಿದ್ದ. ಹಣದ ವ್ಯಾಮೋಹ ಇಲ್ಲದವ. ಜನಾರ್ದನ ಭಟ್ಟರಂತೆ ಮೃತ್ಯುಂಜಯ ಜಪ ಹೇಳಲು ಬರುತ್ತಿರಲಿಲ್ಲ. ಮೊದಲೇ ತಂದೆಯಿಂದ ಅದನ್ನು ಕಲಿಯಬಹುದಿತ್ತು, ಅಥವಾ ಬೇರೆ ಗುರುಮುಖೇನ ಈಗಲೂ ಹೇಳಿಸಿಕೊಳ್ಳಬಹುದಿತ್ತು. ಆದರೆ ಅವನು ಆಸಕ್ತಿ ತೋರಿಸಲಿಲ್ಲ. ಭಕ್ತರು ಮೃತ್ಯುಂಜಯ ಜಪ ಹೇಳಿಕೊಂಡು ಬಂದರೆ ಸಮೀಪದ ಹಾದಿಮನೆ ಭಟ್ಟರನ್ನು ಕರೆಯಿಸಿ ಅವರಿಂದ ನೆರವೇರಿಸಿಕೊಡುತ್ತಿದ್ದ. ಎಂತಹದೋ ನಿರ್ಲಿಪ್ತತೆ, ಅಸಮಾಧಾನ.

ಅವನಲ್ಲೇ ಹೊಗೆಯಾಡುತ್ತಿದ್ದ ಅಸಮಾಧಾನ ಕೊನೆಗೊಮ್ಮೆ ಅವನಿಗೂ ನಾರಾಯಣನಿಗೂ ಜಗಳದಲ್ಲಿ ಹೊತ್ತಿಕೊಂಡಿತು. ಈಶ್ವರನಿಗೂ ಅವನಿಗೂ ತಿಕ್ಕಾಟ ಪ್ರಾರಂಭವಾಯಿತು. ಮುಖ್ಯವಾಗಿ ಕಾಣಿಕೆ ಡಬ್ಬಿಗೆ ಬಂದ ಹೊಸ ಬೀಗ ಕೆರಳಿಸಿತು ನಾರಾಯಣನನ್ನು. ಆರತಿ ತಟ್ಟೆ ಯಾವಾಗಲೂ ಖಾಲಿ! ಅವನು ಅಸಹನೆಯಿಂದ ಉರಿದುಹೋದ. ತಮಗೆ ತಿಳಿಯದಂತೆ ತಮ್ಮನೊಬ್ಬನೇ ಎಲ್ಲಾ ಗಂಟು ಕಟ್ಟುತ್ತಿದ್ದಾನೆ ಎಂದುಕೊಂಡ.

"ಗಂಟು ಕಟ್ಟುವುದಿಲ್ಲ ಅಣ್ಣ. ಇಲ್ಲಿ ಸಿಗುವ ಹಣ ದೇವತಾಕಾರ್ಯಕ್ಕೆ ವಿನಾ ಸಲ್ಲ"—ಸ್ಪಷ್ಟಪಡಿಸಿದ ನಾಗರಾಜ.

ತಮ್ಮನ ಸ್ವಭಾವ ಅರ್ಥವಾಯಿತು ಸ್ಪಷ್ಟವಾಗಿ. ಇವನು ಚಿಕ್ಕಪ್ಪನ ತದ್ರೂಪ. ಆದರೆ ಚಿಕ್ಕಪ್ಪನಿಗಿಂತ ಜೋರು! ಚಿಕ್ಕಪ್ಪ ತಮಗೆ ಎದುರಾಡಿದ್ದಿಲ್ಲ. ಇವನೋ ಹೇಳಿದ್ದು ಮಾತ್ರವಲ್ಲ, ಏನನ್ನೂ ಮುಟ್ಟದಂತೆ ತಡೆ ಹಾಕಿದ್ದಾನೆ. ಇವನ ಕೈಗೆ ಪೂಜೆ ಕೊಡುವ ಬದಲು ತಾವೇ ಮಾಡುವುದು ಲೇಸು. ಈಶ್ವ

ರನೂ ಅನುಮೋದಿಸಿದ ಈ ಮಾತನ್ನು. ಆದರೆ ನಾಗರಾಜನಿಂದ ಬಂದ ಉತ್ತರವೇ ಬೇರೆ.

"ಒಮ್ಮೆ ನನ್ನ ಕೈಗೆ ಬಂದ ಅಧಿಕಾರ ನಿನ್ನ ಕೈಗೆ ಒಪ್ಪಿಸುವ ಮೂರ್ಖ ನಾನಲ್ಲ !"

ನಾರಾಯಣನಿಗೆ ಆಶ್ಚರ್ಯ. ಹೆಡ್ಡ ತಮ್ಮ ಇಷ್ಟುದ್ದದ ಮಾತು ಕಲಿತಿದ್ದಾನೆಯೇ ? ಇವ ಡಡ್ಡನಲ್ಲ. ಹೆಡ್ಡನಂತೆ ನಟನೆ !

ಇಷ್ಟೇ ಆಗಿದ್ದರೆ ಕಥೆ ಬೇರೆ ಕಡೆ ತಿರುಗುತ್ತಿರಲಿಲ್ಲ. ದೇವಾಲಯದ ಜಮೀನಿನಲ್ಲಿ ತೆಗೆವ ಬೆಳೆಯ ಬಗ್ಗೆ ತಕರಾರು ಎದ್ದಿತು ಅಣ್ಣತಮ್ಮಂದಿರಲ್ಲಿ. ನಾರಾಯಣ ನಿಜವಾಗಿಯೂ ನ್ಯಾಯವಾಗಿ ಕಷ್ಟಪಟ್ಟು ದುಡಿಯುತ್ತಿದ್ದ ಅಲ್ಲಿ. ಎಷ್ಟೋ ರಾತ್ರಿ ಬೆಳೆದ ಪೈರನ್ನು ಕಾಡುಹಂದಿ ತಿನ್ನದಂತೆ ನಿದ್ದೆಗೆಟ್ಟು ಕಾದದ್ದೂ ಉಂಟು. ಗದ್ದೆ ಕೊಯ್ಯುವ, ಸಾಗಿಸುವ, ಹೊಡೆಯುವ ಸಮಯ ರಾತ್ರಿ ಹಗಲೆನ್ನದೆ ದುಡಿತ. ಅವನ ಯಾವ ಕಷ್ಟ ನೋಡದ ನಾಗರಾಜ ಬೆಳೆಯನ್ನು ಏಲಂ ಹಾಕಲೇಬೇಕು ಎಂದು ಪಟ್ಟು ಹಿಡಿದುಬಿಟ್ಟ.

"ಅತಿ ಬುದ್ಧಿವಂತಿಕೆ ತೋರಿಸಬೇಡ"—ನಾರಾಯಣನಿಗೆ ತಮ್ಮನ ಮನದಿಂಗಿತ ಅರ್ಥವಾಗಲಿಲ್ಲ. "ಬೆವರು ಸುರಿಸಿ ಗೈಯ್ಯುವುದು ಕಾಣುವುದಿಲ್ಲವೆ ?"

"ನೀನು ಬೆವರು ಸುರಿಸು, ರಕ್ತ ಸುರಿಸು. ಆದರೆ ದೇವರ ಜಾಗದಲ್ಲಿ ಬೆಳೆದ ಬೆಳೆಯನ್ನು ಏಲಂ ಹಾಕಿ ನೀನೇ ಕ್ರಯಕ್ಕೆ ಪಡೆದುಕೋ. ಅದು ನ್ಯಾಯ ಮಾರ್ಗ, ಧರ್ಮ ಮಾರ್ಗ."

ಇದು ನ್ಯಾಯವೇ ? ಯಾರು ಹೇಳಿದರು ? ದೇವಸ್ಥಾನದ ಜಮೀನು ಇರುವ ಕಡೆಗಳಲ್ಲಿ ಹೆಚ್ಚಾಗಿ ಅವನ್ನು ಗೇಣಿಗೆ ಕೊಟ್ಟಿರುತ್ತಾರೆ. ಗೇಣಿದಾರ ನಿಗದಿತ ಗೇಣಿ ಕೊಟ್ಟಮೇಲೆ ಉಳಿದುದೆಲ್ಲ ಅವನಿಗೇ. ತಾವು ಗೇಣಿಗೆ ಪಡೆಕೊಂಡ ಭೂಮಿ ಇದಲ್ಲ. ತಾವು ಯಾರಿಗೂ ಗೇಣಿ ಕೊಡಬೇಕಾಗಿಲ್ಲ. "ದೇವಾಲಯ ನೋಡಿಕೊಳ್ಳಿ. ಬೆಳೆ ತೆಗೆದರೆ ನಿಮ್ಮಿಷ್ಟ ಬಂದಂತೆ ಮಾಡಿ" ಎಂದಿದ್ದರು ಗ್ರಾಮಸ್ಥರು, ಬಹಳಷ್ಟು ವರ್ಷಗಳ ಹಿಂದೆ. ಏಲಂ ಮಾಡುವ ಪ್ರಶ್ನೆಯೇ ಇಲ್ಲ. ಇವನದೇನು ತಕರಾರು ?

"ಗ್ರಾಮಸ್ಥರನ್ನು ಕೇಳೋಣ, ಅವರು ಹೇಳಿದರೆ ಏಲಂ ಹಾಕಲು ನಾನು ತಯಾರು" ಎಂದ ನಾರಾಯಣ. ಅವನಿಗೆ ವಿಶ್ವಾಸವಿತ್ತು ಗ್ರಾಮಸ್ಥರು ಏಲಂ ಹಾಕಲು ಒಪ್ಪಲಿಕ್ಕಿಲ್ಲ ಎಂದು.

ಆದರೆ, "ನಿಮಗೆ ಏಲಂ ಹಾಕುವ ಇಚ್ಛೆಯಿದ್ದರೆ ನಮ್ಮ ಅಭ್ಯಂತರವಿಲ್ಲ" ಎಂದರೂ, ಗ್ರಾಮಸ್ಥರು, ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ.

ಏಲಂ ಹಾಕಲಾಯಿತು. ನಾರಾಯಣನಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಲಿಲ್ಲ ಯಾರೂ. ಅವನೇ ಪಡೆದುಕೊಂಡ ಕ್ರಯ ಕೊಟ್ಟು. "ನಮ್ಮ ಹಿರಿಯರಿಟ್ಟ ಹೆಜ್ಜೆಯಲ್ಲಿ ನಾವೂ ಹೆಜ್ಜೆಯಿಡುತ್ತಾ ಇದ್ದೇವೆ. ನಾವೇ ದುಡಿದುದನ್ನು ಕ್ರಯ ಕೊಟ್ಟು ಪಡೆದರೆ ಏನಿದೆ ಲಾಭ? ಇದಕ್ಕಿಂತ ಭೂಮಿ ಹಡೀಲು ಬಿಡುವುದು ಒಳಿತು!"—ಸಿಟ್ಟಿನಲ್ಲಿ ಹಾರಾಡಿದ ನಾರಾಯಣ.

ಈಶ್ವರನಿಗೂ ನಾಗರಾಜನದು ತಪ್ಪು ಎನಿಸಿತು. ಹೀಗೇ ಮುಂದುವರಿದರೆ ತಾವು ಸಂಪತ್ತು ಕಳೆದುಕೊಳ್ಳುವ ದಿನ ಬಂದೀತೆಂದು ಹೆದರಿ ಅವನು ನಾರಾಯಣನೊಂದಿಗೆ ಸಮಾಲೋಚನೆ ಮಾಡಿದ ಗುಟ್ಟಾಗಿ. ಪಾಲಾಗಬೇಕೆಂಬ ಆಲೋಚನೆ ಬಂದದ್ದೂ ಆಗಲೇ. ಮೂರು ಪಾಲು ಆಗಬೇಕಿತ್ತು, ಆಯಿತು. ಚಿನ್ನಾಭರಣಗಳನ್ನು ತಕ್ಕಡಿಯಲ್ಲಿಟ್ಟು ತೂಗಿಕೊಂಡರೆ ಬೆಳ್ಳಿ ಮತ್ತು ಬಂಗಾರದ ನಾಣ್ಯಗಳನ್ನು ಸೇರಿನಲ್ಲಿ ಅಳೆದುಕೊಂಡರು. ದೊಡ್ಡ ಸಂಸಾರಕ್ಕೆ ಮಾಡಿದ ಚರಿಗೆ, ಹಂಡೆ, ಕೊಳತಪ್ಪಲೆಗಳು, ಉರುಳಿ, ಕಂಚು–ಹಿತ್ತಾಳೆ ಪಾತ್ರೆಗಳೂ ಮೂರು ಪಾಲಾದವು. ನಾರಾಯಣ ಮತ್ತು ಈಶ್ವರನ ಹೆಂಡತಿಯರಲ್ಲಿ ಅದಲ್ಲ ಇದು ಎಂಬ ಅಪಸ್ವರ ಬಂದಿತ್ತು. ನಾರಾಯಣನ ಕಣ್ಣುಗಳಲ್ಲಿ ಆಸೆಯ ದಾಹವಿತ್ತು. ಆದರೆ ನಾಗರಾಜ, ಅವನ ಹೆಂಡತಿ ಮತ್ತು ಮುದುಕಿ ತಾಯಿ ಇತ್ತ ತಲೆ ಹಾಕಲಿಲ್ಲ. ಗೋಡೆಗೊರಗಿ ಪಾಲಾಗುವುದನ್ನು ನೋಡಿದರು ಚಕಾರವೆತ್ತದೆ. ನಾರಾಯಣ ಗುಟ್ಟಾಗಿ ಅಣ್ಣನ ಕಿವಿಯಲ್ಲುಸುರಿದ: "ನಾಗರಾಜ ಹನಿ ಬೆವರು ಸುರಿಸಲಿಲ್ಲ, ಕಷ್ಟ ಪಡಲಿಲ್ಲ. ಮತ್ತೆ ನಾವು ಸಮಪಾಲು ಕೊಡಬೇಕೆ? ಅಥವಾ ಎಲ್ಲೋ ಸ್ವಲ್ಪ...."

ಈಶ್ವರನದು ನ್ಯಾಯಮಾರ್ಗ. ಹಣ ಯಾವ ಮೂಲದಿಂದ ಬಂದಿದ್ದರೂ, ಯಾರು ಕಷ್ಟ ಪಟ್ಟರೂ ಪಾಲು ಮೂರಾಗಬೇಕಾದ್ದು ಧರ್ಮ. ಅದರಲ್ಲಿ ಹೆಚ್ಚು ಕಡಿಮೆ ಆಗಬಾರದು.

ಮನೆ ಸುಪತ್ತು ಪಾಲು ಮಾಡಿಕೊಳ್ಳಲು ಕಷ್ಟವೆನಿಸಲಿಲ್ಲ. ಆದರೆ ತೊಂದರೆ ಬಂದದ್ದು ಜಮೀನಿನ ವಿಲೇವಾರಿಯಲ್ಲಿ. ಅವರು ಯೋಚಿಸಿದಷ್ಟು ಸರಳವಾಗಿರಲಿಲ್ಲ ಜಮೀನು ಪಾಲಾಗುವ ಸಂಗತಿ. ದೇವಾಲಯದ ಹಳೆ ಕಡತಗಳನ್ನು ಪರಿಶೀಲಿಸುವಾಗ ಹೊಸತೊಂದು ಸೋಜಿಗ, ಆಘಾತ ಕಾದಿತ್ತು. ಅವೆಲ್ಲವೂ ವಾರಸುದಾರರಿಲ್ಲದ ನಾರಾಯಣಶಾಸ್ತ್ರಿಗಳ ಹೆಸರಿನಲ್ಲಿದೆ ಈಗಲೂ. ಎಲ್ಲಿಯೂ

ತಿದ್ದಿಲ್ಲ. ಯಾರ ಹೆಸರಿಗೂ ಬದಲಾಯಿಸಿಲ್ಲ. ಆದರೆ ದೇವಾಲಯದ ಹಕ್ಕುಗಳನ್ನು, ಜಮೀನನ್ನು ಅನುಭೋಗಿಸುತ್ತಿದೆ ಅಚ್ಯುತಭಟ್ಟರ ಕುಟುಂಬ. ಅದೂ ನಾರಾಯಣಶಾಸ್ತ್ರಿಗಳ ಬಾಯಿಮಾತಿನ ಒಪ್ಪಿಗೆಯ ಮೇಲೆ !

ಕಾನೂನು ರೀತ್ಯಾ ಇದು ತಪ್ಪು. ಆದರೆ ಆ ಬಗ್ಗೆ ತನಿಖೆ ಮಾಡಿಲ್ಲ ಯಾರೊಬ್ಬರೂ. ತನಿಖೆ ಮಾಡಲು ಗ್ರಾಮಸ್ಥರಿಗೂ ನಾರಾಯಣಶಾಸ್ತ್ರಿಗಳು ಈ ಕುಟುಂಬಕ್ಕೆ ಹಕ್ಕು ಕೊಟ್ಟಿದ್ದಾರೆಂದಷ್ಟೇ ಗೊತ್ತು. ಸರಿಯಾಗಿ ಪೂಜೆ ಸಾಗಿದೆ, ನಿಷ್ಠೆಯಿಂದ ನಡೆಸುತ್ತಿದ್ದಾರೆ. ಅಷ್ಟು ಸಾಕು ಜನರಿಗೆ. ಆದರೆ ವಾರಸುದಾರರಿಲ್ಲದ ಯಾವುದೇ ಜಮೀನು ಸರಕಾರಕ್ಕೆ ಹೋಗಲೇಬೇಕು. ಈ ಗುಟ್ಟು ಹೊರಬಿದ್ದರೆ ತಮ್ಮ ಹಕ್ಕು ಹೊರಟುಹೋಗುತ್ತದೆ ಎಂದು ತಡವಾಗಿ ಅರ್ಥವಾಯಿತು ಈಶ್ವರ ಮತ್ತು ನಾರಾಯಣನಿಗೆ. ತಮ್ಮ ಹಿರಿಯರು ಇದನ್ನೇಕೆ ಚಿಂತಿಸಲಿಲ್ಲ ? ಯಾಕೆ ಹಳೆ ಕಡತ ನೋಡಲಿಲ್ಲ ? ನೋಡಿದರೂ ಗುಟ್ಟಾಗಿ ಮುಚ್ಚಿಕೊಂಡರೆ ?

ದೇವಾಲಯದ ಜಮೀನನ್ನು ಪಾಲುಮಾಡಿಕೊಳ್ಳುವುದು ದೂರವೇ ಉಳಿಯಿತು. ಇನ್ನುಳಿದದ್ದು ಗೇಣಿ ಭೂಮಿ. ಇದರಲ್ಲಿ ತೋಟ, ಗದ್ದೆ ಎರಡೂ ಇದ್ದವು, ಸುಮಾರು ಹದಿನೆಂಟು ಎಕರೆಗಿಂತಲೂ ಹೆಚ್ಚಿಗೆ. ಮೂರು ಪಾಲು ಆಗಲೇಬೇಕು. ಆದರೆ ಮಾಡುವುದು ಹೇಗೆ ? ಪಾಲಾದ ಮೇಲೆ ಗಡಿ, ಬೇಲಿ ಹಾಕಬೇಕು. ಹಾಗೆ ಹಾಕಲು ಗೇಣಿ ಒಡೆಯರನ್ನು ಕೇಳಬೇಕು. ಮೊದಲೇ ಗೇಣಿ ಪೂರಾ ಕೊಡುವುದಿಲ್ಲ ಎಂಬ ಅಸಮಾಧಾನವಿದೆ. ಇನ್ನು ಪಾಲಾಗುತ್ತೇವೆ ಎಂದರೆ ಒಪ್ಪುತ್ತಾರೆಯೇ? ಗೇಣಿ ಚೀಟು ಹೊಸತಾಗಬೇಕು. ಬಂದ ಉತ್ಪನ್ನ ಮೂರು ಪಾಲಾಗಬೇಕೇ ಹೊರತು ಭೂಮಿ ಪಾಲಾಗುವುದು ಸಾಧ್ಯವಿಲ್ಲ ಎಂಬ ವಾಸ್ತವ ಚಿತ್ರ ಅರ್ಥವಾದಂತೆ ಅವರಲ್ಲಿ ದಟ್ಟವಾಗಿ ಬೆಳೆಯಿತು ವೈಮನಸ್ಸು. ಕ್ರಮೇಣ ದೊಡ್ಡ ಮನೆ ಮೂರು ಪಾಲಾಗಿ ಮೂರು ಒಲೆಗಳ ಹೊಗೆ ಕಾಣಿಸಿಕೊಂಡಿತು ಮಾಡಿನ ಮೇಲೆ.

ಹೀಗೆ ಹೊಗೆ ಕಾಣಿಸಿಕೊಂಡ ಕೇವಲ ಒಂದೆರಡು ವರ್ಷಗಳಲ್ಲಿ ಈಶ್ವರ, ನಾರಾಯಣನನ್ನು ಪೂರಾ ಎದುರು ಹಾಕಿಕೊಂಡ ನಾಗರಾಜ. ಕಾನೂನು ಮತ್ತು ಧರ್ಮದ ಗೆರೆ ವಿಚಾರದ ನಾಗರಾಜನ ನಿರ್ಧಾರ ಎಷ್ಟು ಸಮಂಜಸ, ಎಷ್ಟು ಅರ್ಥಪೂರ್ಣವಾಗಿತ್ತು, ಆ ಮಾತು ಬೇರೆ. ಆದರೆ ವ್ಯವಹಾರಿಕ ರೀತಿ, ನೀತಿ ಇವೆ. ಧರ್ಮದ ಚೌಕಟ್ಟಿನೊಳಗೆ ಬರುವ ವ್ಯವಹಾರವನ್ನು ಅಲ್ಲಗಳೆಯುವಂತಿಲ್ಲ.

ತನ್ನ ಅಜ್ಜನ ಬಗ್ಗೆ ಯೋಚಿಸುತ್ತ ನಿಟ್ಟುಸಿರು ಬಿಟ್ಟ ನರಹರಿ. ತನ್ನ ಪಾಲಿಗೆ ಬಂದ ಚಿನ್ನ–ಬೆಳ್ಳಿ ನಾಣ್ಯಗಳನ್ನು, ಚಿನ್ನಾಭರಣಗಳನ್ನು ದೇವಾಲಯಕ್ಕೆ ಒಪ್ಪಿಸುವಾಗ ನಾಗರಾಜನಲ್ಲಿ ಮೋಹ, ಸ್ವಾರ್ಥ, ದುರಾಸೆಯಿರಲಿಲ್ಲ. "ಅಪ್ಪಾ ಶಿವನೇ,ನೀನು ಕೊಟ್ಟದ್ದನ್ನು ನೀನೇ ತೆಗೆದುಕೋ" ಎಂಬ ಕೃತಾರ್ಥ ಭಾವ, ಸಮರ್ಪಣಾ ಭಾವ. ತನ್ನ ತಂದೆಯೂ ಅಜ್ಜನಿಗೆ ತಕ್ಕ ಮಗ. ತಾನೂ ಹಾಗಿರಲೇಬೇಕೆಂದು ಯೋಚಿಸಿದಷ್ಟೂ ಎಲ್ಲಿಂದಲೋ ಆವರಿಸುತ್ತದೆ ಮೋಹ. ದುರಾಸೆ. ತನ್ನ ಹಿರಿಯರಲ್ಲಿ ಅಸಮಾಧಾನ, ಸಿಟ್ಟು ಉಕ್ಕುತ್ತದೆ. ಇಲ್ಲ, ತಾನೆಂದೂ ಈ ಬಗ್ಗೆ ಯೋಚಿಸಲೇಬಾರದು.

ತನ್ನಲ್ಲೇ ಸಮಾಧಾನ ಹೇಳಿಕೊಳ್ಳುತ್ತಾ ಆಶಾವಾದದಿಂದ ಹಿಂದಿರುಗಿದ ದೊಡ್ಡಕಾಡಿಗೆ.

* * *

ನರಹರಿ ಹಳ್ಳಿಯಲ್ಲಿ ಇಲ್ಲದ ಈ ಕೆಲವು ದಿನಗಳಲ್ಲಿ ಮಹತ್ವದ ಬದಲಾವಣೆಯಾಗಿತ್ತು. ಅದೆಂದರೆ ಅಲಕಾ ಶಿಕ್ಷಕಿಯಾಗಿ ಪ್ರಾಥಮಿಕ ಶಾಲೆಗೆ ಸೇರಿಕೊಂಡದ್ದು ! ಯಾವಾಗ ಮಕ್ಕಳಿಬ್ಬರೂ ಇಲ್ಲಿಂದ ನಿರ್ಗಮಿಸಿದರೋ, ಯಾವಾಗ ವಿಜಯ ಅತ್ತು ರಂಪಾಟ ಮಾಡಿ ಅವಳ ಹೃದಯದಲ್ಲಿ ವೇದನೆಯ ಬಿರುಗಾಳಿ ಎಬ್ಬಿಸಿ ಹೊರಟುಹೋದಳೋ ಆಗಲೇ ಅವಳಿಗೆ ಜೀವನ ನೀರಸವೆನಿಸಿ,ಕುಳಿತಲ್ಲಿ ಮಕ್ಕಳ ಧ್ಯಾನವೇ ಆಗಿಹೋಯಿತು.ಶಂಕರಯ್ಯ ಅವಳ ಸ್ಥಿತಿ ಕಂಡು ಗಾಬರಿಯಾಗಿ, "ನರಹರಿ ಬಂದ್ಮೇಲೆ ಗಂಟುಮೂಟೆ ಕಟ್ಟಿ ನೀವಿಬ್ಬರೂ ಔರಂಗಾಬಾದ್‌ಗೆ ಹೋಗಿಬಿಡಿ. ಕಂಪನಿ ತೆರೆವ ತನಕ ಪ್ರತಿ ತಿಂಗಳೂ ಹಣ ನಾನೇ ಕಳುಹಿಸುತ್ತೇನೆ. ಮಕ್ಕಳನ್ನು ಅಗಲಿ ನೀನು ಹೀಗಿರಬಾರದು" ಎಂದರು.

ಅವರ ಉದಾರ ಮನಸ್ಸಿಗೆ ಅವಳು ಇನ್ನೂ ಕರಗಿಹೋದಳು.ಹೌದು,ತಾನು ಹೋಗಲೇಬೇಕು. ಮಕ್ಕಳ ಅಗಲುವಿಕೆಯಲ್ಲಿ ಜೀವಂತ ಬೇಯುವ ಬದಲು ಅಲ್ಲಿ ತನಗೆಲ್ಲಾದರೂ ಕೆಲಸ ಸಿಕ್ಕೀತು. ನೋಡೋಣ. ಅವಳು ಇದೇ ಚಿಂತೆಯಲ್ಲಿದ್ದಾಗ ಆ ದಿನ ಮನೆಗೆ ಬಂದಿದ್ದರು ಸೋಮಶೇಖರ ಮಾಸ್ತರರು. ಅವರೊಡನೆ ಮಾತನಾಡುತ್ತಿದ್ದಾಗ ಶಾಲೆಯ ಬವಣೆ ಅರ್ಥವಾಗಿ, "ಹೊಸಬರು ಬರುವ ತನಕ ನಿಮ್ಮ ಶಾಲೆಯಲ್ಲಿ ಪಾಠ ಮಾಡಲೇ ?"—ಕೇಳಿದಳು ತಮಾಷೆಯಲ್ಲಿ.

ಮಾಸ್ತರರು ಕಣ್ಣರಳಿಸಿ, "ನಿಮಗಿಷ್ಟವಿದ್ದರೆ ಬನ್ನಿ. ಆದರೆ ನಿಮ್ಮ ಅತ್ತೆ

ಮಾವ ಏನು ಹೇಳುತ್ತಾರೋ. ನರಹರಿಯೂ ಊರಲ್ಲಿಲ್ಲ" ಎಂದರು ಅನುಮಾನದಲ್ಲಿ.

ಶಂಕರಯ್ಯ, ರೇಣುಕೆಗೆ ಸೊಸೆ ಶಾಲೆ ಕೆಲಸಕ್ಕೆ ಹೋಗುವುದು ಇಷ್ಟವಿರಲಿಲ್ಲ. ಆದರೆ ಸೊಸೆಯ ಬಾಡಿದ ಮುಖ, ಅತ್ತು ಕೆಂಪಾಗುವ ಕಣ್ಣುಗಳನ್ನು ನೋಡಿದ ಮೇಲೆ ಶಾಲೆ ಅವಳಿಗೆ ಸ್ವಲ್ಪ ಬದಲಾವಣೆ ನೀಡಿದರೆ ತಮಗೇನಂತೆ ಎಂದುಕೊಂಡು ಮೌನಸಮ್ಮತಿಯಿತ್ತರು ಹೆಚ್ಚಿನ ಚಿಂತೆ ಮಾಡದೆ.

ಅಲಕಳಿಗೆ ಮೊದಲ ದಿನವೇ ಇಷ್ಟವಾಯಿತು ಶಾಲೆ. ಅಲ್ಲಿರುವ ಮಕ್ಕಳೆಲ್ಲ ವಿಜಯಳಿಗಿಂತ ಚಿಕ್ಕವರು. ಅವರಿಗೆ ಅ,ಆ,ಇ,ಈ ಕಲಿಸುವುದು,ಮಗ್ಗಿ ಓದಿಸುವುದು, ಹಾಡು ಹೇಳಿಕೊಡುವುದು, ಅವರೊಡನೆ ಆಟ ಎನ್ನುತ್ತ ದಿನದ ಆರು ತಾಸು ಕಳೆಯುವ ಪರಿವೆಯೇ ಇಲ್ಲ. ಅವಳ ಮನಸ್ಸು ಅರಳಿತು ಹೊಸ ವಾತಾವರಣದಲ್ಲಿ.

ಅಲಕಳಿಗೆ ಅವರು ಇವರು ಎಂಬ ಭೇದವಿಲ್ಲ. ಕರೆದವರ ಮನೆಗೆ ಹೋಗಿ ಬಂದಳು. ಈ ಗ್ರಾಮದಲ್ಲಿ ತನ್ನ ಪ್ರಾಯದ ಅನೇಕ ವಿದ್ಯಾವಂತ ತರುಣಿಯರಿದ್ದಾರೆಂದು ತಿಳಿದದ್ದು ಆಗಲೇ. ಅವರಲ್ಲಿ ಕೆಲವರು ಓದಿದ್ದಾರೆ, ಕೆಲವರಿಗೆ ಹೊಲಿಗೆ ಬರುತ್ತದೆ, ಒಬ್ಬಳು ಚೆನ್ನಾಗಿ ರಂಗವಲ್ಲಿ ಇಡುತ್ತಾಳೆ. ಇನ್ನೊಬ್ಬಳು ಹಾಡು ಕಲಿತಿದ್ದಾಳೆ. ಆದರೆ ಅವರ ಪ್ರಯೋಜನ ಸಿಕ್ಕಿಲ್ಲ ಯಾರಿಗೂ.

"ನೀವು ಹೊಲಿಗೆ ಕ್ಲಾಸು ತೆರೆಯಬಾರದೇ ?"—ಕೇಳಿದಳು ಕೆಳಬೈಲಿನ ರಾಜಮ್ಮನ ಮನೆಗೆ ಹೋದಾಗ.

ಅವಳಲ್ಲಿ ಹೊಲಿಗೆ ಯಂತ್ರವಿತ್ತು. "ಮನೇಲಿ ಹ್ಯಾಗೆ ಕ್ಲಾಸು ತೆರೀಲಿ ? ಹೊರಗೆ ಎಲ್ಲಿ ಕ್ಲಾಸು ತೆರೀಬೇಕು ತಿಳೀತಾ ಇಲ್ಲ" ಎಂದಳು ರಾಜಮ್ಮ ಸಂಕೋಚದಲ್ಲಿ.

ಹಾದಿಮನೆ ಭಟ್ಟರ ಮೊಮ್ಮಗಳು ವತ್ಸಲ ಸಂಸ್ಕೃತ, ಹಿಂದಿ ಭಾಷೆಗಳ ಪದವಿ ಗಳಿಸಿದ್ದಳು.

"ದಿನಾ ಶಾಲೆಗೆ ಬಂದು ಮಕ್ಕಳಿಗೆ ಗೀತಾಭ್ಯಾಸ ಮಾಡಿಸ್ತೀಯಾ ?"

ಅಲಕಳ ಪ್ರಶ್ನೆಗೆ ಇನ್ನೂ ಇಪ್ಪತ್ತು ಮೀರದ ವತ್ಸಲ ಹರ್ಷದಿಂದ ಚಪ್ಪಾಳೆ ತಟ್ಟಿದಳು. ಆಮೇಲೆ ಮುಖ ಮುದುಡುತ್ತ, "ಅಪ್ಪ ಒಪ್ತಾರೋ ಇಲ್ಲವೋ ತಿಳೀದು. ನಾಳೆ ಮದುವೆಯಾಗುವ ಹುಡುಗಿ ಹಾಗೆಲ್ಲ ಹೋಗಬಾರದು ಅನ್ತಾರೆ" ಎಂದಳು.

ಹಾಗೆ ಹೇಳಿದರೂ ಮರುದಿನ ಬೆಳಿಗ್ಗೆ ವತ್ಸಲ ಹಾಜರು. ಶಾಲೆಯಲ್ಲಿ ಭಗ

ವದ್ಗೀತೆಯ ಶ್ಲೋಕ ಹೇಳಿ ತೋರಿಸಿದಳು ಮಕ್ಕಳಿಗೆ. ಶಾಲೆ ಪ್ರಾರಂಭವಾಗುವ ಅರ್ಧಗಂಟೆ ಮೊದಲು ಶ್ಲೋಕ ಹೇಳಿಕೊಡುವುದೆಂದು ನಿರ್ಧರಿಸಲಾಯಿತು. ಇಷ್ಟವಿರುವ ಮಕ್ಕಳು ಗೀತಾಪಾಠ ಕಲಿಯಬಹುದು. ಸುಮಾರು ಅರವತ್ತು ಮಕ್ಕಳು ಹಾಜರಾದರು ಅಭ್ಯಾಸಕ್ಕೆ. ಆಶ್ಚರ್ಯವೆಂದರೆ ಹಾದಿಮನೆ ಭಟ್ಟರು ಯಾವ ತಕರಾರೂ ಎತ್ತದೆ, ''ಅವಳನ್ನು ನೋಡಿಕೊಳ್ಳಲು ನೀವಿದ್ದೀರಲ್ಲ'' ಎಂದರು ಅಲಕಳಿಗೆ.

ಈ ದಿನಗಳಲ್ಲಿ ಹಳ್ಳಿಯ ಒಬ್ಬೊಬ್ಬರ ಪರಿಚಯ ಹೆಚ್ಚಿದಂತೆ ರಾಜಮ್ಮ ಮತ್ತು ವತ್ಸಲಳೊಡನೆ ಸಮಾಲೋಚನೆ ಮಾಡಿ ಒಂದು ಮಹಿಳಾ ಸಂಘ ತೆರೆಯುವುದು;ಹೊಲಿಗೆ, ಹಾಡು,ಗೀತಾಪಾಠ, ಹಿಂದಿ ಪಾಠ, ಸಂಸ್ಕೃತಿ ಪರಿಚಯ ಅಲ್ಲದೆ ಆಸಕ್ತ ಅನಕ್ಷರಸ್ಥ ಮಹಿಳೆಯರಿಗೆ ಅಕ್ಷರಾಭ್ಯಾಸ ಮಾಡಿಸುವುದು ಎಂದು ಅವಳ ಯೋಚನೆ. ಆದರೆ ಮಹಿಳಾ ಸಂಘ ತೆರೆಯುವುದೆಲ್ಲಿ? ದೊಡ್ಡ ದೊಡ್ಡ ಅನುಕೂಲವಂತರ ಮನೆಗಳು ಇದ್ದವು. ಪಟೇಲರ ಎರಡನೆ ಸೊಸೆ ''ನಮ್ಮಲ್ಲೇ ಸಂಘ ಮಾಡೋಣ'' ಎಂದರೆ ಹಿರಿಯ ಸೊಸೆ ''ಮಾವ, ಗಂಡ ವಿರೋಧ ಹೇಳಬಹುದು'' ಎಂದಳು ಅನುಮಾನದ ರಾಗ ತೆಗೆದು. ಮನೆಗಳಲ್ಲಿ ಸಂಘ ನಡೆಸುವುದು ಯಾರಿಗೂ ಆಗದ ಮಾತು. ಅಲಕಳೂ ಇದಕ್ಕೆ ಹೊರತಾಗಿಲ್ಲ. ಕೊನೆಗೆ ಶಾಲೆಯಲ್ಲಿ ಸಂಘದ ವಿಶಾಟಂಗು, ಆದರ ಉಳಿದ ಚಟುವಟಿಕೆ ನಡೆಸುವುದೆಂದು ತೀರ್ಮಾನಿಸಲಾಯಿತು. ಪ್ರತಿ ಆದಿತ್ಯವಾರ ಮಧ್ಯಾಹ್ನ ಎರಡು ಗಂಟೆಗೆ ಎಲ್ಲರೂ ಶಾಲೆಯಲ್ಲಿ ಸೇರುವುದೆಂದು ಮಾತನಾಡಿಕೊಂಡರು.

ಎಲ್ಲರಿಗೂ ಉತ್ಸಾಹ. ಪ್ರಥಮ ಸಭೆ ಆದಿತ್ಯವಾರದಂದು ಸೇರಿತು ಶಾಲೆಯ ಆವರಣದಲ್ಲಿ. ಆ ದಿನ ಸೇರಿದವರು ಸುಮಾರು ಇಪ್ಪತ್ತೆರಡು ಹೆಂಗಸರು ! ಇಪ್ಪತ್ತೈದು ರೂಪಾಯಿ ಕೊಟ್ಟು ಸದಸ್ಯರಾಗುವುದು. ಈ ಸದಸ್ಯರು ಬೇರ ಸದಸ್ಯೆಯರನ್ನು ಮಾಡಿಕೊಡಬೇಕು. ಶಾಲಾ ರಜಾ ದಿನಗಳಲ್ಲಿ ಹೊಲಿಗೆ, ಸಂಸ್ಕೃತ ಪಾಠ, ಹಿಂದಿ ಪಾಠ, ಗೀತಾ ಪಾಠ ಕಲಿಸುವುದೆಂದೂ, ಅನಕ್ಷರಸ್ಥ ಮಹಿಳೆಯರನ್ನು ಹುರಿದುಂಬಿಸಿ ಇಲ್ಲಿಗೆ ಕರೆತಂದು ಅವರಿಗೂ ಅಕ್ಷರಾಭ್ಯಾಸ ಮಾಡಿಸುವುದೆಂದೂ ಅಂದಿನ ಸಭೆಯಲ್ಲಿ ಮಾಡಲಾದ ಠರಾವು. ಅಲಕಳಿಗೆ ಇಮ್ಮಡಿ ಉತ್ಸಾಹ. ಅವಳ ಮುಖದ ಖಳೆ ಬೇರೆಯಾಗಿತ್ತು.

ಈ ಬೆಳವಣಿಗೆಯೊಂದಿಗೆ ಇನ್ನೊಂದು ಆಶ್ಚರ್ಯಕರ ಸಂಗತಿ ನಡೆಯಿತು. ಅದು ಗೌರಿಯದು. ಎರಡು ಬಾರಿ ಆತ್ಮಹತ್ಯೆಗೆ ಸಜ್ಜಾದ ಗೌರಿ ಪೂರಾ ಹತಾಶ

ಳಾಗುವ ಹೊತ್ತಿಗೆ ತ್ಯಾಂಪ ಪಕ್ಕದ ಗ್ರಾಮದಿಂದ ಸಿಹಿತಿಂಡಿ ಹೊತ್ತು ತಂದ. ತ್ಯಾಂಪನ ತಂದೆ-ತಾಯಿಯೂ ಬಂದರು ಹೂ ಮುಡಿಸುವ ಶಾಸ್ತ್ರಕ್ಕೆ. ಗೌರಿಯನ್ನು ಶಾಸ್ತ್ರೋಕ್ತವಾಗಿ ಮದುವೆಯಾಗಲು ಸಿದ್ಧನಾಗಿದ್ದಾನೆ ತ್ಯಾಂಪ. ಮದುವೆ ಶಿವದೇವಾಲಯದಲ್ಲಿ ಆಗಬೇಕಂತೆ. ಅರ್ಚಕರು ದಿನ ಮುಹೂರ್ತ ನೋಡಿ ಇನ್ನು ಹದಿನೈದೇ ದಿನಕ್ಕೆ ಪ್ರಶಸ್ತವಾದ ದಿನವಿದೆ ಎಂದಿದ್ದಾರೆ. ಈ ಸಂತೋಷದ ವಿಷಯ ಹೇಳಲು ಚಾಮಕ್ಕ, ಅವಳ ಗಂಡ, ಗೌರಿ ಬಂದಿದ್ದರು ಶಂಕರಯ್ಯನವರ ಮನೆಗೆ.

"ನನ್ನ ಮಗಳ ಬದುಕು ಉಳೀತು ಅಯ್ಯ. ಆ ದಿನ ನೀವೇ ಮಾಡ್ಸಬೇಕು" —ಕೈಮುಗಿದು ಅಡ್ಡಬಿದ್ದಳು ಚಾಮಕ್ಕ.

ಶಂಕರಯ್ಯ ಮನೆದೇವಿ ಪ್ರಸಾದ ತೆಗೆದು ಗೌರಿಯ ಕೈಗಿತ್ತು. ಮೆಲ್ಲನೆ ಕೇಳಿದರು,"ಯಾರ ತಪ್ಪಿನಿಂದ ಹೀಗಾಯ್ತು ಗೌರಿ ?"

ಗೌರಿ ನಾಚಿ ನೀರಾಗಿ ಹೋದಳು. ಅವಳ ಉತ್ತರ ಹೊರಬಿದ್ದಿತು. ಚಾಮಕ್ಕ ಬಾಯಿಯಿಂದ, "ತಪ್ಪು ತ್ಯಾಂಪನದೇ. ಸುಳ್ಳು ಆಣೆ ಪ್ರಮಾಣ ಮಾಡಿ ತಪ್ಪಿಸಿಕಳ್ತ ಅಂದ. ಶಿವ ಬಿಡ್ತಾನೆಯೇ ? ಅವನಿಗೆ ಇಲ್ಲಿಂದ ಮನೆಗೆ ಹೋದ ಹಾಗೆ ಹೊರಕ್ಕಡೆ ಶುರು ಆಯ್ತಂತೆ. ಔಷಧಿ, ಬೇರುನಾರು ಕಂಡಿದರೂ ಕಮ್ಮಿ ಆಗಲಿಲ್ಲ. ಇದು ಸಾಲದೆ ಮನಿ ಕೊಟ್ಟಿಗೆಗೆ ಬೆಂಕಿ ಬಿತ್ತಂತೆ. ಪುಣ್ಯಕ್ಕೆ ಮಧ್ಯಾಹ್ನದ ಹೊತ್ತು. ದನ ಕರು ಹಾಡಿಗೆ ಹ್ವಾಗಿದ್ವೊ. ಅವನೂ ಮನೇಲಿದ್ದ. ಆಚಿ ಈಚಿ ಜನ ಬೆಂಕಿ ನಂದಿಸಿದರಂತೆ. ನಷ್ಟ ಎಂತದೂ ಆಯಲಿಲ್ಲೆ. ಆದರೆ ತ್ಯಾಂಪ ಹೆದರಿಹೋದ. ತಡಿಲಾರದ ಎದಿನೋವು ಶುರು ಆತು. ಮತ್ತೂ ಪರೀಕ್ಷೆಮಾಡುವ ಧೈರ್ಯ ಬರಲಿಲ್ಲ ಅವರಿಗೆ. ನಾಲ್ಕು ದಿನದ ಹಿಂದೆ ಗಂಟ್ವಾಗಿ ಇಲ್ಲಿಗ್ಬಂದು ಪೂಜೆ ಮಾಡಿಸಿಕಂಡು ಹೋಗಿದ್ದನಂತೆ. ಅತ್ತ ಹ್ವಾದದ್ದೇ ತಡ ಹೊರಕ್ಕಡೆ ಇಲ್ಲೆ. ಎದಿನೋವು ಇಲ್ಲೆ. ಎಲ್ಲಾ ಆ ಶಿವನ ಮಾಯೆ !

ನಂಬಿಕೆಯ ಮುಂದೆ ಇನ್ನಾವ ಪ್ರಶ್ನೆಯೂ ಇಲ್ಲ. ತಪ್ಪು ಮಾಡಿ ಸುಳ್ಳು ಆಣೆ ಪ್ರಮಾಣ ಹಾಕಿ ದೇವರನ್ನು ಇದಿರು ಹಾಕಿಕೊಳ್ಳುವುದೆಂದರೆ ಉಡಿಯಲ್ಲಿ ಬೆಂಕಿ ಕಟ್ಟಿಕೊಂಡಂತೆ. ಸದ್ಯ ಬೇಗ ತಪ್ಪೊಪ್ಪಿಗೆ ಸಂದಾಯ ಮಾಡಿ ಮದುವೆಗೆ ಸಜ್ಜಾದದ್ದು ಅವನ ಮತ್ತು ಗೌರಿಯ ಪುಣ್ಯ !

"ಅಯ್ಯ, ಗುಡಿಗಾರ ಸೋನು ಮದುಮಕ್ಕಳಿಗೆ ಬಾಸಿಂಗ ಮಾಡಿ ಕೊಡ್ತಿ ಅಂದಾನೆ"—ಉತ್ಸಾಹದಿಂದ ಅಂದಳು ಚಾಮಕ್ಕ "ಮತ್ತೆ ನಮ್ಮನರಸಿ ಮಂಗ

ಸುಬ್ಬು ವಾಲಗ ಊದಲು ಒಪ್ಪಿದಾನೆ. ಅವನ ಪಾರ್ಟಿಯಂದೇ ವಾಲಗ ಆ ದಿನ."

ವಾಲಗದ ನರಸಿ ಮಗ ಸುಬ್ಬು ! ಅವನು ವಾಲಗ ಊದಲು ಒಪ್ಪಿಕೊಂಡಿದ್ದಾನೆಯೇ ? ಶಂಕರಯ್ಯನವರಿಗೆ ನಂಬಿಕೆ ಬರಲಿಲ್ಲ. ಸುಬ್ಬು ದೇವಾಲಯದಲ್ಲಿ ವಾಲಗ ಊದದೆ ನಾಲ್ಕು ವರ್ಷಗಳಾದವು. ಮನೆತನದ ರೂಢಿಗತ ಪದ್ಧತಿಯನ್ನು ಪ್ರಥಮ ಬಾರಿ ಮುರಿದಿದ್ದ ಸುಬ್ಬು. ಪ್ರತಿ ಶಿವರಾತ್ರಿಯಂದು ನಸುಕು ನಾಲ್ಕು ಗಂಟೆಗೆ ಎದ್ದು ಮಿಂದು ಮಡಿಯುಟ್ಟು ಬಂದು ದೇವಾಲಯದ ಪ್ರಾಂಗಣದಲ್ಲಿ ಕುಳಿತು ಸುಮಾರು ಒಂದು ತಾಸು ವಾಲಗ ಊದುವುದು ಆ ಮನೆತನದವರ ಪದ್ಧತಿ. ವಾಲಗದ ನಂತರ ಅರ್ಚಕರು ಕೊಡುವ ವೀಳ್ಯದೆಲೆ, ಅಡಿಕೆ, ದಕ್ಷಿಣೆ ತೆಗೆದುಕೊಂಡು ಹೋಗುವುದು ವಾಡಿಕೆ. ದಕ್ಷಿಣೆ ಅಷ್ಟು ಇಷ್ಟು ಎಂಬ ಲೆಕ್ಕವಿಲ್ಲ. ಕೊಟ್ಟಷ್ಟು. ವೀಳ್ಯಕೊಟ್ಟು ಕರೆಯದಿದ್ದರೂ ತಾವೇ ಬಂದು ದೇವರನ್ನು ವಿವಿಧ ರಾಗಗಳಲ್ಲಿ ಸ್ತುತಿಸುವುದು ತಮ್ಮ ಸೇವೆ ಎಂದು ಅವರ ನಂಬಿಕೆ. ಶಿವರಾತ್ರಿಯಂದು ಬೆಳಗಾಗುವುದೇ ನರಸಿ ಮನೆಯವರ ವಾಲಗದ ಸೇವೆಯಿಂದ.

ಆದರೆ ಇದೇ ನರಸಿ ಮನೆಯವರಿಗೆ ಎಲ್ಲಿ ಮದುವೆ ಮುಂಜಿಯಿರಲಿ ಮನೆಗೆ ಬಂದು ವೀಳ್ಯ ಕೊಟ್ಟು ಕರೆದು ಸಂಭಾವನೆ ಗೊತ್ತುಮಾಡಬೇಕು. ಚಪ್ಪರಗಳಲ್ಲಿ ಅವರ ಪಾರ್ಟಿಗೆ ಅಗ್ರಸ್ಥಾನ. ಗೌರವಕ್ಕೆ ಎಲ್ಲಿಯೂ ಚ್ಯುತಿ ಬರಬಾರದು. ಸಂಭಾವನೆ ಲೆಕ್ಕ ಕಮ್ಮಿಯಾಗಬಾರದು. ಅವರ ಪೈಕಿ ಸುಬ್ಬು ಗಳಿಸಿದಷ್ಟು ಖ್ಯಾತಿ ಇನ್ಯಾರೂ ಗಳಿಸಿರಲಿಕ್ಕಿಲ್ಲ. ನೆರೆಗ್ರಾಮಗಳ ಜನರೂ, ದೂರದೂರಿನವರೂ ಅವನ ನಾಗಸ್ವರಕ್ಕೆ ಮನಸೋತು ಆಹ್ವಾನಿಸುವುದಿತ್ತು. ಆಗ ಅವನು ಪಡೆವ ಸಂಭಾವನೆಯೂ ಅಧಿಕ.

ಸುಬ್ಬುವಿನ ಖ್ಯಾತಿ, ಸಂಭಾವನೆ ಹೆಚ್ಚಿದಂತೆ ಶಿವರಾತ್ರಿಯಂದು ವಾಲಗ ಊದುವುದು ತನ್ನ ಘನತೆಗೆ ಕುಂದು ಎಂದುಕೊಂಡನೋ, ಅಥವಾ ಅರ್ಚಕ ಶೀನಪ್ಪಯ್ಯ ಕೊಡುವ ದಕ್ಷಿಣೆ ಸಾಲದು ಎನಿಸಿತೋ, ಒಂದು ವರ್ಷ ವಾಲಗ ಸೇವೆಗೆ ಬರಲೇ ಇಲ್ಲ. ಅವನ ತಂದೆ ಒಬ್ಬನೇ ಬಂದು ಸೇವೆ ಮಾಡಿ ಹೋಗಿದ್ದ.

ಕಳೆದೆರಡು ವರ್ಷಗಳಿಂದ ಅವನಿಗೂ ಸೌಖ್ಯವಿಲ್ಲದೆ ಅವನ ಮನೆಯಿಂದ ಯಾರೂ ಬರಲಿಲ್ಲ ವಾಲಗ ಊದಲು. ಶಿವರಾತ್ರಿಯ ಬೆಳಗು ವಾಲಗದ ಧ್ವನಿಯಿಲ್ಲದೆ ಸಪ್ಪೆಯಾಯಿತು. ಅರ್ಚಕರು ಬಂದು ಶಂಕರಯ್ಯ, ಮಹಂತಯ್ಯನ

ಮರಲ್ಲಿ ದೂರಿಕೊಂಡಾಗ, "ಹೊಸ ತಲೆಮಾರಿನ ಹುಡುಗ, ದೇವರ ಮುಂದೆ ವಾಲಗ ಊದುವುದರಲ್ಲಿ ಅರ್ಥ ಕಳೆದುಕೊಂಡಿದ್ದಾನೆ" ಎಂದಿದ್ದರು ಇಬ್ಬರೂ.

ಆದರೆ ಆಮೇಲೆ ಅವರಿಗೆ ತಿಳಿದ ವಿಷಯವೇ ಬೇರೆ, ಅವರಿವರ ಬಳಿ ಆಡಿಕೊಂಡನಂತೆ, "ದೇವರ ಮುಂದೆ ನಾಲ್ಕು ಕಾಸಿಗೆ ವಾಲಗ ಊದಲು ನಾನೇನೂ ಬಿಟ್ಟಿ ಸಿಕ್ಕಿಲ್ಲ. ಬಿಕ್ಷುಕರಿಗೂ ಒಂದು ರೂಪಾಯಿ ಎಸೀತಾರೆ,ನಾವು ಅವರಿಗಿಂತ ಕೀಳಾಗಿ ಹೋದೆವು. ಸರಿಯಾದ ಸಂಭಾವನೆ ಕೊಟ್ಟರೆ ವಾಲಗ ಊದಲು ನಾವು ತಯಾರು!"

ಅಹಂಕಾರದ ಮಾತು! ಶೀನಪ್ಪಯ್ಯ ಪೆಚ್ಚಾಗಿ, "ಎಷ್ಟು ಸಂಭಾವನೆ ಕೊಡೋಣ ?" ಕೇಳಿದ್ದರು ಮಹಂತಯ್ಯನವರನ್ನು.

"ನಮ್ಮ ಪದ್ಧತಿ ಬಿಡುವುದು ಸಾಧ್ಯವಿಲ್ಲ. ಸೇವೆ ಬೇಕಿದ್ದರೆ ಮಾಡಲಿ. ಇಲ್ಲವಾದರೆ ಬಿಡಲಿ. ನಷ್ಟ ಅವನಿಗೆ, ನಮಗಲ್ಲ!"

ಹೀಗೆ ಕಳೆದವು ನಾಲ್ಕು ವರ್ಷಗಳು. ಈಗ ಸುಬ್ಬು ಬಾರಿಸಲು ಬರುತ್ತೇನೆ ಎಂದಿದ್ದಾನೆಯೇ? ಚಾಮಕ್ಕ ತನಗೆ ಅಧಿಕ ಸಂಭಾವನೆ ಕೊಡಲಿ ಎಂದು ಎಲ್ಲೋ ತಮಾಷೆ ಮಾಡಿರಬೇಕು.

ಚಾಮಕ್ಕ ಇನ್ನೂ ಒಂದು ಮಾತು ಹೇಳಿದಳು. ಮಗಳ ಮದುವೆ ದಿನ ದೇವರಿಗೆ ಚಿನ್ನದ ಕಿರೀಟ, ಸರ ಹಾಕಿ ಶೃಂಗರಿಸಬೇಕಂತೆ. ದೇವರ ಕಿರೀಟ ಚಿನ್ನದ ಸರ ತೊಡಿಸುವುದು ವರ್ಷಕ್ಕೆ ಎರಡೇ ಬಾರಿ. ಗಣೇಶ ಚೌತಿಯ ದಿನ ಮತ್ತು ವರ್ಷಾವಧಿ ಜಾತ್ರೆಯ ಉತ್ಸವದ ದಿನ. ನಾಗರಾಜಯ್ಯ ದೇವಾಲಯಕ್ಕೆ ಸಮರ್ಪಿಸಿದ ಚಿನ್ನಾಭರಣಗಳನ್ನು ನೋಡಲು ಎರಡು ಕಣ್ಣು ಸಾಲದು, ಅಷ್ಟು ಚೆಂದ, ಅಷ್ಟು ಮಜಬೂತು! ಶೃಂಗರಿಸಿದ ದೇವರನ್ನು ನೋಡಲೆಂದೇ ಬರುವವರಿದ್ದಾರೆ. ಚಾಮಕ್ಕ ಬುದ್ಧಿವಂತೆ. ತನ್ನ ಮಗಳ ಮದುವೆ ದಿನ ಆ ನೆಪದಲ್ಲಿ ಜನ ಸೇರಲೆಂಬ ಆಸೆ ಇದ್ದೀತು.

ನರಹರಿ ಮನೆ ಸೇರಿದಾಗ ಇವೆಲ್ಲ ತಿಳಿದು ಸಖೇದಾಶ್ಚರ್ಯವಾಯಿತು. ಶಾಲೆ ಕೆಲಸಕ್ಕೆ ಅಲಕ ಸೇರಬೇಕೆಂದು ಅವನು ಬಯಸಿದ್ದ, ನಿಜ. ಆದರೆ ಹೇಗೆ ಕೇಳುವುದು ? ಎಂಬ ಹೆದರಿಕೆ. ಈಗ ನೋಡಿದರೆ ಅವಳಾಗಿಯೇ ಬೇಸರ ನೀಗಲು ಹುಡುಕಿಕೊಂಡ ದಾರಿ ಅದು. ಒಳಿತೇ ಆಯಿತು. ಇನ್ನೊಂದು, 'ನಿಮ್ಮನ್ನು ನೋಡಿಕೊಳ್ತೇನೆ' ಎಂದು ತೋಳೇರಿಸಿದ್ದ ತ್ಯಾಂಪನಿಗೆ ಇನ್ನೆರಡು ದಿನಗಳಲ್ಲಿ ಮದುವೆ ಗೌರಿ ಜೊತೆ! ಹಾಗಾದರೆ ತಾನು ಅವರ ಜಗಳದ ವ್ಯವಹಾರದಲ್ಲಿ ಸರಿಯಾಗಿ ವರ್ತಿಸಿದ್ದೆ. ಸದ್ಯ, ಗೌರಿ

ಬದುಕು ಮಣ್ಣಾಗಲಿಲ್ಲ, ಅದೇ ಸಮಾಧಾನ.

ಅವನೂ ಆನಂದದಿಂದಲೇ ಸೋಮಶೇಖರ ಮಾಸ್ತರರನ್ನು ಅವರ ಮನೆಯಲ್ಲಿ ಕಂಡು ಬಂದ.

“ನಿಮ್ಮ ಹೆಂಡತಿ ಬಂದ್ಮೇಲೆ ಲವಲವಿಕೆ ಬಂದಿದೆ ಶಾಲೆಗೆ. ಮಕ್ಕಳು ಒಂದು ದಿನವೂ ಶಾಲೆ ತಪ್ಪಿಸ್ತಾ ಇಲ್ಲ” ಎಂದರು ಮಾಸ್ತರರು ಮೆಚ್ಚುಗೆಯಲ್ಲಿ.

ಆದರೆ ಕೊಂಕುನುಡಿ ಬಂದದ್ದು ಮಹಂತಯ್ಯನವರ ಹೆಂಡತಿಯಿಂದ. “ನಿನ್ನ ಹೆಂಡತಿ ಶಾಲೆ ನಡೆಸ್ತಾಳಂತೆ, ನಯಾಪೈಸೆ ಲಾಭವಿಲ್ಲ. ಶಾಲೆಯಲ್ಲಿ ಮಹಿಳಾ ಸಂಘ ಬೇರೆ. ನಮ್ಮ ಇಬ್ಬರು ಸೊಸೆಯರು ಹಾರಿಬಿದ್ದು ಹೋಗ್ತಾ ಇದ್ದಾವೆ. ಪ್ರತಿ ಆದಿತ್ಯವಾರ ಹೆಂಗಸರಿಗೆ ಇವೆಲ್ಲ ಕಸುಬು ಯಾತಕ್ಕೆ? ವಟವಟ ಹರಟೆ ಹೊಡೆಯಲು ಮನೆ ಜಗಲಿ ಸಾಲದೇ ಇವರಿಗೆ?”

ಪಟೇಲರ ಮನೆಯಲ್ಲಿ ಮಿಶ್ರ ಪ್ರತಿಕ್ರಿಯೆ. ಹಿರಿ ಸೊಸೆಗೆ ಮಹಿಳಾ ಸಂಘದ ಬಗ್ಗೆ ಹಲವಾರು ಯೋಜನೆಗಳಿವೆ. ಎರಡನೇ ಸೊಸೆಗೆ ಸ್ವಲ್ಪ ಅಸೂಯೆ ಜಾಸ್ತಿ. “ನಾಲ್ಕು ಹೆಂಗಸರು ಸೇರಿದರೆ ಜಗಳ ಗಲಾಟೆ ಆಗದೇ ಇದ್ದೀತೇ? ಹಾಗಾದರೆ ಅಲಕಾ ಮಹಿಳಾ ಸಂಘ ಕಟ್ಟಬೇಕು ಅಂದುಕೊಂಡರೂ ಸಾಧ್ಯ ಆಗಲಿಲ್ಲ. ನೋಡೋಣ, ಇವರ ಆಯುಸ್ಸು ಎಷ್ಟು ದಿನ ಅಂತ?”

ಅಲಕಾ ಯಾರ ಮಾತಿಗೂ ಕಿವಿಗೊಡಲಿಲ್ಲ. ತಾನು ಹಳ್ಳಿಯಲ್ಲಿ ಇರುವಷ್ಟು ದಿನ ತನ್ನನ್ನು ಇಂತಹ ಕಾರ್ಯಕ್ಕೆ ತೊಡಗಿಸಿಕೊಳ್ಳದಿದ್ದರೆ ತನಗೆ ಹುಚ್ಚು ಹಿಡಿದೀತು. ತಾನಿಲ್ಲಿಂದ ಹೊರಟುಹೋಗುವ ಮೊದಲು ಒಂದು ಸಂಘ ಸ್ಥಾಪನೆ ಆಗಲೇಬೇಕು. ಅಲ್ಲಿ ಸ್ವಲ್ಪ ಕೆಲಸವಾದರೂ ಸಾಕು.

ಮುಂದೆ ಎರಡೇ ದಿನದಲ್ಲಿ ತ್ಯಾಂಪ, ಗೌರಿಯ ಮದುವೆ. ಮುಖ್ಯ ಪುರೋಹಿತರಾಗಿ ಶಂಕರಯ್ಯ, ಸಹಾಯಕ್ಕೆ ನರಹರಿ. ಶೀನಪ್ಪಯ್ಯ ಬೆಳಿಗ್ಗೆಯೇ ಶಿವಲಿಂಗಕ್ಕೆ ಅಭಿಷೇಕ ಮಾಡಿ, ಪೂಜೆ ಮುಗಿಸಿ ಆಭರಣ ತೊಡಿಸಿದ್ದರು. ಶಂಕರಯ್ಯನವರ ಮಂತ್ರಘೋಷದೊಂದಿಗೆ ಮದುವೆ ಮುಗಿಸಿದಾಗ ಚಾಮಕ್ಕಗೆ ಕೃತಾರ್ಥಳಾದೆನೆಂಬ ಸಂತೋಷ. ತ್ಯಾಂಪ ಎಲ್ಲರ ಕಾಲು ಮುಟ್ಟಿ ನಮಸ್ಕರಿಸಿ ಆಶೀರ್ವಾದ ಬೇಡಿದ. ಆದರೆ ನರಹರಿಯತ್ತ ಹೊರಳಿಯೂ ನೋಡಲಿಲ್ಲ. ಅವನ ಮೇಲೆ ಮುನಿಸು ಇತ್ತು ಇನ್ನೂ. ನರಹರಿಯೂ ಇದೇ ವರ್ತನೆ ನಿರೀಕ್ಷಿಸಿದ್ದ ಅವನಿಂದ.

ಖೇದದ ಸಂಗತಿ ಎಂದರೆ ಆ ದಿನ ವಾಲಗ ಬಾರಿಸಲು ಸುಬ್ಬು ಬಂದಿದ್ದ,

ನಿಜ. ಇಬ್ಬರು ಸಂಗಡಿಗರೂ ಇದ್ದರು, ಅವನ ಜೊತೆಯಲ್ಲಿ. ಒಬ್ಬ ಮೃದಂಗಕ್ಕೆ, ಇನ್ನೊಬ್ಬ ತಾಳ ಹಾಕಲು. ಆತ್ಮವಿಶ್ವಾಸ ಮತ್ತು ಸ್ವಲ್ಪ ಅಹಂಕಾರದಿಂದ ನಾಗಸ್ವರ ಕೈಗೆತ್ತಿಕೊಂಡಿದ್ದ. ಬಾರಿಸಲು ಪ್ರಾರಂಭಿಸಿದರೆ ಅದೇಕೋ ಇಂಪಾದ ಸ್ವರ ಹೊರಡಲೇ ಇಲ್ಲ. ಒಂದು ಗಂಟೆ ಹೊತ್ತು ಅವನೆಷ್ಟು ಕಷ್ಟಪಟ್ಟರೂ ಅದರಿಂದ ಕೇಳಿದ್ದು ಗೊರಗೊರ ಸದ್ದು. ಅವನ ಗಂಟಲು ನರಗಳು ಉಬ್ಬಿದವು, ಕಣ್ಣುಗಳು ಕೆಂಪಾದವು. ಊದಿ ಊದಿ ಕೆನ್ನೆ ಬಣ್ಣಗೆಟ್ಟಿತು. ಆದರೂ ಸುಸ್ವರ ನಾಪತ್ತೆ. ಇದೇನು, ಸ್ವರ ಮುಷ್ಕರ ಹೂಡಿತೇ? ಗಂಟಲು ನರ ಹರಿದುಹೋಯಿತೇ? ನಾಗಸ್ವರದ ತಂತಿ ತುಂಡಾಯಿತೇ? ಊಹೂಂ. ಎಲ್ಲ ಸರಿಯಾಗಿದೆ. ಹಾಗಾದರೆ ದೋಷ ಎಲ್ಲಿ? ಈಗೆರಡು ತಿಂಗಳ ಹಿಂದೆ ಪಕ್ಕದೂರಿನ ಮದುವೆ ಮನೆಯಲ್ಲಿ ಬಾರಿಸುತ್ತಿದ್ದಾಗ ಹಾಗೇ ಒಮ್ಮೆ ಸ್ವರ ಉಡುಗಿತ್ತು, ಕೇವಲ ಒಂದು ನಿಮಿಷಕ್ಕೆ. ಆಮೇಲೆ ಮೊದಲಿನಂತೆ ಇಂಪಾದ ಧ್ವನಿ ಬಂದಿತ್ತು. ತಿಂಗಳ ಹಿಂದೆ ಇನ್ನೊಂದೂರಿನ ಶ್ರೀಮಂತರ ಮನೆ ಗೃಹಪ್ರವೇಶದ ದಿನವೂ ಹತ್ತು ನಿಮಿಷ ಅವನ ಗಂಟಲಲ್ಲಿ ನೋವು ಕಾಣಿಸಿತ್ತು. ಮೆಲ್ಲನೆ ಕಂಪಿಸಿದ್ದ. ಇವತ್ತು ಪ್ರಾರಂಭದಲ್ಲೇ ಸ್ವರ ಹೊರಡುತ್ತಿಲ್ಲ ಅವನ ವಾದ್ಯದಿಂದ. ಇದೇನು ಪ್ರಾರಬ್ಧವೋ.

ಮದುವೆಗೆ ಸೇರಿದ್ದ ಜನರಲ್ಲಿ ಎದ್ದಿತು ಗುಸುಗುಸು. ಕೆಲವರಿಗೆ ಅನುಕಂಪ, ಕೆಲವರಿಗೆ ಕುತೂಹಲ. ಯಾಕೆ ಹೀಗಾಗುತ್ತಿದೆ? ಶಂಕರಯ್ಯ ಒಂದೆರಡು ಬಾರಿ ಹುಬ್ಬೇರಿಸಿ ನೋಡಿದರು ಅವನತ್ತ. ಅವರ ದೃಷ್ಟಿಯನ್ನು, ಜನರ ಪ್ರಶ್ನೆಯನ್ನು ಎದುರಿಸಲಾಗದೆ ಸುಬ್ಬು ಅರೆಕ್ಷಣ ತಲೆ ತಗ್ಗಿಸಿದ. ಹೀಗೆ ಎಲ್ಲರೆದುರು ಅವಮಾನವಾಗಲೆಂದು ತಾನಿಲ್ಲಿಗೆ ಬಂದೆನೇ? ಚಾಮುಕ್ಕ ಮಂಗಳ ಮದುವೆಗೆ ವಾಲಗ ಊದಬೇಕೆಂಬ ಪ್ರೇರಣೆ ತನಗೇಕೆ ಆಯಿತು? ಚಾಮುಕ್ಕ ತನಗೆ ಸಂಬಂಧಿಕಳೆಂದೇ? ಗೌರಿ ಮೇಲೆ ಕನಿಕರದಿಂದಲೇ? ಅಥವಾ ಚಾಮುಕ್ಕ ತನಗೆ ಕೈತುಂಬ ಹಣ ಕೊಟ್ಟು ಕರೆಯಿಸಿದ್ದಾಳೆಂದು ಜನರಲ್ಲಿ ಸುಳ್ಳು ನಂಬಿಕೆ ಹೆಚ್ಚಿಸಬೇಕೆಂಬ ಛಲ ತನ್ನಲ್ಲಿತ್ತೋ? ಊರು–ಪರವೂರಿನಲ್ಲಿ ಖ್ಯಾತಿ ಪಡೆದವ ತಾನು ಇಲ್ಲಿ ಮಣ್ಣು ಮುಕ್ಕಿದ್ದು ಎಷ್ಟು ಹಾಸ್ಯಾಸ್ಪದ.

ಸುಬ್ಬುವಿನ ಸಿಟ್ಟಿಗೆ ಸರಿಯಾಗಿ ಶೀನಪ್ಪಯ್ಯ, "ಅವನು ಬಂದದ್ದೇ ದೊಡ್ಡ ಸಂಭ್ರಮದ ವಿಷಯ, ಹೀಗಾಗಬಾರದಿತ್ತು"—ಲೊಚಗುಟ್ಟಿದರು ವಿಷಾದದಲ್ಲಿ.

ಸುಬ್ಬುವಿಗೆ ಎಲ್ಲಿಲ್ಲದ ಆವೇಶ ಬಂದು ವಾದ್ಯವನ್ನು ನೆಲಕ್ಕೆ ಕುಟ್ಟಿ ಧಡಾರನೆ ಎದ್ದುಬಿಟ್ಟ. "ನಿಮ್ಮಂತವರಿಂದಲೇ ನನಗೆ ಹೀಗಾದದ್ದು. ನನ್ನ ಯೋಗ್ಯತೆ ಏನೆಂದು ತಿಳಿದಿಲ್ಲ ನಿಮಗಿನ್ನೂ. ನನ್ನನ್ನು ಹೀಗೆ ರೇಗಿಸಿದ್ದಕ್ಕೆ ಆ ದೇವರೇ ನಿಮ್ಮನ್ನು ನೋಡಿಕೊಳ್ಳಲಿ."

ಶಂಕರಯ್ಯ ಸಮಾಧಾನ ಹೇಳಲು ಮುಂದೆ ಬಂದರು. "ಪವಿತ್ರ ಸ್ಥಳದಲ್ಲಿ, ಒಂದು ಪುಣ್ಯಕಾರ್ಯದ ಹೊತ್ತಿನಲ್ಲಿ ಮನಸ್ಸನ್ನು ಹಾಳು ಮಾಡಿಕೊಳ್ಳ ಬಾರದು ಸುಬ್ಬು. ಇನ್ನೊಮ್ಮೆ ನಾಗಸ್ವರ ಕೈಗೆತ್ತಿಕೋ. ಸ್ವರ ಹೊರಡ ಬಹುದು. ಎಲ್ಲೋ ನಿನ್ನ ಗಂಟಲು ಕೆಟ್ಟಿದೆ!"

"ಚಾಮಕ್ಕಗೆ ನಾ ಬೇಕಾದವ ಅಂತ ಅವಳ ಮಗಳ ಮದುವೆಗೆ ಬಾರಿ ಸಲ ಬಂದಿದ್ದೆ. ನಿಮ್ಮ ಮುಖ ನೋಡಿ ಅಲ್ಲ."

ಮುದುಕ ನರಸಿ ಮಗನ ಹೆಗಲು ತಟ್ಟಿದ. "ಅಯ್ಯನವರ ಎದುರಿಗೆ ಮಾತಾಡ್ತಾ ಇದ್ದೀ ಅಂತ ನೆನಪಿರಲಿ ಮಗಾ."

"ನಾ ಎಲ್ಲರ ನೆಪ್ಪು ಇಟ್ಟುಕೊಂಡವ. ಎಲ್ಲರನ್ನೂ ತಲೆ ಮ್ಯಾಲೆ ಹೊತ್ತವ. ಇವರಿಗೇ ನಾವ್ಯಾರೂ ಬ್ಯಾಡದೋ.... ಎಲ್ಲರ ದೃಷ್ಟಿ ಬಿದ್ದು ನನ್ನ ನಾಗಸ್ವರವೇ ಹಾಳಾಗಿಹೋಗಿದೆ" ಎಂದವನೇ ಇನ್ನೊಂದು ಕ್ಷಣ ನಿಲ್ಲದೆ ಬೀಸುಗಾಲಿಡುತ್ತ ಹೊರಟುಹೋದ.

ನೆರೆದವರೆಲ್ಲ ನಿಬ್ಬೆರಗಾಗಿಹೋದರು ಸುಬ್ಬುವಿನ ಧೈರ್ಯಕ್ಕೆ. ನರಸಿ ಗಡಗಡ ನಡುಗುತ್ತ ಅಡ್ಡಬಿದ್ದ ಶಂಕರಯ್ಯನವರ ಕಾಲಿಗೆ. ಎಲ್ಲರೂ ಚಾಮಕ್ಕಯನ್ನು ಕೇಳುವವರೇ, "ಎಷ್ಟಕ್ಕೆ ಅವನನ್ನು ಮಾತು ಮಾಡಿದ್ದಿ?"

ಚಾಮಕ್ಕಗೆ ತಬ್ಬಿಬ್ಬು. ಸುಬ್ಬುವನ್ನು ವೀಳ್ಯ ಕೊಟ್ಟು ಅವಳಾರೂ ಕರೆದಿರಲಿಲ್ಲ. ಅವನು ತಾನೇ ಬರುತ್ತೇನೆಂದಾಗ ಹಣದ ವಿಷಯ ಎತ್ತಿದ್ದಳು. "ಅದೆಲ್ಲ ಆಮೇಲೆ ಮಾತನಾಡೋಣ" ಅಂದಿದ್ದ. ಆಮೇಲೆ ಮಾತನಾಡಲು ಅವನೇ ಇಲ್ಲ. ಮದುವೆ ಇನ್ನೂ ಪ್ರಾರಂಭ ಎನ್ನುವಾಗಲೇ ಹೊರಟುಹೋಗಿದ್ದ.

ವಾಲಗವಿಲ್ಲದೆ ಮುಗಿಯಿತು ಮದುವೆ. ಮದುಮಕ್ಕಳು, ಉಳಿದವರು ಪ್ರಸಾದ ಸ್ವೀಕರಿಸಿ ಹೋದಮೇಲೆ ಶಂಕರಯ್ಯ ಮೆಲ್ಲನೆ ಕೇಳಿದರು ಶೀನಪ್ಪಯ್ಯನವರನ್ನು. "ಸುಬ್ಬುಗೆ ನಮ್ಮ ಮೇಲೆ ಅಸಮಾಧಾನವಾಗಿದೆ. ಏನೋ ಸಂಸಾರ ವಂದಿಗ, ದಕ್ಷಿಣೆ ಸಾಲಲಿಲ್ಲ ಅಂದದ್ದು ತಪ್ಪೇನಿಲ್ಲ. ಈ ಸಲ ಶಿವರಾತ್ರಿಗೆ ವಾಲಗಸೇವೆಗೆ ಬರಲಿ, ಸ್ವಲ್ಪ ಹೆಚ್ಚಿಗೆ ದಕ್ಷಿಣೆ ಕೊಟ್ಟುಬಿಡೋಣ."

ಆಭರಣಗಳನ್ನು ದೇವರ ಮೈಮೇಲಿಂದ ತೆಗೆಯುತ್ತಿದ್ದ ಶೀನಪ್ಪಯ್ಯ ಮುಖ ತಿರುಗಿಸಿದರು. "ದೇವರ ಮುಂದೆ ಸಾಕ–ಸಾಲದು ಅನ್ನಬಾರದು ಅಯ್ಯ. ಊಟಕ್ಕಿಲ್ಲದ ಕಡುದರಿದ್ರನೂ ಇಲ್ಲಿಗೆ ಬಂದಾಗ ತನಗೆ ತಿಳಿದಂತೆ ದೇವರನ್ನು ಸ್ತುತಿಸುವುದಿಲ್ಲವೇ. ಭಕ್ತ ಮಂತ್ರ ಹೇಳುವುದಿಲ್ಲವೇ ? ಈ ಮಹಾರಾಯನಿಗೆ ಎರಡು ಕಾಸು ಹೆಚ್ಚಿಗೆ ಸಂಪಾದನೆ ಆಯಿತೋ ಪ್ರಾರಂಭಿಸಿದ ಗೊಣಗಾಟಕ್ಕೆ."

"ಈ ಸಲ ಕಮಿಟಿಯಲ್ಲಿ ಸುಬ್ಬು ವಿಷಯ ಎತ್ತಿ ಹೇಳೋಣ. ಅವನಿಗೆ ಅಸಮಾಧಾನವಾದರೆ ಈ ದೇವಾಲಯಕ್ಕೆ ಒಳ್ಳೆಯದಲ್ಲ."

"ಏನು ?" ಬಟ್ಟೆಯಿಂದ ಆಭರಣಗಳ ಮೇಲಿದ್ದ ನೀರನ್ನು ಒರಸುತ್ತ ಸ್ವರ ಇಳಿಸಿದರು ಶೀನಪ್ಪಯ್ಯ. "ಅವನ ಅಸಮಾಧಾನಕ್ಕೆ ಹೆದರಿ ನಮ್ಮತನ ಯಾಕೆ ಬಿಟ್ಟುಕೊಡಬೇಕು ? ಫಲಾಪೇಕ್ಷೆಯಿಲ್ಲದೆ ಅವನಾಗಿಯೇ ವಾದ್ಯ ಬಾರಿಸಲು ಬರಲಿ, ಆಮೇಲೆ ದಕ್ಷಿಣೆ ಹೆಚ್ಚಿಸುವ ಬಗ್ಗೆ ಆಲೋಚನೆ."

"ಸರಿ ಹೇಳಿದಿರಿ" ನರಹರಿ ತಲೆಯಲ್ಲಾಡಿಸಿದ. "ಮಹಾರಾಯಾ, ನೀನು ಪಾಲಗ ಊದದೆ ನಾಲ್ಕು ವರ್ಷಗಳಾದವು. ದೇವರಿಗಿಂತ ಹೆಚ್ಚಾಗಿ ನಮಗೆ ನಿನ್ನ ವಾದ್ಯ ಕೇಳಬೇಕಾಗಿದೆ. ನೀನು ಹೇಳಿದಷ್ಟು ದಕ್ಷಿಣೆ ಕೊಡ್ತೇವೆ ಎಂದರೆ ಸರಿಯಾಗಲಿಕ್ಕಿಲ್ಲ. ಇನ್ನೂ ಕೋಡು ಮೂಡೀತು ಅವನಿಗೆ."

"ಅವನ ಸಿಟ್ಟು ನೋಡಿ ಬೇಸರವಾಗಿ ಹೇಳಿದೆ. ನಾನಿನ್ನು ಹೊರಟೆ. ಆಭರಣಗಳನ್ನು ಜೋಪಾನವಾಗಿ ತೆಗೆದಿಡಿ."

ಶಂಕರಯ್ಯ ಹೊರಟುಹೋದರು. ಶೀನಪ್ಪಯ್ಯ ಒರೆಸಿದ ಆಭರಣಗಳನ್ನು ಲೆಕ್ಕ ಮಾಡಿ ಒಳಕೋಣೆಯ ಪೆಟಾರಿಯಲ್ಲಿ ಭದ್ರವಾಗಿಟ್ಟರು. ಪೆಟಾರಿಯಲ್ಲಿ ಬೇರೆ ಬೆಳ್ಳಿ ಸಾಮಾನುಗಳೂ, ಯಾರೋ ಹರಕೆಯಲ್ಲಿ ಕೊಟ್ಟ ಬೆಳ್ಳಿ ಮುಖವಾಡ ಇದ್ದವು. ಅವೆಲ್ಲ ದೇವಾಲಯದ ಸೊತ್ತು. ಶೀನಪ್ಪಯ್ಯ ಪೆಟಾರಿಗೆ ಬೀಗ ಜಡಿದು ಎರಕದಿಂದ ಅದನ್ನು ಗಟ್ಟಿ ಮಾಡುವಷ್ಟು ಹೊತ್ತು ದೇವಾಲಯದ ಟ್ರಸ್ಟಿನ ಇನ್ನೂ ಇಬ್ಬರು ಗಂಡಸರಿದ್ದರು ಜೊತೆಯಲ್ಲಿ. ಒಂದು ಸೊತ್ತೂ ಅಕಸ್ಮಾತ್ ಕೈತಪ್ಪಿ ಹೋಗಬಾರದೆಂಬ ಮುಂದಾಲೋಚನೆ ! ಇವರ ಜೊತೆಯೇ ಇದ್ದ ನರಹರಿ. ಅವನು ಆಭರಣ ನೋಡಿದ್ದು ಇದೇ ಮೊದಲು. ತನ್ನ ಅಜ್ಜನ ನಿಸ್ವಾರ್ಥ, ನಿರ್ಮಲ ಹೃದಯಕ್ಕೆ, ಧರ್ಮಬುದ್ಧಿಗೆ ಬೆರಗಾದ ತನ್ನಲ್ಲೇ.

ದೇವರ ಸೊತ್ತು ಎಂದರೆ ಸರ್ಪದ ಹೆಡೆ ಮೇಲಿರುವ ಮಣಿಯಂತೆ.

ಮುಂಚ್ಚಿನಲೂ ಹೆದರಿಕೆ ನಾಗರಾಜನಿಗೆ. ಅವನಿಗೂ, ಈಶ್ವರ ಮತ್ತು ನಾರಾಯಣರಿಗೂ ಜಗಳ ಬಂದದ್ದು ಇದೇ ವಿಷಯಕ್ಕಾಗಿ ಅಲ್ಲವೇ ತನ್ನ ಅಣ್ಣಂದಿರನ್ನು ತಿದ್ದಲು ಸಾಧ್ಯವೇ ಎಂದವನು ಮೊದಲು ಯೋಚಿಸಿದ್ದ. ಆದರೆ ನಾರಾಯಣ ಯಾರಿಗೂ ಬಗ್ಗುವವನಲ್ಲ ಎಂದರಿತ ಮೇಲೆ ಸಂದರ್ಭಕ್ಕಾಗಿ ಕಾಯುತ್ತಿದ್ದಾಗಲೇ ದೇವಾಲಯದ ಹಳೆಕಡತಗಳು ಹೊರಬಂದದ್ದು. ಅವರಲ್ಲಿರುವ ಸತ್ಯಸಂಗತಿ ನಾಗರಾಜನ ಕಣ್ಣು ತೆರೆಯಿಸಿ ಅವನಲ್ಲಿ ಪಾಪಪ್ರಜ್ಞೆ ಹುಟ್ಟಿಸಿಬಿಟ್ಟಿತು. ಅಣ್ಣಂದಿರು ಬೇಡವೆಂದರೂ ಕೇಳದೆ ಗ್ರಾಮಸ್ಥರನ್ನು ಕರೆದು ಹಳೆ ಕಡತಗಳನ್ನು ಅವರ ಮುಂದಿಟ್ಟು, "ಈ ತನಕ ನಾವು ನೋಡಿಕೊಂಡಾಯ್ತು. ಇನ್ನೇಲೆ ಗ್ರಾಮಸ್ಥರ ವಶಕ್ಕೆ ಒಪ್ಪಿಸಿದ್ದೇವೆ ದೇವಾಲಯವನ್ನು. ನಿಮಗೆ ತಿಳಿದಂತೆ ವ್ಯವಹಾರ ನೋಡಿಕೊಳ್ಳಿ" ಎಂದ ವಿನೀತಭಾವದಲ್ಲಿ.

ಗ್ರಾಮಸ್ಥರಿಗೆ ಅಚ್ಚರಿ. ಈ ತನಕ ಲೋಪವಿಲ್ಲದೆ ಪೂಜೆ-ವ್ಯವಹಾರ ನಡೆಸಿಕೊಂಡು ಬಂದ ಮನೆತನ ಅವರದು. ವಾರಸುದಾರರು ತಾವಲ್ಲ ಎಂದಾಕ್ಷಣ ಹೊಣೆ ಕಳಚಿಕೊಳ್ಳುವುದು ಎಷ್ಟು ಸಮಂಜಸ? ಈಗೇನು ಮಾಡಬೇಕು? ದೇವಾಲಯವನ್ನು ಸರಕಾರಕ್ಕೆ ಬಿಟ್ಟುಕೊಡಬೇಕೇ? ಗ್ರಾಮಸ್ಥರೇ ಒಂದು ಟ್ರಸ್ಟ್ ಮಾಡಿ ಆಡಳಿತ ನಡೆಸಬೇಕೇ?

ಅನೇಕ ದಿನಗಳವರೆಗೆ ಹಿರಿಯರಲ್ಲಿ ಚರ್ಚೆ ನಡೆದು ಕೊನೆಗೆ ಟ್ರಸ್ಟ್ ಮಾಡುವುದೆಂದು ತೀರ್ಮಾನಿಸಲಾಯಿತು. ಅಧ್ಯಕ್ಷರು, ಮೊಕ್ತೇಸರ, ಖಜಾಂಚಿ ಎಂದೆಲ್ಲ ಅವರೇ ವ್ಯವಸ್ಥೆ ಮಾಡುವಾಗ ಈ ಮೂವರು ಅಣ್ಣ ತಮ್ಮಂದಿರು ತಮ್ಮೊಡನೆ ಸೇರಬೇಕೆಂದು ಆಶಿಸಿದ್ದರು. ಆದರೆ ನಾಗರಾಜ ತನಗೆ ಯಾವುದೂ ಬೇಡ ಎಂದ ಸ್ಪಷ್ಟವಾಗಿ. ನಾರಾಯಣ—ಈಶ್ವರ ತಮಗಿದು ಅಪಮಾನ ಎಂಬಂತೆ ಅತ್ತ ತಲೆ ಹಾಕದೆ ಇದಕ್ಕೆಲ್ಲ ಕಾರಣಪುರುಷನಾದ ನಾಗರಾಜನನ್ನು ಹಳಿಯುತ್ತ ಕುಪಿತರಾದರು ತಮ್ಮಲ್ಲೇ.

ಇಲ್ಲಿಗೆ ಮುಗಿಯಲಿಲ್ಲ. ಉಳುವವನಿಗೆ ಭೂಮಿ ಒಡೆತನದ ಕಾಯಿದೆ ಬರಲಿದೆಯೆಂದು ಅಲ್ಲಿ ಇಲ್ಲಿ ಗುಸುಗುಸು ಕೇಳುತ್ತಿದ್ದಂತೆ ಭೂಮಾಲಿಕರು ತಾವು ಗೇಣಿಗೆ ಕೊಟ್ಟ ಭೂಮಿಯನ್ನು ಬಿಡಿಸಿಕೊಳ್ಳಲು ಸಜ್ಜಾದಾಗ, ಎಲ್ಲರಿಗಿಂತ ಮೊದಲು ನಾಗರಾಜ 'ಅಸ್ತು' ಎಂದ! ಭೂಮಿ ಯಾರದೋ ಅವರಿಗೆ ಅದರ ಹಕ್ಕು, ಉಳುವವನಿಗಲ್ಲ. ಅವರು ಕೇಳಿದಂಗ ತಾವು ಹಿಂದಿರುಗಿಸುವುದು ಧರ್ಮ ಎಂದವನೇ ಗೇಣಿಚೀಟಿಗಳನ್ನು ಅವರವರಿಗೆ ವಾಪಸ್ಸು ಮಾಡಲು ಮಾತುಕತೆಗೆ ಸಿದ್ಧನಾದ. ಗಲಾಟೆ, ಜಗಳ ಎದ್ದಿತು ಅಣ್ಣತಮ್ಮಂದಿರಲ್ಲಿ.

"ನಮ್ಮ ಕೈಗೆ ಕರಟ–ಕೋಲು ಬರಬೇಕೆಂಬ ಆಸೆಯೇ ?" ಅರ್ಥವಾಗದೆ ಕೇಳಿದ ನಾರಾಯಣ. "ನೀನು ಭೂಮಿ ಉಳಲಿಲ್ಲ. ಬೆಳೆ ಕೊಯ್ಯಲಿಲ್ಲ. ಕಾಲಿಗೆ ಕೆಸರು ಮೆತ್ತಿಕೊಳ್ಳಲಿಲ್ಲ. ನಿನಗೆ ಹೇಗೆ ಗೊತ್ತು ಬೆವರಿನ ಫಲ ? ಧರ್ಮರಾಯನ ಹಾಗೆ ಭೂಮಿ ಹಿಂದಿರುಗಿ ಕೊಡೋಣ ಅನ್ನುತ್ತೀಯ !"

"ದೇವಾಲಯದ ಜಮೀನನ್ನು ನಾವಾಗಿಯೇ ಬಿಟ್ಟುಕೊಟ್ಟೆವು" ಈಶ್ವರನೂ ಅಂದ. "ಯಾಕೆಂದರೆ ಅದರ ಒಡೆತನ ನಮ್ಮದಲ್ಲ."

"ಇದು ನಮ್ಮ ಹಕ್ಕಿನಿಂದ ಪಡೆದದ್ದು, ನ್ಯಾಯದ ದುಡಿಮೆ !" ಎದೆ ತಟ್ಟಿದ ನಾರಾಯಣ. "ನನ್ನ ತಂದೆ, ಮುರಾರಿ ಚಿಕ್ಕಪ್ಪ ಕಷ್ಟಪಟ್ಟು ಒಂದು ಪಾಲು ನಿನ್ನ ಅಪ್ಪ ಕಷ್ಟಪಡಲಿಲ್ಲ. ನೀನೋ ಸೊಗಸುಗಾರ ! ಸೋಮಾರಿ ! ನಾನು ಬೆವರು ಸುರಿಸಿ ದುಡಿದ ಭೂಮಿ ನನಗೆ ಬೇಕೇಬೇಕು. ಒಂದಿಂಚು ನೆಲ ಯಾರಿಗೂ ವಾಪಸ್ಸು ಮಾಡಲಾರೆ !" ಹಠ ಬಂದಿತ್ತು ನಾರಾಯಣನಿಗೆ. ನ್ಯಾಯವಾಗಿ ಅವನೇ ದುಡಿಯುವ ಗಟ್ಟಿಕುಳ. ಆದರೆ ಗೇಣಿ ಪೂರಾ ಸಂದಾಯ ಮಾಡದ ಅಪ್ರಾಮಾಣಿಕನೂ ಹೌದು.

ಇಲ್ಲಿಯೂ ಗೆಲುವು ಸಿಕ್ಕಿದ್ದು ನಾಗರಾಜನಿಗೆ, ದೈವ ಒಲಿದದ್ದು ಅವನ ನಿರ್ಣಯಕ್ಕೆ. ಕಾಲಕಾಲಕ್ಕೆ ತಿದ್ದಲ್ಪಟ್ಟ ಎಲ್ಲ ಗೇಣಿಚೀಟುಗಳಲ್ಲಿ ಇದ್ದದ್ದು ಗೇಣಿದಾರ ನಾಗರಾಜನ ಹೆಸರು ! ಏನಾಶ್ಚರ್ಯ ! ನಾರಾಯಣ ಅನುಮಾನದಿಂದ ಸರಿಯಾಗಿ ಪರೀಕ್ಷಿಸಿದ, ಗೇಣಿ ಕೊಟ್ಟವರನ್ನೂ ಭೇಟಿಯಾಗಿ ಬಂದ. ಆದರೆ ಎಲ್ಲಿಯೂ ಅವನ ಅಥವಾ ಈಶ್ವರನ ಹೆಸರಿಲ್ಲ. ನಿಜವಾಗಿಯೂ ಜನಾರ್ದನ ಚಿಕ್ಕಪ್ಪ ಬಹಳ ಬುದ್ಧಿವಂತನೆಂದು ಅರಿವಾದದ್ದು ಆಗಲೇ. ಬುದ್ಧಿವಂತಿಕೆಯಿಂದ ಗೇಣಿಚೀಟುಗಳನ್ನೆಲ್ಲ ತನ್ನ ಮಗನ ಹೆಸರಿಗೆ ಬದಲಾಯಿಸಿದ್ದಾನೆ. ಪಾಲಾಗಲು ಹೊರಟರೆ ಪೂರಾ ತನ್ನ ಮಗನಿಗೇ ಸಿಗಲಿ ಎಂಬ ಉದ್ದೇಶ ! ತಾವೂ ನೋಡಲಿಲ್ಲ. ಗೇಣಿ ಸಂದಾಯ ಮಾಡಿದರಲ್ಲವೇ ಅವನ್ನೆಲ್ಲ ನೋಡುವುದು ? ಅಡಿಕೆ, ತೆಂಗು, ಬತ್ತದ ಫಸಲಿನಲ್ಲಿ ಗೇಣಿ ಕೊಡದೆ ಸುಳ್ಳು ಹೇಳಿ ತಿಂದ ಅನ್ಯಾಯ ಹೀಗೆ ಫಲಿಸೀತೇ ? ಇನ್ನಂತೂ ಗೇಣಿಚೀಟು ಬದಲಾಯಿಸುವುದು ಅಸಾಧ್ಯ. ಈಶ್ವರನಿಗೂ ತಾನು ಕವಡೆ ಹಾರಿಸುತ್ತ ವ್ಯವಹಾರ ನೋಡದೆ ಹೆಡ್ಡನಾದೆನೆಂಬ ವಾಸ್ತವ ಸ್ಥಿತಿ ಅರ್ಥವಾಗಿ ಹೃದಯದಲ್ಲಿ ಅಲ್ಲೋಲಕಲ್ಲೋಲ. ತಮ್ಮ ಅಪ್ಪ ಮುರಾರಿ ಚಿಕ್ಕಪ್ಪ ಇಬ್ಬರೂ ಬೇಗ ತೀರಿಹೋಗಿದ್ದರು. ಆಮೇಲೆ ಜನಾರ್ದನ ಚಿಕ್ಕಪ್ಪನ ಕಾರುಭಾರ. ತಾವು ನಂಬಿದ್ದೆವು ಚಿಕ್ಕಪ್ಪನನ್ನು. ಈ ನಂಬಿಕೆಯೇ ಕತ್ತಿಪ್ರಹಾರ ಮಾಡಿದೆ ತಲೆಯ

ಮೇಲೆ.

ನಾಗರಾಜನಿಗೆ ನೆಮ್ಮದಿಯಾಗಿತ್ತು. ತನ್ನ ಅಪ್ಪನಿಗೆ ತಿಳಿದಿತ್ತು ಮಾವರ ಗುಣಸ್ವಭಾವ ಹೇಗೆ ಎಂದು. ಅದಕ್ಕೆಂದೇ ಗೇಣಿಚೀಟು ಪೂರಾ ತನ್ನ ಹೆಸರಿಗೆ ಬದಲಾಯಿಸಿರಬೇಕು. ಇರಲಿ, 'ನ್ಯಾಯ, ಧರ್ಮದಲ್ಲಿ ನಡೆ' ಎಂದಿದ್ದರು ಅಪ್ಪ, ಸಾಯುವ ಮೊದಲು. ಈಗಲೂ ತನ್ನ ಹೆಜ್ಜೆ ನ್ಯಾಯಮಾರ್ಗದಲ್ಲಿ.

ಹಳ್ಳಿಯಲ್ಲಿ ಎಲ್ಲರಿಗಿಂತ ಮೊದಲು ಸುಮಾರು ಹದಿನೆಂಟು ಎಕರೆ ಭೂಮಿ ಹಕ್ಕನ್ನು ಕಳಚಿಕೊಂಡ ಈ ಕುಟುಂಬಕ್ಕೆ ಆಗ ಉಳಿದದ್ದು ಕೇವಲ ಹಳೆ ಕಾಲದ ದೊಡ್ಡ ಮನೆ ಮತ್ತು ಅಂಗೈ ಅಗಲದ ಹಿತ್ತಲು ಜಾಗ. ಜನ ಬೆಕ್ಕಸಬೆರಗಾದರು ಧರ್ಮಮಾರ್ಗದ ಹಜ್ಜೆ ಕಂಡು; ಮರುಗಿದರು ಅವರ ಖಾಲಿ ಕೈ ಕಂಡು. ಹೌದು, ದೊಡ್ಡ ದೊಡ್ಡ ಬತ್ತದ ಪತ್ತಾಯ ಬಣಬುಟ್ಟಿತು. ಅಡಿಕೆ ದಾಸ್ತಾನು ಕೋಣೆಯಲ್ಲಿ ಬಲೆ ಬೆಳೆಯಿತು. ಅಂಗಳದಲ್ಲಿ ಹಬ್ಬಿಕೊಂಡಿತು ಜೊಂಡುಹುಲ್ಲು.

ಕೆಲವೇ ತಿಂಗಳಲ್ಲಿ ನಾರಾಯಣ ತನ್ನ ಹೆಂಡತಿ ಮಕ್ಕಳೊಂದಿಗೆ ಊರು ಬಿಟ್ಟು ಇನ್ನೆಲ್ಲಿಗೋ ಹೊರಟುಹೋದ. ಎಲ್ಲಿಗೆಂದು ತಿಳಿಸಲಿಲ್ಲ ಯಾರಿಗೂ. ಎಷ್ಟೋ ವರ್ಷಗಳ ನಂತರ ಅವನಿಗೆ ಕಣ್ಣುಗಳೆರಡೂ ಕಾಣದಾಗಿ ಕುರುಡನಾದದ್ದು ಮಾತ್ರವಲ್ಲ, ಗುಣಪಡಿಸಲಾಗದ ಹೊಟ್ಟೆನೋವಿನಲ್ಲಿ ನರಳಿ ನರಳಿ ಸತ್ತನೆಂಬ ಸುದ್ದಿ ಬಂದಿತ್ತು. ಸಾಯುವಾಗ ಬಿಳಿ ತೊನ್ನು ರೋಗವೂ ಬಂದಿತ್ತಂತೆ. ಈಶ್ವರನಿಗೆ ಸಂಪಾದನೆ ಚೆನ್ನಾಗಿಯೇ ಇತ್ತು. ನಾರಾಯಣ ಹೊರಟುಹೋದ ಮೇಲೆ ಜನರು ತಮ್ಮನ್ನು ಆಡಿಕೊಳ್ಳುವರೆಂಬ ಸಂಶಯಕ್ಕೆ ಒಳಗಾಗಿ ಜೀವನದಲ್ಲಿ ಜಿಗುಪ್ಸೆ ಬಂದು ತನ್ನ ಸಂಪತ್ತನ್ನು ಯಾರ್ಯಾರಿಗೋ ದಾನ ಮಾಡಿಹಾಕಿದ. ಹೆಂಡತಿ–ಮಕ್ಕಳನ್ನು ಅವಳ ತವರುಮನೆಗೆ ಕಳುಹಿಸಿ ತಾನು ಸನ್ಯಾಸ ಸ್ವೀಕರಿಸಲು ಕಾಶಿಯ ಹಾದಿ ಹಿಡಿದ. ಅವನ ಪಂಚಾಂಗದ ಕಟ್ಟುಗಳು, ಕವಡೆ ರಾಶಿ, ಜ್ಯೋತಿಷ್ಯ ಪುಸ್ತಕಗಳು ಹಾಗೇ ಮಹಡಿ ಕೋಣೆಯಲ್ಲಿ ಬಿದ್ದುಕೊಂಡವು ಕೇಳುವವರಿಲ್ಲದೆ. ಆ ದೊಡ್ಡ ಮನೆಯಲ್ಲಿ ಉಳಿದದ್ದು ನಾಗರಾಜನ ಸಂಸಾರ ಒಂದೇ.

ಉಣಲು ಉಡಲು ಪರದಾಡಬೇಕಿದ್ದ ಸ್ಥಿತಿ ನೋಡಿದ ಆಗಿನ ಪಟೇಲರಿಗೆ ಮನ ಕರಗಿ ತಮ್ಮ ತಾಯಿ ತೀರಿಹೋದ ಸಂದರ್ಭದಲ್ಲಿ ಭೂದಾನವೆಂದು ಒಂದೂವರೆ ಎಕರೆ ಬೇಸಾಯದ ಗದ್ದೆ ದಾನ ಮಾಡಿದರು ನಾಗರಾಜನಿಗೆ.

ಅವನು ನಿರ್ಮಲ ಮನದಿಂದ ಬಿಟ್ಟುಕೊಟ್ಟ ಅವರ ಅಪಾರ ಭೂಮಿಗೆ ಸರಿಸಮಾನವಾಗಿರಲಿಲ್ಲ ಈ ದಾನ. ಆದರೂ ಜೀವನಕ್ಕೆ ಪೌರೋಹಿತ್ಯ ಒಂದೇ ಆಧಾರವಾಗಿದ್ದ ನಾಗರಾಜನಿಗೆ ದಾನದ ಭೂಮಿ ಸಿಕ್ಕಿದ್ದು ಸ್ವಲ್ಪ ಉಸಿರಾಡುವಂತಾಯಿತು. ಮುಂದೆ ಇದೇ ಭೂಮಿಯಲ್ಲಿ ಶಂಕರಯ್ಯ ಅಡಿಕೆ ತೋಟ ಇಟ್ಟದ್ದು, ತೆಂಗು ಬೆಳೆದದ್ದು. ನರಹರಿ ಹಲ್ಲರ್ ಇಟ್ಟದ್ದು ಅವರಲ್ಲಿಯೇ.

"ಭೂದಾನವನ್ನು ತೆಗೆದುಕೊಳ್ಳುವ ಮನಸ್ಸು ಅಪ್ಪನಿಗಿರಲಿಲ್ಲ"—ಶಂಕರಯ್ಯ ಆಗಾಗ ಹೇಳುವುದನ್ನು ಮರೆತಿಲ್ಲ ನರಹರಿ. ಆದರೂ ಪಟೇಲರ ಒತ್ತಾಯ. ನೀವು ದಾನ ಸ್ವೀಕರಿಸದಿದ್ದರೆ ಗೇಣಿಗೆ ಮಾಡಿಕೊಂಡ ನಮ್ಮ ಭೂಮಿಯನ್ನು ನಿಮಗೇ ವಾಪಸ್ಸು ಮಾಡ್ತೇವೆ ಎಂದು ಬೆದರಿಸಿದರಂತೆ. ಹುಸಿ ಬೆದರಿಕೆ ಅದು. ಅಪ್ಪ ಮಾತಿಲ್ಲದೆ ಒಪ್ಪಿಕೊಂಡರು ಅವರ ಔದಾರ್ಯವನ್ನು.

ನಿಜ, ನ್ಯಾಯ, ಧರ್ಮ ಪ್ರಾಮಾಣಿಕತೆಗೆ ಸಂದಾಯವಾದ ಗೌರವ ಅದಾಗಿತ್ತು!

ಅಜ್ಜ ಕೊಟ್ಟ ಚಿನ್ನಾಭರಣ, ಆ ಹಲಸಿನ ಮರದ ಪೆಟಾರಿ ನೋಡಿದಾಗ ಅಜ್ಜನ ವ್ಯಕ್ತಿತ್ವವೇ ಎದುರು ಬಂದು ನಿಂತಂತಾಗಿ ಸ್ವಲ್ಪ ಹೊತ್ತು ನರಹರಿ ಅದೇ ಗುಂಗಿನಲ್ಲಿ ತನ್ನನ್ನು ಮರೆತುಬಿಟ್ಟ. ಅನೇಕ ವರ್ಷಗಳ ಕಾಲ ಪಕ್ಷವಾತದಲ್ಲಿ ಮಲಗಿ ನರಳಿದ್ದ ಅಜ್ಜನ ಆರೈಕೆ ಮಾಡಲು ಅವನೆಂದೂ ಹೇಸಿದವನಲ್ಲ. ಆ ಭಾಗ್ಯ ಸಿಗುತ್ತಿದ್ದದ್ದು ಶಾಲೆ-ಕಾಲೇಜುಗಳ ರಜಾ ದಿನಗಳಲ್ಲಿ ಮಾತ್ರ. ಆಗೆಲ್ಲ ಮಾಧವ ಅಜ್ಜನ ಹತ್ತಿರ ಸುಳಿಯುತ್ತಿರಲಿಲ್ಲ. ನರಹರಿ ಹಾಗಲ್ಲ, ಮೂರು ಹೊತ್ತೂ ಅಜ್ಜನ ಹಾಸಿಗೆಯಲ್ಲಿ. ಆದರೆ ಅಜ್ಜ ಎಷ್ಟು ಮೌನಿ! ಬೇಕು-ಬೇಡಗಳ ಹೊರತಾಗಿ ಬೇರೆ ಮಾತಿಲ್ಲ. ಇಬ್ಬರು ಅಣ್ಣಂದಿರೂ ತನ್ನಿಂದಾಗಿ ದೂರ ಸರಿದರೆಂಬ ವ್ಯಥೆ. ಮೌನವ್ರತಧಾರಣೆ ತನಗೆ ತಾನೇ ವಿಧಿಸಿಕೊಂಡ ಶಿಕ್ಷೆ!

ಹೇಗೆ ಕಳೆದುಹೋಯಿತು ನಾಗರಾಜನ ಕಾಲ! ಉಚ್ಛ್ರಾಯ ಸ್ಥಿತಿಗೇರಿದ್ದ ಆ ಮನೆತನದಲ್ಲಿ ಈಗ ಉಳಿದದ್ದು ಅವರ ನೆನಪೊಂದೇ!

* * *

ಜನ ಆಡಿಕೊಂಡರು ಸುಬ್ಬುವನ್ನು, ಅವನ ಅಹಂಕಾರವನ್ನು. ಸುಬ್ಬು ತನ್ನ ಮನೆತನದ ಸಂಪ್ರದಾಯ ಮುರಿದು ವಾಲಗದ ಸೇವೆ ನಿಲ್ಲಿಸಿದ್ದ. ಅಷ್ಟೇ ಅಲ್ಲ, ದಕ್ಷಿಣೆ ಸಾಲದೆಂದು ದೂರಿಕೊಂಡಿದ್ದ ಊರಲ್ಲೆಲ್ಲ. ವಾಲಗದ ಸೇವೆಗೆ ಇವ

ನೇನು ಮೈಲುಗಟ್ಟಲೆ ದೂರ ನಡೆದು ಬರಬೇಕಾಗಿರಲಿಲ್ಲ. ಊರ ದೇವಾಲಯ. ವರ್ಷಕ್ಕೊಮ್ಮೆ ಕೇವಲ ಒಂದು ದಿನ ಒಂದು ತಾಸು ದೇವರ ಮುಂದೆ ಮಾಲಗ ಬಾರಿಸಿದರೆ ಸಾಕಿತ್ತು. ಆದೂ ಇವನಿಂದಾಗಲಿಲ್ಲ. ಅದಕ್ಕೆ ತಕ್ಕ ಶಿಕ್ಷೆ ಸಿಕ್ಕಿತು ಎಂದುಕೊಂಡರು ಹೆಚ್ಚಿನವರು.

ಈಗಲೂ ಬೇರೆ ಬೇರೆ ಕಡೆಗಳಿಂದ ಆಹ್ವಾನ ಬರುತ್ತಿದ್ದವು. ಆದರೆ ಬಾರಿಸುವುದು ಹೇಗೆ ? ನಾಗಸ್ವರ ತುಟಿಗಿರಿಸಿ ಊದಲು ಪ್ರಾರಂಭಿಸಿದಾಕ್ಷಣ ಗಂಟಲು ನರ ಊದಿಕೊಂಡು ಸಿಡಿಯಲು ಪ್ರಾರಂಭ. "ಸ್ವಲ್ಪ ದೇಹಕ್ಕೆ ಆರಾಮ ಇಲ್ಲ. ನೀವು ಬೇರೆಯವರನ್ನು ಕರೆಯಿಸಿ," ಎಂದು ವೀಳ್ಯ ಕೊಡಲು ಬಂದವರಿಗೆ ಹೇಳುವಾಗ ತನ್ನ ವ್ಯಕ್ತಿತ್ವವೇ ಬೇರೆಯಾದಂತೆ. ಅವನ ಸಂಗಡಿಗರಿಬ್ಬರೂ ತಮ್ಮ ಅನ್ನಕ್ಕೆ ಕಲ್ಲು ಬೀಳದಂತೆ ಬೇರೆ ವಾದ್ಯಗಾರರಿಗೆ ಜೊತೆಗೂಡಲು ಹೋದರು.

ಸುಬ್ಬು ಮಾಡದ ಔಷಧಿಯಿಲ್ಲ, ಗಂಟಲಿಗೆ ಹಚ್ಚದ ಮದ್ದಿಲ್ಲ. ಪಟ್ಟಣಕ್ಕೆ ಹೋಗಿ ಆನೇಕ ಡಾಕ್ಟರರನ್ನು ಕಂಡು ಬಂದ, ಎಕ್ಸರೇ ತೆಗಿಸಿದ, ಇಂಜಕ್ಷನ್ ಚುಚ್ಚಿಸಿಕೊಂಡ, ಪರಿಣಾಮ ಸೊನ್ನೆ.

"ನನ್ನ ಸ್ನೇಹಿತನ ತಂದೆ ಮಾನಸಿಕ ತಜ್ಞನಾಗಿ ಬೆಂಗಳೂರಿನಲ್ಲಿದ್ದಾರೆ. ಅವರ ವಿಳಾಸ ಕೊಡ್ತೇನೆ. ಒಮ್ಮೆ ಹೋಗಿ ನೋಡಿ ಬಾ"—ಒಂದು ದಿನ ನರಹರಿ ಹೇಳಿದ ಅವನ ಒದ್ದಾಟ ನೋಡಲಾರದೆ.

"ನಂಗೆಂತ ಹುಚ್ಚು ಹಿಡಿದಿದೆ ಅಂತೀರಾ ಅಣ್ಣ?"—ವ್ಯಗ್ರನಾಗಿ ಕೇಳಿದ ಸುಬ್ಬು.

"ಹುಚ್ಚು ಹಿಡಿದರಷ್ಟೇ ಮಾನಸಿಕ ತಜ್ಞರಲ್ಲಿ ಹೋಗಬೇಕೆ ? ನಿನ್ನದು ಮನೋರೋಗ ಇದ್ದೀತು, ನರಗಳ ದೌರ್ಬಲ್ಯವೂ ಇದ್ದೀತು. ಒಮ್ಮೆ ತೋರಿಸಿ ಬಾ. ನಿನಗಿನ್ನೂ ಸಣ್ಣ ಪ್ರಾಯ. ಹೆಸರು, ಕೀರ್ತಿ ಇನ್ನೂ ಪಡೆಯಬೇಕಾದವ. ಈಗಲೇ ಬಾರಿಸುವುದನ್ನು ನಿಲ್ಲಿಸಿದರೆ ಹೇಗೆ ?"

ಸುಬ್ಬುವಿಗೂ ಆಸೆ ಚಿಗುರಿತು. ಗಂಟಲುನೋವು ಬಾಧೆಗಿಂತ ಸ್ವರ ಹೊರಡದಿರುವುದೇ ಚಿಂತೆಯಾಗಿದೆ. ಮಾನಸಿಕ ತಜ್ಞನನ್ನು ಒಮ್ಮೆ ಕಂಡು ಬಂದರೆ ತಪ್ಪೇನಿಲ್ಲ. ಅವನು ನರಹರಿಯಿಂದ ವಿಳಾಸ ಪಡೆದು ಮರು ದಿನವೇ ಹೊರಟ ಬೆಂಗಳೂರಿಗೆ.

ಅವನು ಹೋದಮೇಲೆ ಶಂಕರಯ್ಯನವರಿಗೆ ಅವನನ್ನು ತಮ್ಮ ಮಗನೇ ಕಳುಹಿಸಿದ್ದಾನೆಂದು ತಿಳಿದು ಮನಸ್ಸಿಗೆ ಕಿರಿಕಿರಿಯಾಯಿತು. ಸುಬ್ಬುವಿನ

ಕಾಹಿಲೆ ಏನೆಂದು ಯಾವ ವೈದ್ಯರಿಗೂ ಹೇಳಲಾಗಿಲ್ಲ ಇನ್ನೂ. ಹೇಳಲು ಅವನಿಗೆ ಕಾಹಿಲೆಯೇ ಇಲ್ಲ! ಹಣ ನೀರಿನಂತೆ ಖರ್ಚು ಮಾಡುತ್ತಿದ್ದಾನೆ. ಮಾಡಲೇಬೇಕಾಗಿದೆ. ಆದರೆ ಅವರಿಗೆ ಗೊತ್ತು ಯಾವ ಔಷಧಿಯಿಂದಲೂ ಅವನು ಚೇತರಿಸಲಾರ.

"ವರ್ಷಕ್ಕೊಮ್ಮೆ ವಾಲಗದ ಸೇವೆ ಮಾಡಿದ್ದಕ್ಕೆ ಅರ್ಚಕರು ಕೊಡುವ ದಕ್ಷಿಣೆ ಸಾಲದೆಂದು ದೂರಿಕೊಂಡು ಬಂದಿದ್ದಾನೆ ಊರಲ್ಲೆಲ್ಲ. ಈಗ ಇವನೇ ಕಂಡಕಂಡ ಡಾಕ್ಟರುಗಳಿಗೆ ಕೈ ಮುಗಿದು ದಕ್ಷಿಣೆ ಕೊಡ್ತಾ ಇದ್ದಾನೆ. ಅನುಭವಿಸಲಿ ಅವನೇ" ಎಂದರು ನರಹರಿಯು ಮುಂದೆ.

"ಮತ್ತೆ ನೀವೇ ಅವನ ದಕ್ಷಿಣೆ ಏರಿಸಬೇಕೆಂದು ಅರ್ಚಕರ ಬಳಿ ಮಾತು ಎತ್ತಿದ್ದಿರಿ, ಯಾಕೆ?"

"ಶೀನಪ್ಪಯ್ಯನ ಮನಸ್ಸಿನಲ್ಲಿ ಏನಿದೆ ಅಂತ ತಿಳಿಯಬೇಕಿತ್ತು ನನಗೆ."

"ಹಾಗಾದರೆ ಎಲ್ಲರಂತೆ ನೀವೂ ಅವನ ಗಂಟಲುನೋವು ದೇವರ ಕೋಪದಿಂದ ಎನ್ನುತ್ತೀರಾ?"

"ದೇವರ ಕೋಪ ಎನ್ನುವ ದೊಡ್ಡ ಶಬ್ದ ಬೇಡ! ಸುಬ್ಬು ತನ್ನ ಧರ್ಮ ಮರೆತು ದೇವರ ಬಗ್ಗೆ ಅಲಕ್ಷ್ಯ ತೋರಿಸಿದ. ಅಷ್ಟು ಸಾಕು ಅವನ ನರಳಾಟಕ್ಕೆ. ನಾವು ಯಾವಾಗ ಹಣವೇ ಪ್ರಧಾನವೆಂದು ನಂಬುತ್ತೇವೋ ಆಗ ಧರ್ಮ, ದೇವರು, ಸತ್ಯ, ನ್ಯಾಯ ಎಲ್ಲವೂ ಮರೆತುಹೋಗುತ್ತದೆ. ಈಗ ಮಹಂತಯ್ಯನವರ ಪಾಡು ಏನಾಗಿದೆ ಅಂತೀಯ. ಇದೇ!"

"ಅವರಿಗೆ ದೇವರಲ್ಲಿ ಭಯ-ಭಕ್ತಿ ಇದ್ದರೂ...."

"ದೇವರಲ್ಲಿ ಇದೆ, ಆದರೆ ಮನುಷ್ಯತ್ವದಲ್ಲಿ ಶ್ರದ್ಧೆಯಿಲ್ಲ. ಮನುಷ್ಯರ ಮೇಲೆ ನಂಬಿಕೆಯಿಲ್ಲ. ಇನ್ನೊಬ್ಬರ ನೋವು, ಆಕ್ರಂದನ ಅವರ ಹೃದಯಕ್ಕೆ ತಟ್ಟುವುದಿಲ್ಲ."

"ನೀರಜಳಿಗೆ ಅವರಿಂದ ಅನ್ಯಾಯವಾಗಿದೆ ಎನ್ನುತ್ತೀರಾ?"— ನರಹರಿ ಕಿವಿ ನಿಮಿರಿಸಿದ, ಎಲ್ಲವನ್ನೂ ತಿಳಿಯುವುದಕ್ಕಾಗಿ.

ನೀರಜಳದು ಕಥೆಯಲ್ಲ, ವ್ಯಥೆ. ಗಂಡ ತೀರಿಹೋಗುವಾಗ ಆವಳಿನ್ನೂ ಇಪ್ಪತ್ತು ಏಶಾರದ ಯುವತಿ, ಮೂರು ತಿಂಗಳ ಬಸುರಿ. ತಾಯಿಯಿಲ್ಲದ ತವರುಮನೆಯಲ್ಲಿ ಹೆರಿಗೆ ಮುಗಿಸಿ ಗಂಡು ಶಿಶುವನ್ನು ಮಡಿಲಲ್ಲಿ ತುಂಬಿಕೊಂಡು ಗಂಡನಿಲ್ಲದ ಮನೆಗೆ ಬಂದಾಗ ಆದರಿಸಲಿಲ್ಲ ಯಾರೊಬ್ಬರೂ. ಭಾಗ್ಯಮ್ಮ ಮುಖ ಕೊಟ್ಟು ಮಾತನಾಡಲಿಲ್ಲ. ಮಹಂತಯ್ಯನಿಗೆ ಈ ಶಿಶು

ತನ್ನ ತಮ್ಮನದಲ್ಲ, ಇನ್ನಾರಿಗೋ ಹುಟ್ಟಿದ್ದು ಎಂಬಷ್ಟು ಅನುಮಾನ. ಹಗಲೂ-ರಾತ್ರಿ ಅವರಿಂದ ಕಿರುಕುಳ, ಚುಚ್ಚುನುಡಿ. ನೀರಜ ಆಗಾಗ ಓಡಿ ಬರುತ್ತಿದ್ದಳು ತವರುಮನೆಗೆ. ಅಲ್ಲಿ ಒಂದರೂ ಸುಖ ಸೊನ್ನೆ. ಕಷ್ಟ-ದುಃಖ ಹೇಳಿಕೊಳ್ಳುವಂತಿಲ್ಲ. ''ಹೆಣ್ಣಿಗೆ ಸಹನೆಯೇ ಮುಖ್ಯ. ಇನ್ಮೇಲೆ ದೂರು ಹೇಳಿಕೊಂಡು ನೀನಿಲ್ಲಿಗೆ ಬರಬಾರದು'' ಎಂದರು ತಂದೆ ಕೊನೆಗೊಂದು ದಿನ.

ಮಹಾಂತಯ್ಯನಿಗೆ ಮಗುವನ್ನು ನೋಡಿದರೇ ಕಣ್ಣು ಕಿಸುರು. ನಾಳೆ ಆಸ್ತಿಗೆ ಉತ್ತರಾಧಿಕಾರಿ ಆಗುವವ. ಅವನಿಗೂ ಸಮಪಾಲು ಕೊಡಲೇಬೇಕು. ತಮ್ಮನಿದ್ದರೆ ಏನೋ ಒಡಹುಟ್ಟಿದವ, ಬಿಡುವಂತಿಲ್ಲ. ಆದರೆ ಈ ನೀರಜ ಯಾರು? ಮದುವೆಯಾದ ಮಾತ್ರಕ್ಕೆ ಪಾಲು ಕೊಡುವುದೆಂದರೆ ತನ್ನ ದೇಹವನ್ನೇ ಇಬ್ಭಾಗ ಮಾಡಿದಂತೆ. ಹೇಗಾದರೂ ತಾನವಳನ್ನು ಮನೆಯಿಂದ ಓಡಿಸಿಬಿಟ್ಟರೆ ಮುಂದೆ ತನಗೆ ಸಮಸ್ಯೆಯಿಲ್ಲ. ವ್ಯಾಜ್ಯ ಕೋರ್ಟು ಅಂತ ಅಲೆಯಲು ಅವಳಿಗೆಲ್ಲಿದೆ ತಾಕತ್ತು ? ಆದರೆ ನೀರಜ ತನಗೆ ಆಸ್ತಿಯಲ್ಲಿ ಪಾಲು ದೊರೆಯದಿದ್ದರೂ ಬೇಸರವಿಲ್ಲ. ಈ ಮನೆ ಆಶ್ರಯ ಬಿಟ್ಟು ಬೇರೆಲ್ಲಿಗೂ ಹೋಗಲಾರೆನೆಂದು ಪಟ್ಟು ಹಿಡಿದು ಕುಳಿತುಬಿಟ್ಟಳು. ಆಗಿನ್ನೂ ಗಂಗಾಧರ, ನಟೇಶ ಚಿಕ್ಕವರು. ಮನೆಯಲ್ಲಿ ಮಾಡುವ ಕೆಲಸಗಳೆಷ್ಟೋ ಇದ್ದವು. ಯಾವುದಕ್ಕೂ ಗೊಣಗಿಡದೆ ಅವಳು ಇಪ್ಪತ್ನಾಲ್ಕು ಗಂಟೆಯೂ ದುಡಿಯಲು ತಯಾರು. ಆದರೆ ಮಹಾಂತಯ್ಯನ ಕಣ್ಣುಗಳಲ್ಲಿ ಪಸೆಯಿರಲಿಲ್ಲ. ಅವಳು ನಿಂತಲ್ಲಿ, ಕುಳಿತಲ್ಲಿ ತಪ್ಪುಗಳ ಪಟ್ಟಿ, ದೋಷಾರೋಪಣೆ, ಮಾತುಮಾತಿಗೂ ಬೈಗಳು. ಒಂದು ದಿನ ಸಣ್ಣ ವಿಷಯದಲ್ಲಿ ಕಾಲು ಕೆದರಿ ಜಗಳ ತೆಗೆದ ಮಹಾಂತಯ್ಯ ಅವಳ ರಟ್ಟೆಗೆ ಕೈ ಹಾಕಿ ಎಳೆದು ಅಂಗಳಕ್ಕೆ ನೂಕಿ ರಭಾಡಿಸಿ ಒದ್ದು, ''ನನ್ನ ದಾರಿಯಲ್ಲಿ ನಿನ್ನ ಮುಳ್ಳು ಬೇಡ, ತೊಲಗಾಚೆ !'' ಎಂದವರೇ ಮನೆಬಾಗಿಲನ್ನು ಮುಚ್ಚಿಕೊಂಡುಬಿಟ್ಟರು.

ಒದೆಸಿಕೊಂಡ ನೀರಜಳ ಸಹನೆಯ ಕಟ್ಟು ಒಡೆದಿತ್ತು. ಭುಸುಗುಟ್ಟಿದಳು ಹೆಡೆ ತುಳಿದ ಸರ್ಪದಂತೆ. ಹಿಡಿಮಣ್ಣನ್ನು ಅವರತ್ತ ಎಸೆದು, ಮಗುವಿನ ಮೇಲೆ ಆಣೆಯಿಟ್ಟು, ''ಯಾವ ತಪ್ಪೂ ಮಾಡದ ನನ್ನನ್ನು ಒದ್ದ ನಿನ್ನ ಕಾಲು ಬಿದ್ದುಹೋಗಲಿ ! ನಿನ್ನ ಕೈ ಮುರಿದುಹೋಗಲಿ ! ನಿನ್ನ ನಾಲಿಗೆ ಸೇದಿಹೋಗಲಿ !''ಎನ್ನುತ್ತ ಶಾಪ ಹಾಕಿದ್ದೇ ಹಾಕಿದ್ದು. ಒಂದು ದಿನ ಅಲ್ಲೇ ಕುಳಿತಳು ಉಪವಾಸದಲ್ಲಿ. ಅನಂತರ ಅವಳೆಲ್ಲಿಗೆ ಹೋದಳೋ ತಿಳಿಯಲಿಲ್ಲ ಯಾರಿಗೂ.

ಅವಳ ಕಣ್ಣೀರು, ಬಿಸಿಯುಸಿರು, ಅವಳ ಹಸಿವೆ, ಆಕ್ರಂದನ ಕೇಳುವವರು ಇರದಿದ್ದರೂ ಅವಕ್ಕೆ ಭಾಷೆಯಿತ್ತು, ಭಾವವಿತ್ತು. ಎಲ್ಲೋ ಕಾಣದ ಊರಿನಲ್ಲಿ ತುಡಿಯುತ್ತಿದ್ದ ಅವಳ ಜೀವ, ಮಿಡಿಯುತ್ತಿದ್ದ ಅವಳ ನೋವು ಕಣ್ಣಿಗೆ ಕಾಣದಿದ್ದರೂ ಅವಕ್ಕೆ ಲಯವಿತ್ತು, ವೇಗವಿತ್ತು. ಕಾಲ ಕಾಯುತ್ತಿತ್ತು ತನ್ನ ಪ್ರತಿಹೊಡೆತ ನೀಡಲು.

“ಇನ್ನೂ ಇಪ್ಪತ್ತು ವರ್ಷ ಕಲ್ಲುಗುಂಡಿನಂತೆ ಬಾಳಬೇಕಿದ್ದ ಮಹಂತಯ್ಯ ಈಗ ನೋಡು, ಗುಬ್ಬಚ್ಚಿಯಂತೆ ಆಗಿದ್ದಾರೆ”—ನಿಟ್ಟುಸಿರು ತೆಗೆದು ಅಂದರು ಶಂಕರಯ್ಯ. “ಆ ಹೆಣ್ಣುಮಗಳು ಹಾಕಿದ ಶಾಪದ ಫಲ, ಅನುಭವಿಸಲೇ ಬೇಕು !”

ಬೆರಗಾಗಿ ಕೇಳುತ್ತಿದ್ದ ನರಹರಿ ತಾನೆಂದೂ ಕಾಣದ ಮಹಂತಯ್ಯನವರ ತಮ್ಮನ ಹೆಂಡತಿಯನ್ನು ಚಿತ್ರಿಸಿಕೊಳ್ಳಲು ಪ್ರಯತ್ನಿಸಿದ. ಒದೆಸಿಕೊಂಡು ಮನೆಬಿಟ್ಟು ಹೋದವಳು. ಅವಳ ಸಹಾಯಕ್ಕೆ ಹಳ್ಳಿಯಲ್ಲಿ ಯಾರೂ ಇರಲಿಲ್ಲವೆ ? ಮಹಂತಯ್ಯನವರ ಅನ್ಯಾಯ ಪ್ರತಿಭಟಿಸಲಿಲ್ಲವೇ ಯಾರೂ ?

“ಅಪ್ಪಾ, ತಪ್ಪು ತಿಳೀಬೇಡಿ. ನೀವು ಇಷ್ಟು ವರ್ಷ ಮನೆದೇವಿ ಪೂಜೆ ಮಾಡಿದವರು. ನೀರಜಳ ಕಷ್ಟ ನೋಡಿ ಅವಳ ಪರ ವ್ಯಾಜ್ಯ ಮಾಡಿ ಆಸ್ತಿಯಲ್ಲಿ ಪಾಲು ಸಿಗುವಂತೆ ಮಾಡಬಹುದಿತ್ತು ನಿಮಗೆ. ಅದು ದೇವರ ಕಾರ್ಯದಷ್ಟೇ ಪುಣ್ಯ ಕೆಲಸವಲ್ಲವೇ ?”

ಶಂಕರಯ್ಯ ಮಗನನ್ನು ದೀರ್ಘವಾಗಿ ನೋಡಿದರು. “ಇನ್ನೊಬ್ಬರ ವ್ಯವಹಾರದಲ್ಲಿ ನಾವು ಮೂಗು ತೂರಿಸಬಾರದು. ನೀರಜ ಮುಂದೆಯೂ ಎರಡು ಬಾರಿ ಗುಟ್ಟಾಗಿ ಬಂದಿದ್ದಳು ಹಳ್ಳಿಗೆ. ಆದರೆ ಮಹಂತಯ್ಯ ಬಾಗಿಲು ತೆರೆಯಲೇ ಇಲ್ಲ. ಹಾಗೆ ಬಂದವಳು ಎರಡು ಬಾರಿಯೂ ಉಳಿದದ್ದು ನಮ್ಮ ಮನೆಯಲ್ಲಿ. ಆಗ ನೀವೆಲ್ಲ ಸಣ್ಣವರು. ‘ಅಣ್ಣ, ಈ ಮಗುವಿನ ಮುಖ ನೋಡಿ ನಾನಿನ್ನೂ ಸಾಯದೆ ಉಳಿದಿದ್ದೇನೆ. ನನಗ ಇನ್ಯಾರು ಬದುಕು ಕೊಡ್ತಾರೆ ?’— ಕೇಳಿದ್ದಳು ಆರ್ತಳಾಗಿ. ಆಗ ನಾನು ಮಾಡಿದ ಸಹಾಯ ಇಷ್ಟೆ. ಬೆಳಗಾವಿಯ ಅಬಲಾಶ್ರಮದಲ್ಲಿ ಅವಳನ್ನು ಸೇರಿಸುವ ವ್ಯವಸ್ಥೆ ಮಾಡಿಸಿದೆ. ‘ನಿನಗೆ ಕಷ್ಟ ಬಂದಾಗ ಸಂಕೋಚವಿಲ್ಲದೆ ತಿಳಿಸು. ನನ್ನ ಕೈಲಾದ ಸಹಾಯ ಮಾಡ್ತೇನೆ’ ಎಂದಿದ್ದೇನೆ.

“ಈಗಲೂ ಅವಳು ಅಲ್ಲಿದ್ದಾಳೆಯೇ ?”

“ಇರಬಹುದು. ಈ ಮೂವತ್ತು ವರ್ಷಗಳಲ್ಲಿ ಹತ್ತಾರು ಕಾಗದಗಳು

ಬಂದಿವೆ ಆವಳಿಂದ. ನರಹರೀ, ಜೀವನ ಎಲ್ಲರಿಗೂ ಸುಖದ ಹಾಸಿಗೆಯಲ್ಲ, ಎಲ್ಲರಿಗೂ ಸವಿಜೇನಲ್ಲ. ಗಂಡ ಬದುಕಿದ್ದರೆ ನಮ್ಮ ಹಳ್ಳಿಯಲ್ಲಿ ಭಾಗ್ಯಮ್ಮ ನಷ್ಟೇ ಮೆರೆಯಬೇಕಾಗಿದ್ದವಳು ನೀರಜ."

ಆ ರಾತ್ರಿಯೆಲ್ಲ ನರಹರಿಗೆ ನೀರಜಳದೇ ಆಲೋಚನೆ. ತನ್ನ ಹಳ್ಳಿ ಸೇರಿದ ಹೆಣ್ಣುಮಗಳು. ಈಗ ಸುಮಾರು ಐವತ್ತು ವರ್ಷಕ್ಕೆ ಹತ್ತಿರವಾಗಿ ರಬಹುದು. ಎಷ್ಟು ಕಷ್ಟಪಟ್ಟಳೋ, ಏನು ಬವಣೆ ಬಂದಳೋ. ಅವಳಿಗಾಗಿ ತಾನೇನೂ ಮಾಡಲಾರೆನೇ. ಒಮ್ಮೆ ಅವಳನ್ನು ನೋಡಿಬಂದರೆ ಹೇಗೆ ?

ಈ ಯೋಚನೆ ತೀರ ಹಾಸ್ಯಾಸ್ಪದ ಎನಿಸಿತು. ಹೋಗಿ ಮಾಡುವುದೇನು? ತನ್ನ ನೆಂಟಳಲ್ಲ. ಪರಿಚಿತಳಲ್ಲ. ಆದರೂ ಈಗಲೂ ಆಸ್ತಿಯಲ್ಲಿ ಪಾಲು ದೊರೆ ಯುವಂತೆ ತಾನು ಪ್ರಯತ್ನಿಸಬಾರದೇಕೆ ?

ಅವನು ತಂದೆ ಮತ್ತು ಅಲಕಳೊಡನೆ ಇದನ್ನೇ ಚರ್ಚಿಸಿದ. ಒಮ್ಮೆ ಅವಳನ್ನು ಹೋಗಿ ನೋಡಿ ಬರುವುದು. ಅವಳು ಆಸ್ತಿಗಾಗಿ ವ್ಯಾಜ್ಯ ಹೂಡಲು ಸಿದ್ಧಳಾದರೆ ತಾನು ಸಹಾಯ ಮಾಡುವುದು. ಅಲಕಾ ಅವನ ಮಾತನ್ನು ಒಪ್ಪಿದರೂ ಶಂಕರಯ್ಯ ಹಿಂದೇಟು ಹಾಕಿದರು. ಆಸ್ತಿಗಾಗಿ ತಾವು ವ್ಯಾಜ್ಯ ಹೂಡಲು ಪ್ರೋತ್ಸಾಹಿಸಿದರೆ ಮಹಂತಯ್ಯನವರ ದ್ವೇಷ ಕಟ್ಟಿ ಕೊಳ್ಳುವ ಸ್ಥಿತಿ ಬರಬಹುದು.

"ದ್ವೇಷ ಕಟ್ಟಿಕೊಂಡರೂ ಅವಳ ಬದುಕು ಸುಖವಾಗಬೇಕಾದ್ದು ಮುಖ್ಯ, ಅಪ್ಪಾ. ದೇವರಿದ್ದಾನೆ ಎಂದರೆ ನನ್ನ ಕೆಲಸಕ್ಕೆ ಜಯ ಸಿಕ್ಕೀತು" —ವಿಶ್ವಾಸದಿಂದ ಅಂದ ನರಹರಿ. "ಧರ್ಮ ಇದೆ ಎಂದಾದರೆ ಮಹಂತಯ್ಯ ಆಸ್ತಿಯಲ್ಲಿ ಪಾಲು ಕೊಡಲೇಬೇಕು. ನಾಳೆಯೇ ಬೆಳಗಾವಿಗೆ ಹೋಗಿ ನೀರಜ ಳನ್ನು ನೋಡಿ ಬರ್ತೇನೆ. ಅಲಕಳೂ ಬರಲಿ ನನ್ನ ಜೊತೆ."

ಮರುದಿನ ನಸುಕಿನಲ್ಲಿ ತುದೆಯಿಂದ ನೀರಜಳ ವಿಳಾಸ ಪಡೆದು ನರಹರಿ ಮತ್ತು ಅಲಕಾ ಬೆಳಗಾವಿಗೆ ಹೊರಟಾಗ ಇಬ್ಬರಲ್ಲೂ ಅಶಂಕೆ, ಅಧೈರ್ಯ. ತಾವು ತಪ್ಪು ಮಾಡುತ್ತಿಲ್ಲವಷ್ಟೆ. ಕೊಂಕಣಮನದ ಗಂಗಾಧರ, ಆಸೆಪಿನಾರಿ ನಟೇಶ ತಮ್ಮ ಚಿಕ್ಕಮ್ಮನಿಗೆ ಪಾಲು ಕೊಡುವ ಆಲೋಚನೆ ಮಾಡಿರ ಲಾರರು. ಧಿಡೀರನೆ ತಾವು ತೆಗೆದುಕೊಂಡ ನಿರ್ಧಾರ ಎಷ್ಟು ಸರಿ ?

ಬೆಳಗಾವಿಗೆ ತಲು:ಪಿದಾಗ ಸಂಜೆ ಹೊತ್ತು. 'ಆಶಾಜ್ಯೋತಿ' ಅಬಲಾಶ್ರಮ ಹುಡುಕುವುದು ಕಷ್ಟವಾಗಲಿಲ್ಲ. ನೀರಜ ಹೆಸರಿನ ಹೆಂಗಸು ಮೊದಲು ಇಲ್ಲೇ ಇದ್ದದ್ದು ಹೌದು. ಆದರೆ ಶ್ರೀರಾಮ ಅನಾಥಾಲಯದಲ್ಲಿ ವಾರ್ಡನ್ ಆಗಿದ್ದಾ

ಳೆಂದು ತಿಳಿಯಿತು. ಅದು ಅಬಲಾಶ್ರಮದಿಂದ ಒಂದು ಕಿಲೋಮೀಟರ್ ದೂರ. ಮತ್ತೆ ಹತ್ತು ನಿಮಿಷದಲ್ಲಿ ಅನಾಥಾಲದಲ್ಲಿದ್ದರು ಅವರಿಬ್ಬರೂ.

ಶ್ರೀರಾಮ ಅನಾಥಾಲಯ ಹೇಳಿಕೊಳ್ಳುವಂತಹ ದೊಡ್ಡ ಕಟ್ಟಡವಲ್ಲ. ಸುಣ್ಣ ಬಣ್ಣ ಕಾಣದ ಹಳೆ ಕಟ್ಟಡ. ಅದರ ಮುಂಬಾಗದ ಖಾಲಿ ಜಾಗದಲ್ಲಿ ಹದಿನೈದು ವರ್ಷದೊಳಗಿನ ಸಣ್ಣಸಣ್ಣ ಮಕ್ಕಳು ಆಡಿಕೊಂಡಿದ್ದರು. ಮಧ್ಯ ವಯಸ್ಸಿನ ಕಪ್ಪು ವರ್ಣದ ಸ್ಥೂಲ ಶರೀರದ ಹೆಂಗಸೊಬ್ಬಳು ಗದರಿಸಿಕೊಂಡಿದ್ದಳು ಆ ಮಕ್ಕಳನ್ನು. ತಾವು ಹುಡುಕಿಕೊಂಡು ಬಂದ ವ್ಯಕ್ತಿ ಇವಳೇ ಎನಿಸಿ ನರಹರಿ ಸಮೀಪ ಬಂದು ಕೈಮುಗಿದು, "ನೀರಜ ಅಂದರೆ ತಾವೇ ಅಲ್ಲವೇ ?"—ಕೇಳಿದ ವಿನಯದಲ್ಲಿ.

"ಅಲ್ಲ, ನಾನು ಇಲ್ಲಿ ಅಡಿಗೆ ಹೆಂಗಸು. ನೀರಜ ಒಳಗೆ ಇದ್ದಾರೆ, ಹೋಗಿ !" ಎಂದಳು ಅವಳು ಅಷ್ಟೇ ವಿನಯದಲ್ಲಿ.

ಇಬ್ಬರೂ ಪೆಚ್ಚಾಗಿ ಅನಾಥಾಲಯದ ಒಳಕೋಣೆಗೆ ಕಾಲಿಟ್ಟರು. ಅಲ್ಲಿ ಬಾಗಿಲಿಗೆ ಮುಖ ಮಾಡಿ ಕುರ್ಚಿಯಲ್ಲಿ ಕುಳಿತಿದ್ದಾಳೆ ಇನ್ನೊಂದು ವರ್ಷ ಮಧ್ಯ ವಯಸ್ಸಿನ ಕ್ಷೀಣ ಶರೀರದ ಮಹಿಳೆ. ಸಾಧಾರಣ ಬಿಳಿಬಣ್ಣ, ಬೆಳ್ಳಿವರ್ಣಕ್ಕೆ ತಿರುಗಿದ ತಲೆಗೂದಲು, ದಪ್ಪಗಾಜಿನ ಕನ್ನಡಕ. ಕುತ್ತಿಗೆಯಲ್ಲಿ ಒಂದೆಳೆ ಬಿಳಿ ಮುತ್ತಿನ ಸರ, ಕಿವಿಗೆ ಮುತ್ತಿನದೇ ಓಲೆ. ನೋಡಿದರೆ ಗೌರವ ಹುಟ್ಟಿಸುವ ವ್ಯಕ್ತಿತ್ವ.

"ಯಾರು ಬೇಕಿತ್ತು ? ಬನ್ನಿ ಒಳಗೆ," ಮೃದುವಾಗಿ ಕರೆದು ಅವರ ಪ್ರಶ್ನಾರ್ಥಕ ದೃಷ್ಟಿ ಅರ್ಥವಾದವಳಂತೆ, "ನಾನು ನೀರಜ, ಇಲ್ಲಿ ವಾರ್ಡನ್. ನೀವು ಯಾರೆಂದು ತಿಳಿಯಲಿಲ್ಲ" ಎಂದಳು ಕುರ್ಚಿಯತ್ತ ಕೈ ತೋರಿಸಿ.

ಪರಿಚಯ ಏನಿಮಯವಾಗಿ ಬೆಳೆಯಿತು ಮಾತು. ತನ್ನ ಪತಿಯ ಊರಿನಿಂದ ಬಂದವರೆಂದು ನೀರಜ ಕಾಫಿ ತರಿಸಿದಳು. ರಾತ್ರಿ ಉಳಿದುಕೊಳ್ಳುವ ವ್ಯವಸ್ಥೆ ಇನ್ನೂ ಆಗಬೇಕಾಗಿದೆ ಎಂದು ತಿಳಿದು. "ಇಲ್ಲೇ ಸಮೀಪ ಗೆಸ್ಟ್ ಹೌಸ್ ಇದೆ. ಅಲ್ಲಿ ಉಳಿಯಿರಿ" ಎಂದವಳೇ ಫೋನ್ ಎತ್ತಿ ಗೆಸ್ಟ್‌ಹೌಸ್‌ನಲ್ಲಿ ಒಂದು ಕೋಣೆ ಕಾಯ್ದಿರಿಸಲು ತಿಳಿಸಿ, "ಈಗ ನನ್ನಿಂದ ನಿಮಗೇನು ಕೆಲಸ ವಾಗಬೇಕು ಹೇಳಿ" ಎಂದಳು ಮೃದುವಾಗಿ.

ಅಲಕಳಿಗೆ ತನ್ನ ಕಣ್ಣುಗಳನ್ನು ನಂಬಲಾಗಲಿಲ್ಲ. ಐವತ್ತು ವರ್ಷವಾದರೂ ಇನ್ನೂ ಮೂವತ್ತರ ಯುವತಿಯಂತಿದ್ದಾಳೆ. ದಪ್ಪ ಕನ್ನಡಕದ ಹಿಂದೆ ಕಣ್ಣುಗಳಲ್ಲಿ ಆತ್ಮವಿಶ್ವಾಸವಿದ್ದರೂ ಏನೋ ನೋವಿನೆಳೆಗಳು. ನರಹರಿಗೆ ಹೇಗೆ

ಮಾತು ಪ್ರಾರಂಭಿಸಬೇಕು ತಿಳಿಯಲಿಲ್ಲ.

"ನಿಮಗೊಬ್ಬ ಮಗನಿದ್ದಾನೆಂದು ಕೇಳಿದ್ದೆ. ಎಲ್ಲಿ ?" ಪೀಠಿಕೆಯಾಗಿ ಪ್ರಶ್ನಿಸಿದ. ಹಾಗೆ ಪ್ರಶ್ನಿಸಿದ್ದು ತಪ್ಪೆಂದು ಕೂಡಲೇ ಅರ್ಥವಾಗಿಹೋಯಿತು. ನೀರಜಳ ಮುಖ ಕಪ್ಪಿಟ್ಟಿತ್ತು.

"ಎಲ್ಲಾ ಸರಿಯಾಗಿದ್ದರೆ ಮದುವೆಗಿರುವ ಮಗ ನನಗೆ ಇರುತ್ತಿದ್ದ. ಆದರೆ ಅವನ ಋಣ ಕಳೆದುಕೊಂಡು ಆಗಲೇ ಇಪ್ಪತ್ತೈದು ವರ್ಷ ಕಳೀತು. ಅದರ ನೆನಪು ಕೆದಕೋದು ಬೇಡ. ಬೇರೇನು ಹೇಳಿ ?"

ನರಹರಿಯು ತಲೆಮೇಲೆ ಸುತ್ತಿಗೆಯಿಂದ ಹೊಡೆದಷ್ಟು ಯಾತನೆ. ಮುಂದಿನ ಮಾತು, ವಿಷಯ ಮರೆತುಹೋದವು ಆ ಗಳಿಗೆಯಲ್ಲಿ. ಇವಳಲ್ಲಿ ತಾನೀಗ ಏನು ಹೇಳಲಿ ? ಅಲಕಳೂ ಪೆಚ್ಚಾಗಿದ್ದಳು. ಸ್ವಲ್ಪ ಹೊತ್ತು ಹಿಡಿಯಿತು ಇನ್ನೊಮ್ಮೆ ಮಾತಿನೆಳೆ ಜೋಡಿಸಲು, ಬಂದ ಉದ್ದೇಶ ಹೇಳಲು. ಕಷ್ಟಪಟ್ಟು ಹೇಳಿದ ನರಹರಿ. ಅವಳನ್ನು ಮುಹಂತಯ್ಯ ಹೊರಹಾಕಿದ್ದು, ಆಗ ತನ್ನ ತಂದೆ ಸಹಾಯ ಮಾಡಿ ಇಲ್ಲಿ ತಂದು ಸೇರಿಸಿದ್ದು ಹೇಳುತ್ತ, "ನಿಮಗೆ ನಿಮ್ಮ ಗಂಡನ ಮನೆಯಿಂದ ತುಂಬಾ ಅನ್ಯಾಯವಾಗಿದೆ. ಅದನ್ನು ಸರಿಪಡಿಸುವ ಇಚ್ಛೆಯಿಲ್ಲವೇ ?"— ಕೇಳಿದ.

"ಅನ್ಯಾಯವಾಗಿ ಎಷ್ಟೋ ವರ್ಷ ಕಳೆಯಿತು. ಈಗ ಏನು ಸುದ್ದಿ ?"

"ವರ್ಷ ಕಳೆದರೂ ನಿಮ್ಮ ಪಾಲಿನ ಆಸ್ತಿ ಹಳತಾಗಿಲ್ಲ. ನಿಮಗೆ ಒಂದು ಕವಡೆ ಕಾಸು ಕೊಡದೆ ಹೊರಹಾಕಿದ್ದರಂತೆ. ನಿಮ್ಮ ಪಾಲಿನದನ್ನು ನಿಮ್ಮ ಗಂಡನ ಅಣ್ಣನ ಮಕ್ಕಳು ತಿಂದು ತೇಗುತ್ತಾ ಇದ್ದಾರೆ, ಅದು ನಿಮಗೆ ಸಿಗಬೇಕು."

ಕೊಡುವವರಿಗೆ ಇಚ್ಛೆಯಿಲ್ಲದೆ ಹೇಗೆ ಸಿಗುತ್ತದೆ ? ಸುಮಾರು ಹತ್ತು ಎಕರೆ ಅಡಿಕೆ ತೋಟ, ಗದ್ದೆ ಬೇರೆ. ಆದರ ಅರ್ಧಪಾಲು ಎಂದರೆ ಸಂಪತ್ತಿನ ಮೊತ್ತ ಸಣ್ಣದೇನಲ್ಲ. ವ್ಯಾಜ್ಯಕ್ಕೆ ಅವಳು ಸಿದ್ಧಳಾದರೆ ನರಹರಿ ತಾನು ಸಹಾಯ ಕೊಡುತ್ತೇನೆಂದು ಒತ್ತಿಹೇಳಿದ.

"ವ್ಯಾಜ್ಯ ಮಾಡಿ ನಿಮ್ಮದನ್ನು ಗೆದ್ದುಕೊಳ್ಳಿ" ಎಂದಳು ಅಲಕಾ.

ಅವರಿಬ್ಬರ ಮನದ ಕಳಕಳಿ, ಆಳಲು ಕಂಡು ಮೂಕಳಾದ ನೀರಜ "ಆಲೋಚಿಸಿ ಹೇಳ್ತೇನೆ" ಎಂದಳು.

ಅನಂತರ ಅವಳು ಅನಾಥಾಲಯ ತೋರಿಸಿದಳು, ಮಕ್ಕಳನ್ನು ಪರಿಚಯಿಸಿದಳು. ಶ್ರೀಮಂತ ವೈದ್ಯನೊಬ್ಬ ನಡೆಸುತ್ತಿದ್ದ ಈ ಅನಾಥಾಲಯಕ್ಕೆ ಈ ವರ್ಷ ಸರಕಾರದ ನೆರವು ಸಿಕ್ಕಿದೆಯಂತೆ. ಊರು ಪರವೂರಿನಿಂದ ಬರುವ

ಸಹಾಯಧನ, ಬಟ್ಟೆಬರೆ, ದವಸಧಾನ್ಯದ ಪಟ್ಟಿ ಕೊಟ್ಟಳು.

"ಜನರು ನಾವು ತಿಳಿದಷ್ಟು ಕೆಟ್ಟವರಲ್ಲ. ಲೋಭಿಗಳಲ್ಲ. ಅವಕಾಶ ಸಿಕ್ಕಿದರೆ, ಅವರ ಕೈಯಲ್ಲಿ ಕಾಸಿದ್ದರೆ ದೇವರ ಹೆಸರಿನಲ್ಲಿ ದಾನ ಮಾಡುವವರ ಸಂಖ್ಯೆ ಇತ್ತೀಚೆಗೆ ಹೆಚ್ಚು ಇದೆ. ಎಲ್ಲಿ ಮದುವೆ ಮುಂಜಿಯಾಗಲಿ, ಸಮಾರಂಭವಿರಲಿ, ನಮ್ಮ ಅನಾಥಾಲಯಕ್ಕೆ ಊಟದ ಹೊರೆಯೇ ಬರುತ್ತದೆ. ಇಲ್ಲಿ ಜವಳಿ ವ್ಯಾಪಾರಿ ಒಬ್ಬರಿದ್ದಾರೆ. ಪ್ರತಿವರ್ಷ ನಮ್ಮ ಮಕ್ಕಳಿಗೆ ಒಂದು ಜೊತೆ ಉಡುಪು ಅವರಿಂದ. ಹತ್ತು ಸಾವಿರಕ್ಕಿಂತ ಹೆಚ್ಚಿಗೆ ಖರ್ಚು ಮಾಡ್ತಾರೆ ಈ ಉಡುಪಿಗಾಗಿ. ನೀವು ಒಳ್ಳೆಯ ಕೆಲಸ ಆದಾಗಲೆಲ್ಲ ದೇವರ ದಯೆ ಅನ್ನುತ್ತೀರಿ. ನಾವು ದಾನಿಗಳ ದಯೆ ಎನ್ನುತ್ತೇವೆ!"

ಆ ರಾತ್ರಿ ಗೆಸ್ಟ್‌ಹೌಸ್‌ನಲ್ಲಿ ಅನುಕೂಲ ಚೆನ್ನಾಗಿತ್ತು. ನೀರಜ ಹನ್ನೊಂದು ಗಂಟೆ ತನಕ ಇದ್ದಳು ಅವರ ಜೊತೆ. ನೋಡಿದರೆ ಸಭ್ಯ ಹೆಂಗಸು. ಮಹಾಂತಯ್ಯ ಈಕೆಯನ್ನು ಚೆನ್ನಾಗಿ ನೋಡಿಕೊಂಡಿದ್ದರೆ ಈ ಕಷ್ಟವಿತ್ತೇ? ವ್ಯಾಜ್ಯದ ಬಗ್ಗೆ ಆಲೋಚಿಸಬೇಕು ಎಂದಿದ್ದಾಳೆ. ಯಾಕೆ? ಅರ್ಥವಾಗಲಿಲ್ಲ ಇಬ್ಬರಿಗೂ.

"ನಿಮ್ಮ ಅಭಿಪ್ರಾಯ ತಿಳಿಸಲೇ ಇಲ್ಲ. ನಾಳೆ ಬೆಳಿಗ್ಗೆ ವಾಪಸ್ಸು ಹೋಗ್ತಾ ಇದ್ದೇವೆ"—ನರಹರಿ ಕೇಳಿದ ಇನ್ನೊಮ್ಮೆ.

ನೀರಜ ನಿಧಾನವಾಗಿ ಯೋಚಿಸಿ ಅಂದಳು, "ಆಸ್ತಿ ಪಾಲಿನಲ್ಲಿ ನನಗೆ ಹಕ್ಕು ಇದೆ, ನಿಜ. ಆದರೆ ವ್ಯಾಜ್ಯ ಮಾಡಿ ಪಡೆದುಕೊಳ್ಳುವ ಆಸೆಯಿಲ್ಲ. ಅವರೇ ಅನುಭೋಗಿಸಲಿ!"

"ನಿಮಗೆ ಇನ್ನು ಪ್ರಾಯ ಇಳಿಯುತ್ತಾ ಬರುವುದಿಲ್ಲವೇ?"—ಕೇಳಿದಳು ಅಲಕ. "ಎಷ್ಟು ದಿನ ಅನಾಥಾಲಯದಲ್ಲಿ ಒದ್ದಾಡ್ತೀರಿ? ನಿಮ್ಮ ಪಾಲಿನ ನಗದು ಹಣ ಸಿಕ್ಕಿದರೆ ಹಾಯಾಗಿ ಇರಬಹುದು."

"ಹಾಯಾದ ಬದುಕನ್ನು ಮೂವತ್ತು ವರ್ಷಗಳ ಹಿಂದೆಯೇ ಸುಟ್ಟು ಬೂದಿ ಮಾಡಿದೆ. ಇನ್ನೀಗ ಅದರ ಕನಸು ಬೇಡ. ಆಸ್ತಿಗಾಗಿ ವ್ಯಾಜ್ಯ ಮಾಡಲೇ? ಕೋರ್ಟುಕಛೇರಿಗೆ ಅಲೆದು ಚರ್ಚೆ-ಜಗಳದಲ್ಲಿ ಪಡೆಯಲೇ? ಆ ದಾರಿ ನನಗೆ ಹಿಡಿಸದು. ಗಂಡನ ಮನೆಯವರೇ ತಮ್ಮ ಇಚ್ಛೆಯಿಂದ ಕೊಟ್ಟರೆ ಆ ಮಾತು ಬೇರೆ. ಎಲ್ಲಿ ಮನಸ್ಸಿಲ್ಲವೋ, ಎಲ್ಲಿ ಕ್ರೌರ್ಯ ಹಿಂಸೆ ಒಂದೇ ಪ್ರಧಾನವೋ ಅಲ್ಲಿ ಜಗಳದಿಂದ ಪಡೆದರೂ ನನಗೆ ದಕ್ಕದು."

ಸ್ವಲ್ಪ ಹೊತ್ತು ತಡೆದು ಮಾತು ಮುಂದುವರಿಸಿದಳು: "ಒಂದು ಮಾತು ಕೇಳಲೇ? ಯಾವ ವ್ಯಾಜ್ಯ ಮಾಡಿ ನನ್ನ ತೀರಿಹೋದ ಪತಿಯನ್ನು ಹಿಂದಕ್ಕೆ

ಪಡೆಯಲಿ? ಯಾವ ವ್ಯಾಜ್ಯ ಮಾಡಿ ನನ್ನ ಮಗನನ್ನು ಸ್ವರ್ಗದಿಂದ ಕರೆಯಿಸಿ ಕೊಳ್ಳಲಿ? ನಮ್ಮ ಬದುಕಿನ ಆಳ-ವಿಸ್ತಾರದಲ್ಲಿ ಮಣ್ಣಿಗೆ, ಹೊನ್ನಿಗೆ ವ್ಯಾಜ್ಯ ಮಾಡಬಹುದು. ಆದರೆ ಬದುಕಿನ ಎಲ್ಲ ಶೂನ್ಯವನ್ನೂ ನಾವು ತುಂಬಿದಂತೆ ಆಗಲಿಲ್ಲ. ನನ್ನ ಪುಣ್ಯದ ಎಣ್ಣೆ ಎಂದೋ ಬತ್ತಿಹೋಗಿದೆ. ಬೆಳಕಿಲ್ಲದ ಕತ್ತಲೆ ಯಲ್ಲಿ ಹೆಜ್ಜೆಯಿಟ್ಟು ಅಭ್ಯಾಸವಾಗಿದೆ. ನನಗಾಗಿ ಇಲ್ಲಿಯತನಕ ಬಂದಿದ್ದೀರಿ ಪ್ರೀತಿಯಿಟ್ಟು. ಭಾವನವರಿಗೆ ಹೇಳಿ, ನೀರಜ ಅವರಿಂದ ಏನನ್ನೂ ಅಪೇಕ್ಷಿಸು ವುದಿಲ್ಲ ಎಂದು!''

ಅವಳ ಕಣ್ಣುಗಳು ಹನಿಗೂಡಿದ್ದವು. ಅವಳ ವಿಶಾಲ ಮನಸ್ಸಿನೆದುರು ತಾವೇ ಕುಬ್ಜರಾದಂತೆ ನರಹರಿ, ಅಲಕಾ ತಲೆ ತಗ್ಗಿಸಿದರು. ಈ ನಿರ್ಮಲ ಮನಸ್ಸಿನವಳನ್ನು ಮಹಂತಯ್ಯ ನಡೆಸಿಕೊಂಡ ಬಗೆ ನಾಚಿಕೆ ಹುಟ್ಟಿಸುತ್ತದೆ. ಬುದ್ಧಿಶೂನ್ಯರ ಮಧ್ಯೆ ಉತ್ತಮರು ಬದುಕುವುದೂ ಕಷ್ಟಕರ.

ಮರುದಿನ ಬೆಳಿಗ್ಗೆ ಅವರಿಬ್ಬರೂ ಅಲ್ಲಿಂದ ಹೊರಡುವ ಮುನ್ನ ಬೀಳ್ಕೊ ಡಲು ಗೆಸ್ಟ್‌ಹೌಸ್‌ಗೆ ಬಂದಿದ್ದಳು ನೀರಜ. ನಿನ್ನೆ ದಿನದ ಮಾತುಕತೆಯಲ್ಲಿ ಬೇರೇನೂ ಬದಲಾವಣೆ ಆಗಿರಲಿಲ್ಲ. ನರಹರಿ ಬಂದದ್ದು ವ್ಯರ್ಥವಾಗಿತ್ತು. ಆದರೂ ಕೇಳಿದ ಮತ್ತೊಮ್ಮೆ, ''ನಿಮ್ಮ ನೋವಿನ ಬಿಸಿಯ ಶಾಪ ತಗಲಿ ಮಹಂತಯ್ಯನ ಸ್ಥಿತಿ ಹಾಗಾಯ್ತು. ಆದರಿಂದ ಬುದ್ಧಿ ಬಂದು ನಿಮ್ಮ ಪಾಲು ಕೊಟ್ಟರೆ ತೆಗೆದುಕೊಳ್ಳಲು ಸಿದ್ಧರಿದ್ದೀರಾ?''

''ಭಾವನವರ ಅಸಹಾಯಕ ಸ್ಥಿತಿಗೆ ದುಃಖವಾಗಿದೆ. ನಾನು ಬೇಕೆಂದೇ ಶಾಪ ಹಾಕಲಿಲ್ಲ. ಅಂದಿನ ನನ್ನ ಪರಿಸ್ಥಿತಿ ನನ್ನ ಬಾಯಿಯಿಂದ ಹಾಳು ಮಾತುಗಳನ್ನು ಹೊರಡಿಸಿತು. ಅವರೀಗ ಪಾಲು ಕೊಟ್ಟರೆ ನನ್ನ ಸ್ವಾರ್ಥಕ್ಕೆ ಬಿಡಿಗಾಸು ಮುಟ್ಟುವುದಿಲ್ಲ. ಈ ಅನಾಥಾಲಯ ಬಿಟ್ಟು ಹೋಗುವ ದೊಡ್ಡ ಮಕ್ಕಳ ಭವಿಷ್ಯದ ವ್ಯವಸ್ಥೆ ಮಾಡಬಲ್ಲೆ, ಅಷ್ಟೆ!''

ಆ ಮಾತು ಸಾಕಾಯಿತು ನರಹರಿಗೆ, ಅವಳ ಪರ ಮಹಂತಯ್ಯನವರ ಬಳಿ ಮಾತನಾಡಲು.

ನಟೇಶ ಸ್ಪಷ್ಟವಾಗಿ ಹೇಳಿಬಿಟ್ಟ. ಆಸ್ತಿಯಲ್ಲಿ ಪಾಲು ಕೊಡುವುದಿಲ್ಲ. ಮೂವತ್ತು ವರ್ಷ ಎಲ್ಲೋ ತಲೆಮರೆಸಿಕೊಂಡಿದ್ದವಳು ಆಸ್ತಿಗೆ ಹಕ್ಕು ದಾರಳೂ ಅಲ್ಲ. ಅವಳ ಪರ ಮಾತನಾಡಲು ನರಹರಿ ಯಾರು? ತಮ್ಮನ್ನು ಕೇಳದೆ ಅವಳನ್ನು ಹುಡುಕಿಕೊಂಡು ಹೋದದ್ದೇಕೆ? ಇವರಿಗೇನು ಲಾಭ ಇದೆ?

ಗಂಗಾಧರನದು ಕೊಂಕುವಮಾತು. ಅವನಿಗೆ ಚಿಕ್ಕಮ್ಮನನ್ನು ನೋಡಿದ ನೆನಪಿಲ್ಲ. ಯಾಕೆಂದರೆ ಚಿಕ್ಕಪ್ಪ ಸಾಯುವಾಗ ಅವನಿನ್ನೂ ಒಂದು ವರ್ಷದ ಹಸುಳೆ. ಅವನಿಗೆ ಬುದ್ಧಿ ಬಂದಾಗಿನಿಂದ ಆಸ್ತಿಯೆಲ್ಲ ತಂದೆಯ ಹೆಸರಿನಲ್ಲಿದೆ. ಕಳೆದ ವರ್ಷ ಆಸ್ತಿ ಪಾಲಾಗಿದೆ ಅಣ್ಣತಮ್ಮನ ಹೆಸರಿಗೆ. ನಟೇಶನಿಗೆ ಅವನ ಭಾಗದ ಆಸ್ತಿಯಲ್ಲಿ ಮನೆ ಕಟ್ಟಿಸುವ ಕೆಲಸ ಪ್ರಾರಂಭವಾಗಿದೆ ಕಳೆದ ತಿಂಗಳಿನಿಂದ. ಈ ಮಧ್ಯೆ ಎಲ್ಲಿಂದಲೋ ಚಿಕ್ಕಮ್ಮನೂ ಅವಳ ಮಗನೂ ಪಾಲುದಾರರಾಗಿ ಬರುವುದೆಂದರೇನು ? ನರಹರಿ ನೀರಜಳ ಮಗ ತೀರಿಹೋದದ್ದು ಹೇಳಿರಲಿಲ್ಲ. ಪಾಲು ಕೊಡುವುದು ಹೇಗೆ ? ಇಡೀ ಆಸ್ತಿಯ ಸಮಪಾಲಿನಲ್ಲಿ ಅರ್ಧಪಾಲು ಕೊಟ್ಟು, ಉಳಿದರ್ಧ—ತಂದೆಯ ಭಾಗ_ತಾನು, ನಟೇಶ ಹಂಚಿಕೊಳ್ಳಬೇಕು. ಇದಾಗದ ಮಾತು.

ಮಹಂತಯ್ಯನ ದೇಹಸ್ಥಿತಿಯಲ್ಲಿ ಸುಧಾರಣೆ ಆಗಿರಲಿಲ್ಲ. ಅವರ ಕಿವಿಗೆ ಸುದ್ದಿ ಹಾಕುವುದು ಬೇಡವೆಂದು ಗಂಗಾಧರ ಹೇಳಿದ್ದ. ಆದರೆ ನರಹರಿ ಅವರಿಂದಲೂ ಮುಚ್ಚಿಡಲಿಲ್ಲ. ನೀರಜಳ ಹೆಸರು ಕೇಳಿದಾಕ್ಷಣ ಅವರ ಕಣ್ಣುಗಳಿಂದ ಧಾರೆಯಾಗಿ ಇಳಿಯಿತು ನೀರು. ತಮ್ಮ ಅಳಲನ್ನು ಬರೆದು ತೋರಿಸಲು ಇಚ್ಛಿಸಿದರು, ಆಗಲಿಲ್ಲ. ಭಾಗ್ಯಮ್ಮ ಮೂಕರಾಗಿ ಹೋಗಿದ್ದರು.

ನೀರಜಳಿಗೆ ಪಾಲು ಕೊಡುವುದು ಆಗದ ಮಾತೆಂದು ತಿಳಿದಮೇಲೆ ನರಹರಿ ಇನ್ನೊಂದು ಸಲಹೆ ಮುಂದಿಟ್ಟ. "ಕನಿಷ್ಠ ಒಂದು ಲಕ್ಷ ರೂಪಾಯಿ ಪರಿಹಾರ ಕೊಡಲು ಸಾಧ್ಯವೇ ? ಯೋಚಿಸಿ ನೋಡಿ. ಅವಳ ಪಾಲಿನ ಆಸ್ತಿಗೆ ಈ ಮೊತ್ತವೂ ಕಡಿಮೆಯೇ."

ಒಂದು ಲಕ್ಷ ! ಹುಬ್ಬೇರಿಸಿದರು ಗಂಗಾಧರ, ನಟೇಶ. "ರೂಪಾಯಿ ಎಂದರೆ ಅವೇನು ಮಂಡಕ್ಕಿ ಕಾಳುಗಳೇ ?" ಒಂದು ಬಿಡಿಗಾಸೂ ಸಿಕ್ಕಲಿಕ್ಕಿಲ್ಲ. ಅವಳ ಮಗ ಭಿಕಾರಿಯಾಗಿ ತಿರುಗಿದರೆ ನಮಗೇನಂತೆ ?"

ನರಹರಿ ಈಗ ಇದ್ದ ಸಂಗತಿ ಹೊರಹಾಕಿದ. ಇರುವವಳು ನೀರಜ ಒಬ್ಬಳೇ. ಹೊಟ್ಟೆಪಾಡಿಗಾಗಿ ಅನಾಥಾಲಯದಲ್ಲಿದ್ದಾಳೆ.

ಆ ಮಾತು ಕೇಳಿ ಒಂದು ರೀತಿಯ ಸಮಾಧಾನದ ಎಳೆ ಅವರ ಮುಖದಲ್ಲಿ ಮೂಡಿದ್ದು ಕಂಡು ಅವಾಕ್ಕಾದ. ಹಣದ ದಾಹ ಇನ್ನೊಬ್ಬರ ದುಃಖಕ್ಕಿಂತ ಮಿಗಿಲಾದದ್ದು ! ನೀರಜಳ ದುಃಖ ಇವರಿಗೆ ಹೇಗೆ ಅರ್ಥಪಡಿಸಲಿ ? ಸಿಟ್ಟಿನಲ್ಲಿ ಧ್ವನಿ ಹೊರಡಿಸಿದ : "ನೀವು ಅವಳಿಗೆ ಅವಳ ಪಾಲು ಕೊಡಲಿಲ್ಲ ಎಂದರೆ ವಕೀಲರನ್ನು ಹಿಡಿದು ಕಾರ್ಯ ಸಾಧಿಸಲು ಹೆಚ್ಚು ಕಷ್ಟವಿಲ್ಲ. ಆದರೆ

ಇದರಿಂದ ನಿಮ್ಮ ಮರ್ಯಾದೆ ಗೌರವಕ್ಕೆ ಹೊಡೆತ ಬಿದ್ದೀತು. ನೀವಿಬ್ಬರೂ ಮಕ್ಕಳೊಂದಿಗೆ ಚೆನ್ನಾಗಿ ಬಾಳ್ತಾ ಇದ್ದೀರಿ. ಒಬ್ಬ ವಿಧವೆಯ ಕಣ್ಣೀರು ಒರಸುವ ಕೈ ನಿಮ್ಮದಾಗದಿದ್ದರೆ ಅವಳು ಹಾಕಿದ ಶಾಪ ನಿಮ್ಮನ್ನು ಬಿಡಲಿಕ್ಕಿಲ್ಲ. ಆತ್ಮಸಾಕ್ಷಿಯಾಗಿ ನಿಮ್ಮನ್ನೇ ಕೇಳಿಕೊಳ್ಳಿ!''

ಏನೋ ಹೇಳಲು ಚಡಪಡಿಸುತ್ತಿದ್ದ ಮಹಂತಯ್ಯ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ಆ ಹಿಂದಿನ ಕ್ರೌರ್ಯ, ದರ್ಪ ಎತ್ತಹೋದವೋ, ನಗೆಯ ಅಟ್ಟಹಾಸ ಎಲ್ಲಿ ಅಡಗಿತೋ. ಅವರ ಅಳು ನೋಡಲಾರದೆ ಗಂಗಾಧರನಿಗೆ ಸಿಟ್ಟು ಬಂದು ನರಹರಿಯತ್ತ ಕಣ್ಣು ಕೆಕ್ಕರಿಸಿದ.

''ಇನ್ನೊಮ್ಮೆ ಅವಳ ಹೆಸರೆತ್ತಿ ನಮ್ಮ ತಂದೆ ಮುಂದೆ ಮಾತೆತ್ತಿದರೆ ಜೋಕೆ! ನಿಮಗೆ ಕಂಪನಿಯ ಕೆಲಸವಿಲ್ಲ, ಹಳ್ಳಿಯಲ್ಲಿ ಕೆಲಸವಿಲ್ಲ. ಇನ್ನೊಬ್ಬರ ಮನೆ ತೂತು ಎಣಿಸುವ ಕೆಲಸಕ್ಕೆ ಹೊರಟಿದ್ದೀರಿ. ನಡೀರಿ ಇಲ್ಲಿಂದ!''

''ಸರಿಯಾಗಿ ಹೇಳಿಸಿಕೊಂಡು ಬಂದಿರಿ''— ಅಲಕಾ ಅವನ ಪೆಚ್ಚು ಮೋರೆ ನೋಡಿ ನಕ್ಕಳು.

''ಅಲ್ಪರಿಗೆ ಬುದ್ಧಿ ಹೇಳಲು ಹೊರಟರೆ ನಾವೇ ಕೆಸರು ಎರಚಿಕೊಳ್ಳಬೇಕು. ಮೊದಲೇ ಎಚ್ಚರಿಸಿದ್ದೆ ನಿಮ್ಮನ್ನು. ವೃಥಾ ಅವರ ದ್ವೇಷ ಕಟ್ಟಿಕೊಂಡಹಾಗಾಯಿತು.''

ಆದರೆ ನರಹರಿಗೆ ಇನ್ನೂ ಆಸೆ. ಮಹಂತಯ್ಯ ತಮ್ಮ ಅಸಹಾಯಕ ಸ್ಥಿತಿಯಲ್ಲಿ ತಪ್ಪನ್ನು ಅರ್ಥಮಾಡಿಕೊಂಡಿದ್ದಾರೆ ಎನ್ನಲು ಅವರ ಕಣ್ಣೀರು ಸಾಕ್ಷಿ. ಇನ್ನೂ ಕೆಲವು ದಿನ ಬಿಟ್ಟು ಇನ್ನೊಮ್ಮೆ ಈ ಮಾತನ್ನು ಎತ್ತಬೇಕು ಅವರ ಬಳಿ.

* * *

ಇನ್ನು ನಾಲ್ಕು ದಿನಗಳಲ್ಲಿ ಶಿವರಾತ್ರಿ. ಮಾಧವನ ಕಾಗದ ಬಂದಿತ್ತು. ''ಶಿವರಾತ್ರಿಗೆ ಬರುತ್ತೇನೆ. ನನಗಾಗಿ ಕಾಯಿಹೋಳಿಗೆ ತಯಾರಿಸಿ ಇಟ್ಟಿರಿ'' ಎಂದು ಬರೆದಿದ್ದ. ಕಾಯಿಹೋಳಿಗೆ ಎಂದರೆ ಅವನಿಗೆ ಜೀವ. ರೇಣುಕೆ ಸಂಭ್ರಮದಿಂದ ಮನೆ ಅಂಗಳದ ನಾಲ್ಕು ತೆಂಗಿನಕಾಯಿ ತೆಗೆಯಿಸಿ ಮರುದಿನ ಅದರ ತಯಾರಿಯಲ್ಲಿದ್ದಳು. ಅದೇ ದಿನ ಶಂಕರಯ್ಯ ಅಟ್ಟದಿಂದ ಕೆಳಗಿಳಿಯುವಾಗ ಜಾರಿಬಿದ್ದು ಸೊಂಟಕ್ಕೆ ಪೆಟ್ಟಾಗಿ ಹಾಸಿಗೆ ಹಿಡಿದುಬಿಟ್ಟರು. ಪುಣ್ಯಕ್ಕೆ ಎಲುಬು ಮುರಿದಿರಲಿಲ್ಲ, ಸೊಂಟದ ಕೀಲು ತಪ್ಪಿರಲಿಲ್ಲ. ಮೈ ಜಜ್ಜಿದಂತಾಗಿ ಅಸಾಧ್ಯ ನೋವು. ಇನ್ನೊಂದು ವಾರಕ್ಕೆ ಹಾಸಿಗೆ ಬಿಟ್ಟೇಳದ ಪರಿಸ್ಥಿತಿ. ''ದೇವರು

ದೊಡ್ಡವನು, ಸದ್ಯ ಇಷ್ಟೇ ಆಯಿತಲ್ಲ''—ಸಮಾಧಾನ ಪಟ್ಟಳು ರೇಣುಕೆ.

ಶಂಕರಯ್ಯ ಮಲಗಿದಾಕ್ಷಣ ಅವರ ಕೆಲಸವೆಲ್ಲ ನರಹರಿಯ ಹೆಗಲಿಗೇರಿತು. ಶಿವರಾತ್ರಿಯೊಳಗೆ ಆರು ಪೂಜೆಗಳಿದ್ದವು ಬೇರೆ ಬೇರೆ ಕಡೆ, ರಾತ್ರಿ–ಮಧ್ಯಾಹ್ನ. ಬದಲಿಗೆ ಹಾದಿಮನೆ ಭಟ್ಟರನ್ನು ಕಳುಹಿಸುವಾ ಎಂದರೆ ಅವರಿಗೆ ಸೂತಕ. ಈ ಬಾರಿ ಶಿವರಾತ್ರಿಗೆ ದೇವಾಲಯಕ್ಕೆ ಹೋಗಲು ಸಾಧ್ಯವಿಲ್ಲ! ಬೈಲಿನ ಕರಣಿಕರು ಮಗಳ ಮನೆಗೆ ಹೋಗಿದ್ದಾರೆ. ಉಳಿದವನು ನರಹರಿ ಒಬ್ಬನೇ. ಶಂಕರಯ್ಯ ತಮ್ಮ ಪೂಜಾಮಂತ್ರದ ಪುಸ್ತಕ ಕೊಟ್ಟು ''ನಿನಗೆ ತಿಳಿದಂತೆ ಪೂಜೆ ಮಾಡು'' ಎಂದರು ಮಗನಿಗೆ.

ತಂದೆಯ ಕರ್ತವ್ಯಕ್ಕೆ ಲೋಪ ಬರದಂತೆ ನಡೆಯುವುದು ಅವನ ಕರ್ತವ್ಯ. ಮನಸ್ಸಿಗೆ ಹಿತವೆನಿಸದಿದ್ದರೂ ಅದು ಅವಮಾನ ಎಂದುಕೊಳ್ಳಲಿಲ್ಲ. ಅಷ್ಟರಲ್ಲಿ ಅರ್ಚಕ ಶೀನಪ್ಪಯ್ಯನಿಂದ ಕರೆ ಬಂದಿತು, ಶಿವರಾತ್ರಿ ದಿನದಂದು ಕಾಯಿ ಒಡೆಯಲು ನರಹರಿ ದೇವಾಲಯಕ್ಕೆ ಬರಬೇಕಂತೆ. ಆ ದಿನ ಶಿವದೇವಾಲಯದಲ್ಲಿ ಭಕ್ತಾದಿಗಳ ಸಂಖ್ಯೆ ಜಾಸ್ತಿ. ಭಕ್ತರು ತರುವ ಕಾಯಿ ಒಡೆದು ಪ್ರಸಾದ ಕೊಡಲು ಒಬ್ಬರಿಂದ ಸಾಧ್ಯವಿಲ್ಲ. ಜೊತೆಗೊಬ್ಬ ಸಹಾಯಕ ಬೇಕು. ನರಹರಿ ಇಲ್ಲ ಎನ್ನಲಿಲ್ಲ. ಅದು ದೇವರ ಕೆಲಸ ತಾನೇ.

ತಂದೆಯ ಬದಲಿಗೆ ಪೂಜೆಗೆ ಹೋದ ಮನೆಗಳಲ್ಲಿ ಒಂದು ಸಂಗತಿ ಗಮನಕ್ಕೆ ಬಂದಿತು. ಎಲ್ಲ ಕಡೆಗೂ ಅವನಿಗೆ ಕೊಡುವ ಗೌರವ ಅಪಾರ. ಅವನ ಬಗ್ಗೆ, ಅಜ್ಜ ನಾಗರಾಜನ ಮೇಲೆ ಜನರಿಗೆ ಒಳ್ಳೆ ಅಭಿಪ್ರಾಯವಿತ್ತು. 'ನೀವು ಇಲ್ಲೇ ಇದ್ದು ಬಿಡಿ' ಎಂದರು ಕೆಲವರು.

ಶಿವರಾತ್ರಿಯ ಹಿಂದಿನ ದಿನ ಬೆಳಿಗ್ಗೆ ಬಂದು ಮುಟ್ಟಿದ ಮಾಧವ. ಸಂಸಾರ ಸಮೇತವಲ್ಲ, ಒಬ್ಬನೇ. ತಂದೆ ಬಿದ್ದು ಹಾಸಿಗೆ ಹಿಡಿದದ್ದು ನೋಡಿ ಹೆಣ್ಣಿನಂತೆ ಅತ್ತು, ''ಈ ವಯಸ್ಸಿನಲ್ಲಿ ಅಟ್ಟ ಹತ್ತಿ ಇಳಿದದ್ದು ಯಾಕೆ ?'' ಗದರಿಕೊಂಡ.

ಆ ಹೊತ್ತಿನಲ್ಲಿ ಅಲಕಾ ಶಾಲೆಗೂ, ನರಹರಿ ಪಕ್ಕದ ಗ್ರಾಮಕ್ಕೆ ಪೂಜೆಗೂ ಹೊರಟುಹೋಗಿದ್ದರು. ನರಹರಿ ಹಿಂದಿರುಗುವಾಗ ಮಧ್ಯಾಹ್ನ ಎರಡು ಗಂಟೆ. ಬಿಳಿ ಪಂಚೆಯಲ್ಲಿ ಎದೆ ಮೇಲೆ ಒಂದು ಶಾಲು ಹೊದೆದು ಬಿಸಿಲಿನಲ್ಲಿ ಕೆಂಪಾಗಿ ಬಂದ ನರಹರಿಯನ್ನು ನೋಡಿದರೆ ಥೇಟ್ ಅವನ ಅಜ್ಜನ ಪ್ರತಿರೂಪ. ಮಾಧವ ಬೆರಗಾಗಿ ನೋಡಿದ.

''ಹಳ್ಳಿಗೆ ಬಂದ್ಮೇಲೆ ನಿನ್ನ ಮಗ ತುಂಬಾ ಚಂದ ಆಗಿದ್ದಾನೆ ಅಮ್ಮ! ಹಾಲು ಮೊಸರಿನಲ್ಲಿ ಬೆಳೆಸಿದ್ದೀಯಾ!'' ತಾಯಿಗೆ ಹೇಳುತ್ತ, ತಮ್ಮನ ಹೆಗಲ

ಮೇಲೆ ಕೈಯಿಟ್ಟು ಅಣ್ಣನಿಗೆ ಪ್ರೀತಿ ಉಕ್ಕಿತ್ತು. "ಯಾವಾಗ ಊರಿಂಗಾ ಬಾದ್‌ಗೆ? ಇನ್ನೂ ಕಂಪನಿ ತೆರೆಯಲಿಲ್ಲವೇ? ಬಿಡು, ಇಲ್ಲೇ ಇದ್ದರಾಯಿತು. ಅಲಕಾ ಶಾಲೆ ಕೆಲಸ ವಹಿಸಿಕೊಂಡಿದ್ದಾಳೆ. ಮತ್ತೇನು?"

ಆ ರಾತ್ರಿ ದೀಪದ ಬೆಳಕಿನಲ್ಲಿ ಅಣ್ಣ ತಮ್ಮ ಮಾತಿಗೆ ಕುಳಿತಾಗ ಶಂಕರಯ್ಯ ಕಳೆದ ವರ್ಷ ತೆಗೆದಿದ್ದ ಮಾತನ್ನೇ ಹೇಳಿದರು ಈಗಲೂ. ಕಳೆದ ವರ್ಷ "ಈಗೇನು ಅವಸರ? ನಿಧಾನಕ್ಕೆ ನೋಡೋಣ" ಎಂದಿದ್ದರು ಇಬ್ಬರೂ. ಮೊನ್ನೆ ಅಟ್ಟದಿಂದ ಬಿದ್ದ ಲಾಗಾಯ್ತು ತಮ್ಮ ನಶ್ವರ ಶರೀರದ ಮೇಲೆ ನಂಬಿಕೆ ಹೊರಟುಹೋಗಿದೆ. ತಾವಿರುವಾಗ ಮನೆ ವ್ಯವಹಾರ ಇತ್ಯರ್ಥವಾದರೆ ಲೇಸು. ಅವರಿಗೆ ನರಹರಿಯೂ ಒಂದೇ, ಮಾಧವನೂ ಒಂದೇ. ಮನೆದೇವಿ ಪೂಜೆ ನೋಡಿಕೊಂಡು ಇಲ್ಲುಳಿಯುವವರಿಗೆ ಈ ಮನೆ ಮತ್ತು ತೋಟ ತೀರ್ಮಾನ ಮಕ್ಕಳಿಗೆ ಬಿಟ್ಟದ್ದು.

ಅಣ್ಣ ತಮ್ಮ ಪರಸ್ಪರ ಮುಖ ನೋಡಿಕೊಂಡರು. ಕಳೆದ ವರ್ಷ ಹೀಗೇ ಆಗಿತ್ತು. ಯಾರು ಇಲ್ಲಿರುವುದೆಂದು ಚರ್ಚೆಯಲ್ಲಿ ಮುಖ್ಯವಾಗಿತ್ತು. ಪೂಜೆಗೆ ಒಬ್ಬರು ಭಟ್ಟರನ್ನು ಗೊತ್ತುಮಾಡುವುದು, ನವರಾತ್ರಿ ಹತ್ತು ದಿನಗಳು ತಾವಿಬ್ಬರೂ ಇಲ್ಲಿ ಬಂದುಳಿಯುವುದು ಎಂದುಕೊಂಡರು ಮೊದಲಿಗೆ. ಆದರೆ ತಾವಿಲ್ಲದಾಗ ಭಟ್ಟರನ್ನು ಇಲ್ಲಿರಿಸುವುದು ಸಮಂಜಸವಲ್ಲ. ಅಪ್ಪ ಇರುವಷ್ಟು ಕಾಲ ಪೂಜೆ ಮಾಡಿಕೊಂಡಿರಲಿ. ಆನಂತರ ದೇವರನ್ನು, ದೇವಿ ಪ್ರತಿಮೆಯನ್ನು ಶಿವದೇವಾಲಯಕ್ಕೆ ಒಪ್ಪಿಸಿದರೆ ಹೇಗೆ? ಅಲ್ಲಿ ಅರ್ಚಕರು ಅದರ ಉಸ್ತುವಾರಿ ನೋಡಿಕೊಳ್ಳಬಲ್ಲರು. ಈ ಮಾತು ಕೇಳಿ ಶಂಕರಯ್ಯ ಕೆನ್ನೆ ಕೆನ್ನೆ ಬಡಿದುಕೊಂಡಿದ್ದರು.

"ದೇವರನ್ನು ನೋಡಿಕೊಳ್ಳಲು ಉದಾಸೀನವಾಗಿ ದೇವಸ್ಥಾನಕ್ಕೆ ಬಿಟ್ಟು ಕೊಡುವುದೇ? ಇದು ಕುಟುಂಬಕ್ಕೆ ಅಮಂಗಲ. ಮಕ್ಕಳಿಲ್ಲದವರು, ತೀರಾ ನಿರ್ಗತಿಕರಾಗಿದ್ದರೆ ಆ ಮಾತು ಬೇರೆ, ನಿಮಗೇನಾಗಿದೆ ಧಾಡಿ? ನಿಮ್ಮ ಬೇಜವಾಬ್ದಾರಿಗೆ ದೇವರನ್ನು ಅತಂತ್ರರನ್ನಾಗಿ ಮಾಡುವುದಲ್ಲ. ನಮ್ಮ ಧರ್ಮ, ನಮ್ಮ ಕರ್ತವ್ಯದಲ್ಲಿ ಲೋಪ ಬರಬಾರದು. ನಾರಾಯಣ ದೊಡ್ಡಪ್ಪನಿಗೆ ಎಷ್ಟೆಲ್ಲ ಸಂಪತ್ತು ಇತ್ತು. ಅವನ ಮಕ್ಕಳ ಕಾಲಕ್ಕೆ ಬೀದಿ ಭಿಕಾರಿ ಆದರಂತೆ. ಈಶ್ವರ ದೊಡ್ಡಪ್ಪನ ಮಕ್ಕಳ ಸ್ಥಿತಿಯೂ ಇಷ್ಟೇ. ಆತನ ಒಬ್ಬ ಮಗ ಮಾತ್ರ ಇಂಜಿನೀಯರ್‌ನಾಗಿ ಅಮೇರಿಕದಲ್ಲಿದ್ದಾನೆ. ಹಾಗೆ ನೋಡಿದರೆ ನೀವೇ ಇಬ್ಬರೂ ಯಾವ ತೊಂದರೆ ಇಲ್ಲದೆ ಇದ್ದೀರ."

ಈಗ ಮತ್ತೆ ಇದೇ ಮಾತು ಬಂದಿತು. ಇಲ್ಲಿ ಯಾರುಳಿಯಬೇಕು?

"ನನಗೆ ಮ್ಯಾನೇಜರ್‌ನಾಗಿ ಬಡ್ತಿ ಸಿಕ್ಕಿದೆ"—ಮಾಧವ ಸಣ್ಣ ಧ್ವನಿ ತೆಗೆದ, "ಆ ನೌಕರಿ ಬಿಟ್ಟು ಹೇಗೆ ಬರಲಿ ?"

"ನೌಕರಿ ಬಿಡು ಎನ್ನಲಿಲ್ಲ. ನೀನಿದ್ದಲ್ಲಿಗೇ ದೇವರನ್ನು ತೆಗೆದುಕೊಂಡು ಹೋಗು. ನಂದಾದೀಪ ಇಡು, ದಿನಾ ಪೂಜೆ ಮಾಡು, ನವರಾತ್ರಿ ನಡೆಸು, ಮತ್ತೆ ಈ ತೋಟ ಮನೆ ಮಾರಿ ಆ ಹಣ...." ಕ್ಷಣ ಹೊತ್ತು ತಡೆದು ಇಬ್ಬರ ಮುಖ ನೋಡಿದರು.

ಶಂಕರಯ್ಯನವರ ಗಂಟಲು ಕಟ್ಟಿತ್ತು ಈ ಮಾತು ಹೇಳುವಾಗ. ಆಸ್ತಿಗಾಗಿ ಅವರು ಪಟ್ಟ ಕಷ್ಟ ಕಡಿಮೆಯೇನಲ್ಲ. ಇದನ್ನು ಮಾರುವುದುಂಟೇ ? ತಾನು, ರೇಣುಕೆ ಇರುವಷ್ಟು ದಿನ ಇಲ್ಲಿ ನೆಲೆ ಬೇಡವೇ? ಅವರ ತುಮುಲ ಮನಗಂಡ ಮಾಧವ ತಮ್ಮನತ್ತ ಹೊರಳಿದ.

ನರಹರಿ ಸುಮ್ಮನೆ ಕುಳಿತಿದ್ದ. ಅವನ ದೃಷ್ಟಿ ಹೊರಳಿತ್ತು ಅಲಕಳತ್ತ. ಈ ದಿನಗಳಲ್ಲಿ ಅಲಕಾ ತನ್ನನ್ನು ಬೇರೆ ಬೇರೆ ಹೊರ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದಾಳೆ. ಶಾಲೆ ಮಕ್ಕಳಿಗೆ ಅವಳು ಮೆಚ್ಚಿನ ಶಿಕ್ಷಕಿ. ಆದರೆ ಅಲ್ಲೇ ಖಾಯಂ ಇರುವ ಇಷ್ಟವಿಲ್ಲ. ಬೇರೆ ಶಿಕ್ಷಕರು ಬರುವತನಕ ಎಂದಿದ್ದಾಳೆ, ಸೋಮಶೇಖರ ಮಾಸ್ತರರಿಗೆ. ಗೀತಾ ಪಾಠ, ಹಿಂದೀ ಪಾಠಕ್ಕೆ ಮಹಿಳೆಯರು, ಗಂಡಸರು ಬರುವುದನ್ನು ಕಂಡಾಗ, ಅವರ ಪರಿಚಯ ಹೆಚ್ಚಿದಂತೆ ತಮ್ಮ ಮನೆ ಮುಹಡಿಯಲ್ಲೇ ಮಹಿಳಾ ಸಂಘ ತೆರೆಯುವ ಆಲೋಚನೆ ತಪ್ಪೇನಲ್ಲ. ಹಳೆಗಾಲದ ಮನೆಯ ಮುಹಡಿಯಲ್ಲಿ ಸಾಕಷ್ಟು ಕೋಣೆಗಳಿದ್ದವು. ಮುಹಡಿ ಏರಲು ಹೊರಭಾಗದಿಂದ ಮೆಟ್ಟಿಲುಗಳನ್ನು ಇಟ್ಟಿರಾಯಿತು. ಇನ್ನೊಂದು ನಾಲ್ಕು ದಿನಗಳಲ್ಲಿ ಅವಳೂ, ಪಟೇಲರ ಎರಡನೇ ಸೊಸೆಯೂ ಪಟ್ಟಣಕ್ಕೆ ಹೋಗಿ ಎರಡು ಹೊಲಿಗೆ ಯಂತ್ರ, ಒಂದು ಕಪಾಟು ತರುವ ಉತ್ಸಾಹದಲ್ಲಿದ್ದಾರೆ. "ನೀನು ಬಿಟ್ಟು ಹೋದರೆ ಅವನ್ನು ಯಾರು ನೋಡಿಕೊಳ್ಳುತ್ತಾರೆ ?"— ಕೇಳಿದ್ದ ನರಹರಿ. "ಪಟೇಲರ ಹಿರಿ ಸೊಸೆಯನ್ನೇ ಅಧ್ಯಕ್ಷೆಯನ್ನಾಗಿ ಮಾಡ್ತೇವೆ. ಸಮರ್ಥಳಾದ ಹೆಂಗಸು" ಎಂದಿದ್ದಳು ಅಲಕಾ. ಅವಳಿಗೀಗ ಔರಂಗಾಬಾದ್‌ನ ನೆನಪು. ಮಕ್ಕಳ ಬಗ್ಗೆ ಕನವರಿಸುವುದು ಎಷ್ಟೋ ಕಡಿಮೆಯಾಗಿದೆ. ಆದರೂ ಅಲಕಾ ಇಲ್ಲೇ ಉಳಿಯಬಲ್ಲಳೇ ?

ಅಷ್ಟರಲ್ಲಿ ಯಾರೋ ಹೊರಬಾಗಿಲು ತಟ್ಟಿದ ಸದ್ದು. ಈ ರಾತ್ರಿಯಲ್ಲಿ ಯಾರು ಬಂದರು ? ಕುತೂಹಲ ತಳೆದು ಬಾಗಿಲು ತೆರೆದು ನೋಡಿದರೆ

ಯಾರೋ ಇಬ್ಬರು ಅಪರಿಚಿತರು. ಒಬ್ಬರು ಮಧ್ಯವಯಸ್ಸು ಕಳೆದ ಗಂಡಸು ಇನ್ನೊಬ್ಬಳು ಇಪ್ಪತ್ತೈದರ ತರುಣಿ. ದೂರಪ್ರಯಾಣ ಮಾಡಿ ಬಂದಂತೆ ಬಳಲಿದ ಮುಖ.

ಮಾಧವ ಒಳಗೆ ಆಹ್ವಾನಿಸಿದ ಅವರನ್ನು. ಇನ್ನೊಂದು ದೀಪ ತಂದಿಟ್ಟಳು, ಅಲಕಾ. ಬಂದ ಗಂಡಸು ಒಮ್ಮೆ ಸುತ್ತಲೂ ದೃಷ್ಟಿ ಚೆಲ್ಲಿ "ಹಾಗೇ ಇದೆ ಮನೆ!" ಎಂದವರು ಮಲಗಿದ್ದ ಶಂಕರಯ್ಯನವರತ್ತ ಹೊರಳಿದರು. "ಅರೆ! ನೀನು ಶಂಕರ ಅಲ್ಲವೇ. ಹೋ, ನಾನು ಯಾರು ಗೊತ್ತಾಯ್ತಿಲ್ಲ. ನಾರಾಯಣನ ಕೊನೆ ಮಗ ಸಾಂಬಶಿವ. ಇವಳು ನನ್ನ ಮಗಳು ಶಶಿ."

ಶಂಕರಯ್ಯ ಕಣ್ಣುಗಳನ್ನು ಕಿರಿದುಗೊಳಿಸಿ ನೋಡಿದರು. ನಾರಾಯಣ ದೊಡ್ಡಪ್ಪನ ಕೊನೆ ಮಗ ಇಲ್ಲಿಂದ ಹೋಗುವಾಗ ಹತ್ತು ವರ್ಷದ ಹುಡುಗ. ಈಗ ಅದೆಷ್ಟು ವೃದ್ಧರಾಗಿದ್ದಾರೆ! ಹೌದು, ಆ ಸಂಸಾರ ಈ ಮನೆ ಬಿಟ್ಟು ಹೋಗಿ ನಲವತ್ತು ವರ್ಷಗಳ ಮೇಲಾಯಿತು. ಇಷ್ಟು ದೀರ್ಘಕಾಲದ ನಂತರ ಬಂದಿದ್ದಾರೆ ಮತ್ತೆ ಇಲ್ಲಿಗೆ. ಬಂದ ಉದ್ದೇಶವೇನು ? ಎಲ್ಲಿಂದ ಬಂದದ್ದು ?

"ನಮ್ಮ ಶಶಿಗೆ ಗಂಡು ತೋರಿಸಲು ಇಲ್ಲೇ ಸಮೀಪದ ಪಟ್ಟಣಕ್ಕೆ ಬಂದಿದ್ದೆ. ನಿನ್ನ ನೆನಪಾಯಿತು. ಒಮ್ಮೆ ನೋಡಿ ಹೋಗಲು ಬಂದೆ" ಎಂದರು ಚುಟುಕಾಗಿ.

ಅವರು ಹೇಳಿದ್ದು ಸುಳ್ಳು ಎಂದು ತಿಳಿದದ್ದು ಮರುದಿನ. ಸಾಂಬಶಿವ ಬೆಳಿಗ್ಗೆ ಎದ್ದ ಹಾಗೆ ತಾವು ಹುಟ್ಟಿದ ಮನೆತುಂಬಾ ಮಗುವಿನಂತೆ ಓಡಾಡಿದರು ಸಂಭ್ರಮದಲ್ಲಿ. ಕೋಣೆಕೋಣೆ ಸುತ್ತಿದರು ಕುತೂಹಲದಲ್ಲಿ. ಮಹಡಿ ಹತ್ತಿ ಇಳಿದರು ಉತ್ಸಾಹದಲ್ಲಿ. ಶಂಕರಯ್ಯನ ಬಳಿ ಕುಳಿತು ತಾವೇ ಮೈಕೈ ನೋವಿಗೆ ಎಣ್ಣೆ ಹಚ್ಚಿ ತಿಕ್ಕಿ ಆರೋಗ್ಯ ವಿಚಾರಿಸಿದರು. ಮಾಧವ, ನರಹರಿಯನ್ನು ಕರೆದು ತಲೆ ಸವರಿ ಮಾತನಾಡಿದರು. ಅಡಿಗೆ ಕೋಣೆಯಲ್ಲಿ ರೇಣುಕಳನ್ನೂ ಹಾಸ್ಯ ಮಾಡುತ್ತ ತಾವೂ ದೋಸೆ ಹುಯ್ಯಲು ಮುಂದಾದರು. ಈ ಮನೆ ತನ್ನದು, ನೀವೆಲ್ಲರೂ ತನ್ನವರು ಎಂದು ಹೇಳುವ ಪ್ರಯತ್ನ. ಅವರ ಮಾತಿನಲ್ಲಿ ಕೃತಕತೆ ಇರಲಿಲ್ಲ. ತೀರ ಸಹಜವಾಗಿತ್ತು, ಮಾತು, ಹಾವಭಾವ. ಆದರೂ ಮುಖದಲ್ಲಿ ಏನೋ ನೋವು, ದುಃಖದ ಎಳೆ. ಅಲಕಾ ಶಾಲೆಗೆ ಹೊರಟಾಗ, "ನಾನಿರುವಾಗ ಅಲ್ಲಿ ಶಾಲೆಯಿರಲಿಲ್ಲ. ಬರೀ ಕಾಡು ಇತ್ತು. ನಮ್ಮ ಶಶಿ ಸರಕಾರಿ ಶಾಲೆಯಲ್ಲಿ ಟೀಚರ್ ಆಗಿದ್ದಾಳೆ. ನಿನ್ನ ಜೊತೆ ಕರ್ಕೊಂಡು ಹೋಗು, ನೋಡಿ ಬರಲಿ" ಎಂದರು. ಶಶಿ ಹೊರಡುವ ಉತ್ಸಾಹ ತೋರಿಸ

ಲಿಲ್ಲ. ಅನಂತರ ದೇವರ ಕೋಣೆಯಲ್ಲಿ ಇಣುಕಿ ದೇವಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಕುಂಕುಮ ಕೈಗೆತ್ತಿಕೊಂಡರು.

"ಇವತ್ತು ಒಂದು ಕುಂಕುಮಾರ್ಚನೆ ಮಾಡಬೇಕಿತ್ತು ಶಂಕರ. ಹಾಗೇ ಒಂದಿಬ್ಬರು ಬ್ರಾಹ್ಮಣರಿಗೆ ಊಟ ಹಾಕಿಸೋಣ, ಆಗದೇ ?"

"ಅದಕ್ಕೇನಂತೆ. ನರಹರಿ ಇದ್ದಾನೆ, ಮಾಡ್ತಾನೆ. ಇವತ್ತು ರಾತ್ರಿ ಅವನಿಗೆ ಎಲ್ಲಿಯೂ ಪೂಜೆ ಇಲ್ಲ. ಕುಂಕುಮಾರ್ಚನೆ ಸಂಗಡ ದುರ್ಗಾಪೂಜೆಯನ್ನೂ ಮಾಡಿಸುವಾ. ಇವತ್ತು ಶುಕ್ರವಾರ, ದಿನ ಒಳ್ಳೆಯದೇ."

ಆಮೇಲೆ ಅವರಿಂದಲೇ ತಿಳಿಯಿತು. ಅವರ ಮನೆದೇವಿಗೆ ಪೂಜೆ ಕೊಡಲೆಂದು ಬಂದಿದ್ದಾರೆ ಇಲ್ಲಿಯತನಕ ಎಂದು.

"ನನ್ನ ತಂದೆ ಈ ಹಳ್ಳಿ ಬಿಟ್ಟಮೇಲೆ ದೇವರು, ಪೂಜೆ-ಪುನಸ್ಕಾರ ಎಲ್ಲಾ ಕೈಬಿಟ್ಟರು. ಒಂದು ಶ್ರಾದ್ಧ-ತಿಥಿ ಕೂಡ ನಡೆಸಲಿಲ್ಲ. ನಾವು ನಾಲ್ಕು ಗಂಡು ಮಕ್ಕಳು. ಯಾವ ಶಿಸ್ತಿಲ್ಲದೆ ಉಂಡಾಡಿಗಳ ಹಾಗೇ ಬೆಳೆದೆವು. ಜೀವನಕ್ಕೆ ಕೆಲಸ ಅರಸುತ್ತಾ ನಾನೊಬ್ಬ ಗುಲ್ಬರ್ಗದ ಕಡೆ ಹೋದೆ, ಅಲ್ಲೇ ಅಂಗಡಿ ಇಟ್ಟೆ, ಮದುವೆ ಮಾಡಿಕೊಂಡೆ. ನನ್ನ ತಂದೆ ನರಳಿ ನರಳಿ ಸತ್ತದ್ದು ನನ್ನ ಮನೆಯಲ್ಲೇ. ನನ್ನ ಇಬ್ಬರು ಅಕ್ಕಂದಿರಿಗೆ ಮಕ್ಕಳಿಲ್ಲ. ಒಬ್ಬನಿಗೆ ರಸ್ತೆ ಅಪಘಾತದಲ್ಲಿ ತಲೆಗೆ ಪೆಟ್ಟಾಗಿ ಒಂದು ವರ್ಷ ಆಸ್ಪತ್ರೆಯಲ್ಲಿದ್ದು ತೀರಿಹೋದ. ನನಗಂತೂ ಕಷ್ಟಗಳು ಒಂದು ದಿನವೂ ತಪ್ಪಲಿಲ್ಲ. ಹಣಕ್ಕೆ ತತ್ವಾರ, ಮಕ್ಕಳ ಸಮಸ್ಯೆ, ಮಗನಿಗೆನೌಕರಿ ಹೋಯ್ತು, ಹೆಂಡತಿಗೆ ಯಾವಾಗಲೂ ಕಾಹಿಲೆ. ಮನಸ್ಸಿಗೆ ಸುಖವಿಲ್ಲ. ಏಳರಾಟದ ಶನಿಕಾಟ ಎಂದುಕೊಂಡೆ. ಹುಡುಗಿ ಶಶಿಯ ಮದುವೆಗೂ ವಿಘ್ನ...." ಹೇಳುತ್ತಾ ಹೋದರು ಸಾಂಬಶಿವ. "ಕೊನೆಗೆ ಜೋಯಿಸರ ಹತ್ತಿರ ಪ್ರಶ್ನೆ ಇಡಿಸಿದೆ. ಅವರೇನು ಹೇಳಿದರು ಗೊತ್ತೇ ? ಮನೆದೇವರಿಗೆ ನೀವು ಸರಿಯಾಗಿ ನಡೆದುಕೊಳ್ತಾ ಇಲ್ಲ ಎಂದರು. ಆಗಲೇ ನಿನ್ನ ನೆನಪಾದದ್ದು. ನಮ್ಮ ಕುಟುಂಬದ ಪೂಜೆ ಮಾಡ್ತಾ ಇದ್ದವನು ನೀನೊಬ್ಬನೇ. ನಾವು ವರ್ಷಕ್ಕೊಮ್ಮೆ ಬಂದು ಪ್ರಸಾದ ಸ್ವೀಕರಿಸುವ ಮನಸ್ಸು ಮಾಡಲಿಲ್ಲ. ಈಗ ಬಂದಿದ್ದೇನೆ ಪೂಜೆ ಮಾಡಿಸಿಕೊಂಡು ಹೋಗಲು."

ಶಂಕರಯ್ಯ ಅವಾಕ್ಕಾದರು. ಇವರನ್ನೆಲ್ಲಾ ಕಾಡಿದ್ದು ಮನೆದೇವರೇ? ಅಥವಾ ನಾರಾಯಣ ದೊಡ್ಡಪ್ಪ ಮಾಡಿದ ಅಧರ್ಮ, ಅನ್ಯಾಯವೇ ?

"ಶಶಿಗೆ ಗಂಡು ಹುಡುಕಿ ಸಾಕಾಗಿ ಹೋಯ್ತು." ಸಾಂಬಶಿವ ಮಾತು

ಮುಂದುವರಿಸಿದರು : "ಎಲ್ಲಾ ಸರಿಹೋಯ್ತು ಎನ್ನುವಾಗ ವಿಘ್ನ ಬಂದು ಮದುವೆ ಮುರಿದುಹೋಗ್ತಾ ಇದೆ. ಮೂವತ್ತಕ್ಕೆ ಹತ್ತಿರವಾಯ್ತು. ಇನ್ನು ಯಾವಾಗ ಮದುವೆಯಾಗುತ್ತೋ. ಆದರೂ ನನಗೆ ಆಸೆ, ಪೂಜೆ ಮಾಡಿಸಿ ಪ್ರಸಾದ ತೆಗೆದುಕೊಂಡು ಹೋಗ್ತೇನೆ. ಆಮೇಲೆ ಎಲ್ಲಾ ದೈವೇಚ್ಛೆ !"

ರಾತ್ರಿ ದುರ್ಗಾಪೂಜೆ, ಕುಂಕುಮಾರ್ಚನೆ ನಡೆಯಿತು. ತಂದೆಯ ಬದಲಿಗೆ ನರಹರಿ ಪೂಜೆ ಮಾಡಿದ. ಮಾಧವ ಸಹಕರಿಸಿದ. ನಂದಾದೀಪದ ಎದುರು ಹೂ ಕುಂಕುಮದಿಂದ ಅಲಂಕೃತಳಾದ ದೇವಿ ನಗುತ್ತಿದ್ದಾಳೆ. ಅಭಯಹಸ್ತ ದಿಂದ ಹರಸುತ್ತಿದ್ದಾಳೆ. ನರಹರಿ ಭಾವಪರವಶನಾಗಿದ್ದ. ಒಂದು ಅಪೂರ್ವ ಕಳೆ ಶೋಭಿಸುತ್ತಿತ್ತು ಅವನ ಮುಖದ ಮೇಲೆ. ಅಲಕಾಗೂ ಇವನು ಮೊದ ಲಿನ ನರಹರಿ ಅಲ್ಲ, ಇನ್ಯಾರೋ ಎನಿಸಿ ಕಣ್ಣುಜ್ಜಿ ನೋಡಿದಳು ಎರಡು ಬಾರಿ.

ಸಾಂಬಶಿವ ಕೃತಾರ್ಥರಾಗಿ ಅತ್ಯಂತ ಭಕ್ತಿಭಾವದಿಂದ ಪ್ರಸಾದ ಸ್ವೀಕರಿಸಿ ದರು. ಮಗಳಿಗೂ ಕೊಟ್ಟರು. ಅವರ ಮನಸ್ಸು ಏನನ್ನು ಬೇಡಿಕೊಂಡಿತೋ ತಿಳಿಯಲಿಲ್ಲ ಯಾರಿಗೂ.

ಮರುದಿನ ಶಿವರಾತ್ರಿ. ನರಹರಿ ನಸುಕಿನಲ್ಲಿ ಮಿಂದು ಮಡಿಯುಟ್ಟು ಶಿವ ದೇವಾಲಯಕ್ಕೆ ಹೊರಡಲು ಸಜ್ಜಾಗುತ್ತಿದ್ದಂತೆ ಅಲಕಾಗೆ ಪಕ್ಕನೆ ನೆನಪಾ ಯಿತು, ನಿನ್ನೆ ಬಂದ ನಿಖಿಲನ ಕಾಗದ. ನಿನ್ನೆ ಸಂಜೆ ಅವಳು ಶಾಲೆಯಿಂದ ಬಂದಾಗ ಆಗಲೇ ನರಹರಿ ಪೂಜೆಗೆ ಕುಳಿತಾಗಿತ್ತು. ರಾತ್ರಿ ಕೊಡೋಣವೆಂದರೆ ಕೆಲಸದ ಮಧ್ಯೆ ಮರೆತುಹೋಗಿದೆ.

ನಿಖಿಲನ ಕಾಗದ ! ಈ ದಿನಗಳಲ್ಲಿ ಅವನ ಕಾಗದ ಬಂದೀತೇ ಎಂದು ಶಾಲೆ ತನಕ ಹೋಗಿ ಅಂಚೆಯವನನ್ನು ಕಾಯುವುದು ಬಿಟ್ಟುಹೋಗಿದೆ. ಇವತ್ತು ನಿರೀಕ್ಷೆಯಿಲ್ಲದೆ ಸಿಕ್ಕಿದೆ ಕಾಗದ! ಮಬ್ಬುಗತ್ತಲಲ್ಲಿ ತೆಗೆದು ಓದಿದ. ಎಂತಹ ಸಂತೋಷದ ಸುದ್ದಿ ! ಅವನ ಮುಖ ಅರಳಿಹೋಯಿತು. ನಿಖಿಲ ಬರೆದಿದ್ದ:

"ಬೋನಸ್ ಮತ್ತು ತಿಂಗಳ ಹೆಚ್ಚುವರಿ ಸಂಬಳ ಕೊಡಲು ಕಂಪನಿ ಮ್ಯಾನೇಜರ್ ಒಂದು ಒಪ್ಪಂದಕ್ಕೆ ಬಂದ ಕಾರಣ ಕೆಲಸಗಾರರು ತಮ್ಮ ಮುಷ್ಕರ ಹಿಂತೆಗೆದುಕೊಂಡು ಮುಂದಿನ ವಾರ ಕೆಲಸಕ್ಕೆ ಹಾಜರಾಗುತ್ತಾರೆ. ನೀನು ಈ ಕಾಗದ ಸಿಕ್ಕಿದ ತಕ್ಷಣ ಹೊರಟು ಬಾ."

ನರಹರಿ ಅಲಕಾಳ ಕೆನ್ನೆ ಚಿವುಟಿ ಸುದ್ದಿ ತಿಳಿಸಿ "ಹೊರಡಲು ತಯಾರಿ ದ್ದೀಯಾ ?"— ಕೇಳಿದ ನಗುತ್ತ.

"ಹೋ, ನನಗೆ ಇಲ್ಲಿದ್ದರೂ ಒಂದೇ, ಅಲ್ಲಿಗೆ ಹೋದರೂ ಒಂದೇ! ಹೋಗೋಣ."

ಅವಳ ಧ್ವನಿಯಲ್ಲಿ ಉತ್ಸಾಹವಿರಲಿಲ್ಲವೇ ? ಯಾಕೆ ಹಾಗೆ ಹೇಳಿದಳು ? ನರಹರಿ ತಲೆ ಕೊಡಹಿಕೊಳ್ಳುತ್ತ ಅವಳ ಮುಖ ನೋಡಿದ. ಆಮೇಲೆ ಕಾಗದವನ್ನು ಅಲ್ಲೇ ಗೂಡಿನಲ್ಲಿರಿಸಿ ಅಂಗಳಕ್ಕಿಳಿದ. ಬೆಳಗಿನ ತಂಪುಗಾಳಿ ಮೈ ಸೋಂಕಿತು ಸಣ್ಣಗೆ ಸಿಳ್ಳುಹಾಕಿದ ಉತ್ಸಾಹದಲ್ಲಿ.

ಇನ್ನೆರಡು ದಿನಗಳಲ್ಲಿ ಇಲ್ಲಿಂದ ಹೊರಡಬೇಕು. ಮತ್ತೆ ಅದೇ ಪಟ್ಟಣದ ವಾಸ. ಔರಂಗಾಬಾದ್‌ನ ಜನಜಂಗುಳಿ, ಸೆಕೆ, ಇಕ್ಕಟ್ಟಾದ ಮನೆ, ಅದಕ್ಕಿಂತ ಮಿಗಿಲಾಗಿ ಗುಂಪಿನಲ್ಲಿ ಗೋವಿಂದ ಎನ್ನುತ್ತ ಹೊಟ್ಟೆಪಾಡಿಗೆ ಇರುವ ಕಂಪನಿ ಕೆಲಸ. ಆಸಕ್ತಿ ಇಲ್ಲದ ಕೆಲಸದಲ್ಲಿ ತನ್ನನ್ನು ತೊಡಗಿಸಬೇಕು. ಕಂಪನಿಯ ಒಳಗಡೆ 'ಮಿಸ್ಟರ್ ನರಹರಿ' ಎನ್ನುತ್ತಾರೆ, ನಿಜ. ಆದರೆ ಹೊರಬಂದರೆ ಆ ಪಟ್ಟಣದಲ್ಲಿ ನರಹರಿಯ ಪರಿಚಯ ಇರುವುದಿಲ್ಲ ಯಾರಿಗೂ.

ಆದರೆ ಈ ಹಳ್ಳಿಯಲ್ಲಿ ನರಹರಿಗಿರುವ ವ್ಯಕ್ತಿತ್ವವೇ ಬೇರೆ. ಗೌರವದಿಂದ ಮಾತನಾಡಿಸುತ್ತಾರೆ ಎಲ್ಲರೂ. ಮೊನ್ನೆಯೇ ಶೀನಪ್ಪಯ್ಯ ಅಂದಿದ್ದರು. "ಈ ಸಲ ಜಾತ್ರೆಗೆ ದೇವರ ಉತ್ಸವಮೂರ್ತಿಯನ್ನು ನೀವು ಹೊರಬೇಕು, ನರಹರಿ. ಸದಸ್ಯರೆಲ್ಲಾ ನಿಮ್ಮ ಹೆಸರು ಸೂಚಿಸಿದ್ದಾರೆ. ನೀವು ಕೆಂಪು ಪಂಚೆ ಉಟ್ಟು, ತಲೆಗೆ ಬಿಳಿಮುಂಡು ಸುತ್ತಿ ಅಲಂಕೃತ ದೇವರ ಮೂರ್ತಿಯನ್ನು ಹೊತ್ತರೆ—ಆಗ ನಿಮಗೆ ದೃಷ್ಟಿ ಬೀಳದಿದ್ದರೆ ಸಾಕು!"

ತಾನು ಉತ್ಸವಮೂರ್ತಿಯನ್ನು ಹೊರುವವ! ದೇವರು ನನ್ನಿಂದ ಇಷ್ಟನ್ನು ನಡೆಸುತ್ತಾನೆಯೋ ? ತನ್ನ ಹಿರಿಯರು ಹೊತ್ತ ಮೂರ್ತಿಯನ್ನು ಹೊರುವ ಭಾಗ್ಯ ತನಗಿದೆಯೋ ? "ನೀವೆಲ್ಲರೂ ಒಪ್ಪಿದರೆ ನನ್ನ ಆಭ್ಯಂತರ ಇಲ್ಲ" ಎಂದಿದ್ದ ಅವನು, ಒಂದು ದಿನವೆಲ್ಲ ಉತ್ಸವಮೂರ್ತಿ ಹೊರುವ ಆ ಸಂಭ್ರಮದ ಗುಂಗಿನಲ್ಲಿ ಕಳೆದಿದ್ದ. ಇನ್ನೀಗ ಎರಡು ದಿನಗಳಲ್ಲಿ ಹೊರಡಬೇಕು ಔರಂಗಾಬಾದಿಗೆ. ಎಂಟು ತಿಂಗಳ ಕಾಲ ಕಂಪನಿ ಮುಚ್ಚಿದ ಕಾರಣ ಕೆಲಸದ ಹೊರೆ ಇದೆ ಸಾಕಷ್ಟು. ಇನ್ನೆರಡು ತಿಂಗಳಲ್ಲಿ ನಡೆಯುವ ಜಾತ್ರೆಗೆ ರಜೆ ಸಿಗುವುದು ಸಂಶಯ. ಜಾತ್ರೆಗೆ ಬರದಿದ್ದರೆ ತಂದೆಗೆ ಬೇಸರವಾದೀತೆಂಬ ಯೋಚನೆಗಿಂತ ಹೆಚ್ಚಾಗಿ ತನಗೆ ಉತ್ಸವಮೂರ್ತಿ ಹೊರುವ ಅವಕಾಶ ತಪ್ಪುತ್ತಲ್ಲ ಎಂಬ ಚಿಂತೆ ಕಾಡಿತು ಅರೆಕ್ಷಣ. ಈ ಹಳ್ಳಿ ಪರಿಸರದಲ್ಲಿ ತಮ್ಮ ತೋಟ, ತಾನಿಟ್ಟ ಹಲ್ಲರ್ ಉದ್ಯಮ, ತಂದೆಯ ವೃತ್ತಿ ನೋಡಿಕೊಳ್ಳುತ್ತ ಆಗಾಗ

ದೇವಸ್ಥಾನದ ಸೇವೆಯೂ ಮಾಡಿಕೊಂಡಿದ್ದರೆ ಹೇಗೆ? ಇದೂ ಒಂದು ಬದುಕಲ್ಲವೇ ತನಗೆ?

ತನ್ನಲ್ಲೇ ಎಣಿಕೆ ಹಾಕುತ್ತ ಶಿವ ದೇವಾಲಯದ ಸಮೀಪ ಬಂದಾಗ ಆ ಬೆಳಗಿನ ನಿಶ್ಶಬ್ದ ವಾತಾವರಣವನ್ನು ಸೀಳಿಕೊಂಡು ಬಂದಂತೆ ಕೇಳಿಸಿತು ವಾಲಗದ ಧ್ವನಿ. ಸುಶ್ರಾವ್ಯವಾಗಿ ಬಾರಿಸುತ್ತಿದ್ದಾರೆ! ನರಹರಿ ದಾಪುಗಾಲಿಟ್ಟು ಧ್ವಜಸ್ತಂಭದ ಬಳಿ ಬಂದು ನೋಡುತ್ತಾನೆ, ಹೆಬ್ಬಾಗಿಲ ಮುಂದೆ ನೆಲದ ಮೇಲೆ ಕುಳಿತಿದ್ದಾನೆ ಸುಬ್ಬು, ಅವನ ಅಕ್ಕಪಕ್ಕದಲ್ಲಿ ಮೃದಂಗ ಮತ್ತು ತಾಳ ಬಾರಿಸುವವರು. ಸುಬ್ಬು ಎತ್ತಿ ಹಿಡಿದ ನಾಗಸ್ವರದಿಂದ ಸುಶ್ರಾವ್ಯವಾಗಿ ಹೊರಹೊಮ್ಮುತ್ತಿದೆ ಸ್ವರ. ಕಣ್ಣು ಮುಚ್ಚಿ ತನ್ಮಯತೆಯಿಂದ ಬಾರಿಸುತ್ತಿದ್ದಾನೆ ತನ್ನ ನೆಚ್ಚಿನ ವಾದ್ಯವನ್ನು. ಹೆಬ್ಬಾಗಿಲ ಒಳಗೆ ನಿಂತಿದ್ದ ಶೀನಪ್ಪಯ್ಯನ ಕಣ್ಣುಗಳಲ್ಲಿ ನೀರು.

ಸುಮಾರು ಒಂದೂವರೆ ತಾಸು ಅಲ್ಲೊಂದು ಹೊಸ ಲೋಕ ತೆರೆದಿತ್ತು, ಸಾಕ್ಷಾತ್ ಶಿವನೇ ಧರೆಗಿಳಿದು ಬಂದು ನಾಟ್ಯವಾಡಿದಂತೆ. ಸುಬ್ಬು ಕಣ್ತೆರೆಯದೆ, ಶ್ರುತಿ ಬಿಡದೆ ಬಾರಿಸಿ ವಾದ್ಯ ಕೆಳಗಿಟ್ಟಾಗ ಅವನ ಮುಖದಲ್ಲಿ ಕೃತಾರ್ಥ ಭಾವ, ತೃಪ್ತಿಯ ಕಳೆ; ಹಿಮ್ಮೆಟ್ಟಿದ ಅಪಕಾರದಲ್ಲಿ ಎದ್ದುಕಂಡದ್ದು ದೀನತನ. ದೇವರಿಗೆ ಪ್ರದಕ್ಷಿಣೆ ಹಾಕಿ ಅಡ್ಡಬಿದ್ದ. ಶೀನಪ್ಪಯ್ಯ ವೀಳ್ಯದೆಲೆ-ಅಡಿಕೆ, ಮಾಮೂಲು ಒಂದು ರೂಪಾಯಿ ದಕ್ಷಿಣೆಯಿತ್ತು ಮರ್ಯಾದೆ ಸಂದಾಯ ಮಾಡಿದಾಗ ಇಬ್ಬರ ಕಣ್ಣುಗಳಲ್ಲೂ ನೀರು.

ಸುಬ್ಬು ಬೆಂಗಳೂರು ಡಾಕ್ಟರರನ್ನು ಭೇಟಿಯಾಗಿ ಔಷಧಿ ಸೇವಿಸಿದನೋ ಇಲ್ಲವೋ ತಿಳಿಯದು. ಯಾವ ದೇವಾಲಯದಲ್ಲಿ ತನಗೆ ದಕ್ಷಿಣೆ ಸಾಲದೆಂದು ದೂರಿ ಹೋಗಿದ್ದನೋ ಅಲ್ಲಿಗೆ ಬಂದಿದ್ದ ಬೇರೆ ದಾರಿಯಿಲ್ಲದೆ. ನಿನ್ನೆ ಮಧ್ಯಾಹ್ನದವರೆಗೆ ವಾದ್ಯ ಕೈಗೆತ್ತಿಕೊಂಡರೆ ಸ್ವರ ಇರಲಿಲ್ಲವಂತೆ. ಆದರೆ ಇವತ್ತು ನಸುಕಿನಿಂದ ವಾದ್ಯದಲ್ಲಿ ಅವನ ಚೇತನ ಹರಿದುಬಂದಿದೆ. ಯಾವ ವೈದ್ಯನಿಗೂ ಬಗ್ಗದ ಸ್ವರ ತಲೆಬಾಗಿ ನಮಿಸಿದೆ ಈಶ್ವರನ ಸನ್ನಿಧಿಯಲ್ಲಿ.

"ದೇವರ ಮಹಿಮೆ ಎಂದರೆ ಇದೇ. ತನ್ನ ಸೇವೆಯನ್ನು ತಾನೇ ತೆಗೆದುಕೊಂಡ!" ಶೀನಪ್ಪಯ್ಯ ಬೆರಗಾಗಿ ಹೇಳತೊಡಗಿದರು ಬಂದವರ ಮುಂದೆ.

ಬೆಳಗು ಮೂಡಿದಂತೆ ಭಕ್ತಾದಿಗಳು ಒಬ್ಬೊಬ್ಬರೇ ಬರತೊಡಗಿದರು ಹಣ್ಣುಕಾಯಿ ತೆಗೆದುಕೊಂಡು. ಎಲ್ಲರ ಬಾಯಲ್ಲೂ ಸುಬ್ಬುವಿನದೇ ಮಾತು. ಶೀನಪ್ಪಯ್ಯ ಅಭಿಷೇಕ ಮುಗಿಸಿ ಅರ್ಚನೆ ಮಾಡುತ್ತಿದ್ದರೆ ನರಹರಿ ನಂದಿಯ

ಕಟ್ಟೆಯಲ್ಲಿ ಕುಳಿತ ಕತ್ತಿ ಹಿಡಿದು. ಭಕ್ತಾದಿಗಳು ತರುವ ತೆಂಗಿನಕಾಯಿ ಒಡೆದು ಗಂಧ, ಪುಷ್ಪ, ಕುಂಕುಮ ಇಟ್ಟು ಅವರಿಗೆ ಹಿಂದಿರುಗಿಸುವುದು ಅವನ ಕೆಲಸ. ಸುಬ್ಬು ಪಾಲಗಸೇವೆ ಮಾಡಿಹೋದ ಮೇಲೆ ಅವನಲ್ಲೂ ತುಂಬಿದೆ ಅದೇನೋ ಉತ್ಸಾಹ.

ನಾವು ದೊಡ್ಡವರೆಂದು ಅಹಂಕಾರ ಪಡುತ್ತೇವೆ. ಎಲ್ಲಿಯವರೆಗೆ ? ಅತೀತನೂ, ಅಗೋಚರನೂ ಆದ ಈ ಮಹಾಮಹಿಮ ದೇವರ ಮುಂದೆ ನಮ್ಮ ಒಣಜಂಭ, ಅಹಂಕಾರ ಗಾಳಿಗೆ ಎರಗಿದ ತರಗೆಲೆಯಂತೆ. ಹಿರಿಯರು ಮಾಡಿಟ್ಟ ಪುಣ್ಯವಿದ್ದರೆ ಗಟ್ಟಿ ನಿಲ್ಲಬಹುದು. ಪುಣ್ಯದ ಎಣ್ಣೆ ತೀರಿದಾಗ ಅನುಭವಿಸಲೇಬೇಕು ತಾವು ಮಾಡಿದ ಕರ್ಮವನ್ನು. ಮನೆತನದವರ ಸೇವೆಗೆ ಅಪಚಾರ ಎಸಗಿದ ಸುಬ್ಬುವಿನ ಅಹಂಕಾರ ತಗ್ಗಲು ಕೇವಲ ನಾಲ್ಕು ವರ್ಷ ಸಾಕಾಯಿತು.

ಪಕ್ಕನೆ ಅವನಿಗೆ ಸಾಂಬಶಿವರ ನೆನಪು ಬಂದಿತು. ಎಷ್ಟೋ ದೂರದಿಂದ ಅದೆಷ್ಟೋ ವರ್ಷಗಳ ನಂತರ ಬಂದಿದ್ದಾರೆ ಕುಟುಂಬದ ದೇವರಿಗೆ ಪೂಜೆ ಸಲ್ಲಿಸಲು. ಇನ್ನು ಮುಂದೆ ಪ್ರತಿವರ್ಷ ನವರಾತ್ರಿಗೆ ಬಂದು ಪ್ರಸಾದ ತೆಗೆದು ಕೊಂಡು ಹೋಗುತ್ತಾರಂತೆ. ಇಲ್ಲಿ ನಿಷ್ಠೆ ಮುಖ್ಯವೇ? ನಂಬಿಕೆಯೇ? ನರಹರಿ ಸಂದಿಗ್ಧಕ್ಕೆ ಒಳಗಾದ. ನಿಷ್ಠೆ–ನಂಬಿಕೆ ಎರಡೂ ಒಂದಾದರೆ ಪ್ರಾಯಶಃ ಸಿಗುವ ಫಲ ಬೇರೆಯೇ. ತನ್ನ ಅಜ್ಜನಿಗೆ, ಅಪ್ಪನಿಗೆ ನಿಷ್ಠೆಯಿತ್ತು, ನಂಬಿಕೆಯಿತ್ತು. ಧರ್ಮದ ಹಾದಿ ತಪ್ಪದಂತೆ ನಡೆದರು. ಅವರ ಪುಣ್ಯಸಂಚಯವೇ ತಮ್ಮನ್ನು ಇಂದಿಗೂ ಕಾಪಾಡುತ್ತಿರಬೇಕು.

ಅವನು ಯೋಚಿಸುತ್ತ ಕಾಯಿ ಒಡೆಯುತ್ತಲೇ ಇದ್ದ. ಅಷ್ಟರಲ್ಲಿ ಪರಿಚಿತ ಧ್ವನಿ ಕೇಳಿಸಿತು. ನೋಡಿದರೆ ಎದುರಿನಲ್ಲಿ ಭಾಗ್ಯಮ್ಮ! ಆಗಲೇ ಅವರ ಕಾಯಿ ಒಡೆದು ಪ್ರಸಾದ ಇಟ್ಟು ಹಿಂತಿರುಗಿಸಿಯಾಗಿತ್ತು.

''ಏನೋ ಚಿಂತೆಯಲ್ಲಿದ್ದೀ ?'' ಭಾಗ್ಯಮ್ಮ ಪ್ರಸಾದವನ್ನು ಚೀಲದಲ್ಲಿಟ್ಟು ಮೆಲ್ಲನೆ ಅಂದರು, ''ನಾಳೆ ಗಂಗಾಧರ, ನಟೇಶ ಮನೆಯಲ್ಲಿಲ್ಲ. ನೀನು ಒಮ್ಮೆ ಬಂದುಹೋಗ್ತೀಯಾ ?''

''ಯಾಕೆ?'' ಹುಬ್ಬೇರಿಸಿದ. ಇತ್ತೀಚೆಗೆ ಅವರ ಮನೆಯತ್ತ ಹೋಗಿರಲಿಲ್ಲ. ಗಂಗಾಧರನಿಂದ ಹೇಳಿಸಿಕೊಂಡ ಮೇಲೆ ಹೋಗುವ ಮನಸ್ಸು ಇರಲಿಲ್ಲ.

''ಮಕ್ಕಳಿಬ್ಬರೂ ನೀರಜಳಿಗೆ ಪಾಲು ಕೊಡಲು ಸಿದ್ಧರಿಲ್ಲವಂತೆ. ಅದನ್ನು ಕೇಳಿ ಇವರ ಸ್ಥಿತಿ ಇನ್ನೂ ಹದಗೆಟ್ಟಿದೆ. ಇವರ ಮನಸ್ಸಿಗೆ ಸಮಾಧಾನ ಸಿಗ

ಬೇಕಾದರೆ ಬ್ಯಾಂಕಿನ ಖಾತೆಯಲ್ಲಿದ್ದ ಇವರ ಪೂರಾ ಹಣವನ್ನು ನೀರಜಳ ಹೆಸರಿಗೆ ಮಾಡಬೇಕು. ಮಾಡಲಿ, ನನ್ನದೇನೂ ಆಕ್ಷೇಪಣೆಯಿಲ್ಲ. ಅದಕ್ಕೆ ನಿನ್ನ ಸಹಾಯ ಬೇಕು.'' ಅವರು ಆಚೆ ಈಚೆ ನೋಡಿ ಧ್ವನಿ ಇಳಿಸಿದರು, ''ಈ ವಿಷಯ ಗಂಗಾಧರ, ನಟೇಶನಿಗೆ ತಿಳಿಯಬಾರದು.''

''ಅಂದರೆ ಮಹಂತಯ್ಯನವರ ಮನಸ್ಸು ಪೂರಾ ಬದಲಾಗಿದೆಯೇ ?''

''ಪಕ್ಷವಾತ ಬಂದಮೇಲಿಂದ ಅವರು ಮೊದಲಿನ ವ್ಯಕ್ತಿಯಲ್ಲ. ಕೈಕಾಲು ಬಿದ್ದುಹೋದ ಸ್ಥಿತಿಯಲ್ಲಿ ಕಷ್ಟವಾದರೂ ಇನ್ನೊಂದು ಕೆಲವು ವರ್ಷ ನನಗಾಗಿ ಅವರು ಬದುಕಲಿ ಅಂತ ನನ್ನ ಆಸೆ. ನಾಳೆಯೋ ಬಾ, ಯಾರಿಗೂ ಹೇಳಬೇಡ, ಅಷ್ಟೆ.''

ಅವರ ಧ್ವನಿ ಯಾರಿಗೂ ಕೇಳದಷ್ಟು ತಗ್ಗಿತ್ತು. ನಿಜ, ನೀರಜಳ ನಿಸ್ವಾರ್ಥ ಹೃದಯಕ್ಕೆ ಧರ್ಮಪ್ರಕಾರ ಸಿಕ್ಕಿದ ಗೆಲುವು. ತಾನು ಕೈಗೊಂಡ ಕೆಲಸ ವ್ಯರ್ಥವಾಗಲಿಲ್ಲ. ಒಬ್ಬಳು ನತದೃಷ್ಟಳಿಗೆ ಇಷ್ಟು ವರ್ಷಗಳ ನಂತರ ಅದೃಷ್ಟದ ಬಾಗಿಲು ತೆರೆದಿದೆ. ತಾನು ಕೇವಲ ನಿಮಿತ್ತನಾದೆ. ನರಹರಿಯ ಮನಸ್ಸು ಆನಂದದಿಂದಲೂ, ಸಂತೋಷದಿಂದಲೂ ತುಂಬಿಹೋಯಿತು. ಬರುತ್ತೇನೆಂದು ತಲೆಯಲ್ಲಾಡಿಸಿದ. ಭಾಗ್ಯಮ್ಮನ ಕಾಲಿಗೆರಗಿದ, ಹಿರಿಯರೆಂಬ ಕಾರಣದಿಂದಲ್ಲ, ನೀರಜಳ ಅದೃಷ್ಟದ ಬಾಗಿಲು ತೆರೆಯಲು ಮನಸ್ಸು ಮಾಡಿದ ಮಹಾತಾಯಿ ಯೆಂದು !

ಭಾಗ್ಯಮ್ಮ ಹೊರಟುಹೋದ ಸ್ವಲ್ಪ ಹೊತ್ತಿನಲ್ಲಿ ಆಗಮಿಸಿದರು, ಸೋಮಶೇಖರ ಮಾಸ್ತರರು. ದೇವರಿಗೆ ಹನ್ನೊಂದು ಪ್ರದಕ್ಷಿಣೆ ಹಾಕಿ ಅವನ ಬಳಿ ಬಂದವರು ಸಪ್ಪೆಮುಖ ಮಾಡಿ, ''ಅಲಕಾ ಹೇಳಿದರು, ನಿಮ್ಮ ಕಂಪನಿ ಪ್ರಾರಂಭವಾಯ್ತಂತೆ. ಅಂದರೆ ನೀವು ಬೇಗ ಇಲ್ಲಿಂದ ಹೋಗುತ್ತೀರಿ, ಅಲ್ಲವೇ?''—ಕೇಳಿದರು.

''ಹೂಂ, ಇನ್ನೆರಡು ದಿನಗಳಲ್ಲಿ ಹೊರಡಲೇಬೇಕು.''

''ಶಾಲೆ ಮತ್ತೆ ಅನಾಥವಾಯಿತು. ಅದಕ್ಕಿಂತ ಹೆಚ್ಚಿಗೆ ನಾನು ಅನಾಥನಾದೆ. ನಮ್ಮ ಹಳ್ಳಿಶಾಲೆ ಹಣೆಬರಹ ಇಷ್ಟೇ.''

ಅದೇ ಸಮಯದಲ್ಲಿ ದೇವರ ದರ್ಶನಕ್ಕೆಂದು ಬಂದರು ಅಲಕಾ ಮತ್ತು ಶಶಿ. ಇಬ್ಬರ ಕೈಯಲ್ಲೂ ತೆಂಗಿನಕಾಯಿ, ಹೂವು, ಹಣ್ಣುಗಳ ಬುಟ್ಟಿ. ದೇವರ ದರ್ಶನ ಮುಗಿಸಿ ಕಾಯಿ ಒಡೆಸಲು ಸಜ್ಜಾದಾಗ ಅಲಕಾ ಶಶಿಯನ್ನು ಮಾಸ್ತರರಿಗೆ ಪರಿಚಯಿಸುತ್ತ, ''ಇವಳು ಶಶಿ, ನಮ್ಮ ಮಾವನವರ ಅಣ್ಣನ

ಮೊಮ್ಮಗಳು. ಗುಲ್ಬರ್ಗದ ಸರಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ. ನಿಮ್ಮದೇ ವೃತ್ತಿ'' ಎಂದಳು ನಗುತ್ತ.

ಒಂದೇ ವೃತ್ತಿಯ ಇಬ್ಬರು ಪರಸ್ಪರ ಸಂಧಿಸಿದಾಗ ಮಾತಿಗೆ ಬರಗಾಲವೇ? ಅವರ ಮಾತಿಗೆ ಚುರುಕು ಏರುತ್ತಿದ್ದಂತೆ ನರಹರಿಯ ತಲೆಯಲ್ಲಿ ಫಳ್ಳನೆ ಮಿಂಚಿತು ಒಂದು ಆಲೋಚನೆ. ಸೋಮಶೇಖರ ಮಾಸ್ತರರು ಇನ್ನೂ ಅವಿವಾಹಿತರು. ನಮ್ಮ ಶಶಿಗೆ ಸರಿಯಾದ ಜೋಡಿ. ಮಾಸ್ತರರು ಒಪ್ಪಿದರೆ ಈ ಸಂಬಂಧ ಯಾಕಾಗಬಾರದು ? ನೌಕರಿ ಹೊರತಾಗಿ ಅವರಿಗೆ ಇನ್ನಾವ ಆದಾಯವಿಲ್ಲ. ಆದರೆ ಶಶಿಯೂ ಶಿಕ್ಷಕಿ. ಗುಲ್ಬರ್ಗದಿಂದ ಈ ಹಳ್ಳಿಗೆ ವರ್ಗ ಮಾಡಿಸಿಕೊಳ್ಳಬಹುದು. ಇದರಿಂದ ಎರಡು ಸಮಸ್ಯೆ ಒಟ್ಟಿಗೆ ಬಗೆಹರಿದ ಹಾಗೆ. ಒಂದು, ಶಶಿಗೆ ಮದುವೆ ; ಇನ್ನೊಂದು, ಶಾಲೆಗೆ ಹೊಸ ಶಿಕ್ಷಕಿಯ ನೇಮಕ.

ಅಲಕಾ ಮತ್ತು ಶಶಿ ಹೊರಟುಹೋದಮೇಲೆ ಸೋಮಶೇಖರ ಮಾಸ್ತರರಿಗೆ ಇದನ್ನು ವಿವರಿಸಿ ನೇರವಾಗಿ ಕೇಳಿದ, ''ನೀವೀಗ ನೋಡಿದ ಹುಡುಗಿ ನಿಮಗೆ ಒಪ್ಪಿಗೆಯಾದರೆ ಹೇಳಿ, ಮುಂದಿನ ಕಾರ್ಯ ಝಟ್‌ಪಟ್ !''

ಈ ಆಲೋಚನೆ ಅವಳನ್ನು ಸಂಧಿಸಿದ ಪ್ರಥಮದಲ್ಲೇ ಮನದಲ್ಲಿ ಸುಳಿದಿರಬೇಕು. ನರಹರಿ ಕೇಳಿದಾಕ್ಷಣ ಸ್ವಲ್ಪ ಅನುಮಾನ ವ್ಯಕ್ತಪಡಿಸಿ, ''ಯಾರು, ಶಶಿಯನ್ನೇ?''— ಕೇಳಿದರು ಏನೂ ತಿಳಿಯದವರಂತೆ.

''ಹೂಂ.'

''ಪಟ್ಟಣದಲ್ಲಿ ಬೆಳೆದ ಹುಡುಗಿ ಅವಳು. ನಾವಿರುವುದು ಈ ಕಗ್ಗಾಡಿನಲ್ಲಿ. ಮುರುಕು ಶಾಲೆಯ ವೃತ್ತಿ. ನಿಮ್ಮ ಹುಡುಗಿ ಒಪ್ಪುತ್ತಾಳೋ ಇಲ್ಲವೋ.''

''ಹೋ, ಹುಡುಗಿಯ ಪ್ರಶ್ನೆ ಬಿಡಿ. ನಿಮಗೆ ಒಪ್ಪಿಗೆ ತಾನೆ? ಹಾಗೆ ಹೇಳಿ'' —ಚಿಟಿಕೆ ಹಾರಿಸಿ ನಕ್ಕ ನರಹರಿ. ''ಇವತ್ತೇ ದೊಡ್ಡಪ್ಪನಿಗೆ ಹೇಳ್ತೇನೆ ನಿಮ್ಮನ್ನು, ಕುರಿತು. ಸ್ವಲ್ಪ ಹೊತ್ತು ಇಲ್ಲೇ ಪೌಳಿಯಲ್ಲಿ ಕೂತಿರಿ. ಪೂಜೆ ಹೊತ್ತಿಗೆ ಮಾಧವಣ್ಣನೂ, ದೊಡ್ಡಪ್ಪನೂ ಬರಬಹುದು.''

ಅವನು ಹೇಳಿದಂತೆ ಮಧ್ಯಾಹ್ನದ ಹೊತ್ತಿಗೆ ಅವರಿಬ್ಬರೂ ಜೊತೆಯಾಗಿ ಬಂದರು. ಬಂದಾಕ್ಷಣ ಕಿವಿಗೆ ಬಿದ್ದ ಸುದ್ದಿ, ''ನಮ್ಮ ಶಶಿಗೆ ಗಂಡು ಗೊತ್ತಾಗಿದೆ !''

ಸಾಂಬಶಿವರಿಗೆ ನಂಬಿಕೆ ಬರಲಿಲ್ಲ. ನರಹರಿ ತಮಾಷೆ ಮಾಡಿದನೆಂದು ಮುನಿಸಿನಿಂದ, ''ಆ ಭಾಗ್ಯ ನಮ್ಮ ಶಶಿಗೆ ಇಲ್ಲೆಲ್ಲಿ ಬರಬೇಕು ? ಈ ಪುಣ್ಯಸ್ಥಳದಲ್ಲಿ ತಮಾಷೆಗೂ ಒಂದು ಮಿತಿ ಬೇಡವೇ?'' ಎಂದರು.

ಅವನದು ತಮಾಷೆ ಮಾತಲ್ಲವೆಂದು ಸೋಮಶೇಖರ ಮಾಸ್ತರರನ್ನು ನೋಡಿ ಅರ್ಥವಾಗಿ ಅವಾಕ್ಕಾದರು. ಕಣ್ಣು–ಕಿವಿ ತೆರೆತೆರೆದು ನೋಡಿದರು ಅವರನ್ನು. ತಮ್ಮ ಮಗಳನ್ನು ಒಪ್ಪಿದ ಪುಣ್ಯಾತ್ಮ! ಸುಮಾರು ಶಶಿಯದೇ ಪ್ರಾಯ ಇದ್ದೀತು. ಮುಖದಲ್ಲಿ ಸೌಮ್ಯಕಳೆ, ನಗುವ ಕಣ್ಣುಗಳು. ಶಶಿಯನ್ನು ಚೆನ್ನಾಗಿ ನೋಡಿಕೊಳ್ಳಬಲ್ಲರು ಎಂಬ ಭಾವ ಮೂಡಿತು ಮನದಲ್ಲಿ.

"ನನ್ನ ಮಗಳು ನಿಮಗೆ ಒಪ್ಪಿಗೆಯಾದರೆ ನನ್ನದೇನೂ ಇಲ್ಲ. ನಮ್ಮ ಶಶಿ ಯಾರಿಗೂ ಮಾಲೆ ಹಾಕಲು ತಯಾರು!" ಎಂದರು ಗದ್ಗದಿತರಾಗಿ.

ಮಾಧವ ಮಾಸ್ತರರ ಕೈಕುಲುಕಿದ. "ಅಂತೂ ನಮ್ಮ ತಂಗಿಗೆ ಗಂಡನಾಗುವ ಯೋಗ ನಿಮ್ಮದು! ಇದಾದರೆ ನಿಜಕ್ಕೂ ಒಂದು ಅನುಗ್ರಹವೇ ಸರಿ!"

ಮುಂದಿನ ಮಾತುಕತೆಗೆ ಮಾರುದಿನ ಮಧ್ಯಾಹ್ನ ಸೋಮಶೇಖರ ಮಾಸ್ತರರು, ತಾವೆಲ್ಲರೂ ಒಟ್ಟಾಗಿ ಸೇರುವುದೆಂದು ತೀರ್ಮಾನಿಸಿದರು ಸಾಂಬಶಿವ. ಆದರೆ ಮಾರುದಿನ ಬೆಳಿಗ್ಗೆ ಮಾಧವ ದಿಲ್ಲಿಗೆ ಹೋಗುವವನು. ಹೆಚ್ಚಿನ ರಜೆ ಇಲ್ಲ. ಸೋಮಶೇಖರನಿಗೂ ಶಾಲೆಯಿದೆ. ಇವತ್ತು ರಾತ್ರಿಯೇ ಏನೆಂದು ತೀರ್ಮಾನಿಸುವುದು ಲೇಸು.

"ರಾತ್ರಿ ಫಲಹಾರಕ್ಕೆ ಮನೆಗೇ ಬನ್ನಿ," ಮಾಧವ ಆಹ್ವಾನಿಸಿದ. "ಅಪ್ಪನಿಗೂ ವಿಷಯ ತಿಳಿಸಿದ ಹಾಗಾಯ್ತು."

ದಿನ ಮುಂದೂಡುವ ಬದಲು ಶುಭಕಾರ್ಯ ಶುಭಗಳಿಗೆಯಲ್ಲಿ ಬೇಗ ಆಗುವುದೇ ಲೇಸು. ಸೋಮಶೇಖರ ಮಾಸ್ತರರಿಂದ ಯಾವ ಆಕ್ಷೇಪಣೆ ಇರಲಿಲ್ಲ. ಮುಖ ಮತ್ತಷ್ಟು ಪ್ರಸನ್ನವಾಯಿತು.

ಯಾರೋ ದೇವಾಲಯದ ಗಂಟೆ ಬಾರಿಸಿದರು. ಮಂಗಳಾರತಿಯ ಸಿದ್ಧತೆಯಾಗುತ್ತಿತ್ತು. ಭಕ್ತಾದಿಗಳು ಗರ್ಭಗುಡಿಯ ಆಚೆ ಈಚೆ ನಿಂತರು ಮಂಗಳಾರತಿ ನೋಡಲೆಂದು. ನರಹರಿಯೂ ಎದ್ದು ನಿಂತ ತನ್ನ ಕೆಲಸ ಅಲ್ಲಿಗೇ ನಿಲ್ಲಿಸಿ. ಈ ದಿನ ಎಲ್ಲಾ ಕಾರ್ಯಗಳೂ ಅನುಕೂಲಕರ ತಿರುವು ಪಡೆದದ್ದು ಅವನಿಗೇ ಅಚ್ಚರಿ ತಂದಿತ್ತು.

ಗಂಟೆ, ತಾಳ–ಜಾಗಟೆಗಳ ಧ್ವನಿಯಾಗುತ್ತಿದ್ದಂತೆ, ಮಂಗಳಾರತಿ ನಡೆಯುತ್ತಿದ್ದಂತೆ, ಹೊರಗಿನಿಂದ ಕೇಳಿಬಂದಿತು ವಾಲಗದ ಸ್ವರ. ಎಲ್ಲಿಯೂ ಒಡಕಿಲ್ಲದೆ. ಗೊರಗೊರ ಎನ್ನದೆ ಸುಶ್ರಾವ್ಯವಾಗಿ ಅಲೆಅಲೆಯಾಗಿ ವಾದ್ಯದ ಮಧುರನಾದ ತೇಲಿಬಂದಿತು ದೇವಾಲಯದ ಆವರಣದೊಳಗೆ. ಸುಬ್ಬ ಮತ್ತೊಮ್ಮೆ ಬಂದಿದ್ದ ವಾದ್ಯ ಬಾರಿಸಲು.

ಆ ರಾತ್ರಿ ಶಂಕರಯ್ಯನವರ ಮನೆಯಲ್ಲಿ ಸಂಭ್ರಮದ ವಾತಾವರಣ. ಶಶಿ ಮತ್ತು ಸೋಮಶೇಖರ ಮಾಸ್ತರರು ಇನ್ನೊಮ್ಮೆ ಪರಸ್ಪರ ನೋಡಿಕೊಂಡ ಶಾಸ್ತ್ರ ಮಾಡಿದ ಮೇಲೆ ಸಿಹಿ ಹಂಚೋಣವಾಯಿತು. ಅಲಕಾ ತಮಾಷೆ ಮಾಡಿದಳು:

''ಚೆನ್ನಾಗಿ ಈಗಲೇ ನೋಡಿಕೊಳ್ಳಿ. ಆಮೇಲೆ ಶಾಲೆಯಲ್ಲಿ ನನ್ನ ಸಹಶಿಕ್ಷಕಿ ಏನೂ ಪ್ರಯೋಜನ ಇಲ್ಲ ಎನ್ನಬೇಡಿ.''

ಮಾಸ್ತರರು ನಕ್ಕರು, ''ಹೊಸದಾಗಿ ಮಹಿಳಾ ಸಂಘ ತೆರೆದಿದ್ದೀರಲ್ಲ ನೀವು. ಈ ಶಿಕ್ಷಕಿ ಅಲ್ಲಿಗೇ ತನ್ನ ದೂರು ತರ್ತಾಳೆ!''

ಮುಂದೆ ಹತ್ತು ದಿನಗಳಲ್ಲಿ ಇದೇ ಮನೆಯಲ್ಲಿ ಮದುವೆ ನಡೆಸುವುದೆಂದು ನಿಶ್ಚಯಿಸಲಾಯಿತು.

ಸೋಮಶೇಖರ ಮಾಸ್ತರರ ಬಳಗ ಹೆಚ್ಚು ದೊಡ್ಡದೇನಲ್ಲ. ತಾಯಿತಂದೆ, ಅಕ್ಕ, ಕೆಲವು ಹತ್ತಿರದ ನೆಂಟರಿಷ್ಟರು ಎಂದು ಒಟ್ಟು ಮೂವತ್ತು ಮಂದಿ ಆಗಬಹುದಂತೆ.

''ನಾಳೆಯೇ ಹಾಸನಕ್ಕೆ ತೆರಳಿ ತಾಯಿತಂದೆಗೆ ವಿಷಯ ತಿಳಿಸಿ, ಅವರನ್ನೂ, ಬರುವ ನೆಂಟರನ್ನೂ ಕರೆದುಕೊಂಡು ಮದುವೆಗಿಂತ ಎರಡು ದಿನಗಳ ಮೊದಲು ಬಂದು ಮುಟ್ತೇನೆ. ನೀವು ಮದುವೆ ತಯಾರಿ ಮಾಡಿ''— ಸಂಕೋಚದಿಂದ ಅಂದರು ಸೋಮಶೇಖರ ಮಾಸ್ತರರು. ''ಹೆಚ್ಚೇನೂ ಗೌಜು ಗದ್ದಲ ಬೇಡ. ಸರಳವಾಗಿ ಮಾಡಿಕೊಟ್ಟರೂ ಸಾಕು.''

ಎಂತಹ ಸರಳ ಮನುಷ್ಯ! ಸಾಂಬಶಿವರಿಗೆ ಹೃದಯ ತುಂಬಿಬಂದಿತ್ತು. ತನ್ನ ಕಾರ್ಯ ಹೂ ಎತ್ತಿದಷ್ಟು ಸುಲಭದಲ್ಲಿ ಆಗಿಹೋಯಿತೆಂಬ ಸಮಾಧಾನ.

ಹಿರಿಯರಿಬ್ಬರೂ ಮದುವೆ ಮಾತಿನಲ್ಲಿ ತಲ್ಲೀನರಾದಾಗ ಮಾಧವ ಮರುದಿನ ಹೊರಡಲು ಬೇಕಾದ ಸಿದ್ಧತೆಯಲ್ಲಿದ್ದ. ಒದಿಕೋಣೆಯಲ್ಲಿ ಅಲಕಾ ಮತ್ತು ನರಹರಿಯ ಪಿಸಿಪಿಸಿ ಧ್ವನಿ. ಅವರೂ ಹೊರಡುವ ಸಿದ್ಧತೆಯಲ್ಲಿ ಇದ್ದಾರೇನೋ. ಅವರು ಇಲ್ಲುಳಿಯಲು ಸಿದ್ಧರಿಲ್ಲ ಎಂದಾದರೆ ತಾನು ಆಲೋಚಿಸಲೇ ಬೇಕು. ತಾನಿಲ್ಲಿ ಉಳಿಯುವುದೇ? ಮನೆ-ತೋಟ ಮಾರುವುದೇ? ಯಾವ ಪರಿಸ್ಥಿತಿಯಲ್ಲೂ ತನ್ನಿಂದಾಗಿ ತಂದೆಯ ಮನ ನೋಯಬಾರದು. ತನ್ನ ಸುಖ-ಸಂತೋಷ ತ್ಯಾಗಮಾಡಿ ತಂದೆಯನ್ನು ಸುಖಿಯನ್ನಾಗಿ ಮಾಡುವುದು ತನ್ನ ಕರ್ತವ್ಯವೂ ಹೌದು. ಆದರೆ ಹೇಗೆ ಇಲ್ಲಿರಲಿ?

ಹೊರಡುವ ಸಿದ್ಧತೆ ಮಾಡಿಟ್ಟು ಹೊರಜಗಲಿಗೆ ಬಂದಾಗ ಸಾಂಬಶಿವ ಆಗಲೇ ಮಲಗಲೆಂದು ಎದ್ದುಹೋಗಿಯಾಗಿತ್ತು. ಶಂಕರಯ್ಯ ಕಾದು ಕುಳಿ

ತಿದ್ದರು. ಮಕ್ಕಳಿಗಾಗಿ. ಮಾಧವ ಹತ್ತಿರ ಬಂದು ಕುಳಿತಾಗ ಪ್ರೀತಿಯಿಂದ ಮೈದಡವಿದರು. ಅವನು ಎರಡು ಮಕ್ಕಳ ತಂದೆಯಾದರೂ ಅವರಿಗಿನ್ನೂ ಮಗು!

"ನಾಳೆ ಬೆಳಿಗ್ಗೆ ಹೋಗ್ತಾ ಇದ್ದೀಯ. ಮತ್ತೆ ಬರುವುದು ನವರಾತ್ರಿಗೇ ಅಲ್ಲವೇ. ನಿಮ್ಮಿಬ್ಬರಲ್ಲಿ ತೀರ್ಮಾನ ಏನಾಯ್ತು? ಎಲ್ಲಿ ನರಹರಿ?"

"ನರಹರಿಯೂ ಇನ್ನೊಂದೆರಡು ದಿನಗಳಲ್ಲಿ ಔರಂಗಾಬಾದಿಗೆ ಹೊರಟು ಹೋಗ್ತಾ ಇದ್ದಾನೆ. ನಿಮ್ಮನ್ನು ಈ ಸ್ಥಿತಿಯಲ್ಲಿ ನಾವಿಬ್ಬರೂ ಬಿಟ್ಟು ಹೋಗುವುದು ಅಷ್ಟೇನೂ ಸರಿಕಾಣದು. ನನಗೆ ಸ್ವಲ್ಪ ಆಫೀಸು ಕೆಲಸವಿದೆ. ಅದನ್ನು ತೀರಿಸಿ ಒಂದು ತಿಂಗಳು ರಜೆ ಹಾಕಿ ಬಂದು ಇಲ್ಲಿರ್ತೇನೆ. ಆಮೇಲೆ ನೋಡೋಣ. ನರಹರಿ ಇಲ್ಲಿ ಉಳಿಯಲು ಸಿದ್ಧನಿಲ್ಲ ಎಂದಾದರೆ ನಾನೇ ನೌಕರಿಗೆ ರಾಜೀನಾಮೆ ಕೊಟ್ಟು ಮನೆ-ತೋಟ ನೋಡಿಕೊಳ್ತೇನೆ. ನೀವೇನೂ ಚಿಂತಿಸಬೇಡಿ ಅಪ್ಪಾ."

ಮಾಧವನ ಧ್ವನಿಯಲ್ಲಿ ಕಪಟವಿರಲಿಲ್ಲ. ಕಳಕಳಿಯಿತ್ತು. ಆದರೆ ಹಿಂದಿನಿಂದಲೇ ಕೇಳಿಸಿತು ನರಹರಿಯ ಸ್ವರ, "ನಿಖಿಲನ ಕಾಗದ ಬಂದದ್ದು ನಿಜ, ಬಟ್ಟೆ ಕಂಪನಿ ತೆರೆಯುವುದೂ ನಿಜ. ಆದರೆ ಇನ್ಮೇಲೆ ನಾನೂ ಅಲಕಾ ಇಲ್ಲೇ ಇರುವ ತೀರ್ಮಾನ ಮಾಡಿದ್ದೇವೆ, ಒಂದು ಶರತ್ತಿನ ಮೇಲೆ!"

"ಏನದು?"—ಶಂಕರಯ್ಯ, ಮಾಧವ ಒಟ್ಟಾಗಿ ಪ್ರಶ್ನಿಸಿದರು ಆತುರದಿಂದ.

"ದೇವರ ಪೂಜೆ ನೋಡಿಕೊಳ್ತೇನೆ ಎಂದಾಕ್ಷಣ ತೋಟದ ಬೆಳೆ ಒಬ್ಬನೇ ತಿನ್ನುವುದಿಲ್ಲ. ಅದು ನಮ್ಮಿಬ್ಬರಲ್ಲಿ ಸಮಪಾಲು ಆಗಲೇಬೇಕು. ಅಣ್ಣ ನನ್ನಿಂದ ಪಾಲು ತೆಗೆದುಕೊಳ್ಳಲು ಒಪ್ಪಿದರೆ ನಾನಿಲ್ಲಿ ಉಳಿಯಲು ತಯಾರು!"

"ತೋಟದ ಉತ್ಪನ್ನದ ಬಗ್ಗೆ ನಾನು ಕೇಳಲಿಲ್ಲ." ಮಾಧವ ತಮ್ಮನ ಹೆಗಲ ಮೇಲೆ ಆತ್ಮೀಯವಾಗಿ ಕೈ ಇಟ್ಟ. "ನನ್ನದೂ ಒಂದು ಶರತ್ತು ಇದೆ. ನೀನು ಒಪ್ಪಿಕೊಳ್ಳಲೇಬೇಕು. ಮನೆದೇವಿ ಪೂಜೆ ನಡೆಸಿಕೊಂಡು ಹೋಗುವವನು ನೀನು. ಮನೆ ನಂದಾದೀಪ ಹಚ್ಚುವವಳು ಅಲಕಾ. ಹೀಗಾಗಿ ಈ ಮನೆ-ತೋಟದ ಉತ್ಪನ್ನ ಎಲ್ಲಾ ನಿನಗೇ ಸೇರಿದ್ದು. ನೀನೇ ಅನುಭವಿಸಬೇಕು. ಇದಕ್ಕೆ ನೀನು ಒಪ್ಪಿದೆಯಾದರೆ ನನಗೆ ನಿಶ್ಚಿಂತೆ. ಮತ್ತೆ ನಿನ್ನ ಎಲ್ಲ ಕಷ್ಟ–ಸುಖಗಳಲ್ಲಿ ನಾನೂ ಪಾಲುದಾರನೆಂದು ನೆನಪಿರಲಿ!

ಶಂಕರಯ್ಯ ಮಲಗಿದಲ್ಲಿಂದಲೇ ತಲೆ ಎತ್ತಿ ಮಕ್ಕಳಿಬ್ಬರನ್ನೂ ನೋಡಿದರು. ಅವರ ಮುಖದ ಮೇಲೆ ತೃಪ್ತಿಯ ಮಂದಹಾಸವಿತ್ತು!

ಕೆಲವು ಉತ್ತಮ ಕಾದಂಬರಿಗಳು

ವ್ಯಾಸರಾಯ ಬಲ್ಲಾಳ—

ಆಕಾಶಕ್ಕೊಂದು ಕಂದೀಲು!	೫೦ ೦೦		
ಬಂಡಾಯ (ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ) ...	೪೦ ೦೦		
ಅನುರಕ್ತೆ ...	೨೫ ೦೦	ಉತ್ತರಾಯಣ ...	೪೦ ೦೦
ವಾತ್ಸಲ್ಯಪಥ ...	೨೭ ೦೦	ಹೇಮಂತಗಾನ ...	೪೦ ೦೦

ಯಶವಂತ ಚಿತ್ತಾಲ—

ಪುರುಷೋತ್ತಮ (ಕರ್ನಾಟಕ ಸಾಹಿತ್ಯ ಅಕಾದೆಮಿ ಪ್ರಶಸ್ತಿ) ...	೧೨೦ ೦೦		
ಮೂರು ದಾರಿಗಳು ...	೬೦ ೦೦	ಶಿಕಾರಿ	೬೦ ೦೦

ತ. ರಾ. ಸು.—

ನೃಪತುಂಗ ...	೩೦ ೦೦	ಗ್ರಹಣ ಬಿಟ್ಟಿತು ...	೧೫ ೦೦
ಹಂಸಗೀತೆ ...	೩೦ ೦೦	ಹಾವು ಹಿಡಿದವರು ...	೧೪ ೦೦
ಚದುರಂಗದ ಮನೆ ...	೧೮ ೦೦	ನಾಲ್ಕು × ನಾಲ್ಕು = ಒಂದು	೧೬ ೦೦
ಯಕ್ಷಪ್ರಶ್ನೆ ...	೧೩ ೫೦	ಎಲ್ಲಾ ಅವನ ಹೆಸರಿನಲ್ಲೇ—೧	೧೬ ೦೦
ಪುರುಷಾವತಾರ ...	೧೫ ೦೦	ಎಲ್ಲಾ ಅವನ ಹೆಸರಿನಲ್ಲೇ—೨	೧೪ ೦೦
ಖೋಟಾ ನೋಟು!	೧೬ ೦೦	ಮುಂಜಾವಿನಿಂದ ಮುಂಜಾವು	೧೮ ೦೦
ಜೀತದ ಜೀವ ...	೧೫ ೦೦	ಲಾವಣ್ಯವತಿ ...	೧೬ ೦೦

ವಿ. ಎಂ. ಇನಾಂದಾರ್—

ಮೋಹಿನಿ ...	೧೫೦ ೦೦	ಈ ಪರಿಯ ಸೊಬಗು ...	೨೫ ೦೦
ಶಾಪ ...	೪೦ ೦೦	ಸ್ವರ್ಗದ ಬಾಗಿಲು ...	೩೦ ೦೦
ಮುಗಿಯದ ಕಥೆ ...	೧೮ ೦೦	ನವಿಲುನೌಕೆ .	೩೦ ೦೦
ವಿಜಯಯಾತ್ರೆ ...	೧೮ ೦೦	ಮಂಜು ಮುಸುಕಿದ ದಾರಿ	೩೫ ೦೦
ತ್ರಿಶಂಕು ...	೩೦ ೦೦	ಯಾತ್ರಿಕರು ...	೨೫ ೦೦
ಮೂರಾಬಟ್ಟೆ ...	೩೫ ೦೦	ಊರ್ವಶಿ ...	೪೫ ೦೦

ಎಚ್. ತಿಪ್ಪೇರುದ್ರಸ್ವಾಮಿ—

ವಿಜಯಕಲ್ಯಾಣ ...	೩೦ ೦೦	ವಚನ ವಿರೂಪಾಕ್ಷ ...	೨೦ ೦೦

ಗೋದಾನ—ಪ್ರೇಮಚಂದ	೪೦ ೦೦
ನೆತ್ತರು ಕೊಡಿಗೆ—ತ. ಪು. ವೆಂಕಟರಾಮ್	೧೬ ೦೦
ಕಡಲು ಕಾಯುವುದಿಲ್ಲ—ನಾ. ಡಿಸೋಜ	೪೦ ೦೦
ಅರಗಿನ ಮನೆ—ಕೆ. ಟಿ. ಗಟ್ಟಿ	೨೨ ೫೦
ವಕ್ರರೇಖೆ—ಎ. ಪಿ. ಮಾಲತಿ	೨೦ ೦೦
ಸುಶೀಲ—ಎಚ್. ಕೆ. ಅನಂತರಾವ್	೬೦ ೦೦
ನಲ್ಮೆಯ ನೆಲೆ—ದೊಡ್ಡೇರಿ ವೆಂಕಟಗಿರಿರಾವ್	೩೦ ೦೦
ಜೀವ ಜೀವದ ನಂಟು—ಪ್ರಭುಶಂಕರ	೪೦ ೦೦
ಅನಾಥೆ—ಗೋಪಾಲಕೃಷ್ಣ ಅಡಿಗ	೩೦ ೦೦

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

ಬೆಲೆ: ರೂ. ೩೦